SUPREME AUDIT INSTITUTION OF INDIA
लोकहितार्थ सत्यनिष्ठा
Dedicated to Truth in Public Interest

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ
# ರಾಜ್ಯದ ಹಣಕಾಸಿನ ವ್ಯವಹಾರಗಳ
# ಲೆಕ್ಕಪರಿಶೋಧನಾ ವರದಿ
# 2023-2024 ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**

**2025ರ ವರದಿ ಸಂಖ್ಯೆ – 04**

**(ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ)**

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ

# ರಾಜ್ಯದ ಹಣಕಾಸಿನ ವ್ಯವಹಾರಗಳ

# ಲೆಕ್ಕಪರಿಶೋಧನಾ ವರದಿ

# 2023–2024 ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

## 2025ರ ವರದಿ ಸಂಖ್ಯೆ – 04

## (ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ)

# ವಿಷಯಸೂಚಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | **ix** |
| ಕಾರ್ಯನಿರ್ವಹಣಾ ಸಾರಾಂಶ | | **xi** |
| **ಅಧ್ಯಾಯ–1: ಅವಲೋಕನ** | | |
| **ಪೀಠಿಕೆ** | **1.1** | **1** |
| **ರಾಜ್ಯದ ಸಂಕ್ಷಿಪ್ತ ಚಿತ್ರಣ** | **1.2** | **1** |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಮತ್ತು ರಾಜ್ಯದ ಒಟ್ಟು ಮೌಲ್ಯವರ್ಧನೆ (ಜಿಎಸ್‌ವಿಎ) | 1.2.1 | 1 |
| **ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ** | **1.3** | **4** |
| **ಸರ್ಕಾರಿ ಲೆಕ್ಕಗಳ ರಚನೆ** | **1.4** | **5** |
| **ಆಯವ್ಯಯ ಪ್ರಕ್ರಿಯೆಗಳು** | **1.5** | **7** |
| **ರಾಜ್ಯ ಹಣಕಾಸುಗಳ ಕಿರುನೋಟ** | **1.6** | **7** |
| **ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ಚಿತ್ರ** | **1.7** | **10** |
| **ವಿತ್ತೀಯ ಪ್ರಮಿತಿಗಳು** | **1.8** | **11** |
| ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು | 1.8.1 | 11 |
| ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ | 1.8.2 | 13 |
| **ರಾಜ್ಯದ ಹಣಕಾಸಿನ ಸ್ಥಿತಿ** | **1.9** | **14** |
| ಪ್ರಮುಖ ಹಣಕಾಸಿನ ಪ್ರಮಿತಿಗಳ ಮೇಲೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ, ಗುರಿಗಳು ಮತ್ತು ಅದರ ಸಾಧನೆಗಳು | 1.9.1 | 14 |
| 2023–24ರ ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು | 1.9.2 | 15 |
| **2023–24ರ ಅವಧಿಯಲ್ಲಿ ಪ್ರಮುಖ ವಿತ್ತೀಯ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ** | **1.10** | **16** |
| **ಅಧ್ಯಾಯ–2: ರಾಜ್ಯದ ಹಣಕಾಸು ವ್ಯವಹಾರಗಳು** | | |
| **ಪೀಠಿಕೆ** | **2.1** | **21** |
| **2022–23ಕ್ಕೆ ಹೋಲಿಸಿದರೆ 2023–24ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ಪ್ರಮುಖ ಬದಲಾವಣೆಗಳು** | **2.2** | **21** |
| **ನಿಧಿಯ ಆಕರಗಳು ಮತ್ತು ಅನ್ವಯ** | **2.3** | **22** |
| **ರಾಜ್ಯದ ಸಂಪನ್ಮೂಲಗಳು** | **2.4** | **23** |
| ರಾಜಸ್ವ ಸ್ವೀಕೃತಿಗಳು | 2.4.1 | 23 |
| ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ ಮತ್ತು ವೃದ್ಧಿ | 2.4.2 | 24 |
| ರಾಜ್ಯದ ಸ್ವಂತ ಸಂಪನ್ಮೂಲಗಳು | 2.4.3 | 27 |
| ಕೇಂದ್ರದಿಂದ ವರ್ಗಾವಣೆಗಳು | 2.4.4 | 32 |
| ಭಾರತ ಸರ್ಕಾರದ ಸಹಾಯಾನುದಾನ | 2.4.5 | 34 |
| ಬಂಡವಾಳ ಸ್ವೀಕೃತಿಗಳು | 2.4.6 | 36 |
| ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆ | 2.4.7 | 37 |
| **ಸಂಪನ್ಮೂಲಗಳ ಅನ್ವಯ** | **2.5** | **38** |
| ವೆಚ್ಚದ ವೃದ್ಧಿ ಮತ್ತು ಸಂಯೋಜನೆ | 2.5.1 | 38 |
| ರಾಜಸ್ವ ವೆಚ್ಚ | 2.5.2 | 40 |

| ವಿಷಯಸೂಚಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| ಬಂಡವಾಳ ವೆಚ್ಚ | 2.5.3 | 49 |
| ಬಂಡವಾಳ ವೆಚ್ಚದ ಗುಣಮಟ್ಟ | 2.5.4 | 50 |
| ವೆಚ್ಚದ ಆದ್ಯತೆಗಳು | 2.5.5 | 55 |
| **ಸಾರ್ವಜನಿಕ ಲೆಕ್ಕ** | **2.6** | **56** |
| ನಿವ್ವಳ ಸಾರ್ವಜನಿಕ ಲೆಕ್ಕದ ನಿವ್ವಳ ಶಿಲ್ಕುಗಳು | 2.6.1 | 56 |
| ಮೀಸಲು ನಿಧಿಗಳು | 2.6.2 | 58 |
| ನಿಷ್ಕ್ರಿಯ ಮೀಸಲು ನಿಧಿಗಳು | 2.6.3 | 63 |
| ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನೆ ಪ್ರಾಧಿಕಾರ (ಸಿಎಎಮ್‌ಪಿಎ) | 2.6.4 | 63 |
| **ಋಣ ನಿರ್ವಹಣೆ** | **2.7** | **64** |
| ಋಣ ಚಿತ್ರಣದ ಘಟಕಗಳು | 2.7.1 | 65 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಹಣ ಒದಗಿಸುವ ವ್ಯವಸ್ಥೆ | 2.7.2 | 70 |
| ಋಣ ಚಿತ್ರಣ: ಅವಧಿ ಪೂರ್ಣ ಋಣ ಮತ್ತು ಮರುಪಾವತಿ | 2.7.3 | 71 |
| **ಋಣ ಸಮರ್ಥನೀಯತೆಯ ವಿಶ್ಲೇಷಣೆ** | **2.8** | **73** |
| ಎರವಲು ಪಡೆದ ಹಣದ ಬಳಕೆ | 2.8.1 | 76 |
| ಖಾತರಿಗಳ ಸ್ಥಿತಿ – ಸಾಂದರ್ಭಿಕ ಹೊಣೆಗಾರಿಕೆಗಳು | 2.8.2 | 77 |
| ನಗದು ಶಿಲ್ಕುಗಳ ನಿರ್ವಹಣೆ | 2.8.3 | 78 |
| **ತೀರ್ಮಾನ** | **2.9** | **81** |
| **ಶಿಫಾರಸುಗಳು** | **2.10** | **82** |
| **ಅಧ್ಯಾಯ–3: ಆಯವ್ಯಯ ನಿರ್ವಹಣೆ** | | |
| **ಪೀಠಿಕೆ** | **3.1** | **85** |
| **ಆಯವ್ಯಯ ಪ್ರಕ್ರಿಯೆ** | **3.2** | **85** |
| **ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ** | **3.3** | **87** |
| **ಮಕ್ಕಳ ಆಯವ್ಯಯ** | **3.4** | **88** |
| **ಆಯವ್ಯಯದಲ್ಲಿನ ಪ್ರಮುಖ ನೀತಿ ಘೋಷಣೆಗಳು ಮತ್ತು ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಅವುಗಳ ನೈಜ ಹಣಕಾಸಿನ ಮೂಲ** | **3.5** | **89** |
| **ಧನವಿನಿಯೋಗ ಲೆಕ್ಕಗಳು** | **3.6** | **90** |
| 2023–24ರ ಹಣಕಾಸು ವರ್ಷದಲ್ಲಿ ಒಟ್ಟು ಅವಕಾಶಗಳು, ವಾಸ್ತವಿಕ ವಿತರಣೆಗಳು ಮತ್ತು ಉಳಿತಾಯಗಳ ಸಾರಾಂಶ | 3.6.1 | 90 |
| ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು | 3.6.2 | 90 |
| ಆಯವ್ಯಯ ಗುರಿಗಾರಿಕೆ | 3.6.3 | 91 |
| **ಧನವಿನಿಯೋಗದ ಲೆಕ್ಕಪರಿಶೋಧನೆ** | **3.7** | **93** |
| ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಸಮಗ್ರತೆ ಕುರಿತು ವ್ಯಾಖ್ಯಾನಗಳು | 3.7.1 | 93 |
| ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಪರಿಣಾಮಕಾರಿತ್ವದ ಕುರಿತು ವರದಿ | 3.7.2 | 102 |
| **ಆಯ್ದ ಅನುದಾನಗಳ ಪರಿಶೀಲನೆಯ ಫಲಿತಾಂಶ** | **3.8** | **107** |
| ಅನುದಾನ ಸಂಖ್ಯೆ 17 – ಶಿಕ್ಷಣ | 3.8.1 | 108 |
| ಅನುದಾನ ಸಂಖ್ಯೆ 8 ರ ವಿಮರ್ಶೆ – ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ | 3.8.2 | 118 |
| **ತೀರ್ಮಾನ** | **3.9** | **121** |
| **ಶಿಫಾರಸುಗಳು** | **3.10** | **121** |

| ವಿಷಯಸೂಚಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| **ಅಧ್ಯಾಯ–4: ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು** | | |
| **ರಾಜ್ಯ ಸರ್ಕಾರದ ಸಾಲಗಳನ್ನು ಸಂಚಿತ ನಿಧಿಗೆ ಜಮೆ ಮಾಡದಿರುವುದು** | **4.1** | **125** |
| **ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು** | **4.2** | **126** |
| **ಬಡ್ಡಿ ಹೊಂದಿರುವ ಠೇವಣಿಗಳು/ಮೀಸಲು ನಿಧಿಗಳ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ ಹೊಣೆಗಾರಿಕೆಯನ್ನು ವಿಲೇವಾರಿ ಮಾಡದಿರುವುದು** | **4.3** | **126** |
| **ರಾಜ್ಯ ಅನುಷ್ಠಾನ ಏಜೆನ್ಸಿಗಳಿಗೆ ನೇರವಾಗಿ ಹಣದ ವರ್ಗಾವಣೆ** | **4.4** | **127** |
| **ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ವಿಳಂಬ** | **4.5** | **127** |
| **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು** | **4.6** | **129** |
| **ವೈಯಕ್ತಿಕ ಠೇವಣಿ ಖಾತೆಗಳು** | **4.7** | **131** |
| ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿ | 4.7.1 | 131 |
| ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳ ಪ್ರವೃತ್ತಿಗಳು | 4.7.2 | 131 |
| **ಕಿರು ಶೀರ್ಷಿಕೆ–800 ವಿವೇಚನಾರಹಿತ ಬಳಕೆ** | **4.8** | **133** |
| **ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು** | **4.9** | **134** |
| ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು | 4.9.1 | 134 |
| ಋಣ ಠೇವಣಿ ಇರಸಾಲು ಶೀರ್ಷಿಕೆಯ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು | 4.9.2 | 136 |
| **ಇಲಾಖೆಗಳ ಅಂಕಿ ಅಂಶಗಳನ್ನು ಸಮನ್ವಯ ಮಾಡದಿರುವುದು** | **4.10** | **137** |
| **ನಗದು ಶಿಲ್ಕಿನ ಸಮನ್ವಯ** | **4.11** | **139** |
| **2023–24ರ ಅವಧಿಯಲ್ಲಿ ಪ್ರಮುಖ ಹಣಕಾಸಿನ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪ್ರಭಾವ** | **4.12** | **139** |
| **ಲೆಕ್ಕಪತ್ರ ಮಾನದಂಡಗಳ ಅನುಸರಣೆ** | **4.13** | **140** |
| **ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಮಂಡಿಸುವುದು** | **4.14** | **141** |
| **ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು** | **4.15** | **141** |
| **ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ ವಿವರಗಳನ್ನು ಸಲ್ಲಿಸದಿರುವುದು** | **4.16** | **142** |
| **ಹಣ ದುರ್ಬಳಕೆ, ನಷ್ಟಗಳು, ಕಳ್ಳತನ ಇತ್ಯಾದಿ** | **4.17** | **143** |
| **ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ** | **4.18** | **144** |
| **ತೀರ್ಮಾನ** | **4.19** | **144** |
| **ಶಿಫಾರಸುಗಳು** | **4.20** | **145** |

| ಅನುಬಂಧಗಳು | | |
|---|---|---|
| ವಿಷಯಸೂಚಿ | | |
| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
| 1.1 | ರಾಜ್ಯ ಚಿತ್ರಣ | 149 |
| 1.2 | ಸರ್ಕಾರಿ ಲೆಕ್ಕಗಳ ಸ್ವರೂಪ | 151 |
| 1.3 | 31 ಮಾರ್ಚ್ 2024ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 152 |
| 2.1 | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 154 |
| 2.2 | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 158 |
| 2.3 | ಇಲಾಖಾವಾರು ಸಹಾಯಧನಗಳ ಪಾಲು | 164 |
| 2.4 | ಆರ್ಥಿಕ ನೆರವು, ಪ್ರೋತ್ಸಾಹಧನ ಇತರೆ ರೂಪದಲ್ಲಿ ಸಹಾಯಧನಗಳು | 165 |
| 2.5 | ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 166 |
| 3.1 | ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯಲ್ಲಿ ವರ್ಗಾವಾರು/ಇಲಾಖಾವಾರು ಆಯವ್ಯಯ ಹಂಚಿಕೆ 2023–24 | 167 |
| 3.2 | 2023–24ರ ಆಯವ್ಯಯದಲ್ಲಿನ ಪ್ರಮುಖ ನೀತಿ ಉಪಕ್ರಮಗಳು | 169 |
| 3.3 | ಅನುದಾನವಾರು ಆಯವ್ಯಯ ಹಂಚಿಕೆ/ಹೊರಹರಿವು ಮತ್ತು ಆಯವ್ಯಯ ಅಂದಾಜು ಮತ್ತು ಪರಿಷ್ಕೃತ ಅಂದಾಜಿನಿಂದ ಹೊರಹರಿವಿನ ವಿಚಲನ | 179 |
| 3.4 | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 181 |
| 3.5 | ಅನಗತ್ಯ ಪೂರಕ ಅಂದಾಜುಗಳು | 182 |
| 3.6 | ಅಧಿಕವಾದ ಪೂರಕ ಅಂದಾಜುಗಳು | 184 |
| 3.7 | ಸಾಕಷ್ಟಿಲ್ಲದ ಪೂರಕ ಅಂದಾಜುಗಳು | 186 |
| 3.8 | ಅನಗತ್ಯ/ಅಧಿಕತಮ/ಅಸಮರ್ಪಕ/ವಿವೇಚನಾರಹಿತ ಮನರ್ವಿನಿಯೋಗಗಳು | 188 |
| 3.9 | ದೋಷಪೂರಿತ ಮನರ್ವಿನಿಯೋಗ ಆದೇಶಗಳ ಪ್ರಕರಣಗಳು | 191 |
| 3.10 | ₹500 ಕೋಟಿ ಹಾಗೂ ಅದಕ್ಕಿಂತ ಹೆಚ್ಚಾದ ಬಳಕೆಯಾಗದೇ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು | 195 |
| 3.11 | 2023–24 ನೇ ಸಾಲಿಗೆ ಅನುದಾನವಾರು ಉಳಿತಾಯವನ್ನು ತೋರಿಸುವ ಹೇಳಿಕೆ | 196 |
| 3.12 | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನ/ವಿನಿಯೋಗಗಳು | 197 |
| 3.13 | ಬಳಕೆಯಾಗದೇ ಉಳಿದ ಸಂಪೂರ್ಣ ಅವಕಾಶಗಳ ಅಧ್ಯರ್ಪಣೆ | 198 |
| 3.14 | ಬಳಕೆಯಾಗದೇ ಉಳಿದ ಅವಕಾಶಗಳ ಅಧ್ಯರ್ಪಣೆ | 199 |
| 3.15 | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳು | 201 |
| 3.16 | 30 ಮತ್ತು 31 ಮಾರ್ಚ್ 2024ರಂದು ಅಧ್ಯರ್ಪಣೆ ಮಾಡಲಾದ ₹ ಐದು ಕೋಟಿಗೂ ಮೀರಿದ ಅವಕಾಶಗಳು | 209 |
| 3.17 | ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | 210 |
| 3.18 | ಉಳಿತಾಯದ ಮೊತ್ತಗಳಿಗೆ ನಿರ್ದಿಷ್ಟ ಮಾಹಿತಿ ಒದಗಿಸದ ಅನುದಾನಗಳ ವಿವರಗಳು | 212 |
| 3.19 | ಬಾಕಿ ಮೊತ್ತ ಹೊಂದಿರುವ ನಿಷ್ಕ್ರಿಯ ಬ್ಯಾಂಕ್ ಖಾತೆಗಳು | 213 |
| 3.20 | ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಗಳಿಸಿದ ಬಡ್ಡಿಯನ್ನು ರವಾನೆ ಮಾಡುವಲ್ಲಿ ವಿಳಂಬ | 215 |

| ಅನುಬಂಧಗಳು | | |
|---|---|---|
| ವಿಷಯಸೂಚಿ | | |
| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
| 4.1 | ಲೆಕ್ಕ ಶೀರ್ಷಿಕೆ 0049ಗೆ ಗಳಿಸಿದ ಬಡ್ಡಿಯನ್ನು ರವಾನೆ ಮಾಡದಿರುವುದು | 217 |
| 4.2 | ರಾಜ್ಯ ಅನುಷ್ಠಾನ ಸಂಸ್ಥೆಗಳಿಗೆ ನೇರವಾಗಿ ವರ್ಗಾಯಿಸಲಾದ ಹಣ | 221 |
| 4.3 | ಪ್ರಧಾನ ಶೀರ್ಷಿಕಾವಾರು ಮತ್ತು ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವರ್ಷಾವಾರು ವಿವರಗಳು | 222 |
| 4.4 | ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿದಿರುವ ಶಿಲ್ಕುಗಳು | 223 |
| 4.5 | ಋಣಾತ್ಮಕ ಶಿಲ್ಕುಗಳ ವೈಯಕ್ತಿಕ ಠೇವಣಿ ಖಾತೆಗಳು | 224 |
| 4.6 | ಕಿರು ಶೀರ್ಷಿಕೆ 800–ಇತರೆ ವೆಚ್ಚದ ಅಡಿಯಲ್ಲಿ ಲೆಕ್ಕ ಮಾಡಲಾದ ಗಣನೀಯ ವೆಚ್ಚ (ಪ್ರಧಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು ವೆಚ್ಚದ 20 ಪ್ರತಿಶತ ಮತ್ತು ಹೆಚ್ಚಿನದು) | 225 |
| 4.7 | ವ್ಯತಿರಿಕ್ತ ಶಿಲ್ಕುಗಳು | 226 |
| 4.8 | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 228 |
| 4.9 | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಪ್ರಪತ್ರಲೆಕ್ಕಗಳ ವಿವರಗಳು | 230 |
| 4.10 | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 232 |
| 4.11 | ಹಣ ದುರುಪಯೋಗ ದುರ್ಬಳಕೆ ಇತ್ಯಾದಿ ಪ್ರಕರಣಗಳ ಇಲಾಖಾವಾರು/ಅವಧಿವಾರು ವಿವರಗಳ | 233 |
| | **ಪಾರಿಭಾಷಿಕ ಪದಕೋಶ** | **235** |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನ ಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ–1 ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೀಲನಾ ವರದಿಯ ಆಧಾರ ಮತ್ತು ವಿಧಾನ, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳಾದ ರಾಜಸ್ವ ಹೆಚ್ಚಳ ಮತ್ತು ಆರ್ಥಿಕ ಕೊರತೆಗಳ ಪ್ರವೃತ್ತಿ ಮತ್ತು ಆರ್ಥಿಕ ತಿದ್ದುಪಡಿಗಳ ಮಾರ್ಗಗಳನ್ನು ಒಳಗೊಂಡಿದೆ.

3. ಈ ವರದಿಯ ಅಧ್ಯಾಯ–2 ಮತ್ತು ಅಧ್ಯಾಯ–3 ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಒಳಗೊಂಡಿದೆ. ಅಗತ್ಯವಿದ್ದೆಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

4. ಈ ವರದಿಯ ಅಧ್ಯಾಯ–4 2023–24ನೇ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

5. 31 ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ–ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ–ಜುಲೈ2015) ಮತ್ತು 2011–12ರಿಂದ 2019–20ರ ಅವಧಿಗೆ ರಾಜ್ಯ ಹಣಕಾಸಿನ ಮೇಲೆ ಲೆಕ್ಕಪರಿಶೋಧನಾ ವರದಿಗಳಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ 10ನೇ ವರದಿಯನ್ನು (ಫೆಬ್ರವರಿ 2023) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

6. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

# ಕಾರ್ಯನಿರ್ವಹಣಾ ಸಾರಾಂಶ

## *ವರದಿಯನ್ನು ಕುರಿತು*

*ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು 2023-24ನೇ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳನ್ನು ಕುರಿತಾದ ವರದಿಯಾಗಿದೆ. ಇದು ರಾಜ್ಯದ ಆರ್ಥಿಕ ಆಯವ್ಯಯ ನಿರ್ವಹಣೆ ಮತ್ತು ಹಣಕಾಸು ಲೆಕ್ಕಪತ್ರಗಳ ಗುಣಮಟ್ಟ, ಹಣಕಾಸು ವರದಿಯ ರೂಡಿ ಹಾಗೂ ರಾಜ್ಯ ಹಣಕಾಸಿಗೆ ಸಂಬಂಧಿಸಿದ ಇತರ ವಿಷಯಗಳ ಅವಲೋಕನವನ್ನು ಒದಗಿಸುತ್ತದೆ.*

*ಈ ಕಾರ್ಯನಿರ್ವಹಣಾ ಸಾರಾಂಶವು ಈ ವರದಿಯಲ್ಲಿನ ಅಂಶಗಳನ್ನು ಉದ್ಧರಿಸುವುದರೊಂದಿಗೆ ಪ್ರಧಾನ ಅಂಕಿಗಳ ಮತ್ತು ಅಂಶಗಳ ತತ್ ಕ್ಷಣದ ಚಿತ್ರಗಳ ಮೂಲಕ, ವಿತ್ತೀಯ ಸಮರ್ಥನೀಯತೆ, ಆಯವ್ಯಯ ಉದ್ದೇಶಗಳಿಗೆ ಪ್ರತಿಯಾಗಿ ಸಾಧನೆ, ಆದಾಯ ಮತ್ತು ವೆಚ್ಚ ಪ್ರಕ್ಷೇಪಣ, ವ್ಯತ್ಯಯಗಳಿಗೆ ಕಾರಣಗಳು ಮತ್ತು ಅದರ ಪರಿಣಾಮಗಳ ಒಳನೋಟವನ್ನು ನೀಡುತ್ತದೆ.*

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ಜಿಎಸ್‌ಡಿಪಿ) (ಪ್ರಸಕ್ತ ದರಗಳಲ್ಲಿ) 2019-20ರಲ್ಲಿದ್ದ ₹16,15,827ಕೋಟಿ ಗಳಿಂದ 2023-24ರಲ್ಲಿ ₹25,67,340 ಕೋಟಿಗಳಿಗೆ ಸರಾಸರಿ ಶೇಕಡಾ 11.84ರ ವೃದ್ಧಿಯ ದರದಲ್ಲಿ ಏರಿದೆ. ರಾಜ್ಯದ ಆಯವ್ಯಯ ಗಾತ್ರವು ಸರಾಸರಿ ಶೇಕಡಾ 9.10ರ ವೃದ್ಧಿಯ ದರದಲ್ಲಿ 2019-20ರಲ್ಲಿದ್ದ ₹2,40,745.86 ಕೋಟಿಗಳಿಂದ 2023-24ರಲ್ಲಿ ₹3,41,320.51 ಕೋಟಿಗಳಿಗೆ ಏರಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ 2022-23ಕ್ಕಿಂತಲೂ 2023-24ರಲ್ಲಿ ಶೇಕಡಾ 13.10ರಷ್ಟು ಬೆಳವಣಿಗೆ ಆಗಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಗಳು ಶೇಕಡಾ 1.86ರಷ್ಟು ಹೆಚ್ಚಾಗಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಮೇಲೆ ರಾಜಸ್ವ ಸ್ವೀಕೃತಿಗಳ ಶತಾಂಶವು 2022-23ರಲ್ಲಿದ್ದ 10.09ರಿಂದ 2023-24ರಲ್ಲಿ 9.09ಕ್ಕೆ ಇಳಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ತೆರಿಗೆ ರಾಜಸ್ವವು ಶೇಕಡಾ 14.81ರಷ್ಟು ಹೆಚ್ಚಾಗಿದೆ. ಈ ಹೆಚ್ಚಳಕ್ಕೆ, 2022-23ಕ್ಕೆ ಹೋಲಿಸಿದರೆ 2023-24ರಲ್ಲಿ ರಾಜ್ಯದ ಸ್ವಂತ ತೆರಿಗೆ ರಾಜಸ್ವವು ಶೇಕಡಾ 13.78ರಷ್ಟು ಮತ್ತು ಕೇಂದ್ರ ತೆರಿಗೆ ವರ್ಗಾವಣೆಯು ಶೇಕಡಾ 19.07ರಷ್ಟು ಹೆಚ್ಚಾಗಿದ್ದು ಕಾರಣವಾಗಿದೆ. ರಾಜ್ಯದ ಒಟ್ಟು ವೆಚ್ಚವು (ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳು) 2022-23ರಲ್ಲಿನ ₹2,76,183 ಕೋಟಿಗಳಿಂದ 2023-24ರಲ್ಲಿ ₹2,99,207 ಕೋಟಿಗಳಿಗೆ ಏರಿಕೆಯಾಗಿದ್ದು ಶೇಕಡಾ 8.34ರಷ್ಟು ಹೆಚ್ಚಳವನ್ನು ತೋರಿಸಿದೆ. 2022-23 ರಿಂದ ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚವು ಶೇಕಡಾ 12.54ರಷ್ಟು ವೃದ್ಧಿಯನ್ನು ಕಂಡಿತು. ರಾಜಸ್ವ ವೆಚ್ಚಕ್ಕಿಂತಲೂ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರ ಕಡಿಮೆ ಇರುವುದರಿಂದ, ರಾಜ್ಯವು 2022-23ರಲ್ಲಿನ ₹13,496 ಕೋಟಿಗಳ ರಾಜಸ್ವ ಹೆಚ್ಚಳಕ್ಕೆ ಹೋಲಿಸಿದರೆ 2023-24ರಲ್ಲಿ ₹9,271 ಕೋಟಿಗಳ ರಾಜಸ್ವ ಕೊರತೆಯನ್ನು ಕಂಡಿದೆ. ವಿತ್ತೀಯ ಕೊರತೆಯೂ ಸಹ 2022-23ರಲ್ಲಿದ್ದ ₹46,623 ಕೋಟಿಗಳಿಂದ 2023-24ರಲ್ಲಿ ₹65,522 ಕೋಟಿಗಳಿಗೆ ಏರಿಕೆಯಾಗಿದೆ.

### *ಸ್ವೀಕೃತಿ–ವೆಚ್ಚಗಳ ಅಸಾಮರಸ್ಯ*

ಸ್ವೀಕೃತಿಗಳು ಮತ್ತು ವೆಚ್ಚಗಳ ನಡುವಿನ ನಿರಂತರ ಅಸಾಮರಸ್ಯವು ಹೆಚ್ಚುತ್ತಿರುವ ವಿತ್ತೀಯ ಒತ್ತಡವನ್ನು ಸೂಚಿಸುತ್ತದೆ. ರಾಜ್ಯವು ರಾಜ್ಯದ ಸ್ವಂತ–ತೆರಿಗೆ ಆದಾಯ, ತೆರಿಗೆಯೇತರ ಆದಾಯ, ತೆರಿಗೆಗಳಲ್ಲಿ ರಾಜ್ಯಗಳ ಪಾಲಿನ ವರ್ಗಾವಣೆ, ಕೇಂದ್ರ ಸರ್ಕಾರದಿಂದ ಸಹಾಯಾನುದಾನ ಮತ್ತು ವರ್ಗಾವಣೆಗಳು ಮತ್ತು ಸಾಲವಲ್ಲದ ಬಂಡವಾಳ ಸ್ವೀಕೃತಿಗಳಂತಹ ವಿವಿಧ ಆದಾಯಗಳನ್ನು ಹೊಂದಿದೆ. ರಾಜ್ಯ ಸರ್ಕಾರದ ವೆಚ್ಚವು ರಾಜಸ್ವ ವೆಚ್ಚ ಹಾಗೂ ಬಂಡವಾಳ ವೆಚ್ಚವನ್ನು (ಆಸ್ತಿಗಳ ರಚನೆ, ಸಾಲಗಳು ಮತ್ತು ಮುಂಗಡಗಳು, ಹೂಡಿಕೆಗಳು, ಇತ್ಯಾದಿ) ಒಳಗೊಂಡಿರುತ್ತದೆ.

2019–20 ರಿಂದ 2023–24ರವರೆಗೆ, ರಾಜಸ್ವ ಸ್ವೀಕೃತಿಯು ಸರಾಸರಿ ವಾರ್ಷಿಕ ಬೆಳವಣಿಗೆ ದರ ಶೇಕಡಾ 7.89ರಲ್ಲಿ ₹1,75,443 ಕೋಟಿಗಳಿಂದ ₹2,33,343 ಕೋಟಿಗಳಿಗೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಬಂಡವಾಳ ಸ್ವೀಕೃತಿಯೂ ₹50,707 ಕೋಟಿಯಿಂದ ₹90,622 ಕೋಟಿಗೆ ಏರಿಕೆಯಾಗಿದೆ.

2023–24ರ ಅವಧಿಯಲ್ಲಿ, ಸಹಾಯಾನುದಾನವು ಹಿಂದಿನ ವರ್ಷಕ್ಕಿಂತ 58 ಪ್ರತಿಶತದಷ್ಟು ಕಡಿಮೆಯಾಗಿದೆ. 2023–24ರಲ್ಲಿ ರಾಜ್ಯ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಗೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿಯಿದ ಹಣ ಬರದ ಕಾರಣ ಈ ಇಳಿಕೆ ಕಂಡುಬಂದಿದೆ. 2023–24ರಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ಸಹಾಯಾನುದಾನದ ಪಾಲು ಶೇಕಡಾ ಏಳರಷ್ಟಿದ್ದು, ಇದು ರಾಜ್ಯವು ತನ್ನದೇ ಆದ ಆದಾಯವನ್ನು (ತೆರಿಗೆ ಮತ್ತು ತೆರಿಗೆಯೇತರ) ಅವಲಂಬಿಸಿದೆ ಎಂದು ಸೂಚಿಸುತ್ತದೆ. ಕೇಂದ್ರ ಪುರಸ್ಕೃತ ಯೋಜನೆಗಳು (CSS) ಮತ್ತು ಹಣಕಾಸು ಆಯೋಗದ ಅನುದಾನಕ್ಕಾಗಿ ರಾಜ್ಯ ಸರ್ಕಾರವು ₹15,528 ಕೋಟಿ ಅನುದಾನವನ್ನು ಈ ವರ್ಷದಲ್ಲಿ ಪಡೆದಿದೆ.

ಪ್ರಸ್ತುತ ಮಟ್ಟದ ಸೇವೆಗಳು ಮತ್ತು ಹಿಂದಿನ ಬಾಧ್ಯತೆಯ ಪಾವತಿಯನ್ನು ನಿರ್ವಹಿಸಲು ರಾಜಸ್ವ ವೆಚ್ಚವನ್ನು ಭರಿಸಲಾಗುವುದು. ಹಾಗಾಗಿ, ಇದು ರಾಜ್ಯದ ಮೂಲಭೂತಸೌಕರ್ಯ ಮತ್ತು ಸೇವಾ ಜಾಲಕ್ಕೆ ಯಾವುದೇ ಸೇರ್ಪಡೆಗೆ ಕಾರಣವಾಗುವುದಿಲ್ಲ. 2019–20 ಮತ್ತು 2023–24ರ ನಡುವೆ, ರಾಜಸ್ವ ವೆಚ್ಚವು ₹1,74,258 ಕೋಟಿಗಳಿಂದ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 10.78) ₹2,42,614 ಕೋಟಿಗೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 9.45) ಏರಿಕೆಯಾಗಿದೆ. ಇದು ಈ ಅವಧಿಯಲ್ಲಿ ಒಟ್ಟು ವೆಚ್ಚದ ಗಣನಾರ್ಹ ಭಾಗವನ್ನು (78 ರಿಂದ 81 ಪ್ರತಿಶತ) ಸತತವಾಗಿ ಮಾಡಿದೆ. ಸರಾಸರಿ ವಾರ್ಷಿಕ ವೃದ್ಧಿಯ ದರ 8.31 ಪ್ರತಿಶತದಲ್ಲಿ ಬೆಳೆಯುತ್ತಿದೆ.

### *ಸ್ವೀಕೃತಿಗಳನ್ನು ಮೀರಿದ ವೆಚ್ಚದ ಫಲಿತಾಂಶ*

ರಾಜಸ್ವ ಸ್ವೀಕೃತಿ ಮತ್ತು ರಾಜಸ್ವ ವೆಚ್ಚಗಳ ನಡುವಿನ ಅಂತರವು ರಾಜಸ್ವ ಕೊರತೆ/ ಹೆಚ್ಚಳಕ್ಕೆ ಕಾರಣವಾಗುತ್ತದೆ. 2022–23ರಲ್ಲಿ ರಾಜ್ಯವು ₹13,496 ಕೋಟಿ ರಾಜಸ್ವ ಹೆಚ್ಚಳವನ್ನು ತೋರಿಸಿದರೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 0.62), 2023–24ರ ಅವಧಿಯಲ್ಲಿ ₹9,271 ಕೋಟಿ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 0.36) ಆದಾಯ ಕೊರತೆಯನ್ನು ತೋರಿಸಿದೆ.

ರಾಜ್ಯ ಸರ್ಕಾರವು ಬಂಡವಾಳದಡಿಯಲ್ಲಿ ₹52,120 ಕೋಟಿ ಖರ್ಚು ಮಾಡಿದೆ. ಇದು 2023–24ರಲ್ಲಿ ಒಟ್ಟು ವೆಚ್ಚದ ಸುಮಾರು 17 ಪ್ರತಿಶತವಾಗಿತ್ತು. ಎರವಲುಗಳು ಬಂಡವಾಳದ ವೆಚ್ಚವನ್ನು ₹38,160 ಕೋಟಿಗಳಷ್ಟು ಮೀರಿದೆ ಮತ್ತು ಐದು ಗ್ಯಾರಂಟಿ ಯೋಜನೆಗಳ ವೆಚ್ಚವನ್ನು ಪೂರೈಸಲು ಈ ಮೊತ್ತವನ್ನು ಬಳಸಲಾಗಿದೆ.

ರಾಜ್ಯದ ಒಟ್ಟು ವೆಚ್ಚ ಮತ್ತು ಒಟ್ಟು ಋಣೇತರ ಸ್ವೀಕೃತಿಯ ನಡುವಿನ ಅಂತರವು ವಿತ್ತೀಯ ಕೊರತೆಗೆ ಕಾರಣವಾಗುತ್ತದೆ. ರಾಜ್ಯದ ವಿತ್ತೀಯ ಕೊರತೆಯು 2019–20ರಲ್ಲಿನ ₹38,166 ಕೋಟಿಯಿಂದ

(ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 2.36) 2023–24ರಲ್ಲಿ ₹65,522 ಕೋಟಿಗೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 2.55) ಏರಿಕೆಯಾಗಿದೆ.

ರಾಜಸ್ವ ವೆಚ್ಚದ ಅಡಿಯಲ್ಲಿ, ಬದ್ಧ ವೆಚ್ಚದ ಪ್ರಮಾಣವು ಅತಿದೊಡ್ಡ ಪಾಲನ್ನು ಹೊಂದಿದೆ. ಬದ್ಧ ವೆಚ್ಚವು ಸಂಪನ್ಮೂಲಗಳ ಮೇಲೆ ಮೊದಲ ಹೊಣೆಯನ್ನು ಹೊಂದಿರುತ್ತದೆ ಮತ್ತು ಬಡ್ಡಿ ಪಾವತಿಗಳು, ಸಂಬಳ ಮತ್ತು ವೇತನಗಳು ಮತ್ತು ಪಿಂಚಣಿಗಳ ಮೇಲಿನ ಖರ್ಚುಗಳನ್ನು ಒಳಗೊಂಡಿರುತ್ತದೆ. 2019–20 ಮತ್ತು 2023–24ರ ಅವಧಿಯಲ್ಲಿ ಬಡ್ಡಿ ಪಾವತಿಗಳು, ಸಂಬಳಗಳು ಮತ್ತು ಪಿಂಚಣಿಗಳ ಮೇಲಿನ ಬದ್ಧ ವೆಚ್ಚವು ರಾಜಸ್ವ ವೆಚ್ಚದ 40 ರಿಂದ 44 ಪ್ರತಿಶತವನ್ನು ಹೊಂದಿದೆ. ಬದ್ಧ ವೆಚ್ಚವು 2022–23ರಲ್ಲಿದ್ದ ₹94,326 ಕೋಟಿಗಳಿಂದ 2023–24ರಲ್ಲಿ ₹1,02,637 ಕೋಟಿಗಳಿಗೆ ಏರಿಕೆಯಾಗಿದೆ (ಹಿಂದಿನ ವರ್ಷಕ್ಕಿಂತ ಶೇಕಡಾ ಒಂಬತ್ತು ರಷ್ಟು ಹೆಚ್ಚಳ).

ಬದ್ಧ ವೆಚ್ಚದ ಜೊತೆಗೆ, 2019–20ರಿಂದ 2023–24ರ ಅವಧಿಯಲ್ಲಿ ರಾಜಸ್ವ ವೆಚ್ಚದ ಶೇಕಡಾ 34.96 ರಿಂದ ಶೇಕಡಾ 31.66ರಷ್ಟು ಅನಮ್ಯ ವೆಚ್ಚವು ಕಡಿಮೆಯಾಗಿದೆ. ಅನಮ್ಯ ವೆಚ್ಚವು 2022–23ರಲ್ಲಿದ್ದ ₹75,325 ಕೋಟಿಗಳಿಂದ 2023–24ರಲ್ಲಿ ₹76,808 ಕೋಟಿಗೆ ಏರಿಕೆಯಾಗಿದ್ದು, ಶೇಕಡಾ 1.97ರಷ್ಟು ಏರಿಕೆ ದಾಖಲಿಸಿದೆ. 2019–20 (₹60,921 ಕೋಟಿ) ರಿಂದ 2023–24 (₹76,808 ಕೋಟಿ) ವರೆಗಿನ ಅವಧಿಯಲ್ಲಿ ಅನಮ್ಯ ವೆಚ್ಚದ ಸರಾಸರಿ ಬೆಳವಣಿಗೆಯು ಶೇಕಡಾ 7.21ರಷ್ಟಿತ್ತು.

ಒಟ್ಟಾಗಿ ತೆಗೆದುಕೊಂಡರೆ, 2023–24ರಲ್ಲಿ ಬದ್ಧ ಮತ್ತು ಅನಮ್ಯ ವೆಚ್ಚವು ₹1,79,445 ಕೋಟಿಯಷ್ಟಿದ್ದು ರಾಜಸ್ವ ವೆಚ್ಚದ ಶೇಕಡಾ 74ರಷ್ಟಿದೆ. ಇದು ಸರ್ಕಾರದ ಇತರ ಆದ್ಯತೆಯ ವಲಯಗಳು ಮತ್ತು ಬಂಡವಾಳ ಸೃಷ್ಟಿಗೆ ಕಡಿಮೆ ನಮ್ಯತೆಯನ್ನು ನೀಡುತ್ತದೆ.

### *ಸಹಾಯಧನಗಳು ಬದ್ಧವಲ್ಲದ ವೆಚ್ಚದ ಪ್ರಮುಖ ಭಾಗವನ್ನು ರೂಪಿಸುತ್ತವೆ*

ಬದ್ಧವಲ್ಲದ ವೆಚ್ಚದಲ್ಲಿ, ಸಹಾಯಧನಗಳ ಪ್ರವೃತ್ತಿ ಹೆಚ್ಚುತ್ತಿದೆ, ಇದು 2019–20ರಲ್ಲಿ ಇದ್ದ ₹17,534 ಕೋಟಿಗಳಿಂದ 2023–24 ರಲ್ಲಿ ₹32,390 ಕೋಟಿಗಳಿಗೆ ಅಂದರೆ, 2019–20ರಲ್ಲಿನ ಒಟ್ಟು ರಾಜಸ್ವ ವೆಚ್ಚದ ಶೇಕಡಾ 10.06 ರಿಂದ 2023–24ರಲ್ಲಿ ಶೇಕಡಾ 13.35ರಷ್ಟು ಹೆಚ್ಚಾಗಿದೆ. ಈ ಅವಧಿಯಲ್ಲಿನ ಒಟ್ಟು ಸಹಾಯಧನಗಳ ಶೇಕಡಾ 49 ರಿಂದ 57ರಷ್ಟು ವಿದ್ಯುತ್ ಶಕ್ತಿ ಸಹಾಯಧನಗಳು ಗಮನಾರ್ಹ ಭಾಗವನ್ನು ಒಳಗೊಂಡಿವೆ. ಆದಾಗ್ಯೂ, ಸಹಾಯಧನಗಳನ್ನು ಕಡಿಮೆ ಅಂದಾಜು ಮಾಡಲಾಗಿದೆ ಏಕೆಂದರೆ ಅದು ಉದ್ದೇಶ ಶೀರ್ಷಿಕೆ 106ರ ಅಡಿಯಲ್ಲಿ ಬಿಡುಗಡೆಯಾದ ಸಹಾಯಧನಗಳನ್ನು ಒಳಗೊಂಡಿತ್ತು ಮತ್ತು ಇತರ ಉದ್ದೇಶ ಶೀರ್ಷಿಕೆಗಳಲ್ಲಿ ಬಿಡುಗಡೆಯಾದ ಸಹಾಯಧನಗಳನ್ನು ಒಳಗೊಂಡಿರಲಿಲ್ಲ. ಇದು ₹9,292.23 ಕೋಟಿಗಳಷ್ಟಿತ್ತು. ಇದರ ಹೊರತಾಗಿ, ರಾಜ್ಯ ಸರ್ಕಾರವು 2023–24ರ ಅವಧಿಯಲ್ಲಿ ₹19,091.80 ಕೋಟಿ ಗಳನ್ನು ಆರ್ಥಿಕ ನೆರವು, ಪ್ರೋತ್ಸಾಹ ಧನ ಇತ್ಯಾದಿಗಳ ರೂಪದಲ್ಲಿ ಸಹಾಯಧನಕ್ಕಾಗಿ ಖರ್ಚು ಮಾಡಿದೆ. ಹೀಗಾಗಿ, ಸಹಾಯಧಗಳ ಮೇಲಿನ ವಾಸ್ತವಿಕ ವೆಚ್ಚವು ₹60,774.12 ಕೋಟಿಗೆ ಹೆಚ್ಚಾಗುತ್ತದೆ.

### *ಆಯವ್ಯಯದ ಹೊರಗಿನ ಸಾಲಗಳು*

ರಾಜ್ಯ ಸರ್ಕಾರವು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಪ್ಯಾರಾ–ಸ್ಟಾಟಲ್‌ಗಳ ಮೂಲಕ, 2023–24ರ ಅವಧಿಯಲ್ಲಿ ಯಾವುದೇ ಆಯವ್ಯಯದ ಹೊರಗಿನ ಸಾಲಗಳನ್ನು ಪಡೆಯದಿದ್ದರೂ, ಹಿಂದಿನ ಆಯವ್ಯಯದ ಹೊರಗಿನ ಸಾಲಗಳ ಮರುಪಾವತಿಗೆ ಆಯವ್ಯಯದಲ್ಲಿ ಅವಕಾಶ ಒದಗಿಸಬೇಕಾಗಿತ್ತು. 2023–24ರಲ್ಲಿ ರಾಜ್ಯ ಸರ್ಕಾರವು ಆಯವ್ಯಯದ ಹೊರಗಿನ ಸಾಲಗಳ ಮರುಪಾವತಿ ಮತ್ತು ಋಣ ಸೇವೆಗಾಗಿ ₹4,873.43 ಕೋಟಿಗಳ ಸಹಾಯ/ಸಹಾಯಾನುದಾನವನ್ನು ಒದಗಿಸಿದ್ದು, ಇದು ಸರ್ಕಾರದ ಸಾಲಗಳ ಮರು ಪಾವತಿ ಮತ್ತು ಬಡ್ಡಿ ಪಾವತಿಗೆ ಹೆಚ್ಚುವರಿಯಾಗಿ ಸೇರ್ಪಡೆಯಾಗಿತ್ತು.

### ಖಾತರಿಗಳ ದೆಸೆಯಿಂದ ಸಾಂಧರ್ಬಿಕ ಹೊಣೆಗಾರಿಕೆಗಳು

2023–24ರ ಅಂತ್ಯದ ವೇಳೆಗೆ, ಸರ್ಕಾರದ ಖಾತರಿಗಳು ₹44,247 ಕೋಟಿಗಳಾಗಿವೆ. ಒಟ್ಟು ಖಾತರಿ ಶುಲ್ಕದ ಅಂದಾಜು ₹647.70 ಕೋಟಿಗೆ ಪ್ರತಿಯಾಗಿ, ರಾಜ್ಯವು 2023–24ರಲ್ಲಿ ₹306.69 ಕೋಟಿಯನ್ನು ಪಡೆದುಕೊಂಡಿದೆ.

### ವಿತ್ತೀಯ ಸಮರ್ಥನೀಯತೆ

ಹಣಕಾಸಿನ ಸಮರ್ಥನೀಯತೆಯನ್ನು ಸ್ಥೂಲ–ಹಣಕಾಸಿನ ನಿಯತಾಂಕಗಳಾದ ಕೊರತೆಗಳು, ಸಾಲ ಮತ್ತು ಹೊಣೆಗಾರಿಕೆಗಳ ಮಟ್ಟ, ಆಯವ್ಯಯದ ಹೊರಗಿನ ಸಾಲಗಳ ಲೆಕ್ಕದ ಬದ್ಧತೆಗಳು, ಖಾತರಿಗಳು, ಸಹಾಯಧನಗಳು ಇತ್ಯಾದಿಗಳ ಪರಿಭಾಷೆಯಲ್ಲಿ ಪರಿಶೀಲಿಸಲಾಗುತ್ತದೆ. ಆದಾಯ ಮತ್ತು ವೆಚ್ಚದ ಅಸಾಮರಸ್ಯದ ಹಿನ್ನೆಲೆಯಲ್ಲಿ ಬಹು ಮುಖ್ಯವಾದ ನಿರ್ಬಂಧವು ಬದ್ಧ ವೆಚ್ಚ ಮತ್ತು ಅನಮ್ಯ ವೆಚ್ಚವಾಗಿದ್ದು, ಇದರಲ್ಲಿ ಸಂಬಳ ಮತ್ತು ವೇತನಗಳು, ಪಿಂಚಣಿ ಪಾವತಿಗಳು, ಬಡ್ಡಿಗಳು ಇತ್ಯಾದಿ. ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಬದ್ಧತೆಯಿಂದ ಉಂಟಾಗುವ ಇತರ ಅನಮ್ಯ ವೆಚ್ಚಗಳು, ಮೀಸಲು ನಿಧಿಗಳಿಗೆ ವರ್ಗಾವಣೆ, ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಇತ್ಯಾದಿಗಳು ಸೇರಿವೆ.

### ಐದು ಗ್ಯಾರಂಟಿ ಯೋಜನೆಗಳು ಮತ್ತು ಅದರ ಪ್ರಭಾವ

ಕರ್ನಾಟಕ ಸರ್ಕಾರವು ಜಾರಿಗೆ ತಂದ ಐದು ಗ್ಯಾರಂಟಿ ಯೋಜನೆಗಳು 2023–24ನೇ ಸಾಲಿನ ರಾಜಸ್ವ ವೆಚ್ಚದ ಶೇಕಡಾ 15ರಷ್ಟಿವೆ. ಯೋಜನೆಗಳ ಅನುಷ್ಠಾನವು ವೆಚ್ಚದ ಬೆಳವಣಿಗೆಯಲ್ಲಿ ಹೆಚ್ಚಳಕ್ಕೆ ಕಾರಣವಾಯಿತು (ಹಿಂದಿನ ವರ್ಷಕ್ಕಿಂತ ಶೇ. 12.54), ಇದು ₹9,271 ಕೋಟಿ ರಾಜಸ್ವ ಕೊರತೆಗೆ ಕೊಡುಗೆಯಾಯಿತು. ಇದರ ಪರಿಣಾಮವಾಗಿ, ರಾಜ್ಯದ ವಿತ್ತೀಯ ಕೊರತೆಯು 2022–23ರಲ್ಲಿ ₹46,623 ಕೋಟಿಗಳಿಂದ 2023–24ರಲ್ಲಿ ₹65,522 ಕೋಟಿಗೆ ಏರಿಕೆಯಾಗಿದೆ. ಗ್ಯಾರಂಟಿ ಯೋಜನೆಗಳು ಮತ್ತು ಅದರಿಂದ ಉಂಟಾದ ಕೊರತೆಗಳಿಗೆ ಹಣಕಾಸು ಒದಗಿಸಲು ರಾಜ್ಯ ಸರ್ಕಾರವು ₹63,000 ಕೋಟಿಗಳಷ್ಟು ನಿವ್ವಳ ಮಾರುಕಟ್ಟೆ ಸಾಲವನ್ನು ಪಡೆದುಕೊಂಡಿತು, ಇದು ಕಳೆದ ವರ್ಷದ ನಿವ್ವಳ ಸಾಲಕ್ಕಿಂತ (₹26,000 ಕೋಟಿ) ₹37,000 ಕೋಟಿ ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಗ್ಯಾರಂಟಿ ಯೋಜನೆಗಳು ಮೂಲಸೌಕರ್ಯಕ್ಕಾಗಿ ಬಂಡವಾಳ ವೆಚ್ಚವನ್ನು ಸುಮಾರು ₹5,229 ಕೋಟಿಗಳಷ್ಟು ಕಡಿಮೆ ಮಾಡಿದೆ.

### ವಿತ್ತೀಯ ಜವಾಬ್ದಾರಿ ಮತ್ತು ಆಯವ್ಯಯ ನಿರ್ವಹಣೆ (ಎಫ್‌ಆರ್‌ಬಿಎಮ್) ಅವಶ್ಯಕತೆಗಳು ಮತ್ತು ವಿತ್ತೀಯ ನಿಯತಾಂಕಗಳ ಅನುಸರಣೆ

ಎಫ್‌ಆರ್‌ಬಿಎಮ್ ಕಾಯಿದೆ/ನಿಯಮಗಳು ರಾಜಸ್ವ ಕೊರತೆ, ವಿತ್ತೀಯ ಕೊರತೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ದೇಶೀಯ ಉತ್ಪನ್ನದ ಶತಾಂಶವಾಗಿ ಸಾಲ, ಮತ್ತು ಅದೇ ರೀತಿ ಖಾತರಿಗಳಿಗೆ ಹಿಂದಿನ ಎರಡನೇ ವರ್ಷದ ರಾಜಸ್ವ ಸ್ವೀಕೃತಿಗಳ ಶೇಕಡಾವಾರು, ಇವುಗಳಿಗೆ ಕೆಲವು ಮಿತಿಗಳನ್ನು ವಿಧಿಸುತ್ತದೆ. 2023–24ರಲ್ಲಿ, ರಾಜ್ಯವು ಗುರಿಯನ್ನು ಸಾಧಿಸಿದೆ ಎಂದು ಸೂಚಿಸುವ ಶೇಕಡಾ 0.36ರಷ್ಟು ರಾಜಸ್ವ ಕೊರತೆ; ವಿತ್ತೀಯ ಕೊರತೆಯು ಶೇಕಡಾ 3.5ರ ಮಿತಿಗೆ ಪ್ರತಿಯಾಗಿ ಶೇಕಡಾ 2.55; ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಂತೆ ಸಾಲವು 25 ಪ್ರತಿಶತದ ಮಿತಿಗೆ ಪ್ರತಿಯಾಗಿ 23.49 ಪ್ರತಿಶತದಷ್ಟಿತ್ತು ಮತ್ತು ನೀಡಲಾದ ಖಾತರಿಗಳು ಹಿಂದಿನ ಎರಡನೇ ವರ್ಷದ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡಾ 80ರ ನಿಗದಿತ ಮಿತಿಗೆ ಬದಲಾಗಿ ಶೇಕಡಾ 22.60ರಷ್ಟಿತ್ತು.

ಋಣ ಸಹಿಷ್ಣುತೆ ವಿಶ್ಲೇಷಣೆಯ ಪ್ರಕಾರ, ಕರ್ನಾಟಕ ಸರ್ಕಾರದ ಹೊಣೆಗಾರಿಕೆಗಳು 2019–20ರಿಂದ 2023–24ರ ನಡುವೆ ವಾರ್ಷಿಕವಾಗಿ ಸರಾಸರಿ 17.35 ಶೇಕಡಾ ದರದಲ್ಲಿ ಬೆಳೆದಿದೆ. ಕರ್ನಾಟಕದ ಹೊಣೆಗಾರಿಕೆಗಳು / ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು 2019–20ರಲ್ಲಿದ್ದ ಶೇಕಡಾ 20.89ರಿಂದ 2020–21ರಲ್ಲಿ ಶೇಕಡಾ 24.58ಕ್ಕೆ ಏರಿಕೆಯಾಗಿದೆ, ನಂತರ ಅದು ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು ಮತ್ತು 2022–23ರಲ್ಲಿ ಶೇಕಡಾ 23.03ಕ್ಕೆ ಇಳಿದಿದೆ ಮತ್ತು 2023–24ರ ಅವಧಿಯಲ್ಲಿ ಇದು ಶೇಕಡಾ 23.49ಕ್ಕೆ ಏರಿತು.

2019–24ರ ಅವಧಿಯಲ್ಲಿ, ರಾಜ್ಯದ ಪ್ರಾಥಮಿಕ ಕೊರತೆಯು ₹16,980 ಕೋಟಿಗಳಿಂದ ₹43,665 ಕೋಟಿಗಳ ನಡುವೆ ಇತ್ತು. ಡೋಮರ್ ವಿಶ್ಲೇಷಣೆಯು 2020–21 ಹೊರತುಪಡಿಸಿ, 2019–20ರಿಂದ 2023–24ರ ಅವಧಿಯಲ್ಲಿ ಡೊಮರ್ ಅಂತರವು (ಜಿ–ಆರ್) ಧನಾತ್ಮಕವಾಗಿದೆ ಎಂದು ತೋರಿಸಿದೆ. ಕೋವಿಡ್ ಪೂರ್ವ ಅವಧಿಯಲ್ಲಿ ಅಂದರೆ, 2019–20ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ನೈಜ ಬೆಳವಣಿಗೆಯ ದರವು ಶೇಕಡಾ 6.10 ಮತ್ತು ಡೊಮರ್ ಅಂತರವು (ಜಿ–ಆರ್ ಎಂದು ವ್ಯಕ್ತಪಡಿಸಲಾಗಿದೆ) ಧನಾತ್ಮಕವಾಗಿ ಉಳಿಯಿತು ಆದರೆ ಪ್ರಾಥಮಿಕ ಕೊರತೆ ಇತ್ತು. ಕೋವಿಡ್–19ರ 2020–21ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ನೈಜ ಬೆಳವಣಿಗೆಯ ದರದ ಮೇಲೆ ಪರಿಣಾಮ ಬೀರಿತು ಮತ್ತು ಡೊಮರ್ ಅಂತರವು ವರ್ಷದಲ್ಲಿ ಋಣಾತ್ಮಕವಾಗಿದೆ. ನಂತರದ ವರ್ಷಗಳಲ್ಲಿ (2021–22, 2022–23 ಮತ್ತು 2023–24), ಡೊಮರ್ ಅಂತರವು ಧನಾತ್ಮಕವಾಯಿತು, ಇದು ಪ್ರಾಥಮಿಕ ಕೊರತೆಯ ಜೊತೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರು ಪ್ರಮಾಣದಲ್ಲಿ ಹೊಣೆಗಾರಿಕೆಯು ಸ್ಥಿರ ಮೌಲ್ಯದ ಕಡೆಗೆ ಒಲವು ತೋರುತ್ತದೆ ಮತ್ತು ಆದ್ದರಿಂದ ಅದು ಸಮರ್ಥನೀಯವಾಗಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಋಣದ ಸ್ಥಿತಿಯನ್ನು ಅವಲಂಬಿಸಿ, ಅದು ಶೂನ್ಯಕ್ಕಿಂತ ಹೆಚ್ಚಿನ ಸ್ಥಿರ ಮಟ್ಟವನ್ನು ತಲುಪಲು ಕಾಲಕ್ರಮದಲ್ಲಿ ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ.

### *ಆಯವ್ಯಯ ಕಾರ್ಯಕ್ಷಮತೆ*

#### *ಆಯವ್ಯಯ ಅಂದಾಜುಗಳ ವಿಶ್ವಾಸಾರ್ಹತೆ*

ರಾಜ್ಯ ಶಾಸಕಾಂಗವು ಮುಂಬರುವ ವರ್ಷದ ಆಯವ್ಯಯವನ್ನು ಆಯವ್ಯಯ ಅಂದಾಜಿನ ಆಧಾರದ ಮೇಲೆ ಅನುಮೋದಿಸುತ್ತದೆ. ವಾಸ್ತವಿಕ ಆಯವ್ಯಯ ಕಡಿಮೆಯಾಗಬಹುದು ಅಥವಾ ಆಯವ್ಯಯ ಅಂದಾಜನ್ನು ಮೀರಬಹುದು, ಆದ್ದರಿಂದ ಹೋಲಿಕೆಯು ಪ್ರಸ್ತಾವಿತ ಆಯವ್ಯಯದ ವಿಶ್ವಾಸಾರ್ಹತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

- ***ರಾಜ್ಯವು ಆಯವ್ಯಯಕಿಂತ ಶೇಕಡಾ 3.41 ರಷ್ಟು ಕಡಿಮೆ ಖರ್ಚು ಮಾಡಿದೆ.***

2023–24ರಲ್ಲಿ ರಾಜ್ಯವು ಆಯವ್ಯಯ ಅಂದಾಜುಗಳಿಗಿಂತ ಶೇಕಡಾ 3.41 ರಷ್ಟು ಕಡಿಮೆ ಖರ್ಚು ಮಾಡಿದೆ. ಕಳೆದ ಎರಡು ವರ್ಷಗಳಲ್ಲಿ ಕನಿಷ್ಠ ವ್ಯತ್ಯಾಸವನ್ನು ಕಾಣುತ್ತಿರುವ ರಾಜ್ಯವು ಆಯವ್ಯಯ ಮತ್ತು ವಾಸ್ತವಿಕ ಅಂಕಿಅಂಶಗಳ ನಡುವಿನ ವ್ಯತ್ಯಾಸದಲ್ಲಿ ಸ್ವಲ್ಪ ಏರಿಕೆ ಕಂಡಿದೆ.

- ***ಒಟ್ಟಾರೆ ಆಯವ್ಯಯ ಫಲಿತ***

ಆಯವ್ಯಯದ ಉದ್ದೇಶ ಮತ್ತು ಅದರ ಅನುಷ್ಠಾನದ ವಿಷಯದಲ್ಲಿ ಆಯವ್ಯಯ ಕಾರ್ಯಕ್ಷಮತೆಯನ್ನು ಒಟ್ಟು ವೆಚ್ಚದ ಫಲಿತ ಹೆಚ್ಚುವರಿ ಮತ್ತು ಉಳಿತಾಯ ಎರಡರಲ್ಲೂ ಮೂಲತಃ ಅನುಮೋದಿಸಲಾದ ಮೊತ್ತವನ್ನು ಎಷ್ಟು ಪ್ರತಿಬಿಂಬಿಸುತ್ತದೆ ಎಂಬುದನ್ನು ನಿರ್ಣಯಿಸಲು ಪರಿಶೀಲಿಸಲಾಗುತ್ತದೆ. ರಾಜಸ್ವ ವಿಭಾಗದಲ್ಲಿ, ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ ಹೊರಹರಿವಿನ ವಿಚಲನವು ಶೇಕಡಾ (–)4.24ರಷ್ಟಿತ್ತು. ಇದು 25 ಅನುದಾನಗಳಲ್ಲಿ 0 ಮತ್ತು ± 25 ಪ್ರತಿಶತದ ನಡುವಿನ ವಿಚಲನದಿಂದಾಗಿ, ಮೂರು ಅನುದಾನಗಳಲ್ಲಿ ± 25 ಪ್ರತಿಶತ ಮತ್ತು ± 50 ಪ್ರತಿಶತಕ್ಕಿಂತ ಹೆಚ್ಚಿನದಾಗಿದೆ. ಬಂಡವಾಳ

ವಿಭಾಗದಲ್ಲಿ, ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ ಹೊರಹರಿವಿನ ವಿಚಲನವು ಶೇಕಡಾ (–)0.69ರಷ್ಟಿತ್ತು. ಇದು 20 ಅನುದಾನಗಳಲ್ಲಿ 0 ಮತ್ತು ± 25 ಪ್ರತಿಶತದ ನಡುವಿನ ವಿಚಲನದಿಂದಾಗಿ, ನಾಲ್ಕು ಅನುದಾನಗಳಲ್ಲಿ ± 25 ಮತ್ತು ± 50 ಪ್ರತಿಶತದ ನಡುವಿನ ವ್ಯತ್ಯಾಸ, ಮೂರು ಅನುದಾನಗಳಲ್ಲಿ ± 50 ಮತ್ತು ± 100 ಪ್ರತಿಶತದ ನಡುವಿನ ವ್ಯತ್ಯಾಸ ಇದಕ್ಕೆ ಕಾರಣ.

### *ವೆಚ್ಚ ಸಂಯೋಜನೆಯ ಫಲಿತ*

ಆಯವ್ಯಯ ಕಾರ್ಯಕ್ಷಮತೆಯು ಅನುಷ್ಠಾನದ ಸಮಯದಲ್ಲಿ ಮೂಲ ಆಯವ್ಯಯ ವರ್ಗಗಳ ನಡುವಿನ ಮರು–ಹಂಚಿಕೆಯು ವೆಚ್ಚದ ಸಂಯೋಜನೆಯಲ್ಲಿನ ವ್ಯತ್ಯಾಸಕ್ಕೆ ಎಷ್ಟು ಕೊಡುಗೆ ನೀಡಿದೆ ಎಂಬುದನ್ನು ಸಹ ನೋಡುತ್ತದೆ. ಈ ಅಳತೆಯು ಅಂತಿಮ ಆಯವ್ಯಯ ಮತ್ತು ವಾಸ್ತವ ವೆಚ್ಚದ ನಡುವಿನ ವ್ಯತ್ಯಾಸದ ಪ್ರಮಾಣವನ್ನು ಸೂಚಿಸುತ್ತದೆ. ರಾಜಸ್ವ ವಿಭಾಗದಲ್ಲಿ, ಪರಿಷ್ಕೃತ ಅಂದಾಜುಗೆ ಹೋಲಿಸಿದರೆ ಹೊರಹರಿವಿನ ವಿಚಲನವು ಶೇಕಡಾ (–) ನಾಲ್ಕರಷ್ಟಿದ್ದು, ಇದು 26 ಅನುದಾನಗಳಲ್ಲಿ 0 ಮತ್ತು ± 25 ಪ್ರತಿಶತ ಮತ್ತು ಎರಡು ಅನುದಾನಗಳಲ್ಲಿ ± 25 ಪ್ರತಿಶತ ಮತ್ತು ± 50 ಪ್ರತಿಶತದ ನಡುವಿನ ವಿಚಲನದಿಂದಾಗಿದೆ. ಬಂಡವಾಳ ವಿಭಾಗದಲ್ಲಿ, ಪರಿಷ್ಕೃತ ಅಂದಾಜುಗೆ ಹೋಲಿಸಿದರೆ ಹೊರಹರಿವಿನ ವಿಚಲನವು ಶೇಕಡಾ 0.57ರಷ್ಟಿತ್ತು. ಇದು 25 ಅನುದಾನಗಳಲ್ಲಿ 0 ಮತ್ತು ± 25 ಪ್ರತಿಶತ ಮತ್ತು ಎರಡು ಅನುದಾನಗಳಲ್ಲಿ ± 25 ಪ್ರತಿಶತ ಮತ್ತು ± 50 ಪ್ರತಿಶತದ ನಡುವಿನ ವಿಚಲನದಿಂದಾಗಿದೆ.

2023–24ನೇ ಸಾಲಿನಲ್ಲಿ 16 ಪ್ರಕರಣಗಳಲ್ಲಿ (ಪ್ರತಿ ಪ್ರಕರಣದಲ್ಲಿ ₹ ಒಂದು ಕೋಟಿ ಗಿಂತ ಹೆಚ್ಚು) ₹181.90 ಕೋಟಿಗಳ ಪೂರಕ ಅವಕಾಶಗಳು ಅನಗತ್ಯವೆಂದು ಸಾಬೀತಾಗಿದೆ, ಏಕೆಂದರೆ ವೆಚ್ಚವು ಮೂಲ ಅವಕಾಶಗಳ ಮಟ್ಟಕ್ಕೂ ಬರಲಿಲ್ಲ.

### *ಅನುದಾನ/ವಿನಿಯೋಗಗಳ ಮೇಲಿನ ಹೆಚ್ಚಳ ಸಕ್ರಮೀಕರಣ*

ರಾಜ್ಯ ಸರ್ಕಾರವು ಸಂವಿಧಾನದ 204 ಮತ್ತು 205 (1) (ಬಿ) ಅನುಚ್ಛೇದಗಳ ಅನ್ವಯ ಅನುದಾನಗಳು/ ವಿನಿಯೋಗಗಳ ಅವಕಾಶದ ಮೇಲಿನ ಹೆಚ್ಚು ವೆಚ್ಚವನ್ನು ರಾಜ್ಯ ಶಾಸಕಾಂಗದಿಂದ ಸಕ್ರಮಗೊಳಿಸಿ ಕೊಳ್ಳಬೇಕು. 2023–24ರಲ್ಲಿ ಎಂಟು ಅನುದಾನಗಳಡಿಯಲ್ಲಿ ₹2,851.48 ಕೋಟಿ ಹೆಚ್ಚುವರಿ ವೆಚ್ಚವಾಗಿರುವುದನ್ನು ಗಮನಿಸಲಾಗಿದ್ದು, ಇದನ್ನು ಸಕ್ರಮಗೊಳಿಸುವ ಅಗತ್ಯವಿದೆ. ಇದಲ್ಲದೆ, 2020–21 ಮತ್ತು 2022–23ಕ್ಕೆ ಸಂಬಂಧಿಸಿದಂತೆ ₹2,323.74 ಕೋಟಿಯ ಹೆಚ್ಚುವರಿ ವೆಚ್ಚವನ್ನು ಇನ್ನೂ ಸಕ್ರಮಗೊಳಿಸಬೇಕಾಗಿದೆ.

### *ರಾಜಸ್ವ ಮತ್ತು ಬಂಡವಾಳದ ನಡುವಿನ ತಪ್ಪು ವರ್ಗೀಕರಣ*

₹504.29 ಕೋಟಿ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚ ಮತ್ತು ₹0.01 ಕೋಟಿ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚ ಎಂದು ತಪ್ಪಾಗಿ ವರ್ಗೀಕರಿಸಿದ ಪರಿಣಾಮವಾಗಿ ₹504.28 ಕೋಟಿಗಳಷ್ಟು ರಾಜಸ್ವ ವೆಚ್ಚವನ್ನು ಕಡಿಮೆ ಮಾಡಲಾಗಿದೆ ಮತ್ತು ಆ ಮಟ್ಟಿಗೆ ರಾಜಸ್ವ ಕೊರತೆಯನ್ನು ಕಡಿಮೆಯಾಗಿ ಹೇಳಲಾಗಿದೆ.

### *ಲೆಕ್ಕಗಳ ಗುಣಮಟ್ಟ ಮತ್ತು ಹಣಕಾಸು ವರದಿ*

ಲೆಕ್ಕಗಳು ಮತ್ತು ಹಣಕಾಸು ವರದಿಗಳ ಗುಣಮಟ್ಟವು ಅನುಸರಣೆಯಲ್ಲಿನ ಅಂತರಗಳ ಪ್ರಸಂಗಗಳು, ಕ್ರಮಬದ್ಧತೆಯ ದೌರ್ಬಲ್ಯಗಳು ಮತ್ತು ವಾಸ್ತವಿಕ ವೆಚ್ಚಕ್ಕೆ ಸಾಕ್ಷಿಯಾಗುವ ಲೆಕ್ಕಪತ್ರ ದಾಖಲೆಗಳು ಅಥವಾ ಹೊಂದಾಣಿಕೆ ದಾಖಲೆಗಳ ಸ್ವೀಕೃತಿಯಲ್ಲಿ ವಿಳಂಬಕ್ಕೆ ಸಂಬಂಧಿಸಿದ ಸಮಸ್ಯೆಗಳು, ವಹಿವಾಟುಗಳು ಮತ್ತು ಬಾಬತ್ತುಗಳನ್ನು ಒಳಗೊಳ್ಳುತ್ತದೆ. ಇದು ಲೆಕ್ಕಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮತ್ತು ಸರ್ಕಾರದ ಲೆಕ್ಕಗಳ ಹೊರಗೆ ನಿಧಿಗಳ ನಿಲುಗಡೆ, ಹೊಣೆಗಾರಿಕೆಗಳನ್ನು ತೀರಿಸದಿರುವುದು ಅಥವಾ ಕಡಿಮೆ

ತೀರಿಸಿರುವುದು ಮತ್ತು ವ್ಯವಹಾರಗಳ ತಪ್ಪು ವರ್ಗೀಕರಣ ಮತ್ತು ದತ್ತಾಂಶ ಅಂತರಗಳಂತಹ ಹಣಕಾಸು ವರದಿಗಳನ್ನು ಎತ್ತಿ ತೋರಿಸುತ್ತದೆ.

### *ಲೆಕ್ಕಹೊಂದಾಣಿಕೆ*

ಆದಾಯ/ವೆಚ್ಚಗಳ ಮೇಲೆ ಪರಿಣಾಮಕಾರಿಯಾದ ಆಯವ್ಯಯ ನಿಯಂತ್ರಣವನ್ನು ನಿರ್ವಹಿಸಲು ಮತ್ತು ಲೆಕ್ಕಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ನಿಯಂತ್ರಣಾಧಿಕಾರಿಗಳು ಪ್ರತಿ ತಿಂಗಳು ತಮ್ಮ ಪುಸ್ತಕಗಳಲ್ಲಿ ದಾಖಲಿಸಲಾದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುದಾರಿ) ಅವರು ಲೆಕ್ಕಹಾಕಿದ ಅಂಕಿಅಂಶಗಳೊಂದಿಗೆ ಹೊಂದಾಣಿಕೆ ಮಾಡಬೇಕಾಗುತ್ತದೆ.

ರಾಜ್ಯ ಸರ್ಕಾರವು ಒಟ್ಟು ವೆಚ್ಚ ಮತ್ತು ಒಟ್ಟು ಸ್ವೀಕೃತಿಯ ಶೇಕಡಾ 95ರಷ್ಟನ್ನು ಮತ್ತು 99ರಷ್ಟು ಕ್ರಮವಾಗಿ ಹೊಂದಾಣಿಕೆ ಮಾಡಿದೆ.

### *ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ (ಐಜಿಎಎಸ್) ಗಳೊಂದಿಗೆ ಅನುಸರಣೆ*

ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳ (ಐಜಿಎಎಸ್) ಅಗತ್ಯತೆಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಐಜಿಎಎಸ್–2: ಲೆಕ್ಕಪತ್ರ ನಿರ್ವಹಣೆ ಮತ್ತು ಅನುದಾನದ ವರ್ಗೀಕರಣ ಮತ್ತು ಐಜಿಎಎಸ್–3: ಸರ್ಕಾರದಿಂದ ಮಾಡಿದ ಸಾಲಗಳು ಮತ್ತು ಮುಂಗಡಗಳನ್ನು ಭಾಗಶಃ ಅನುಸರಿಸಿದೆ.

### *ವೈಯಕ್ತಿಕ ಠೇವಣಿ ಖಾತೆಗಳ ಕಾರ್ಯಾಚರಣೆ*

ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು 2020–21ರಿಂದ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು, 2022–23ರ ಅವಧಿಯಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿದೆ ಮತ್ತು 2023–24 ರಲ್ಲಿ ಇದು ಶೇಕಡಾ 11.27 ರಷ್ಟು ಹೆಚ್ಚಾಗಿದೆ. ಇದು ಗೌರವಾನ್ವಿತ ಸುಪ್ರೀಂ ಕೋರ್ಟ್ ಆದೇಶದಂತೆ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ರಶೀದಿಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾಗಿರುವುದರಿಂದ ಇದು ಸಂಭವಿಸಿದೆ. ಅಂತಹ ದೊಡ್ಡ ಮೊತ್ತದ ಹಣವನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಳ್ಳುವುದು ಶಾಸಕಾಂಗ ಹಣಕಾಸು ನಿಯಂತ್ರಣದ ತತ್ವಕ್ಕೆ ವಿರುದ್ಧವಾಗಿದೆ. ವೈಯಕ್ತಿಕ ಠೇವಣಿ ಖಾತೆಗಳ ಪರಿಶೀಲನೆಯಲ್ಲಿ 28 ಚಾಲ್ತಿಯಲ್ಲಿಲ್ಲದ ವೈಯಕ್ತಿಕ ಠೇವಣಿ ಖಾತೆಗಳನ್ನು ಸರ್ಕಾರವು ಮುಚ್ಚಿಲ್ಲ ಎಂದು ತಿಳಿದುಬಂದಿದೆ, ಅವುಗಳಲ್ಲಿ ಏಳು ಖಾತೆಗಳು ₹18.42 ಕೋಟಿಗಳ ಋಣಾತ್ಮಕ ಶಿಲ್ಕ ಅನ್ನು ಹೊಂದಿದ್ದವು.

### *ಷರತ್ತುಬದ್ಧ ಅನುದಾನಗಳ ಬಳಕೆಯ ಪ್ರಮಾಣಪತ್ರಗಳು*

ನಿಗದಿತ ಅವಧಿಯೊಳಗೆ ಷರತ್ತುಬದ್ಧ ಅನುದಾನಗಳಿಗೆ ಬಳಕೆಯ ಪ್ರಮಾಣಪತ್ರಗಳನ್ನು ಸಲ್ಲಿಸುವ ಅಗತ್ಯವಿದ್ದರೂ, 31 ಮಾರ್ಚ್ 2024ರ ವೇಳೆಗೆ ₹118.64 ಕೋಟಿ ಮೊತ್ತದ 92 ಬಳಕೆ ಪ್ರಮಾಣ ಪತ್ರಗಳು ಬಾಕಿ ಉಳಿದಿವೆ. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಇಲಾಖಾ ಅಧಿಕಾರಿಗಳು ನಿಯಮಗಳನ್ನು ಪಾಲಿಸಲು ವಿಫಲರಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಬಳಕೆ ಪ್ರಮಾಣ ಪತ್ರಗಳ ಸಲ್ಲಿಸುವಲ್ಲಿಯ ಬಾಕಿಯು, ಹಣ ದುರ್ಬಳಕೆ ಮತ್ತು ವಂಚನೆಯ ಅಪಾಯವನ್ನು ಹೆಚ್ಚು ಮಾಡುವ ಸಾಧ್ಯತೆಇದೆ.

### *ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ (ಎಸಿ) ಸವಿವರ ಬಿಲ್‌ಗಳ (ಎನ್‌ಡಿಸಿ) ಬಿಲ್ಲುಗಳ ಸಲ್ಲಿಕೆ*

ಸಂಕ್ಷಿಪ್ತ ಸಾದಿಲ್ವಾರು (ಎಸಿ) ಬಿಲ್‌ಗಳ ಮೂಲಕ ಪಡೆದುಕೊಳ್ಳಲಾದ ಮುಂಗಡ ಹಣಕ್ಕೆ ಪಾವತಿ ರಹಿತ ಸವಿವರ ಸಾದಿಲ್ವಾರು (ಎನ್‌ಡಿಸಿ) ಬಿಲ್‌ಗಳನ್ನು ಸಲ್ಲಿಸುವ ಅಗತ್ಯವಿದ್ದರೂ, 31ನೇ ಮಾರ್ಚ್ 2024 ರಲ್ಲಿದ್ದಂತೆ ₹45.58 ಕೋಟಿ ಮೊತ್ತದ 934 ಎಸಿ ಬಿಲ್‌ಗಳು ಎನ್‌ಡಿಸಿ ಬಿಲ್‌ಗಳನ್ನು ಸಲ್ಲಿಸದೇ ಬಾಕಿ ಉಳಿದಿವೆ. ಅದರಲ್ಲಿ ₹43.02 ಕೋಟಿ ಮೊತ್ತದ 855 ಎಸಿ ಬಿಲ್‌ಗಳು 2022–23ರವರೆಗಿನ ಅವಧಿಗೆ ಸಂಬಂಧಿಸಿದೆ. ಸಾದಿಲ್ವಾರು ಬಿಲ್ಲುಗಳನ್ನು ಸೆಳೆದು ನಿಗದಿತ ಸಮಯದೊಳಗೆ ಹೊಂದಾಣಿಕೆ ಮಾಡದಿದ್ದರೆ, ಸಾರ್ವಜನಿಕ ಹಣದ ವ್ಯರ್ಥ/ದುರುಪಯೋಗದ/ದುರ್ಬಳಕೆಯ ಇತ್ಯಾದಿಗಳ ಸಾಧ್ಯತೆ ಹೆಚ್ಚಾಗುತ್ತದೆ.

### *ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಸಂದಾಯ ಮಾಡದಿರುವುದು*

64 ಇಲಾಖೆಗಳು / ಸರ್ಕಾರಿ ಕಂಪನಿಗಳು / ನಿಗಮಗಳಲ್ಲಿ ಸರ್ಕಾರದ ಅನುದಾನದ ಮೇಲೆ ಗಳಿಸಿದ ₹14,549.91 ಕೋಟಿಗಳ ಬಡ್ಡಿಯನ್ನು ಆರ್ಥಿಕ ಇಲಾಖೆಯು ನೀಡಿದ ಸೂಚನೆಗಳ ಹೊರತಾಗಿಯೂ ಸರ್ಕಾರದ ಖಾತೆಗೆ ಸಂದಾಯ ಮಾಡಿರುವುದಿಲ್ಲ.

*ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಕಾಯಿದೆಗಳ ನಿಬಂಧನೆಗಳ ಅನುಸರಣೆಯು ಉದ್ದೇಶವು ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ವರದಿಯಲ್ಲಿ ನಿಯಂತ್ರಣ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವುದೇ ಆಗಿದೆ. ಅನಾನುಸರಣೆ ಮತ್ತು ವಿಚಲನಗಳು ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ವರದಿಯ ಗುಣಮಟ್ಟಕ್ಕೆ ಪ್ರತಿಕೂಲವಾಗಿ ಪರಿಣಾಮ ಬೀರುತ್ತವೆ. ಷರತ್ತುಬದ್ಧ ಅನುದಾನಗಳಿಗೆ ಬಳಕೆ ಪ್ರಮಾಣಪತ್ರಗಳನ್ನು ಸಕಾಲಿಕವಾಗಿ ಸಲ್ಲಿಸದಿರುವುದು; ಎಸಿ ಬಿಲ್‌ಗಳಿಗೆ ಎನ್‌ಡಿಸಿ ಬಿಲ್‌ಗಳನ್ನು ಸಲ್ಲಿಸದಿರುವುದು; ಐಜಿಎಎಸ್–2 ಮತ್ತು ಐಜಿಎಎಸ್–3 ರೊಂದಿಗೆ ಅನುಸರಣೆ ಇಲ್ಲದಿರುವುದು; ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಸರ್ಕಾರಕ್ಕೆ ಸಂದಾಯ ಮಾಡದಿರುವುದು ಲೆಕ್ಕಗಳ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.*

# ಅಧ್ಯಾಯ – 1

# ಅವಲೋಕನ

ಅಧ್ಯಾಯ

# ಅವಲೋಕನ 1

## 1.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಸಂಕ್ಷಿಪ್ತ ಚಿತ್ರವನ್ನು ಒದಗಿಸುತ್ತದೆ ಮತ್ತು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ. ವರದಿಗೆ ಆಧಾರವಾಗಿರುವ ದತ್ತಾಂಶವು ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಸ್ಥೂಲ ವಿತ್ತೀಯ ವಿಶ್ಲೇಷಣೆ ಮತ್ತು ಕೊರತೆಗಳು/ಹೆಚ್ಚಳ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

## 1.2 ರಾಜ್ಯದ ಸಂಕ್ಷಿಪ್ತ ಚಿತ್ರಣ

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ (1,91,791 ಚ.ಕಿ.ಮೀ) ರಾಷ್ಟ್ರದ ಏಳನೇ ಅತಿದೊಡ್ಡ ರಾಜ್ಯವಾಗಿದೆ ಮತ್ತು ಜನಸಂಖ್ಯೆಯಲ್ಲಿ ಒಂಬತ್ತನೇ ದೊಡ್ಡ ರಾಜ್ಯವಾಗಿದೆ. ರಾಜ್ಯದ ಜನಸಂಖ್ಯೆಯು 6.11 ಕೋಟಿಗಳಾಗಿದ್ದು (2011ರ ಜನಗಣತಿ) ಪ್ರಕ್ಷೇಪಿತ ದಶಕದಲ್ಲಿ ಸುಮಾರು ಶೇಕಡಾ 8.09ರಷ್ಟು (2014–2024) ಬೆಳವಣಿಗೆಯನ್ನು ದಾಖಲಿಸಿದೆ. ರಾಷ್ಟ್ರೀಯ ಆಯೋಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಭಾರತ ಮತ್ತು ರಾಜ್ಯಗಳ 2011–2036ರ ಜನಸಂಖ್ಯೆಯ ಪ್ರಕ್ಷೇಪಣೆಗಳ ಪ್ರಕಾರ, 2023–24ರಲ್ಲಿ ರಾಜ್ಯದ ಪ್ರಕ್ಷೇಪಿತ ಜನಸಂಖ್ಯೆಯು 6.81 ಕೋಟಿಯಷ್ಟಿದೆ. ಅಖಿಲ ಭಾರತದ ಸರಾಸರಿ 21.92ಕ್ಕೆ (2011–12) ಹೋಲಿಸಿದರೆ ಬಡತನ ರೇಖೆಗಿಂತ[1] ಕೆಳಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣವು 20.91 ಆಗಿತ್ತು. ಸಾಕ್ಷರತಾ ಪ್ರಮಾಣವು ಶೇಕಡಾ 75.36ರಷ್ಟಿದೆ (2011ರ ಜನಗಣತಿ). ಮಾರ್ಚ್ 2024ರಲ್ಲಿದ್ದಂತೆ ರಾಜ್ಯವು 31 ಜಿಲ್ಲೆಗಳು ಮತ್ತು 232 ತಾಲೂಕುಗಳನ್ನು ಹೊಂದಿತ್ತು. ರಾಜ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಮತ್ತು ಆರ್ಥಿಕ ದತ್ತಾಂಶವನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

### *1.2.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಮತ್ತು ರಾಜ್ಯದ ಒಟ್ಟು ಮೌಲ್ಯವರ್ಧನೆ (ಜಿಎಸ್‌ವಿಎ)*

ಜಿಎಸ್‌ಡಿಪಿ ಮತ್ತು ಜಿಎಸ್‌ವಿಎ ಬೆಳವಣಿಗೆಯು ರಾಜ್ಯದ ಆರ್ಥಿಕತೆಯ ಪ್ರಮುಖ ಸೂಚಕವಾಗಿದೆ.

**ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ):** ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಗಡಿಯೊಳಗೆ ಉತ್ಪಾದಿಸಲಾದ ಅಧಿಕೃತವಾಗಿ ಗುರುತಿಸಲ್ಪಟ್ಟ ಎಲ್ಲಾ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವಾಗಿದೆ.

**ರಾಜ್ಯದ ಒಟ್ಟು ಮೌಲ್ಯವರ್ಧನೆ (ಜಿಎಸ್‌ವಿಎ):** ರಾಜ್ಯದ ಒಟ್ಟು ಮೌಲ್ಯವರ್ಧನೆಯು ಆರ್ಥಿಕತೆಯಲ್ಲಿ ಒಂದು ಪ್ರದೇಶದ ಸುತ್ತಮುತ್ತಲಿನ ತಯಾರಕರು ಮತ್ತು ಉದ್ಯಮ ವಲಯದಿಂದ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಮೌಲ್ಯವಾಗಿದೆ, ಅಂದರೆ ಇದು ಮಧ್ಯವರ್ತಿ ವೆಚ್ಚಗಳಿಲ್ಲದ ಉತ್ಪಾದನೆಗೆ ಹೋದ ಉತ್ಪನ್ನದ ಒಟ್ಟು ಮೌಲ್ಯವಾಗಿದೆ.

ಒಟ್ಟಾರೆ ಮೌಲ್ಯವರ್ಧನೆಯನ್ನು (ಜಿವಿಎ) ಆರ್ಥಿಕ ವಿಶ್ಲೇಷಣೆಗಾಗಿ ಭಾರತ ಸರ್ಕಾರ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಮ್‌ಎಫ್) ಮತ್ತು ವಿಶ್ವ ಬ್ಯಾಂಕ್‌ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳು ಬಳಸುತ್ತಿವೆ ಏಕೆಂದರೆ ತೆರಿಗೆಗಳು ಮತ್ತು ಸಹಾಯಧನಗಳ ಪರಿಣಾಮವನ್ನು ಕಡೆಗಣಿಸುವ ಒಟ್ಟು

[1] 2023–24ರ ಭಾರತದ ಆರ್ಥಿಕ ಸಮೀಕ್ಷೆಯ ಪ್ರಕಾರ

ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಹೋಲಿಸಿದರೆ ಆರ್ಥಿಕ ಬೆಳವಣಿಗೆಯ ಉತ್ತಮ ಸೂಚಕವೆಂದು ಜಿವಿಎಯನ್ನು ಪರಿಗಣಿಸಲಾಗಿದೆ. ಆರ್ಥಿಕತೆಯಲ್ಲಿನ ಬೇಡಿಕೆಯ ಸ್ಥಿತಿಗತಿಗಳ ಮೇಲೆ ಮೂಲಭೂತವಾಗಿ ಪ್ರತಿಬಿಂಬಿಸುವ ಖಾಸಗಿ ಬಳಕೆಯ ವೆಚ್ಚ, ಸರ್ಕಾರಿ ಬಳಕೆಯ ವೆಚ್ಚ ಮತ್ತು ಒಟ್ಟು ಸ್ಥಿರ ಬಂಡವಾಳ ರಚನೆ ಅಥವಾ ಹೂಡಿಕೆ ವೆಚ್ಚ ಸೇರಿದಂತೆ ಆರ್ಥಿಕತೆಯಲ್ಲಿ ಉಂಟಾದ ಒಟ್ಟು ವಿವಿಧ ವೆಚ್ಚಗಳ ಮೊತ್ತವಾಗಿ ಜಿಡಿಪಿಯನ್ನು ಲೆಕ್ಕಹಾಕಲಾಗುತ್ತದೆ. ಎರಡೂ ವಿಧಾನಗಳು ನಿವ್ವಳ ತೆರಿಗೆಗಳನ್ನು ಪರಿಗಣಿಸುವಲ್ಲಿ ವ್ಯತ್ಯಾಸಗಳನ್ನು ಹೊಂದಿವೆ, ಇದರ ಪರಿಣಾಮವಾಗಿ ಜಿಡಿಪಿಯಲ್ಲಿ ತೆರಿಗೆಗಳ ಸೇರ್ಪಡೆಯು ನೈಜ ಪರಿಸ್ಥಿತಿಯಿಂದ ಭಿನ್ನವಾಗಿರಬಹುದು. ಅದೇ ರೀತಿ ರಾಜ್ಯಕ್ಕೆ, ಜಿಎಸ್‌ವಿಎ ಅನ್ನು ಜಿಎಸ್‌ಡಿಪಿಗೆ ಹೋಲಿಸಿದರೆ ಉತ್ತಮ ಸೂಚಕವೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ, ನೀತಿ ತಯಾರಕರ ದೃಷ್ಟಿಕೋನದಿಂದ, ಉತ್ತಮ ವಿಶ್ಲೇಷಣೆಗಾಗಿ ಮತ್ತು ನೀತಿ ಮಧ್ಯಸ್ಥಿಕೆ ಅಯಾನುಗಳನ್ನು ಮಾಡಲು ಜಿವಿಎ ಮತ್ತು ಜಿಎಸ್‌ವಿಎ ದತ್ತಾಂಶವನ್ನು ಹೋಲಿಕೆ ಮಾಡುವುದು ಅತ್ಯಗತ್ಯವಾಗಿದೆ.

**ಕರ್ನಾಟಕ ರಾಜ್ಯವು ಜಿಎಸ್‌ಡಿಪಿ ಅಳವಡಿಸುವಿಕೆ**

ಭಾರತ ಸರ್ಕಾರದ ಹಣಕಾಸು ಸಚಿವಾಲಯದ ವೆಚ್ಚ ಇಲಾಖೆಯು ಪ್ರತಿ ಹಣಕಾಸು ವರ್ಷಕ್ಕೆ ರಾಜ್ಯದ ನಿವ್ವಳ ಸಾಲಗಳ ಮಿತಿಯನ್ನು ನಿರ್ಧರಿಸುವಾಗ ಹದಿನೈದನೇ ಹಣಕಾಸು ಆಯೋಗವು ಸೂಚಿಸಿದ ವಿಧಾನದ ಪ್ರಕಾರ ರಾಜ್ಯದ ಜಿಎಸ್‌ಡಿಪಿಯನ್ನು ಯೋಜಿಸುತ್ತದೆ. ರಾಜ್ಯ ಸರ್ಕಾರಕ್ಕೆ, 2023–24ನೇ ಸಾಲಿಗೆ ಯೋಜಿತ ಜಿಎಸ್‌ಡಿಪಿ ₹25,67,340 ಕೋಟಿ. ಮಧ್ಯಮ ಅವಧಿಯ ಹಣಕಾಸು ಯೋಜನೆ ಮತ್ತು ಬಜೆಟ್‌ನ ಅವಲೋಕನದಂತಹ ಬಜೆಟ್ ದಾಖಲೆಯಲ್ಲಿ ಹಣಕಾಸಿನ ನಿಯತಾಂಕಗಳನ್ನು ಅಂದಾಜು ಮಾಡಲು ರಾಜ್ಯವು ಇದನ್ನೇ ಅಳವಡಿಸಿಕೊಂಡಿದೆ. ರಾಜ್ಯವು ಹಣಕಾಸು ಖಾತೆಗಳು ಮತ್ತು ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯಲ್ಲಿಯೂ ಇದನ್ನು ಅಳವಡಿಸಿಕೊಳ್ಳಲು ತಿಳಿಸಿದೆ.

ಆರ್ಥಿಕ ಚಟುವಟಿಕೆಯನ್ನು ಸಾಮಾನ್ಯವಾಗಿ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯಗಳಾಗಿ ವಿಂಗಡಿಸಲಾಗಿದೆ, ಅವುಗಳು ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಿಗೆ ಸಂಬಂಧಿತವಾಗಿರುತ್ತವೆ. 2019–20 ರಿಂದ 2023–24ರವರೆಗಿನ ಪ್ರಸ್ತುತ ಬೆಲೆಗಳಲ್ಲಿ ರಾಷ್ಟ್ರದ ಜಿಡಿಪಿ ಮತ್ತು ಜಿವಿಎ ಹಾಗೂ ರಾಜ್ಯದ ವಾರ್ಷಿಕ ಬೆಳವಣಿಗೆಯ ಪ್ರವೃತ್ತಿಗಳನ್ನು **ಕೋಷ್ಟಕ–1.1**ರಲ್ಲಿ ಸೂಚಿಸಲಾಗಿದೆ ಮತ್ತು ಪ್ರಸ್ತುತ ಬೆಲೆಗಳಲ್ಲಿ ಜಿಎಸ್‌ವಿಎಗೆ ಸಂಬಂಧಿಸಿದಂತೆ ಜಿಎಸ್‌ಡಿಪಿಯ ಬೆಳವಣಿಗೆ ದರದ ಪ್ರವೃತ್ತಿಗಳನ್ನು **ನಕ್ಷೆ–1.1**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–1.1: ಜಿಡಿಪಿ/ಜಿವಿಎಗೆ ಹೋಲಿಸಿದರೆ ಜಿಎಸ್‌ಡಿಪಿ/ಜಿಎಸ್‌ವಿಎಗಳ ಪ್ರವೃತ್ತಿಗಳು (ಪ್ರಸಕ್ತ ದರಗಳಲ್ಲಿ)**

| ವರ್ಷ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಭಾರತ | | | | | |
| ಜಿಡಿಪಿ* *(₹ ಕೋಟಿಗಳಲ್ಲಿ)* | 2,01,03,593 | 1,98,54,096 | 2,35,97,399 | 2,69,49,646 | 2,95,35,667 |
| ಜಿವಿಎ^ | 1,83,81,117 | 1,82,10,997 | 2,16,35,584 | 2,46,59,041 | 2,67,62,147 |
| ಹಿಂದಿನ ವರ್ಷಕ್ಕೆ ಹೋಲಿಸಿದರೆ ಜಿಡಿಪಿಯ ಬೆಳವಣಿಗೆಯ ದರ (ಶೇಕಡಾ) | 6.37 | (–)1.24 | 18.85 | 14.21 | 9.60 |
| ಹಿಂದಿನ ವರ್ಷಕ್ಕೆ ಹೋಲಿಸಿದರೆ ಜಿವಿಎಯ ಬೆಳವಣಿಗೆಯ ದರ (ಶೇಕಡಾ) | 7.02 | (–)0.93 | 18.81 | 13.97 | 8.53 |
| ತಲಾ ಜಿಡಿಪಿ[a] (₹ ಗಳಲ್ಲಿ) | 1,49,915 | 1,46,480 | 1,72,422 | 1,94,879 | 2,11,725 |
| ರಾಜ್ಯ (ಕರ್ನಾಟಕ) | | | | | |
| ಜಿಎಸ್‌ಡಿಪಿ# (₹ ಕೋಟಿಗಳಲ್ಲಿ) | 16,15,827 | 16,41,460 | 19,78,094 | 22,69,995 | 25,67,340 |
| ಜಿಎಸ್‌ವಿಎ$ | 14,76,840 | 15,08,669 | 18,23,310 | 20,76,302 | 22,97,296 |
| ಹಿಂದಿನ ವರ್ಷಕ್ಕೆ ಹೋಲಿಸಿದರೆ ಜಿಎಸ್‌ಡಿಪಿಯ ಬೆಳವಣಿಗೆಯ ದರ (ಶೇಕಡಾ) | 9.22 | 1.59 | 20.51 | 14.76 | 13.10 |
| ಹಿಂದಿನ ವರ್ಷಕ್ಕೆ ಹೋಲಿಸಿದರೆ ಜಿಎಸ್‌ವಿಎಯ ಬೆಳವಣಿಗೆಯ ದರ (ಶೇಕಡಾ) | 10.32 | 2.16 | 20.86 | 13.88 | 10.64 |
| **ತಲಾ ಜಿಎಸ್‌ಡಿಪಿ (₹ ಗಳಲ್ಲಿ)@** | **2,44,437** | **2,46,366** | **2,94,833** | **3,36,221** | **3,76,996** |

*ಆಕರ: * ಭಾರತರದ ಆರ್ಥಿಕ ಸಮೀಕ್ಷೆ 2023–24ರ ಪ್ರಕಾರ ಅಖಿಲ ಭಾರತ ಜಿಡಿಪಿ (2019–20 ರಿಂದ 2023–24)*

*^ ಭಾರತದ ಆರ್ಥಿಕ ಸಮೀಕ್ಷೆ 2023–24ರ ಪ್ರಕಾರ ಜಿವಿಎ ಅಂಕಿಅಂಶಗಳು.*

*# ಜಿಎಸ್‌ಡಿಪಿ (2019–20 ರಿಂದ 2022–23) ಅಂಕಿಗಳು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ 2023–24ರ ಪ್ರಕಾರ ಮತ್ತು 2023–24ರ ಜಿಎಸ್‌ಡಿಪಿ ಅಂಕಿಗಳು ಭಾರತ ಸರ್ಕಾರದ ಹಣಕಾಸು ಮಂತ್ರಾಲಯದ ಪ್ರಕಾರ*

*$ ಕರ್ನಾಟಕ ಸರ್ಕಾರದ 2023–24ರ ಆರ್ಥಿಕ ಸಮೀಕ್ಷೆಯ ಪ್ರಕಾರ ಜಿಎಸ್‌ವಿಎ*

*a. 2019–20 ರಿಂದ 2023–24ರ ಅವಧಿಗೆ ತಲಾ ಜಿಡಿಪಿಯನ್ನು ಭಾರತ ಸರ್ಕಾರದ ಆರ್ಥಿಕ ಸಮೀಕ್ಷೆಯ ಜನಸಂಖ್ಯಾ ಅಂಕಿಗಳನ್ನು ಪರಿಗಣಿಸಿ ಲೆಕ್ಕ ಹಾಕಲಾಗಿದೆ*

*@ ಕರ್ನಾಟಕ ಸರ್ಕಾರದ 2023–24ರ ಆರ್ಥಿಕ ಸಮೀಕ್ಷೆಯ ಪ್ರಕಾರ ತಲಾ ಜಿಎಸ್‌ಡಿಪಿ (2019–20 ರಿಂದ 2023–24) ಮತ್ತು 2023–24ನೇ ಸಾಲಿನ ತಲಾ ಜಿಎಸ್‌ಡಿಪಿಯನ್ನು ರಾಜ್ಯದ ₹6.81 ಕೋಟಿ ಪ್ರಕ್ಷೇಪಿತ ಜನಸಂಖ್ಯೆಯ ಆಧಾರದ ಮೇಲೆ ರೂಪಿಸಲಾಗಿದೆ. ರಾಷ್ಟ್ರೀಯ ಜನಸಂಖ್ಯಾ ಆಯೋಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಪ್ರಕಾರ.*

**ಕೋಷ್ಟಕ–1.1**ರಿಂದ ಗಮನಿಸಿದಂತೆ, 2019–20 ರಿಂದ 2023–24ರವರೆಗಿನ ಎಲ್ಲಾ ವರ್ಷಗಳಲ್ಲಿ ಕರ್ನಾಟಕದ ಜಿಎಸ್‌ಡಿಪಿ ಬೆಳವಣಿಗೆ ದರ ಮತ್ತು ಜಿಎಸ್‌ವಿಎ ಬೆಳವಣಿಗೆ ದರವು ರಾಷ್ಟ್ರದ ಬೆಳವಣಿಗೆಯ ದರಕ್ಕಿಂತ ಹೆಚ್ಚಾಗಿದೆ. ಅದೇ ರೀತಿ, 2019–20 ರಿಂದ 2023–24ರವರೆಗಿನ ಎಲ್ಲಾ ವರ್ಷಗಳಲ್ಲಿ ರಾಜ್ಯದ ತಲಾ ಜಿಎಸ್‌ಡಿಪಿ ತಲಾ ಜಿಡಿಪಿ ಗಿಂತ ಹೆಚ್ಚಾಗಿದೆ ಎಂದು ಗಮನಿಸಲಾಗಿದೆ. 2023–24ರ ಅವಧಿಯಲ್ಲಿ ರಾಜ್ಯದ ಜಿಎಸ್‌ಡಿಪಿಯನ್ನು ಭಾರತ ಸರ್ಕಾರದ ಹಣಕಾಸು ಮಂತ್ರಾಲಯ ರಾಜ್ಯಕ್ಕೆ ಯೋಜಿಸಿರುವ ಅಂಕಿಅಂಶಗಳ ಪ್ರಕಾರ ಅಳವಡಿಸಿಕೊಳ್ಳಲಾಗಿದೆ. ಜಿಎಸ್‌ಡಿಪಿಯಲ್ಲಿ ವಲಯವಾರು ಕೊಡುಗೆಯನ್ನು ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿಅಂಶಗಳ ನಿರ್ದೇಶನಾಲಯದ[2] ವಿಶ್ಲೇಷಣೆಯ ಪ್ರಕಾರ ಮಾಡಲಾಗಿದೆ.

**ನಕ್ಷೆ–1.1: ಜಿಎಸ್‌ವಿಎಗೆ ಪ್ರತಿಯಾಗಿ ಜಿಎಸ್‌ಡಿಪಿಯ ಬೆಳವಣಿಗೆ (2019–20 ರಿಂದ 2023–24)**




*ಆಕರ: ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ, ಭಾರತ ಸರ್ಕಾರ.*

**ನಕ್ಷೆ–1.1**ರಿಂದ ಗಮನಿಸಿದಂತೆ, ಪ್ರಸ್ತುತ ಬೆಲೆಗಳಲ್ಲಿ ಕರ್ನಾಟಕದ ಜಿಎಸ್‌ಡಿಪಿ ಬೆಳವಣಿಗೆ ದರವು 2019–20 ರಿಂದ 2021–22ರವರೆಗಿನ ವರ್ಷಗಳಲ್ಲಿ ಜಿಎಸ್‌ವಿಎ ಬೆಳವಣಿಗೆಯ ದರಕ್ಕಿಂತ ಕಡಿಮೆಯಾಗಿತ್ತು, ಆದಾಗ್ಯೂ, 2022–23 ಮತ್ತು 2023–24 ವರ್ಷಗಳಲ್ಲಿ ಇದು ಹೆಚ್ಚಾಗಿದೆ. ಇದು 2022–23 ಮತ್ತು 2023–24ರ ಅವಧಿಯಲ್ಲಿ, ರಾಜ್ಯವು ಗಳಿಸಿದ ತೆರಿಗೆಗಳು ರಾಜ್ಯವು ಒದಗಿಸಿದ ಸಹಾಯಧನಕ್ಕಿಂತ ಅಧಿಕವಾಗಿದ್ದಿತು ಮತ್ತು ಹಾಗಾಗಿ ಜಿಎಸ್‌ಡಿಪಿಯ ಬೆಳವಣಿಗೆಯ ದರವು ಜಿಎಸ್‌ವಿಎ ಬೆಳವಣಿಗೆ ದರಕ್ಕಿಂತ ಹೆಚ್ಚಾಗಿದ್ದಿತು ಎಂಬುದನ್ನು ಸೂಚಿಸುತ್ತದೆ.

2019–20 ರಿಂದ 2023–24ರವರೆಗಿನ ಅವಧಿಯಲ್ಲಿ ಜಿಎಸ್‌ವಿಎ ವಲಯದ ಬೆಳವಣಿಗೆಯ ಪ್ರವೃತ್ತಿಯನ್ನು **ನಕ್ಷೆ–1.2**ರಲ್ಲಿ ಸೂಚಿಸಲಾಗಿದೆ. 2019–20 ಕ್ಕಿಂತ 2020–21ರಲ್ಲಿ ಕೃಷಿ ವಲಯದ ಬೆಳವಣಿಗೆಯ ದರವು 2022–23ರವರೆಗೆ ಇಳಿಕೆಯ ಪ್ರವೃತ್ತಿಯನ್ನು ತೋರಿಸಿದೆ ಮತ್ತು 2023–24ರಲ್ಲಿ ಸ್ವಲ್ಪ ಹೆಚ್ಚಾಗಿದೆ

[2] ಕರ್ನಾಟಕದ ಆರ್ಥಿಕ ಸಮೀಕ್ಷೆಯ ಪ್ರಕಾರ ಜಿಎಸ್‌ಡಿಪಿ ₹25,00,733 ಕೋಟಿಯಷ್ಟಿದ್ದು ಇದು ಭಾರತ ಸರ್ಕಾರದ ಹಣಕಾಸು ಮಂತ್ರಾಲಯದ ಜಿಎಸ್‌ಡಿಪಿಗಿಂತ (₹25,67,340 ಕೋಟಿ) ಭಿನ್ನವಾಗಿದೆ.

ಎಂಬುದನ್ನು ನಕ್ಷೆಯಿಂದ ಗಮನಿಸಬಹುದು. ಏತನ್ಮಧ್ಯೆ, 2019–20ರಲ್ಲಿ ಋಣಾತ್ಮಕ ಬೆಳವಣಿಗೆಯ ದರವನ್ನು ಹೊಂದಿದ್ದ ಕೈಗಾರಿಕಾ ವಲಯದ ಬೆಳವಣಿಗೆಯ ದರವು 2020–21ರಲ್ಲಿ ಹೆಚ್ಚಳವನ್ನು ತೋರಿಸಿತು ಮತ್ತು 2021–22ರಲ್ಲಿ ತೀವ್ರವಾಗಿ ಬೆಳೆಯಿತು. ಆನಂತರ, ಅದು ಕಡಿಮೆಯಾಗುವ ಪ್ರವೃತ್ತಿಯಲ್ಲಿದೆ. 2020–21ರಲ್ಲಿ ಋಣಾತ್ಮಕವಾಗಿದ್ದ ಸೇವಾ ವಲಯವು 2021–22ರಲ್ಲಿ ಮತ್ತೆ ಚೇತರಿಸಿಕೊಂಡಿತು. ಆದಾಗ್ಯೂ, 2022–23 ಮತ್ತು 2023–24ರ ಅವಧಿಯಲ್ಲಿ ಇದು ಕಡಿಮೆಯಾಗಿದೆ.

**ನಕ್ಷೆ–1.2: ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯಲ್ಲಿ ವಿಭಾಗೀಯ ಬೆಳವಣಿಗೆ**




*ಆಕರ: ಆರ್ಥಿಕ ಮತ್ತು ಅಂಕಿಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

ಕೈಗಾರಿಕೆಗಳು ಮತ್ತು ಸೇವಾ ವಲಯಗಳಲ್ಲಿನ ಕುಸಿತಕ್ಕೆ ಮುಖ್ಯವಾಗಿ ರಸ್ತೆ ಸಾರಿಗೆ, ವ್ಯಾಪಾರ ಮತ್ತು ದುರಸ್ತಿ ಸೇವೆಗಳು ಮತ್ತು ಹಣಕಾಸು ಸೇವೆಗಳು ಕಾರಣವಾಗಿವೆ.

## 1.3 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ

ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಯನ್ನು ಭಾರತದ ಸಂವಿಧಾನದ ಅನುಚ್ಛೇದ 151(2)ರ ಪ್ರಕಾರ ಸಿದ್ಧಪಡಿಸಲಾಗಿದೆ. ಈ ಅನುಚ್ಛೇದದ ಅನ್ವಯ ರಾಜ್ಯದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಲು ಅನುವಾಗುವಂತೆ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

ಖಜಾನೆಗಳು, ಆರಂಭಿಕ ಮತ್ತು ಪೂರಕ ಲೆಕ್ಕ ನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುವ ಕಛೇರಿಗಳು ಹಾಗೂ ಇತರ ಇಲಾಖೆಗಳು ಸಲ್ಲಿಸುವ ಲೆಕ್ಕಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದ ವಿವರಣಾ ಪಟ್ಟಿಗಳಿಂದ ಪ್ರತಿ ವರ್ಷ ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಿದ್ಧಪಡಿಸುತ್ತಾರೆ. ಈ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ) ಸ್ವತಂತ್ರವಾಗಿ ಪರಿಶೀಲಿಸುತ್ತಾರೆ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪ್ರಮಾಣೀಕರಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು ಈ ವರದಿಯ ಪ್ರಮುಖ ದತ್ತಾಂಶಗಳಾಗಿವೆ. ಇತರ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

- ಪ್ರಕ್ಷೇಪಣಗಳಿಗೆ ಪ್ರತಿಯಾಗಿ ವಿತ್ತೀಯ ಪ್ರಮಿತಿಗಳು ಮತ್ತು ಹಂಚಿಕೆಯ ಆದ್ಯತೆಗಳ ಹಾಗೂ ಆಯವ್ಯಯ ಅನುಷ್ಠಾನದ ಪರಿಣಾಮಕಾರಿತ್ವವನ್ನು ಹಾಗೂ ಸಂಬಂಧಪಟ್ಟ ನಿಯಮಗಳು ಮತ್ತು ನಿಗದಿತ ಕಾರ್ಯ ವಿಧಾನಗಳ ಅನುಸರಣೆಯನ್ನು ನಿರ್ಧರಿಸಲು ರಾಜ್ಯದ ಆಯವ್ಯಯ ಅಂದಾಜುಗಳು;

- ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–I) ಮತ್ತು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–II) ಕಚೇರಿಯಿಂದ ನಡೆಸಿದ ಲೆಕ್ಕ ಪರಿಶೋಧನಾ ಫಲಿತಾಂಶಗಳು;
- ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದ ಇತರ ಹಣಕಾಸು ದತ್ತಾಂಶ;
- ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದಿಂದ ಪಡೆದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ದತ್ತಾಂಶ ಮತ್ತು ಇತರ ರಾಜ್ಯ ಸಂಬಂಧಿತ ಅಂಕಿ ಅಂಶಗಳು;
- ಹದಿನೈದನೆಯ ಹಣಕಾಸು ಆಯೋಗದ ಶಿಫಾರಸುಗಳು;
- ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002; ಮತ್ತು
- ಭಾರತ ಸರ್ಕಾರದ ಮಾರ್ಗಸೂಚಿಗಳು.

## 1.4 ಸರ್ಕಾರಿ ಲೆಕ್ಕಗಳ ರಚನೆ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ನಿರ್ವಹಿಸಲಾಗಿದೆ.

| | |
|---|---|
| ಸಂಚಿತ ನಿಧಿ | •ರಾಜಸ್ವ ಮತ್ತು ಬಂಡವಾಳ ಲೆಕ್ಕ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳು ಸಂವಿಧಾನದ 266(1)ನೇ ಅನುಚ್ಛೇದದಡಿ ಸ್ಥಾಪಿಸಲಾದ ರಾಜ್ಯದ ಸಂಚಿತ ನಿಧಿ ಎಂಬ ಹೆಸರಿನ ಒಂದು ಕ್ರೋಢೀಕೃತ ನಿಧಿಯಡಿ ಲೆಕ್ಕ ಮಾಡಲಾಗುತ್ತದೆ. |
| ಸಾದಿಲ್ವಾರು ನಿಧಿ | •ರಾಜ್ಯದ ಸಾದಿಲ್ವಾರು ನಿಧಿಯು ಸಂವಿಧಾನದ 267(2)ನೇ ಅನುಚ್ಛೇದದಡಿ ಸ್ಥಾಪಿಸಲಾಗಿರುವ ರಾಜ್ಯಪಾಲರ ವಿಲೇವಾರಿಯಲ್ಲಿರುವ ಮುಂಗಡ ಸ್ವರೂಪದ ನಿಧಿಯಾಗಿದ್ದು ಸರ್ಕಾರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಶಾಸಕಾಂಗದ ನಂತರದ ಅನುಮೋದನೆಗೆ ಒಳಪಟ್ಟು ಮುಂಗಡವಾಗಿ ನೀಡಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯ ಸಂಚಿತ ನಿಧಿಯ ಕ್ರಿಯಾ ಪ್ರಧಾನ ಲೆಕ್ಕ ಶೀರ್ಷಿಕೆಗೆ ವೆಚ್ಚ ಹಾಕಿ ನಿಧಿಗೆ ಪುನರ್ಭರ್ತಿ ಮಾಡಲಾಗುತ್ತದೆ. |
| ಸಾರ್ವಜನಿಕ ಲೆಕ್ಕ | •ರಾಜ್ಯ ಸಂಚಿತ ನಿಧಿಯ ಭಾಗವಲ್ಲದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು ಮತ್ತು ಇರಸಾಲುಗಳು ಮುಂತಾದವುಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚಗಳ ಲೆಕ್ಕವನ್ನು ಸಂವಿಧಾನದ 266(2)ನೇ ಅನುಚ್ಛೇದದಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಡಿ ಇಡಲಾಗುತ್ತದೆ ಮತ್ತು ಈ ಲೆಕ್ಕದಡಿಯ ವ್ಯವಹಾರಗಳು ಶಾಸಕಾಂಗದ ಅನುಮೋದನೆಗೆ ಒಳಪಟ್ಟಿರುವುದಿಲ್ಲ. |

ಭಾರತದ ಸಂವಿಧಾನದ 202ನೇ ವಿಧಿಯ ಅನ್ವಯ ರಾಜ್ಯ ಶಾಸಕಾಂಗದ ಉಭಯ ಸದನಗಳಲ್ಲಿ ಆಯವ್ಯಯವನ್ನು ಮಂಡಿಸಬೇಕು. 'ವಾರ್ಷಿಕ ಹಣಕಾಸು ವಿವರಣಾ ಪಟ್ಟಿ'ಯು ಆಯವ್ಯಯದ ಮುಖ್ಯ ದಾಖಲೆಯಾಗಿದೆ. ಆಯವ್ಯಯವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

- **ರಾಜಸ್ವ ಸ್ವೀಕೃತಿಗಳು**: ತೆರಿಗೆ ಆದಾಯ, (ಕೇಂದ್ರ ತೆರಿಗೆಗಳು/ಸುಂಕಗಳ ಪಾಲು) ತೆರಿಗೆಯೇತರ ಆದಾಯ, ಮತ್ತು ಭಾರತ ಸರ್ಕಾರದ ಅನುದಾನವನ್ನು ಒಳಗೊಂಡಿರುತ್ತದೆ.

- **ರಾಜಸ್ವ ವೆಚ್ಚ**: ಇದು ಭೌತಿಕ ಅಥವಾ ಹಣಕಾಸಿನ ಆಸ್ತಿಗಳ ಸೃಷ್ಟಿಗೆ ಕಾರಣವಾಗದ ಸರ್ಕಾರದ ಎಲ್ಲಾ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಇಲಾಖೆಗಳು ಮತ್ತು ವಿವಿಧ ಸೇವೆಗಳ ಸಾಮಾನ್ಯ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚಗಳು, ಸರ್ಕಾರವು ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿಗಳು ಮತ್ತು ವಿವಿಧ ಸಂಸ್ಥೆಗಳಿಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದೆ (ಕೆಲವು ಅನುದಾನಗಳು ಆಸ್ತಿಗಳ ಸೃಷ್ಟಿಗೆ ಮೀಸಲಾಗಿರಬಹುದು).

- **ಬಂಡವಾಳ ಸ್ವೀಕೃತಿಗಳು**:

  - **ಋಣ ಸ್ವೀಕೃತಿಗಳು**: ಮಾರುಕಟ್ಟೆ ಸಾಲಗಳು, ಬಾಂಡ್‌ಗಳು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು, ಮಾರ್ಗೋಪಾಯಗಳ ನಿವ್ವಳ ವಹಿವಾಟು, ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

> ➢ **ಋಣೇತರ ಸ್ವೀಕೃತಿಗಳು:** ಬಂಡವಾಳ ಹಿಂತೆಗೆದುಕೊಳ್ಳುವಿಕೆ, ಸಾಲಗಳ ಮತ್ತು ಮುಂಗಡಗಳ ವಸೂಲಾತಿ.

- **ಬಂಡವಾಳ ವೆಚ್ಚ:** ಭೂಮಿ, ಕಟ್ಟಡ, ಯಂತ್ರೋಪಕರಣಗಳು, ಇತರ ಉಪಕರಣಗಳ ಖರೀದಿ, ಷೇರುಗಳಲ್ಲಿನ ಹೂಡಿಕೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಅಸ್ತಿತ್ವಗಳಿಗೆ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳನ್ನು ವೆಚ್ಚವನ್ನು ಒಳಗೊಂಡಿರುತ್ತದೆ.

ಹಣಕಾಸು ಲೆಕ್ಕಗಳ ವಿನ್ಯಾಸವನ್ನು **ಅನುಬಂಧ–1.2**ರಲ್ಲಿ ತೋರಿಸಲಾಗಿದೆ ಮತ್ತು ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪವನ್ನು **ನಕ್ಷೆ–1.3**ರಲ್ಲಿ ನೀಡಲಾಗಿದೆ.

**ನಕ್ಷೆ–1.3: ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪ**



## 1.5 ಆಯವ್ಯಯ ಪ್ರಕ್ರಿಯೆಗಳು

ಭಾರತ ಸಂವಿಧಾನದ 202ನೇ ವಿಧಿಯ ಅನ್ವಯ, ರಾಜ್ಯದ ರಾಜ್ಯಪಾಲರು 2023–24ರ ಅವಧಿಗೆ ರಾಜ್ಯದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ವಾರ್ಷಿಕ ವಿತ್ತ ವಿವರಣೆಯ ರೂಪದಲ್ಲಿ ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು. ಅನುಚ್ಛೇದ 203ರ ಪ್ರಕಾರ, ವಿತ್ತ ವಿವರಣೆಯನ್ನು ರಾಜ್ಯ ಶಾಸಕಾಂಗಕ್ಕೆ ಅನುದಾನಗಳು/ವಿನಿಯೋಗಗಳ ಬೇಡಿಕೆಗಳ ರೂಪದಲ್ಲಿ ಸಲ್ಲಿಸಲಾಗುತ್ತದೆ. ಅನುಮೋದನೆಯ ನಂತರ, ಸಂಚಿತ ನಿಧಿಯಿಂದ ಅಗತ್ಯವಿರುವ ಹಣವನ್ನು ವಿನಿಯೋಗಿಸಲು ಅನುಚ್ಛೇದ 204ರಡಿಯಲ್ಲಿ ಧನವಿನಿಯೋಗ ಮಸೂದೆಯನ್ನು ಶಾಸಕಾಂಗವು ಅಂಗೀಕರಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ, ಆಯವ್ಯಯ ದಾಖಲೆಗಳು, ಮಹಿಳಾ ಉದ್ದೇಶಿತ ಆಯವ್ಯಯ (**ಅಧ್ಯಾಯ–3 ಕಂಡಿಕೆ–3.3**ರಲ್ಲಿ ವಿವರಿಸಲಾಗಿದೆ), ಮಕ್ಕಳ ಆಯವ್ಯಯ (**ಅಧ್ಯಾಯ–3 ಕಂಡಿಕೆ–3.4**ರಲ್ಲಿ ವಿವರಿಸಲಾಗಿದೆ), ಜಿಲ್ಲಾವಾರು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನೆವಾರು ಹಂಚಿಕೆಯ ದಾಖಲೆಗಳು ಮುಂತಾದವುಗಳನ್ನು ಒಳಗೊಂಡಿವೆ.

ರಾಜ್ಯ ಆಯವ್ಯಯ ಕೈಪಿಡಿಯು ಆಯವ್ಯಯ ರಚನೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ ಮತ್ತು ರಾಜ್ಯ ಸರ್ಕಾರವು ಅದರ ವೆಚ್ಚ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮಾರ್ಗದರ್ಶನ ನೀಡುತ್ತದೆ. ಆಯವ್ಯಯದ ಪರಿಶೀಲನೆಯ ಫಲಿತಾಂಶಗಳು ಮತ್ತು ರಾಜ್ಯ ಸರ್ಕಾರದ ಇತರ ಆಯವ್ಯಯ ಉಪಕ್ರಮಗಳ ಅನುಷ್ಠಾನದ ಫಲಿತಾಂಶಗಳನ್ನು ಈ ವರದಿಯ **ಅಧ್ಯಾಯ–3**ರಲ್ಲಿ ಸೇರಿಸಲಾಗಿದೆ.

## 1.6 ರಾಜ್ಯ ಹಣಕಾಸಿನ ಕಿರುನೋಟ

2023–24ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಮತ್ತು 2022–23ರ ವಾಸ್ತವಗಳಿಗೆ ಪ್ರತಿಯಾಗಿ ವಾಸ್ತವ ಹಣಕಾಸು ಫಲಿತಾಂಶಗಳ ವಿವರಗಳನ್ನು **ಕೋಷ್ಟಕ–1.2** ಒದಗಿಸುತ್ತದೆ.

**ಕೋಷ್ಟಕ–1.2: ಆಯವ್ಯಯ ಅಂದಾಜುಗಳಿಗೆ ಹೋಲಿಸಿದಂತೆ ವಾಸ್ತವ ಹಣಕಾಸು ಫಲಿತಾಂಶಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಘಟಕಗಳು | 2022–23 (ವಾಸ್ತವ) | 2023–24 (ಆಯವ್ಯಯ ಅವಕಾಶ) | 2023–24 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ಶೇಕಡಾವಾರು | ಜಿಎಸ್‌ಡಿಪಿಗೆ ವಾಸ್ತವದ ಶೇಕಡಾವಾರು |
|---|---|---|---|---|---|---|
| | | **ಭಾಗ ಎ: ರಾಜಸ್ವ ಸ್ವೀಕೃತಿಗಳು** | | | | |
| 1 | ತೆರಿಗೆ ರಾಜಸ್ವ | 1,78,298 | 2,10,555 | 2,04,698* | 97.22 | 7.97 |
| i | ಸ್ವಂತ ತೆರಿಗೆ ರಾಜಸ್ವ | 1,43,702 | 1,73,303 | 1,63,505 | 94.35 | 6.37 |
| ii | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು | 34,596 | 37,252 | 41,193 | 110.58 | 1.60 |
| 2 | ತೆರಿಗೆಯೇತರ ರಾಜಸ್ವ | 13,914 | 12,500 | 13,117 | 104.94 | 0.51 |
| 3 | ಸಹಾಯಾನುದಾನಗಳು ಮತ್ತು ವಂತಿಗೆಗಳು | 36,868^ | 15,355 | 15,528 | 101.13 | 0.60 |
| 4 | **ರಾಜಸ್ವ ಸ್ವೀಕೃತಿಗಳು (1+2+3)** | **2,29,080** | **2,38,410** | **2,33,343** | **97.87** | **9.09** |
| | | **ಭಾಗ ಬಿ: ಬಂಡವಾಳ ಸ್ವೀಕೃತಿಗಳು** | | | | |
| 5 | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 478 | 228 | 306 | 134.21 | 0.01 |
| 6 | ಇತರೆ ಬಂಡವಾಳ ಸ್ವೀಕೃತಿಗಳು | 2 | 23 | 36 | 156.52 | 0.00 |
| 7 | ಸಾರ್ವಜನಿಕ ಋಣ ಸ್ವೀಕೃತಿಗಳು | 44,549 | 85,818 | 90,280 | 105.20 | 3.52 |
| 8 | **ಬಂಡವಾಳ ಸ್ವೀಕೃತಿಗಳು (5+6+7)** | **45,029** | **86,069** | **90,622** | **105.29** | **3.53** |
| 9 | **ಒಟ್ಟು ಸ್ವೀಕೃತಿಗಳು (4+8)** | **2,74,109** | **3,24,479** | **3,23,965** | **99.84** | **12.62** |
| | | **ಭಾಗ ಸಿ: ವೆಚ್ಚ / ಬಟವಾಡೆಗಳು** | | | | |
| 10 | ರಾಜಸ್ವ ವೆಚ್ಚ | 2,15,584 | 2,50,933 | 2,42,614 | 96.68 | 9.45 |
| a | ಬಡ್ಡಿ ಪಾವತಿಗಳು | 29,643 | 34,027 | 31,872# | 90.19 | 1.24 |
| 11 | ಬಂಡವಾಳ ವೆಚ್ಚ | 57,349 | 50,989 | 52,120 | 102.22 | 2.03 |
| 12 | ಸಾಲಗಳು ಮತ್ತು ಮುಂಗಡಗಳು | 3,250 | 3,385 | 4,473 | 132.14 | 0.17 |

| ಕ್ರಮ ಸಂಖ್ಯೆ | ಘಟಕಗಳು | 2022–23 (ವಾಸ್ತವ) | 2023–24 (ಆಯವ್ಯಯ ಅವಕಾಶ) | 2023–24 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ಶೇಕಡಾವಾರು | ಜಿಎಸ್‌ಡಿಪಿಗೆ ವಾಸ್ತವದ ಶೇಕಡಾವಾರು |
|---|---|---|---|---|---|---|
| 13 | **ಸಾರ್ವಜನಿಕ ಋಣ ಮರುಪಾವತಿ** | 15,942 | 22,441 | 22,453 | 100.05 | 0.87 |
| 14 | **ಸಾದಿಲ್ವಾರು ನಿಧಿಗೆ ವರ್ಗಾವಣೆ** | – | – | – | – | – |
| 15 | **ಸಂಚಿತ ನಿಧಿಯಿಂದ ಒಟ್ಟು ವಿತರಣೆಗಳು (10+11+12+13+14)** | **2,92,125** | **3,27,748** | **3,21,660** | **98.14** | **12.53** |
| | **ಭಾಗ ಡಿ: ವಿತ್ತೀಯ ಸೂಚಕಗಳು** | | | | | |
| 16 | **ರಾಜಸ್ವ ಕೊರತೆ/ (–)/ಅಧಿಕ (+) (4–10)** | **13,496** | **12,523** | **(–)9,271** | **74.03** | **0.36** |
| 17 | **ವಿತ್ತೀಯ ಕೊರತೆ {(4+5+6)–(10+11+12+14)}** | **46,623** | **66,646** | **65,522** | **98.31** | **2.55** |
| 18 | **ಪ್ರಾಥಮಿಕ ಕೊರತೆ (17–10a)** | **16,980** | **32,619** | **33,650** | **106.79** | **1.36** |
| | **ಪ್ಲವನತೆಯ ಅನುಪಾತಗಳು** | | | | | |
| | **ರಾಜಸ್ವ ಸ್ವೀಕೃತಿ** | **1.15** | **1.44** | **0.14** | | |
| | **ರಾಜಸ್ವ ವೆಚ್ಚ** | **0.20** | **1.28** | **0.96** | | |

*ಆಕರ: ಹಣಕಾಸು ಲೆಕ್ಕಗಳು, ವಾರ್ಷಿಕ ವಿತ್ತ ನಿರೂಪಣೆ ಮತ್ತು 2023–24ರ ಆಯವ್ಯಯದ ಸಾರಾಂಶ*

** ತೆರಿಗೆ ಆದಾಯವು ಪ್ರಧಾನ ಲೆಕ್ಕ ಶೀರ್ಷಿಕೆ 0005 – ಕೇಂದ್ರ ಸರಕು ಮತ್ತು ಸೇವಾ ತೆರಿಗೆ (₹12,501.46 ಕೋಟಿ), 0006–ರಾಜ್ಯ ಸರಕು ಮತ್ತು ಸೇವಾ ತೆರಿಗೆ (₹(–)798.30 ಕೋಟಿಯ ಐಜಿಎಸ್‌ಟಿಯ ಮುಂಗಡ ಹಂಚಿಕೆ ಸೇರಿದಂತೆ ₹71,041.45 ಕೋಟಿ) ಮತ್ತು 0008 – ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಶೂನ್ಯ) ಗಳನ್ನು ಒಳಗೊಂಡಿದೆ.*

*# ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯಾದ ₹1,046.01 ಕೋಟಿಗಳನ್ನು ಒಳಗೊಂಡಿದೆ.*

*^ ಜಿಎಸ್‌ಟಿ ಜಾರಿಯಿಂದ ಉಂಟಾದ ಆದಾಯ ನಷ್ಟಕ್ಕೆ 2022–23 ಮತ್ತು 2023–24ರಲ್ಲಿ ಪಡೆದ ₹20,288.40 ಕೋಟಿ ಮತ್ತು ₹1,191.41 ಕೋಟಿಗಳ ಪರಿಹಾರವನ್ನು ಒಳಗೊಂಡಿದೆ.*

ರಾಜ್ಯದ ರಾಜಸ್ವ ಸ್ವೀಕೃತಿಗಳು (₹2,33,343 ಕೋಟಿ) ಸರಕು ಮತ್ತು ಸೇವಾ ತೆರಿಗೆಗಳು (ಜಿಎಸ್‌ಟಿ) ₹83,542.91 ಕೋಟಿ ಮತ್ತು ರಾಜಸ್ವ ವೆಚ್ಚಗಳು (₹2,42,614 ಕೋಟಿ) ಆಯವ್ಯಯ ಅವಕಾಶಗಳಾದ ₹2,38,410 ಕೋಟಿ ಮತ್ತು ₹2,50,933 ಕೋಟಿಗಳಿಗೆ ಹೋಲಿಸಿದರೆ ಕ್ರಮವಾಗಿ ಶೇಕಡಾ 2.13 ಮತ್ತು ಶೇಕಡಾ 3.32 ರಷ್ಟು ಕಡಿಮೆಯಾಗಿದೆ. ರಾಜ್ಯವು ಹಿಂದಿನ ವರ್ಷದಲ್ಲಿ ರಾಜಸ್ವ ಹೆಚ್ಚುವರಿ ಗಳಿಸಿದ ನಂತರ, ಪ್ರಸಕ್ತ ವರ್ಷದಲ್ಲಿ ರಾಜ್ಯವು ರಾಜಸ್ವ ಕೊರತೆಯನ್ನು ಕಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಗಳಲ್ಲಿ (ಶೇಕಡಾ 1.86) ಅಲ್ಪ ಹೆಚ್ಚಳಕ್ಕೆ ಹೋಲಿಸಿದರೆ ರಾಜಸ್ವ ವೆಚ್ಚದಲ್ಲಿ ಶೇಕಡಾ 12.54ರಷ್ಟು ಹೆಚ್ಚಳವಾಗಿರುವುದು ಇದಕ್ಕೆ ಪ್ರಮುಖ ಕಾರಣ. ಬಂಡವಾಳ ವೆಚ್ಚವು ಆಯವ್ಯಯ ಅವಕಾಶಕ್ಕಿಂತ ಸುಮಾರು ಶೇಕಡಾ 2.22ರಷ್ಟು ಸ್ವಲ್ಪ ಹೆಚ್ಚಾಗಿದೆ.

ಹಿಂದಿನ ವರ್ಷಕ್ಕಿಂತ ರಾಜಸ್ವ ವೆಚ್ಚದಲ್ಲಿ ಹೆಚ್ಚಳವು ಮುಖ್ಯವಾಗಿ ಸಹಾಯಧನಗಳು ಮತ್ತು ಐದು ಖಾತರಿ ಯೋಜನೆಗಳ ಮೂಲಕ ರಾಜ್ಯವು ಒದಗಿಸಿದ ಹಣಕಾಸಿನ ನೆರವಿನ ಕಾರಣದಿಂದಾಗಿದೆ, ಇದನ್ನು ಕೆಳಗೆ ಚರ್ಚಿಸಲಾಗಿದೆ:

**2023–24ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ಘೋಷಿಸಿದ ಐದು ಖಾತರಿ ಯೋಜನೆಗಳು**

ಕರ್ನಾಟಕ ಸರ್ಕಾರವು 2023–24ರಲ್ಲಿ ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾದ ಐದು ಖಾತರಿ ಯೋಜನೆಗಳನ್ನು ಜಾರಿಗೆ ತಂದಿತು ಮತ್ತು ರಾಜ್ಯವು ಈ ಯೋಜನೆಗಳಿಗೆ ₹36,538 ಕೋಟಿಗಳ ಆಯವ್ಯಯ ಅಂದಾಜು ಮಾಡಿದೆ. ಈ ಐದು ಯೋಜನೆಗಳಲ್ಲಿ*, ಮೂರು ಯೋಜನೆಗಳು ಸಹಾಯಧನ ರೂಪದಲ್ಲಿದ್ದರೆ, ಉಳಿದ ಎರಡು ಯೋಜನೆಗಳು ನಗದು ವರ್ಗಾವಣೆ ರೂಪದಲ್ಲಿವೆ. ನಗದು ವರ್ಗಾವಣೆ ಯೋಜನೆಗಳು ಫಲಾನುಭವಿಗಳಿಗೆ ತಮ್ಮ ಆಯ್ಕೆಗೆ ಅನುಗುಣವಾಗಿ ಹಣವನ್ನು ಖರ್ಚು ಮಾಡಲು ಹೆಚ್ಚಿನ ಸ್ವಾತಂತ್ರ್ಯವನ್ನು ಒದಗಿಸುತ್ತವೆ. ಇದಕ್ಕೆ ಹೋಲಿಸಿದರೆ, ಸಹಾಯಧನಗಳು ಒಳಗೊಂಡಿರುವ ಫಲಾನುಭವಿಗಳ ವ್ಯಾಪ್ತಿಯನ್ನು ಅಥವಾ ಅಂತಹ ವರ್ಗಾವಣೆಗಳನ್ನು ಯಾವ ಉದ್ದೇಶಕ್ಕಾಗಿ ಬಳಸಬಹುದು ಎಂಬುದನ್ನು ಮಿತಿಗೊಳಿಸುತ್ತವೆ. ಈ ಐದು ಯೋಜನೆಗಳ ವೆಚ್ಚದ ವಿವರಗಳನ್ನು **ಕೋಷ್ಟಕ–1.2(ಎ)**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–1.2(ಎ): 2023–24ರಲ್ಲಿ ಜಾರಿಗೊಳಿಸಲಾದ ಐದು ಖಾತರಿ ಯೋಜನೆಗಳ ವಿವರಗಳು**

(₹ ಕೋಟಿಗಳಲ್ಲಿ)

| ಯೋಜನೆ | ಪ್ರಯೋಜನಗಳು | ಒಟ್ಟು ಆಯವ್ಯಯ | ವೆಚ್ಚ | ರಾಜಸ್ವ ವೆಚ್ಚಕ್ಕೆ ಖರ್ಚಿನ ಶೇಕಡಾವಾರು |
|---|---|---|---|---|
| **ಗೃಹಲಕ್ಷ್ಮಿ** | ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ತಿಂಗಳಿಗೆ ₹2,000 ವರ್ಗಾವಣೆ. | 16,964.40 | 16,964.40 | 6.99 |
| **ಗೃಹಜ್ಯೋತಿ** | ತಿಂಗಳಿಗೆ 200 ಯೂನಿಟ್ ವರೆಗೆ ಬಳಕೆ ಮಾಡುವ ಮನೆಗಳಿಗೆ ಉಚಿತ ವಿದ್ಯುತ್ ಪೂರೈಕೆ | 8,900.00 | 8,900.00 | 3.67 |
| **ಅನ್ನಭಾಗ್ಯ** | ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ತಿಂಗಳು ತಲಾ 5 ಕೆಜಿ ಹೆಚ್ಚುವರಿ ಅಕ್ಕಿ. | 7,384.68 | 7,344.68 | 3.03 |
| **ಶಕ್ತಿ** | ರಾಜ್ಯದ ಎಲ್ಲಾ ನಿವಾಸಿ ಮಹಿಳೆಯರಿಗೆ ಐಷಾರಾಮಿ ಬಸ್‌ಗಳನ್ನು ಹೊರತುಪಡಿಸಿ ಉಳಿದೆಲ್ಲ ಬಸ್‌ಗಳಲ್ಲಿ ಉಚಿತ ಪ್ರಯಾಣ. | 3,200.00 | 3,200.00 | 1.32 |
| **ಯುವನಿಧಿ** | ಪದವೀಧರರಿಗೆ ₹3,000 ಮತ್ತು ಡಿಪ್ಲೊಮಾ ಪಡೆದವರಿಗೆ ₹1,500 ನಿರುದ್ಯೋಗ ಭತ್ಯೆ ಸೀಮಿತ ಅವಧಿಗೆ. | 88.88 | 88.88 | 0.04 |
| | **ಒಟ್ಟು** | **36,537.96** | **36,497.96** | **15.05** |

*ಆಕರ: ಮಹಾಲೇಖಾಪಾಲರು (ಲೆ ಮತ್ತು ಹ), ಕರ್ನಾಟಕದಿಂದ ನಿರ್ವಹಿಸಲ್ಪಡುವ ಅನುದಾನ ವಹಿ*

**ನಗದು ವರ್ಗಾವಣೆ: ಗೃಹಲಕ್ಷ್ಮಿ ಮತ್ತು ಯುವನಿಧಿ. ಸಹಾಯಧನಗಳು: ಗೃಹಜ್ಯೋತಿ, ಅನ್ನಭಾಗ್ಯ ಮತ್ತು ಶಕ್ತಿ*

ಈ ಯೋಜನೆಗಳು, 2023–24ನೇ ಸಾಲಿನ ರಾಜಸ್ವ ವೆಚ್ಚದ ಶೇಕಡಾ 15ರಷ್ಟು ಪಾಲನ್ನು ಹೊಂದಿವೆ ಎಂಬುದು ಕೋಷ್ಟಕದಿಂದ ಸ್ಪಷ್ಟವಾಗಿದೆ. ಅನ್ನಭಾಗ್ಯ ಯೋಜನೆಯನ್ನು ಹೊರತುಪಡಿಸಿ, ರಾಜ್ಯವು ಸಂಪೂರ್ಣ ಹಂಚಿಕೆಯನ್ನು ಬಳಸಿಕೊಂಡಿದೆ.

2023–24ನೇ ಸಾಲಿನ ರಾಜ್ಯ ಹಣಕಾಸು ವಿಶ್ಲೇಷಣೆ ಮತ್ತು ಸರ್ಕಾರಿ ಆದೇಶಗಳ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ:

- 2023–24ನೇ ಸಾಲಿನಲ್ಲಿ, ರಾಜ್ಯದ ಸ್ವೀಕೃತಿಯು ಕಳೆದ ವರ್ಷಕ್ಕಿಂತ ಶೇಕಡಾ 1.86ರಷ್ಟು ಬೆಳೆದರೆ, ಅದರ ಖರ್ಚು ಶೇಕಡಾ 12.54ರಷ್ಟು ಹೆಚ್ಚಾಗಿದೆ. ವೆಚ್ಚದ ಬೆಳವಣಿಗೆಯು ಮುಖ್ಯವಾಗಿ ಖಾತರಿ ಯೋಜನೆಗಳಿಂದಾಗಿತ್ತು, ಇದು ₹9,271 ಕೋಟಿ ರಾಜಸ್ವ ಕೊರತೆಗೆ ಕಾರಣವಾಗಿದೆ. ಪ್ರಸಕ್ತ ವರ್ಷದಲ್ಲಿ ಸ್ವೀಕೃತಿ ಮತ್ತು ವೆಚ್ಚದ ಈ ಅಸಾಮರಸ್ಯವು ಕೋವಿಡ್ 19 ಆರ್ಥಿಕ ಕುಸಿತದಿಂದ 2022–23ರಲ್ಲಿ ಚೇತರಿಸಿಕೊಂಡ ನಂತರ ರಾಜ್ಯವು ₹9,271 ಕೋಟಿ ರಾಜಸ್ವ ಕೊರತೆಯನ್ನು ಕಂಡಿತು.
- ಪರಿಣಾಮವಾಗಿ, ರಾಜ್ಯದ ವಿತ್ತೀಯ ಕೊರತೆಯು 2022–23ರಲ್ಲಿ ₹46,623 ಕೋಟಿಗಳಿಂದ 2023–24ರಲ್ಲಿ ₹65,522 ಕೋಟಿಗೆ ಏರಿಕೆಯಾಗಿದೆ.
- ಖಾತರಿ ಯೋಜನೆಗಳು ಮತ್ತು ಅದರಿಂದ ಉಂಟಾಗುವ ಕೊರತೆಗಳನ್ನು ನೀಗಿಸಲು, ರಾಜ್ಯವು ₹63,000 ಕೋಟಿ ನಿವ್ವಳ ಮಾರುಕಟ್ಟೆ ಸಾಲವನ್ನು ಪಡೆದುಕೊಂಡಿತು, ಇದು ಕಳೆದ ವರ್ಷದ ನಿವ್ವಳ ಸಾಲಗಳಿಗಿಂತ (₹26,000 ಕೋಟಿ) ₹37,000 ಕೋಟಿ ಹೆಚ್ಚಾಗಿದೆ. ಇದು ಮುಂದಿನ ದಿನಗಳಲ್ಲಿ ಮರುಪಾವತಿ ಹೊರೆಯನ್ನು ಹೆಚ್ಚಿಸುವುದಲ್ಲದೆ, ರಾಜ್ಯದ ಬಡ್ಡಿ ಹೊರೆಯನ್ನು ಅಗಾಧವಾಗಿ ಹೆಚ್ಚಿಸುತ್ತದೆ.
- ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜ್ಯವು ಮೂಲಸೌಕರ್ಯಕ್ಕಾಗಿ ಬಂಡವಾಳ ವೆಚ್ಚವನ್ನು ಸುಮಾರು ₹5,229 ಕೋಟಿಗಳಷ್ಟು ಕಡಿಮೆ ಮಾಡಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಪೂರ್ಣ ಯೋಜನೆಗಳ ಹೆಚ್ಚಳದ ಮೇಲೆ ಶೇಕಡಾ 68ರಷ್ಟು ಪರಿಣಾಮ ಬೀರುತ್ತದೆ. ಒಟ್ಟು ಬಂಡವಾಳ ರಚನೆಯಲ್ಲಿನ ಈ ಸಂಕೋಚನವು ಭವಿಷ್ಯದ ಬೆಳವಣಿಗೆಯ ನಿರೀಕ್ಷೆಗಳಿಗೆ ಹಾನಿಕಾರಕವೆಂದು ಸಾಬೀತುಪಡಿಸಬಹುದು.

ಹೀಗಾಗಿ, ಅಸ್ತಿತ್ವದಲ್ಲಿರುವ ಸಹಾಯಧನಗಳು/ಹಣಕಾಸು ನೆರವು ಅಥವಾ ಪ್ರಯೋಜನಗಳನ್ನು ತರ್ಕಬದ್ಧಗೊಳಿಸದೆ ಐದು ಖಾತರಿ ಯೋಜನೆಗಳ ಅನುಷ್ಠಾನವು ರಾಜ್ಯದ ಸಂಪನ್ಮೂಲಗಳ ಮೇಲೆ ಒತ್ತಡವನ್ನುಂಟು ಮಾಡುತ್ತದೆ ಮತ್ತು ಮೇಲೆ ಈಗಾಗಲೇ ಚರ್ಚಿಸಿದಂತೆ ಹಣಕಾಸಿನ ಕೊರತೆ ಮತ್ತು ಸಾಲದ ಮಟ್ಟದ ಮೇಲೆ ಪ್ರಭಾವ ಬೀರುತ್ತದೆ.

ಜನವರಿ 2025ರಲ್ಲಿ ನಡೆದ ನಿರ್ಗಮನ ಸಮ್ಮೇಳನದಲ್ಲಿ ಆರ್ಥಿಕ ಇಲಾಖೆಯು ವಾಸ್ತವಗಳನ್ನು ಒಪ್ಪಿಕೊಳ್ಳುತ್ತಾ, ಐದು ಖಾತರಿ ಯೋಜನೆಗಳು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸಿವೆ, ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡಿವೆ ಮತ್ತು ಮಾನವ ಬಂಡವಾಳ ಅಭಿವೃದ್ಧಿಯನ್ನು ಬೆಂಬಲಿಸಿವೆ ಎಂದು ಹೇಳಿದೆ. ಯುವನಿಧಿ ಮತ್ತು ಗೃಹಲಕ್ಷ್ಮಿ ಯಂತಹ ನಗದು ವರ್ಗಾವಣೆಗಳು ಯುವಕರು ಮತ್ತು ಮಹಿಳೆಯರಿಗೆ ಸಬಲೀಕರಣ ನೀಡಿವೆ ಮತ್ತು ಭದ್ರತೆಯನ್ನು ನೀಡಿವೆ ಮತ್ತು ಅವರ ಖರೀದಿಸುವ ಶಕ್ತಿಯನ್ನು ಹೆಚ್ಚಿಸಿವೆಯಾದರೂ, ಅಸ್ತಿತ್ವದಲ್ಲಿರುವ ಸಹಾಯಧನಗಳನ್ನು ತರ್ಕಬದ್ಧಗೊಳಿಸದೆ ಇತರ ಮೂರು ಸಹಾಯಧನ ಯೋಜನೆಗಳೊಂದಿಗೆ ಈ ನಗದು ವರ್ಗಾವಣೆಗಳು ರಾಜ್ಯದ ಹಣಕಾಸಿನ ಆರ್ಥಿಕತೆಯನ್ನು ತಗ್ಗಿಸುತ್ತವೆ. 2024–28ರ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಸರ್ಕಾರವು ₹27,354 ಕೋಟಿಗಳ ರಾಜಸ್ವ ಕೊರತೆಯನ್ನು ಅಂದಾಜಿಸಿದೆ ಮತ್ತು ಆ ಮೂಲಕ ತನ್ನ ಸಾಲಗಳನ್ನು ₹1,05,246 ಕೋಟಿಗೆ ಹೆಚ್ಚಿಸಿದೆ.

## 1.7 ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ಚಿತ್ರ

ಸರ್ಕಾರದ ಲೆಕ್ಕಗಳು, ಸರ್ಕಾರದ ಹಣಕಾಸಿನ ಹೊಣೆಗಾರಿಕೆಗಳನ್ನು ಮತ್ತು ವೆಚ್ಚದಿಂದ ಸೃಷ್ಟಿಸಲಾದ ಆಸ್ತಿಗಳನ್ನು ಬಿಂಬಿಸುತ್ತವೆ. ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಸಾಲಗಳು, ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಮತ್ತು ಮೀಸಲು ನಿಧಿಗಳಡಿಯ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ ಮತ್ತು ಆಸ್ತಿಗಳು ಮುಖ್ಯವಾಗಿ ಬಂಡವಾಳ ವೆಚ್ಚ, ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ನಗದು ಶಿಲ್ಕುಗಳನ್ನು ಒಳಗೊಂಡಿರುತ್ತವೆ. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವೃದ್ಧಿಯ ದರದ ಅಂಗಗಳನ್ನು **ಕೋಷ್ಟಕ–1.3**ರಲ್ಲಿ ನೀಡಲಾಗಿದೆ ಮತ್ತು 31 ಮಾರ್ಚ್ 2023ಕ್ಕೆ ಹೋಲಿಸಿದರೆ 31 ಮಾರ್ಚ್ 2024ರಲ್ಲಿದ್ದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರವಾದ ಸಾರಾಂಶವನ್ನು **ಅನುಬಂಧ–1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.3: ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿ**

(₹ ಕೋಟಿಗಳಲ್ಲಿ)

| ಹೊಣೆಗಾರಿಕೆಗಳು | | | | | ಆಸ್ತಿಗಳು | | | |
|---|---|---|---|---|---|---|---|---|
| | | 2022–23 | 2023–24 | *ಶೇಕಡಾವಾರು ಏರಿಕೆ/ಇಳಿಕೆ* | | 2022–23 | 2023–24 | *ಶೇಕಡಾವಾರು ಏರಿಕೆ/ಇಳಿಕೆ* |
| **ಸಂಚಿತ ನಿಧಿ** | | | | | | | | |
| ಎ | ಆಂತರಿಕ ಋಣ | 3,53,894 | 4,17,455 | 17.96 | ಒಟ್ಟು ಬಂಡವಾಳ ವೆಚ್ಚ | 4,56,415 | 5,08,558 | 11.42 |
| ಬಿ | ಭಾರತ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 49,139* | 53,406* | 8.68 | ಸಾಲಗಳು ಮತ್ತು ಮುಂಗಡಗಳು | 38,101 | 42,268 | 10.94 |
| ಸಾದಿಲ್ವಾರು ನಿಧಿ | | 500 | 500 | – | ಸಾದಿಲ್ವಾರು ನಿಧಿ | – | – | – |
| **ಸಾರ್ವಜನಿಕ ಲೆಕ್ಕ** | | | | | | | | |
| ಎ | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿ | 45,736 | 49,290 | 7.77 | ಮುಂಗಡಗಳು | 7 | 7 | – |
| ಬಿ | ಠೇವಣಿಗಳು | 59,874 | 67,348 | 12.48 | ಜಮೆಗಳು | 1,048 | 992 | –5.34 |
| ಸಿ | ಮೀಸಲು ನಿಧಿಗಳು | 60,642# | 67,969 | 12.08 | ಅಮಾನತ್ತು ಮತ್ತು ಇತರೆ | – | – | – |
| | | | | | | | | |

| ಹೊಣೆಗಾರಿಕೆಗಳು | | | | | ಆಸ್ತಿಗಳು | | | |
|---|---|---|---|---|---|---|---|---|
| | | 2022-23 | 2023-24 | *ಶೇಕಡಾವಾರು ಏರಿಕೆ/ಇಳಿಕೆ* | | 2022-23 | 2023-24 | *ಶೇಕಡಾವಾರು ಏರಿಕೆ/ಇಳಿಕೆ* |
| ಡಿ | ಅಮಾನತ್ತು ಮತ್ತು ಇತರೆ | 3,421 | 6,026 | 76.15 | ನಗದು ಶಿಲ್ಕು (ಮೀಸಲು ನಿಧಿಯಲ್ಲಿನ ಹೂಡಿಕೆಗಳನ್ನು ಒಳಗೊಂಡು) | 83,943# | 1,07,264 | 27.78 |
| ಇ | **ಜಮೆಗಳು** | – | – | – | **ಒಟ್ಟು** | 5,79,514 | 6,59,089 | – |
| | **ವೆಚ್ಚದ ಮೇಲಿನ ಸ್ವೀಕೃತಿಗಳ ಸಂಚಿತ ಹೆಚ್ಚುವರಿ** | 6,308 | – | – | **ಸ್ವೀಕೃತಿಗಳ ಮೇಲಿನ ಸಂಚಿತ ಹೆಚ್ಚುವರಿ ವೆಚ್ಚಗಳು** | – | 2,905 | – |
| **ಒಟ್ಟು** | | **5,79,514** | **6,61,994** | **14.23** | **ಒಟ್ಟು** | **5,79,514** | **6,61,994** | **14.23** |

*ಆಕರ: ಹಣಕಾಸು ಲೆಕ್ಕಗಳು*

* *ಭಾರತ ಸರ್ಕಾರದ ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು 2022-23ರಲ್ಲಿ ₹18,623 ಕೋಟಿ ಮತ್ತು 2023-24ರಲ್ಲಿ ₹22,890 ಕೋಟಿಗಳಷ್ಟಾಗುತ್ತದೆ ಏಕೆಂದರೆ, ಭಾರತ ಸರ್ಕಾರದ ವೆಚ್ಚ ಇಲಾಖೆಯು 2020-21 ಮತ್ತು 2021-22ರಲ್ಲಿ ರಾಜ್ಯಕ್ಕೆ ಬ್ಯಾಕ್-ಟು-ಬ್ಯಾಕ್ ಸಾಲವಾಗಿ ಋಣ ಸ್ವೀಕೃತಿ ಅಡಿಯಲ್ಲಿ ನೀಡಿದ ಸರಕು ಮತ್ತು ಸೇವಾ ತೆರಿಗೆ ಪರಿಹಾರ ಧನವಾದ ₹12,407 ಕೋಟಿ ಮತ್ತು ₹18,109 ಕೋಟಿಗಳನ್ನು ಹಣಕಾಸು ಆಯೋಗದಿಂದ ನಿಗದಿಪಡಿಸುವ ಯಾವುದೇ ಮಾನದಂಡದಡಿಯಲ್ಲಿ ರಾಜ್ಯದ ಸಾಲ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿತು.*

# *2022-23 ನೇ ಸಾಲಿಗೆ ಮೀಸಲಿಟ್ಟ ನಿಧಿಗಳ ಹೂಡಿಕೆಗಾಗಿ ₹314.00 ಕೋಟಿ (ಖಾತರಿ ವಿಮೋಚನಾ ನಿಧಿ) ಹೂಡಿಕೆಯನ್ನು ಸೇರಿಸಲಾಗಿದೆ.*

ಸಂಚಿತ ನಿಧಿಯಲ್ಲಿನ ಸ್ವತ್ತುಗಳ ಬೆಳವಣಿಗೆಯ ದರವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಒಟ್ಟು ಬಂಡವಾಳದ ವೆಚ್ಚದಡಿಯಲ್ಲಿ (ಶೇಕಡಾ 11)ರಷ್ಟು ಹೆಚ್ಚಾಗಿದ್ದಿತು ಮತ್ತು ಸಾಲಗಳು ಮತ್ತು ಮುಂಗಡಗಳಡಿಯಲ್ಲಿ ಸುಮಾರು ಶೇಕಡಾ 11ರಷ್ಟು ಹೆಚ್ಚಾಗಿತ್ತು. ಆಯವ್ಯಯ ಹೊರಗಿನ ಸಾಲವನ್ನು ಹೊರತುಪಡಿಸಿ ಆಂತರಿಕ ಋಣದ ಅಡಿಯಲ್ಲಿ ಹೊಣೆಗಾರಿಕೆಗಳ ಬೆಳವಣಿಗೆಯ ದರವು ಶೇಕಡಾ 18ರಷ್ಟು ಹೆಚ್ಚಾಗಿದೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು ಶೇಕಡಾ ಒಂಬತ್ತರಷ್ಟು ಹೆಚ್ಚಾಗಿತ್ತು. ಮೀಸಲು ನಿಧಿಗಳಲ್ಲಿನ ಹೂಡಿಕೆ ಸೇರಿದಂತೆ ನಗದು ಬಾಕಿಯು ಶೇಕಡಾ 28ರಷ್ಟು ಹೆಚ್ಚಾಗಿದ್ದಿತು ಮತ್ತು ಮಾರ್ಚ್ 2024ರ ಅಂತ್ಯದಲ್ಲಿದ್ದಂತೆ ₹1,07,264 ಕೋಟಿಗಳಷ್ಟಿತ್ತು.

## 1.8 ವಿತ್ತೀಯ ಪ್ರಮಿತಿಗಳು

ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳಾದ ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಒಟ್ಟಾರೆ ಹಣಕಾಸಿನ ಅಸಮತೋಲನದ ಪ್ರಮಾಣವನ್ನು ಸೂಚಿಸುತ್ತವೆ.

ಕೊರತೆಯ ಸ್ವರೂಪವು ಹಣಕಾಸಿನ ನಿರ್ವಹಣೆಯಲ್ಲಿನ ವಿವೇಚನೆಯ ವ್ಯಾಪ್ತಿಯ ಸೂಚಕವಾಗಿದೆ. ಇದಲ್ಲದೆ, ಕೊರತೆಯನ್ನು ಭರಿಸಲು ಹಣಕಾಸು ಒದಗಿಸುವ ವಿಧಾನಗಳು ಮತ್ತು ಸಂಪನ್ಮೂಲಗಳ ಅನ್ವಯವು ಅದರ ಆರ್ಥಿಕ ಸ್ವಾಸ್ಥ್ಯಕ್ಕೆ ಪ್ರಮುಖ ಸೂಚಕಗಳಾಗಿವೆ. ಈ ವಿಭಾಗವು ಕೊರತೆಗಳ ಪ್ರವೃತ್ತಿಗಳು, ಸ್ವರೂಪ ಮತ್ತು ಪ್ರಮಾಣ ಮತ್ತು ಈ ಕೊರತೆಗಳಿಗೆ ಹಣಕಾಸು ಒದಗಿಸುವ ವಿಧಾನವನ್ನು ಪ್ರಸ್ತುತಪಡಿಸುತ್ತದೆ ಮತ್ತು 2023-24ರ ಆರ್ಥಿಕ ವರ್ಷಕ್ಕೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯಡಿಯಲ್ಲಿ ನಿಗದಿಪಡಿಸಿದ ಗುರಿಗಳಿಗೆ ಹೋಲಿಸಿದರೆ ರಾಜಸ್ವ ಮತ್ತು ವಿತ್ತೀಯ ಕೊರತೆಗಳ ನೈಜಮಟ್ಟದ ಮೌಲ್ಯಮಾಪನವನ್ನು ಒದಗಿಸುತ್ತದೆ.

### *1.8.1 ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು*

ಹದಿನೈದನೇ ಹಣಕಾಸು ಆಯೋಗವು ನಿಗದಿಪಡಿಸಿದ ಗುರಿಗಳು ಮತ್ತು 2023-24ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಪ್ರತಿಯಾಗಿ ಉಲ್ಲೇಖಿಸಿ ಪ್ರಮುಖ ಹಣಕಾಸಿನ ಮಿತಿಗಳಿಗೆ ಸಂಬಂಧಿಸಿದಂತೆ ರಾಜ್ಯದ ಆಯವ್ಯಯದಲ್ಲಿನ ಸಾಧನೆಗಳನ್ನು **ಕೋಷ್ಟಕ-1.4**ರಲ್ಲಿ ನೀಡಲಾಗಿದೆ:

**ಕೋಷ್ಟಕ–1.4: 2023–24ರ ಅವಧಿಗೆ ಗುರಿಗಳಿಗೆ ಪ್ರತಿಯಾಗಿ ಪ್ರಮುಖ ಹಣಕಾಸಿನ ಮಿತಿಗಳಿಗೆ ಸಂಬಂಧಿಸಿದಂತೆ ಸಾಧನೆಗಳು**

| ಆರ್ಥಿಕ ನಿಯತಾಂಕಗಳು | ಹದಿನೈದನೇ ಹಣಕಾಸು ಆಯೋಗವು ನಿಗದಿಪಡಿಸಿದಂತೆ ಗುರಿಗಳು | ಆಯವ್ಯಯದಲ್ಲಿನ ಗುರಿಗಳು | ವಾಸ್ತವ* | ವಾಸ್ತವದ ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| | | | | ಹದಿನೈದನೇ ಹಣಕಾಸು ಆಯೋಗದ ಗುರಿಗಳು | ಆಯವ್ಯಯದಲ್ಲಿನ ಗುರಿಗಳು |
| **ರಾಜಸ್ವ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡಾ)** | (–)1.20 | (–)0.49 | (–)0.36 | 0.84 | 0.13 |
| **ವಿತ್ತೀಯ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡಾ)** | (–)3.00 | (–)2.60 | (–)2.55 | 0.45 | 0.05 |
| **ಒಟ್ಟು ಬಾಕಿ ಹೊಣೆಗಾರಿಕೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ^ (ಶೇಕಡಾ)** | 27.20 | 22.27 | 23.49 | 3.71 | (–)1.22 |

*ಆಕರ: ಹದಿನೈದನೇ ಹಣಕಾಸು ಆಯೋಗದ ಶಿಫಾರಸುಗಳು, ವಾರ್ಷಿಕ ಹಣಕಾಸು ತ:ಖ್ತೆ, ಮಧ್ಯಮಾವಧಿ ವಿತ್ತೀಯ ಯೋಜನೆ2024–28, 2023–24ರ ಆಯವ್ಯಯ ಸಾರಾಂಶ ಮತ್ತು ಹಣಕಾಸು ಲೆಕ್ಕಗಳು*

*ಟಿಪ್ಪಣಿ : ಕೊರತೆಯ ಅಂಕಿಗಳನ್ನು ಋಣಾತ್ಮಕವಾಗಿ ತೋರಿಸಲಾಗಿದೆ*

** ಭಾರತ ಸರ್ಕಾರದ ಹಣಕಾಸು ಮಂತ್ರಾಲಯದ ₹25,67,340 ಕೋಟಿಯ ಜಿಎಸ್‌ಡಿಪಿ ಅಂಕಿಅಂಶಗಳ ಆಧಾರದ ಮೇಲೆ ಲೆಕ್ಕಹಾಕಲಾಗಿದೆ.*

*^ ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ 2020–21 ಮತ್ತು 2021–22ರಲ್ಲಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹30,516 ಕೋಟಿ) ಋಣವೆಂದು ಪರಿಗಣಿಸಿಲ್ಲ. ಇದರಲ್ಲಿ ಆಯವ್ಯಯೇತರ ಸಾಲವು ಸೇರಿದೆ.*

2023–24ರ ಅವಧಿಯಲ್ಲಿ, ರಾಜ್ಯವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜಸ್ವ ಕೊರತೆ (ಶೇಕಡಾ 0.36) ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿತ್ತಿಯ ಕೊರತೆ (ಶೇಕಡಾ 2.55) ಅನುಪಾತಗಳನ್ನು ಹದಿನೈದನೇ ಹಣಕಾಸು ಆಯೋಗ ಮತ್ತು ಆಯವ್ಯಯದ ಅಂದಾಜಿಗಿಂತ ಕಡಿಮೆಯಾಗಿದೆ. ಒಟ್ಟು ಬಾಕಿ ಹೊಣೆಗಾರಿಕೆಯ ಅನುಪಾತವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (23.49) ಹದಿನೈದನೇ ಹಣಕಾಸು ಆಯೋಗವು ನಿಗದಿಪಡಿಸಿದ ಗುರಿಗಿಂತ ಕಡಿಮೆಯಿದ್ದರೂ, ಅನುಪಾತವು ಆಯವ್ಯಯದಲ್ಲಿ ಮಾಡಿದ ಪ್ರಕ್ಷೇಪಣಕ್ಕಿಂತ ಹೆಚ್ಚಾಗಿದೆ.

2019–20 ರಿಂದ 2023–24ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಪ್ರಮುಖ ವಿತ್ತೀಯ ನಿಯತಾಂಕಗಳ ಹೆಚ್ಚುವರಿ ಮತ್ತು ಕೊರತೆಗಳ ಪ್ರವೃತ್ತಿಯನ್ನು **ನಕ್ಷೆ–1.4**ರಲ್ಲಿ ಚಿತ್ರಿಸಲಾಗಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದರೆ ಹೆಚ್ಚುವರಿ ಮತ್ತು ಕೊರತೆಯ ಪ್ರವೃತ್ತಿಯನ್ನು **ನಕ್ಷೆ–1.5**ರಲ್ಲಿ ನೀಡಲಾಗಿದೆ.

**ನಕ್ಷೆ–1.4: ವಿತ್ತೀಯ ನಿಯಂತಾಕಗಳಲ್ಲಿನ ಪ್ರವೃತ್ತಿ**




*ಆಕರ: ಹಣಕಾಸು ಲೆಕ್ಕಗಳು*

**ನಕ್ಷೆ–1.5: ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದರೆ ಹೆಚ್ಚಳ/ಕೊರತೆಯಲ್ಲಿನ ಪ್ರವೃತ್ತಿ**




*ಆಕರ: ಅರ್ಥಶಾಸ್ತ್ರ ಮತ್ತು ಅಂಕಿಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಮತ್ತು ಹಣಕಾಸು ಲೆಕ್ಕಗಳು*

2023–24ರ ಅವಧಿಯಲ್ಲಿ, ರಾಜ್ಯವು ಹಿಂದಿನ ವರ್ಷದಲ್ಲಿ ರಾಜಸ್ವ ಹೆಚ್ಚುವರಿ ಗಳಿಸಿದ ನಂತರ ರಾಜಸ್ವ ಕೊರತೆಯನ್ನು ಕಂಡಿತು ಮತ್ತು ವಿತ್ತೀಯ ಕೊರತೆಯು ಜಿಎಸ್‌ಡಿಪಿ ಅನುಪಾತಕ್ಕೆ 2.55ರಷ್ಟಿತ್ತು, ಇದು ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದೆ. ವಿತ್ತೀಯ ಕೊರತೆ/ಜಿಎಸ್‌ಡಿಪಿ ಅನುಪಾತದ ಹೆಚ್ಚಳವು 2023–24ರ ಅವಧಿಯಲ್ಲಿ ರಾಜ್ಯವು ಕಂಡ ರಾಜಸ್ವ ಕೊರತೆಯ ಕಾರಣದಿಂದಾಗಿರುತ್ತದೆ. ರಾಜ್ಯವು ರಾಜಸ್ವ ವೆಚ್ಚದಲ್ಲಿ (ಶೇಕಡಾ 12.54) ರಾಜಸ್ವ ಸ್ವೀಕೃತಿಗಿಂತ (ಶೇಕಡಾ 1.86) ಹೆಚ್ಚಿನ ಬೆಳವಣಿಗೆ ಕಂಡ ಪರಿಣಾಮವಾಗಿ ರಾಜಸ್ವ ಕೊರತೆಯನ್ನು ಅನುಭವಿಸಿದೆ.

### *1.8.2 ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ*

2019–20 ರಿಂದ 2023–24ರ ಅವಧಿಯಲ್ಲಿ ರಾಜ್ಯದ ಬಾಕಿ ಉಳಿದಿರುವ ಹಣಕಾಸಿನ ಹೊಣೆಗಾರಿಕೆಗಳ ಸಂಯೋಜನೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ ಇವುಗಳ ವಿವರಗಳನ್ನು **ಕೋಷ್ಟಕ–1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.5: ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ**

(₹ ಕೋಟಿಗಳಲ್ಲಿ)

| ಹೊಣೆಗಾರಿಕೆಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಆಂತರಿಕ ಋಣ | 2,20,337 | 2,81,140 | 3,29,042 | 3,53,894 | 4,17,455 |
| ಭಾರತ ಸರ್ಕಾರದ ಸಾಲಗಳು | 13,908 | 26,617* | 45,385* | 49,139* | 53,406* |
| ಸಾರ್ವಜನಿಕ ಲೆಕ್ಕ | 85,172 | 89,748 | 99,147 | 1,33,024 | 1,49,192 |
| ಆಯವ್ಯಯೇತರ ಸಾಲಗಳು | 18,103 | 18,421 | 16,682 | 17,306 | 13,478 |
| **ಒಟ್ಟು ಆರ್ಥಿಕ ಹೊಣೆಗಾರಿಕೆಗಳು** | **3,37,520** | **4,15,926** | **4,90,256** | **5,53,363** | **6,33,531** |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ಹೊಣೆಗಾರಿಕೆಗಳು (ಶೇಕಡಾವಾರು) | 20.89 | 24.58* | 23.24* | 23.03* | 23.49* |
| ಕೆಎಫ್‌ಆರ್‌ಎ ಗುರಿ (ಶೇಕಡಾವಾರು) | 25.00 | 25.00 | 25.00 | 25.00 | 25.00 |

*ಆಕರ: ಹಣಕಾಸು ಲೆಕ್ಕಗಳು*

** ಭಾರತ ಸರ್ಕಾರದ ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು 2020–21ಕ್ಕೆ ₹14,210 ಕೋಟಿ, 2021–22ಕ್ಕೆ ₹14,869 ಕೋಟಿ, 2022–23ಕ್ಕೆ ₹18,623 ಕೋಟಿ ಮತ್ತು 2023–24ಕ್ಕೆ ₹22,890 ಕೋಟಿಗಳಾಗುತ್ತದೆ ಏಕೆಂದರೆ ಭಾರತ ಸರ್ಕಾರದ ವೆಚ್ಚದ ಇಲಾಖೆಯು ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಋಣ ಸ್ವೀಕೃತಿ ಅಡಿಯಲ್ಲಿ ನೀಡಿದ ಸರಕು ಮತ್ತು ಸೇವಾ ತೆರಿಗೆ ಪರಿಹಾರ ಧನವಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳನ್ನು ಹಣಕಾಸು ಆಯೋಗದಿಂದ ನಿಗದಿಪಡಿಸುವ ಯಾವುದೇ ಮಾನದಂಡದ ಅಡಿಯಲ್ಲಿ ರಾಜ್ಯದ ಸಾಲ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿತು.*

2020–21ರಲ್ಲಿ ಅತ್ಯಧಿಕವಾಗಿದ್ದ ಒಟ್ಟು ಹೊಣೆಗಾರಿಕೆಗಳ ಅನುಪಾತವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ 2021–22 ಮತ್ತು 2022–23ರಲ್ಲಿ ಇಳಿಕೆಯ ಪ್ರವೃತ್ತಿಯಲ್ಲಿದೆ. 2023–24ರಲ್ಲಿ ರಾಜ್ಯದ ಆಂತರಿಕ ಸಾಲವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷದಲ್ಲಿ ಶೇಕಡಾ 115ರಷ್ಟು ಹೆಚ್ಚಳವಾಗಿರುವುದರಿಂದ ಇದು ಮತ್ತೊಮ್ಮೆ ಶೇಕಡಾ 23.49 ಕ್ಕೆ ಏರಿಕೆಯಾಗಿದೆ. ಆದಾಗ್ಯೂ, ಅನುಪಾತವು ಎಲ್ಲಾ ಐದು ವರ್ಷಗಳಲ್ಲಿ ಕರ್ನಾಟಕ ವಿತ್ತಿಯ ಸುಧಾರಣಾ ಕಾಯಿದೆ (ಕೆಎಫ್ಆರ್ಎ) ನಿಗದಿಪಡಿಸಿದ ಗುರಿಯೊಳಗೆ ಇದ್ದಿತು. 2023–24ರಲ್ಲಿ, ಅನುಪಾತವು ಕಳೆದ ವರ್ಷಕ್ಕಿಂತ ಸ್ವಲ್ಪ ಹೆಚ್ಚಾದರೂ, ಅದು ನಿಗದಿತ ಗುರಿಯೊಳಗೆ ಇತ್ತು.

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳು 2019–20ರಲ್ಲಿ ₹3,37,520 ಕೋಟಿಗಳಿಂದ 2023–24ರಲ್ಲಿ ₹6,33,531 ಕೋಟಿಗಳಿಗೆ ಎಂದರೆ ಶೇಕಡಾ 88ರಷ್ಟು ಮತ್ತು ಹಿಂದಿನ ವರ್ಷಕ್ಕಿಂತ ಶೇಕಡಾ 14ರಷ್ಟು ಏರಿಕೆಯಾಗಿವೆ. 2023–24ರ ಅವಧಿಯಲ್ಲಿ ಮಾರುಕಟ್ಟೆ ಸಾಲವನ್ನು ಒಳಗೊಂಡಿರುವ ಆಂತರಿಕ ಋಣವು ಶೇಕಡಾ 65.89 ರಷ್ಟಿದೆ ಮತ್ತು ಸಾರ್ವಜನಿಕ ಲೆಕ್ಕದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳ ಶೇಕಡಾ 23.55 ರಷ್ಟಿದೆ.

## 1.9 ರಾಜ್ಯದ ಹಣಕಾಸಿನ ಸ್ಥಿತಿ

ಹಣಕಾಸಿನ ನಿರ್ವಹಣೆಯಲ್ಲಿ ಅಂತರ–ಉತ್ಪಾದಕ ನೀತಿಯನ್ನು ಮತ್ತು ಧೀರ್ಘಕಾಲೀನ ದೃಢ ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002ನ್ನು ಜಾರಿಗೆ ತರಲಾಯಿತು.

### *1.9.1 ಪ್ರಮುಖ ಹಣಕಾಸಿನ ಪ್ರಮಿತಿಗಳ ಮೇಲೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಗುರಿಗಳು ಮತ್ತು ಅದರ ಸಾಧನೆಗಳು*

ಸಾಲಗಳು, ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ಸಾಕಷ್ಟು ರಾಜಸ್ವ ಹೆಚ್ಚಳ ಮತ್ತು ವಿವೇಚನಾಯುಕ್ತ ಋಣ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಸುಧಾರಣೆ ಅಧಿನಿಯಮ 2002 ಕಲ್ಪಿಸಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳು ಮತ್ತು ಅವುಗಳ ವಾಸ್ತವ ಮಟ್ಟಗಳನ್ನು **ಕೋಷ್ಟಕ–1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.6: ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿಗಳ ಅನುಸರಣೆ**

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2019–20 | 2020–21 | 2021–22 | 2022–23 | 2023–24 |
| ರಾಜಸ್ವ ಹೆಚ್ಚಳ/ಕೊರತೆ (₹ ಕೋಟಿಗಳಲ್ಲಿ) | **2019–20ರವರೆಗೆ ರಾಜಸ್ವ ಹೆಚ್ಚಳವನ್ನು ನಿರ್ವಹಿಸುವುದು** | 1,185 | (–)19,338 | (–)13,666 | 13,496 | (–)9,271 |
| | **ಕೋವಿಡ್–19ರ ಕಾರಣದಿಂದ 2020–21ರಲ್ಲಿ ರಾಜಸ್ವ ಹೆಚ್ಚಳವನ್ನು ಸಾಧಿಸಲು ಸಾಧ್ಯವಾಗದಿರಬಹುದು ಮತ್ತು 2021–22 ಮತ್ತು 2022–23ರಲ್ಲಿ ಆರ್ಥಿಕತೆಯ ನಿಧಾನಗತಿಯ ಚೇತರಿಕೆ ಯಿಂದ ರಾಜಸ್ವ ಕೊರತೆ ಬರಬಹುದು.** | √ | ರಾಜ್ಯವು ರಾಜಸ್ವ ಕೊರತೆಯನ್ನು ಎದುರಿಸಿತು | | ರಾಜ್ಯವು ರಾಜಸ್ವ ಹೆಚ್ಚಳವನ್ನು ಸಾಧಿಸಿತು | ರಾಜ್ಯವು ರಾಜಸ್ವ ಕೊರತೆಯನ್ನು ಎದುರಿಸಿತು |

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2019–20 | 2020–21 | 2021–22 | 2022–23 | 2023–24 |
| ವಿತ್ತೀಯ ಕೊರತೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಶೇಕಡಾವಾರು) | ಶೇಕಡಾ 3.00 (2019–20 ರವರೆಗೆ) | 2.36 (38,166) | 4.09 (67,098) | 3.34 (66,036) | 2.05 (46,623) | 2.55 (65,522) |
| | ಶೇಕಡಾ 5.00 (2020–21) ಶೇಕಡಾ 4.00 (2021–22) ಶೇಕಡಾ 3.5(2022–23) ಮತ್ತು 3.0(2023–24) | √ | √ | √ | √ | √ |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಾಕಿ ಇರುವ ಋಣದ ಅನುಪಾತ (ಶೇಕಡಾವಾರು) | ಶೇಕಡಾ 25.00 (2023–24ರವರೆಗೆ) ಒಟ್ಟು ಆಂತರಿಕ ಉತ್ಪನ್ನಕ್ಕೆ ಋಣದ ಅನುಪಾತವು ಹೆಚ್ಚಾಗಬಹುದು (2021–22 ಮತ್ತು 2022–23) | 20.89 | 24.58* | 23.24* | 23.03* | 23.49* |
| | | √ | √ | √ | √ | √ |

**ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳನ್ನು ಋಣವೆಂದು ಪರಿಗಣಿಸಿಲ್ಲ.*

ಫೆಬ್ರವರಿ 2014ರಲ್ಲಿ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ, 2002ಕ್ಕೆ ತಿದ್ದುಪಡಿಯ ಮೂಲಕ, ಪರಿಚ್ಛೇಧ–2(ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಹೊಣೆಗಾರಿಕೆಗಳ ವ್ಯಾಪ್ತಿಯನ್ನು ಸಾರ್ವಜನಿಕ ವಲಯ ಉದ್ದಿಮಗಳು ಮತ್ತು ವಿಶೇಷ ಉದ್ದೇಶದ ವಾಹನಗಳು[3] ಹಾಗೂ ಇತರ ಸಮಾನ ಸಾಧನಗಳು ಮಾಡಿದ ಸಾಲಗಳನ್ನು ಒಳಗೊಳ್ಳಲು ವಿಸ್ತರಿಸಲಾಯಿತು, ಇದರಿಂದಾಗಿ, ಈ ಸಾಲಗಳ ಅಸಲು ಮತ್ತು/ಅಥವಾ ಬಡ್ಡಿಯನ್ನು ರಾಜ್ಯದ ಆಯವ್ಯಯದಿಂದಲೇ ಭರಿಸಬೇಕಿತ್ತು. ರಾಜ್ಯ ಸರ್ಕಾರವು, ಕಾಲಕಾಲಕ್ಕೆ ರಾಜ್ಯದ ಆರ್ಥಿಕ ಸ್ಥಿತಿಯನ್ನು ಮತ್ತು ಹಣಕಾಸು ಆಯೋಗಗಳು ನಿಗದಿಪಡಿಸುವ ಪ್ರಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ವಿತ್ತೀಯ ಸುಧಾರಣೆ ಆಧಿನಿಯಮಕ್ಕೆ ತಿದ್ದುಪಡಿ ಮಾಡುತ್ತಿದೆ.

2023–24ರಲ್ಲಿ, ರಾಜ್ಯ ಸರ್ಕಾರವು ವಿತ್ತೀಯ ಕೊರತೆಯನ್ನು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 3.5ರಿಂದ ಶೇಕಡಾ 3.0ಕ್ಕೆ ಇಳಿಸಲು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯನ್ನು ತಿದ್ದುಪಡಿ ಮಾಡಿತು.

ರಾಜ್ಯ ಸರ್ಕಾರವು 2004–05 ರಿಂದ 2019–20ರವರೆಗೂ ರಾಜಸ್ವ ಹೆಚ್ಚಳವನ್ನು ದಾಖಲಿಸಿತು ಮತ್ತು 2020–21 ಮತ್ತು 2021–22ರ ಅವಧಿಯಲ್ಲಿ ರಾಜ್ಯವು ರಾಜಸ್ವ ಕೊರತೆಯನ್ನು ಅನುಭವಿಸಿತು ಮತ್ತು ರಾಜಸ್ವ ಕೊರತೆಯನ್ನು ಸಾಲದ ನಿಧಿಗಳಿಂದ ಪೂರೈಸಲಾಯಿತು. 2022–23ರ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳವನ್ನು ಅನುಭವಿಸಿತು. ಆದಾಗ್ಯೂ, 2023–24ರಲ್ಲಿ ರಾಜ್ಯವು ಮತ್ತೊಮ್ಮೆ ರಾಜಸ್ವ ಕೊರತೆಯನ್ನು ಕಂಡಿತು. ಎಲ್ಲಾ ವರ್ಷಗಳಲ್ಲಿಯೂ ವಿತ್ತೀಯ ಕೊರತೆಯು ಕೆಎಫ್ಆರ್ಎ ನಿಗದಿಪಡಿಸಿದ ಗುರಿಯೊಳಗೆ ಇದ್ದಿತು. ಕಾಯಿದೆಯಡಿಯಲ್ಲಿ ಸೂಚಿಸಲಾದ ಜಿಎಸ್‌ಡಿಪಿಗೆ ಒಟ್ಟು ಹೊಣೆಗಾರಿಕೆಗಳ ಬಾಕಿ ಅನುಪಾತವು ಕಾಯಿದೆಯಲ್ಲಿ ಒದಗಿಸಲಾದ ಶೇಕಡಾ 25ರ ಗುರಿಯೊಳಗೆ ಇದ್ದಿತು.

### *1.9.2 2023–24ರ ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯನ್ವಯ ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯದೊಂದಿಗೆ ಐದು ವರ್ಷಗಳ ಹಣಕಾಸು ಯೋಜನೆಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು. ಮಧ್ಯಮಾವಧಿ ವಿತ್ತೀಯ ಯೋಜನೆಯು ನಿಗದಿತ ಹಣಕಾಸಿನ ಸೂಚಕಗಳಿಗೆ ಐದು ವರ್ಷಗಳ ಆವರ್ತನ ಗುರಿಯನ್ನು ನಿಗದಿಪಡಿಸಿದೆ. ಮಧ್ಯಮಾವಧಿ ವಿತ್ತೀಯ ಯೋಜನೆಯು 2023–24ಕ್ಕೆ ಪ್ರಕ್ಷೇಪಿಸಿದ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸವನ್ನು **ಕೋಷ್ಟಕ–1.7**ರಲ್ಲಿ ನೀಡಲಾಗಿದೆ.

[3] ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮಾಡುವ ಸಾಲಗಳು ಆಯವ್ಯಯದ ಹೊರಗಿನ ಸಾಲಗಳಾಗಿವೆ.

**ಕೋಷ್ಟಕ–1.7: 2023–24ಕ್ಕೆ ಮಧ್ಯಮಾವಧಿ ವಿತ್ತೀಯ ಅವಧಿಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಆರ್ಥಿಕ ಸ್ಥಿರಾಂಶಗಳು | 2022–26ರ ಮಧ್ಯಮಾವಧಿ ವಿತ್ತೀಯ ಅವಧಿಯ ಯೋಜನೆಯ ಪ್ರಕಾರ ಪ್ರಕ್ಷೇಪಣೆಗಳು | ವಾಸ್ತವಗಳು (2023–24) | ವ್ಯತ್ಯಾಸ (ಶೇಕಡಾವಾರು) |
|---|---|---|---|---|
| 1 | ಸ್ವಂತ ತೆರಿಗೆ ರಾಜಸ್ವ | 1,40,067 | 1,63,505 | 16.73 |
| 2 | ತೆರಿಗೆಯೇತರ ರಾಜಸ್ವ | 11,943 | 13,117 | 9.83 |
| 3 | ಕೇಂದ್ರದ ತೆರಿಗೆಗಳಲ್ಲಿ ಪಾಲು | 30,065 | 41,193 | 37.01 |
| 4 | ಭಾರತ ಸರ್ಕಾರದಿಂದ ಸಹಾಯಾನುದಾನಗಳು | 16,944 | 15,528 | (–)8.36 |
| 5 | **ರಾಜಸ್ವ ಸ್ವೀಕೃತಿಗಳು (1+2+3+4)** | **1,99,019** | **2,33,343** | **17.25** |
| 6 | ರಾಜಸ್ವ ವೆಚ್ಚ | 2,39,587 | 2,42,614 | 1.26 |
| 7 | ಒಟ್ಟು ಹೊಣೆಗಾರಿಕೆಗಳು | 5,91,977 | 6,33,531* | 7.02 |
| 8 | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 21,10,499 | 25,67,340 | 21.65 |
| 9 | **ರಾಜಸ್ವ ಕೊರತೆ (–)/ಅಧಿಕ (+) (5–6)** | **(–)40,568** | **(–)9,271** | **77.14** |
| 10 | ವಿತ್ತೀಯ ಕೊರತೆ (–)/ ಅಧಿಕ (+) | (–)61,204 | (–)65,522 | (–)7.05 |
| 11 | ವಿತ್ತೀಯ ಕೊರತೆ / ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 2.90 | 2.55 | (–)0.35 |
| 12 | ಹೊಣೆಗಾರಿಕೆಗಳು – ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ (ಶೇಕಡಾವಾರು) | 28.05 | 23.49 | (–)4.56 |
| 13 | ಪ್ರಸ್ತುತ ದರದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರ (ಶೇಕಡಾವಾರು) | 11.90 | 13.10 | 1.20 |

*ಆಕರ: ಹಣಕಾಸು ಲೆಕ್ಕಗಳು ಮತ್ತು ಮಧ್ಯಮಾವಧಿ ವಿತ್ತೀಯ ಅವಧಿಯ ಯೋಜನೆ 2022–26*

*ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ ಭಾರತ ಸರ್ಕಾರದಿಂದ 2020–21 ಮತ್ತು 2021–22ರ ಅವಧಿಯಲ್ಲಿ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲ (₹30,516 ಕೋಟಿ) ವನ್ನು ಋಣವೆಂದು ಪರಿಗಣಿಸಿಲ್ಲ.*

ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಮಾಡಲಾದ ಪ್ರಕ್ಷೇಪಣದಿಂದ ವಾಸ್ತವಿಕ ಸ್ವೀಕೃತಿಗಳು, ವೆಚ್ಚಗಳು, ಹೊಣೆಗಾರಿಕೆಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳು ಹೆಚ್ಚಾಗಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಇದರ ಪರಿಣಾಮವಾಗಿ, ಹಿಂದಿನ ಪ್ಯಾರಾಗಳಲ್ಲಿ ಚರ್ಚಿಸಲಾದ ಹಣಕಾಸಿನ ನಿಯತಾಂಕಗಳಲ್ಲಿ ವ್ಯತ್ಯಾಸ ಕಂಡುಬಂದಿದೆ.

## 1.10 2023–24ರ ಅವಧಿಯಲ್ಲಿ ಪ್ರಮುಖ ವಿತ್ತೀಯ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ

ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯು ಕೆಲವು ಲೆಕ್ಕ ಹೊಂದಾಣಿಕೆಗಳಿಂದ ಮತ್ತು **ಕೋಷ್ಟಕ–1.8**ರಲ್ಲಿ ವಿವರಿಸಲಾದ ಲೆಕ್ಕಪರಿಶೋಧನಾ ನಂತರದ ವಿಶ್ಲೇಷಣೆಯಿಂದ ಪ್ರಭಾವಿತವಾಗಿದ್ದವು ಎಂಬುದನ್ನು (ಅವುಗಳಲ್ಲಿ ಕೆಲವನ್ನು ಹಣಕಾಸು ಖಾತೆಗಳ ಟಿಪ್ಪಣಿಗಳಲ್ಲಿ ಹೊರತರಲಾಗಿದೆ) 2023–24ರ ಅವಧಿಯಲ್ಲಿನ ಕೆಲವು ಪ್ರಮುಖ ವಹಿವಾಟುಗಳ ಪರಿಶೀಲನೆಯು ತಿಳಿಯಪಡಿಸಿತು.

**ಕೋಷ್ಟಕ–1.8: 2023–24ರ ಅವಧಿಯಲ್ಲಿ ಕೆಲವು ಪ್ರಮುಖ ವಹಿವಾಟುಗಳ ಪರಿಣಾಮ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಹಿವಾಟಿನ ಸ್ವರೂಪ | ರಾಜಸ್ವ ಕೊರತೆ | | ವಿತ್ತೀಯ ಕೊರತೆ | |
|---|---|---|---|---|---|
| | | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು |
| 1 | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು | – | 374.64 | – | – |
| 1a | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು (ಸಹಾಯಾನುದಾನ) | – | 129.65 | – | – |
| 2 | ಬಂಡವಾಳ ವೆಚ್ಚದ ಬದಲು ರಾಜಸ್ವ ವೆಚ್ಚದಡಿ ಭರಿಸಿರುವುದು | 0.01 | – | – | – |
| 3 | ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಗೆ ಸಂಬಂಧಿಸಿದಂತೆ ಬಡ್ಡಿಯನ್ನು ಪಾವತಿಸದಿರುವುದು | – | 27.73 | – | 27.73 |
| 7 | ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ (ಸಿಆರ್ಐಎಫ್) ಯಿಂದ ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ (ಸಿಆರ್ಐಎಫ್) ನಿಧಿಗೆ ಮಾಡಲಾದ ಬಂಡವಾಳ ವೆಚ್ಚವನ್ನು ವರ್ಗಾಯಿಸದಿರುವುದು. | – | – | 492.12 | – |
| | **ಒಟ್ಟು** | **0.01** | **532.02** | **492.12** | **27.73** |

*ಆಕರ: 2023–24ರ ಲೆಕ್ಕಪತ್ರಗಳಿಗೆ ಟಿಪ್ಪಣಿಗಳು ಮತ್ತು ಲೆಕ್ಕಪರಿಶೋಧನೋತ್ತರದ ವಿಶ್ಲೇಷಣೆ*

ಮೇಲಿನ ವಹಿವಾಟುಗಳನ್ನು ಕೆಳಗೆ ಚರ್ಚಿಸಲಾಗಿದೆ:

- **ಅಧ್ಯಾಯ–3ರ ಕಂಡಿಕೆ–3.7.1.2**ರಲ್ಲಿ ಚರ್ಚಿಸಿದಂತೆ ರಾಜಸ್ವ ವೆಚ್ಚ ಎಂದು ಪರಿಗಣಿಸಬೇಕಾಗಿದ್ದ ₹374.64 ಕೋಟಿ ವೆಚ್ಚವನ್ನು ಬಂಡವಾಳ ವೆಚ್ಚ ಎಂದು ಪರಿಗಣಿಸಲಾಗಿತ್ತು.
- **ಅಧ್ಯಾಯ–3ರ ಕಂಡಿಕೆ–3.7.1.2**ರಲ್ಲಿ ಚರ್ಚಿಸಿದಂತೆ ಬಂಡವಾಳ ಶೀರ್ಷಿಕೆಯಡಿಯಲ್ಲಿನ ₹129.65 ಕೋಟಿ ವೆಚ್ಚವನ್ನು ರಾಜಸ್ವ ಸ್ವರೂಪದ ವೆಚ್ಚಕ್ಕಾಗಿ ಬಳಸಲಾಗಿತ್ತು.
- **ಅಧ್ಯಾಯ–3ರ ಕಂಡಿಕೆ–3.7.1.2**ರಲ್ಲಿ ಚರ್ಚಿಸಿದಂತೆ ರಾಜಸ್ವ ಶೀರ್ಷಿಕೆಯಡಿಯಲ್ಲಿನ ₹0.01 ಕೋಟಿ ವೆಚ್ಚವನ್ನು ಬಂಡವಾಳ ಸ್ವರೂಪದ ವೆಚ್ಚಕ್ಕಾಗಿ ಬಳಸಲಾಗಿತ್ತು.
- **ಅಧ್ಯಾಯ–2ರ ಕಂಡಿಕೆ–2.6.3(ಬಿ) ಮತ್ತು** (ಸಿ)ಗಳಲ್ಲಿ ಚರ್ಚಿಸಿದಂತೆ ರಾಜ್ಯ ಸರ್ಕಾರವು ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಗೆ ಸಂಬಂಧಿಸಿದಂತೆ ಮೀಸಲು ನಿಧಿಗಳು ಮತ್ತು ಬಡ್ಡಿಯನ್ನು ಹೊಂದಿರುವ ಠೇವಣಿಗಳಡಿಯಲ್ಲಿ ವೆಚ್ಚ ಮಾಡದ ಬಾಕಿಯ ಮೇಲೆ ₹27.73 ಕೋಟಿ ಬಡ್ಡಿಯನ್ನು ಪಾವತಿಸಬೇಕಾಗಿತ್ತು.
- **ಅಧ್ಯಾಯ–2ರ ಕಂಡಿಕೆ–2.6.2(ಎಫ್)**ರಲ್ಲಿ ಚರ್ಚಿಸಿದಂತೆ ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ (ಸಿಆರ್ಐಎಫ್) ನಿಂದ ಭರಿಸಬೇಕಿದ್ದ ₹492.12 ಕೋಟಿ ಬಂಡವಾಳ ವೆಚ್ಚವನ್ನು ಸದರಿ ನಿಧಿ ಖಾತೆಗೆ ವರ್ಗಾಯಿಸಲಾಗಿಲ್ಲ.

ಮೇಲಿನ ವಹಿವಾಟುಗಳಿಂದಾಗಿ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯ ಮೇಲೆ ಪರಿಣಾಮ ಬೀರುತ್ತದೆ. ರಾಜಸ್ವ ಕೊರತೆಯು ₹532.01 ಕೋಟಿಯಷ್ಟು ಹೆಚ್ಚಾಗಿ ₹9,803.01 ಕೋಟಿಗಳಷ್ಟಾಗಿರುತ್ತದೆ ಮತ್ತು ಪರಿಣಾಮಕಾರಿ ವಿತ್ತೀಯ ಕೊರತೆಯು ₹464.39 ಕೋಟಿಯಷ್ಟು ಕಡಿಮೆಯಾಗಿ ₹65,057.61 ಕೋಟಿಗಳಷ್ಟಾಗುತ್ತದೆ. ವಿತ್ತೀಯ ಕೊರತೆ – ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಶೇಕಡಾ 2.53ರಲ್ಲೇ ಮುಂದುವರಿಯುತ್ತದೆ.

# ಅಧ್ಯಾಯ – 2

# ರಾಜ್ಯದ ಹಣಕಾಸು ವ್ಯವಹಾರಗಳು

ಅಧ್ಯಾಯ

# ರಾಜ್ಯದ ಹಣಕಾಸು ವ್ಯವಹಾರಗಳು 2

## 2.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಹಣಕಾಸುಗಳ ವಿಶಾಲ ದೃಷ್ಟಿಕೋನವನ್ನು ಒದಗಿಸುತ್ತದೆ, ರಾಜ್ಯದ ಹಣಕಾಸು ಲೆಕ್ಕಗಳ ಆಧಾರದ ಮೇಲೆ ಹಿಂದಿನ ವರ್ಷಕ್ಕೆ ಸಾಪೇಕ್ಷವಾಗಿ ಪ್ರಮುಖ ಹಣಕಾಸಿನ ಅಸ್ಥಿರತೆಗಳಲ್ಲಿನ ನಿರ್ಣಾಯಕ ಬದಲಾವಣೆಗಳನ್ನು, 2019–20 ರಿಂದ 2023–24ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಒಟ್ಟಾರೆ ಪ್ರವೃತ್ತಿಗಳು, ರಾಜ್ಯದ ಋಣ ಸಹಿಷ್ಣುತೆ ಮತ್ತು ಪ್ರಮುಖ ಸಾರ್ವಜನಿಕ ಲೆಕ್ಕಗಳ ವಹಿವಾಟುಗಳನ್ನು ವಿಶ್ಲೇಷಿಸುತ್ತದೆ.

## 2.2 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ಪ್ರಮುಖ ಬದಲಾವಣೆಗಳು

2022–23ಕ್ಕೆ ಹೋಲಿಸಿದಂತೆ 2023–24ರ ಅವಧಿಯಲ್ಲಿ ರಾಜ್ಯದ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ಪ್ರಮುಖ ಬದಲಾವಣೆಗಳ ಪಕ್ಷಿನೋಟವನ್ನು **ಕೋಷ್ಟಕ–2.1** ಪ್ರಸ್ತುತಪಡಿಸುತ್ತದೆ. ವಿವರಗಳನ್ನು **ಅನುಬಂಧ–2.1**ರಲ್ಲಿ ನೀಡಲಾಗಿದೆ. 2023–24ರ ಸ್ವೀಕೃತಿಗಳು ಮತ್ತು ವಿತರಣೆಯ ವಿವರಗಳು ಮತ್ತು ಹಿಂದಿನ ನಾಲ್ಕು ವರ್ಷಗಳಲ್ಲಿ ಒಟ್ಟಾರೆ ಹಣಕಾಸಿನ ಸ್ಥಿತಿಯ ವಿವರಗಳನ್ನು **ಅನುಬಂಧ–2.2**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.1: 2022–23ಕ್ಕೆ ಹೋಲಿಸಿದಂತೆ 2023–24ರಲ್ಲಿ ಪ್ರಮುಖ ಹಣಕಾಸಿನ ಟ್ಟುಗಳಲ್ಲಿನ ಬದಲಾವಣೆಗಳು**

| | |
|---|---|
| **ರಾಜಸ್ವ ಸ್ವೀಕೃತಿಗಳು** | ✓ ರಾಜ್ಯದ ರಾಜಸ್ವ ಸ್ವೀಕೃತಿಗಳು ಶೇಕಡಾ 1.86ರಷ್ಟು ಹೆಚ್ಚಿದೆ.<br>✓ ರಾಜ್ಯದ ಸ್ವಂತ ತೆರಿಗೆ ಸ್ವೀಕೃತಿಗಳು ಶೇಕಡಾ13.78ರಷ್ಟು ಹೆಚ್ಚಿವೆ.<br>✓ ರಾಜ್ಯದ ಸ್ವಂತ ತೆರಿಗೆಯೇತರ ಸ್ವೀಕೃತಿಗಳು ಶೇಕಡಾ 5.73ರಷ್ಟು ಕಡಿಮೆಯಾಗಿದೆ.<br>✓ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಶೇಕಡಾ 19.07ರಷ್ಟು ಹೆಚ್ಚಾಗಿದೆ.<br>✓ ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಧನದಲ್ಲಿ ಶೇಕಡಾ 57.88ರಷ್ಟು ಕಡಿಮೆಯಾಗಿದೆ. |
| **ರಾಜಸ್ವ ವೆಚ್ಚ** | ✓ ರಾಜಸ್ವ ವೆಚ್ಚದಲ್ಲಿ ಶೇಕಡಾ 12.54ರಷ್ಟು ಹೆಚ್ಚಳವಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ 5.41ರಷ್ಟು ಹೆಚ್ಚಾಗಿದೆ.<br>✓ ಸಮಾಜ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ 15.69ರಷ್ಟು ಹೆಚ್ಚಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡಾ 17.28ರಷ್ಟು ಹೆಚ್ಚಾಗಿದೆ.<br>✓ ಸಹಾಯನುದಾನಗಳ ಮೇಲಿನ ವೆಚ್ಚವು ಶೇಕಡಾ 10.01ರಷ್ಟು ಹೆಚ್ಚಾಗಿದೆ. |
| **ಬಂಡವಾಳ ಸ್ವೀಕೃತಿಗಳು** | ✓ ಋಣ ಬಂಡವಾಳ ಸ್ವೀಕೃತಿಗಳು ಶೇಕಡಾ 102.65ರಷ್ಟು ಹೆಚ್ಚಾಗಿದೆ. |

| | |
|---|---|
| | ✓ ಋಣೇತರ ಬಂಡವಾಳ ಸ್ವೀಕೃತಿಗಳು ಶೇಕಡಾ 28.75ರಷ್ಟು ಕಡಿಮೆಯಾಗಿದೆ. |
| **ಬಂಡವಾಳ ವೆಚ್ಚ** | ✓ ಬಂಡವಾಳ ವೆಚ್ಚವು ಶೇಕಡಾ 9.12ರಷ್ಟು ಕಡಿಮೆಯಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡಾ 79.90ರಷ್ಟು ಹೆಚ್ಚಾಗಿದೆ.<br>✓ ಸಮಾಜ ಸೇವೆಗಳ ಮೇಲಿನ ಬಂಡವಾಳ ವೆಚ್ಚ ಶೇಕಡಾ 3.61ರಷ್ಟು ಕಡಿಮೆಯಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚ ಶೇಕಡಾ 14.11ರಷ್ಟು ಕಡಿಮೆಯಾಗಿದೆ. |
| **ಸಾಲಗಳು ಮತ್ತು ಮುಂಗಡಗಳು** | ✓ ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳು ಶೇಕಡಾ 35.98ರಷ್ಟು ಕಡಿಮೆಯಾಗಿದೆ<br>✓ ಸಾಲಗಳು ಮತ್ತು ಮುಂಗಡಗಳ ವಿತರಣೆಯು ಶೇಕಡಾ 37.63ರಷ್ಟು ಹೆಚ್ಚಾಗಿದೆ. |
| **ಸಾರ್ವಜನಿಕ ಋಣ** | ✓ ಸಾರ್ವಜನಿಕ ಋಣ ಸ್ವೀಕೃತಿಗಳು ಶೇಕಡಾ 102.65ರಷ್ಟು ಹೆಚ್ಚಾಗಿದೆ.<br>✓ ಸಾರ್ವಜನಿಕ ಋಣ ಮರುಪಾವತಿ ಶೇಕಡಾ 40.84ರಷ್ಟು ಹೆಚ್ಚಾಗಿದೆ. |
| **ಸಾರ್ವಜನಿಕ ಲೆಕ್ಕ** | ✓ ಸಾರ್ವಜನಿಕ ಲೆಕ್ಕದ ಸ್ವೀಕೃತಿಗಳು ಶೇಕಡಾ 0.15ರಷ್ಟು ಹೆಚ್ಚಾಗಿದೆ.<br>✓ ಸಾರ್ವಜನಿಕ ಲೆಕ್ಕದ ವಿತರಣೆಯು ಶೇಕಡಾ 5.39ರಷ್ಟು ಹೆಚ್ಚಾಗಿದೆ. |
| **ನಗದು ಶಿಲ್ಕು** | ✓ ನಗದು ಶಿಲ್ಕು (ರಿಸರ್ವ್ ಬ್ಯಾಂಕ್‌ನಲ್ಲಿ ಮೀಸಲಿಟ್ಟ ನಿಧಿಗಳ ಹೂಡಿಕೆ ಮತ್ತು ಠೇವಣಿ ಸೇರಿದಂತೆ) ₹23,321 ಕೋಟಿಗಳು ಹೆಚ್ಚಾಗಿದೆ (ಶೇಕಡಾ 27.78). |

ಮೇಲಿನ ಪ್ರತಿಯೊಂದು ಸೂಚಕಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

## 2.3 ನಿಧಿಯ ಆಕರಗಳು ಮತ್ತು ಅನ್ವಯ

2022–23ರಲ್ಲಿನ ರಾಜ್ಯದ ನಿಧಿಯ ಆಕರಗಳು ಮತ್ತು ಅನ್ವಯವನ್ನು 2023–24 ರೊಂದಿಗೆ **ಕೋಷ್ಟಕ–2.2**ರಲ್ಲಿ ಹೋಲಿಸಲಾಗಿದ್ದು, 2023–24ರಲ್ಲಿ ರಾಜ್ಯಸಂಚಿತ ನಿಧಿಯಲ್ಲಿನ ಸ್ವೀಕೃತಿಗಳು ಮತ್ತು ವೆಚ್ಚಗಳ ಶೇಕಡಾವಾರು ವಿವರಗಳನ್ನು **ನಕ್ಷೆ–2.1** ಮತ್ತು **ನಕ್ಷೆ–2.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.2: 2022–23 ಮತ್ತು 2023–24ರಲ್ಲಿ ನಿಧಿಗಳ ಆಕರ ಮತ್ತು ಅನ್ವಯಗಳು**

(₹ ಕೋಟಿಗಳಲ್ಲಿ)

| ವಿವರಗಳು | | 2022–23 | 2023–24 | ಹೆಚ್ಚಳ/ ಇಳಿಕೆ |
|---|---|---|---|---|
| **ಆಕರಗಳು** | ಆರಂಭಿಕ ನಗದು ಶಿಲ್ಕು (ಆರ್‌ಬಿಐನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) | 63,412 | 83,943 | 20,531 |
| | ರಾಜಸ್ವ ಸ್ವೀಕೃತಿಗಳು | 2,29,080 | 2,33,343 | 4,263 |
| | ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳು | 478 | 306 | (–)172 |
| | ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ) | 28,607 | 67,827 | 39,220 |
| | ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು (ನಿವ್ವಳ) | 38,232 | 21,018 | (–)17,214 |
| | **ಒಟ್ಟು** | **3,59,809** | **4,06,437** | **46,628** |
| **ಅನ್ವಯ** | ರಾಜಸ್ವ ವೆಚ್ಚ | 2,15,584 | 2,42,614 | 27,030 |
| | ಬಂಡವಾಳ ವೆಚ್ಚ | 57,349 | 52,120 | (–) 5,229 |
| | ಸಾಲಗಳು ಮತ್ತು ಮುಂಗಡಗಳ ವಿತರಣೆ | 3,250 | 4,473 | 1,223 |
| | ಅಂತಿಮ ನಗದು ಶಿಲ್ಕು (ಆರ್‌ಬಿಐನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) | 83,943* | 1,07,264 | 23,321 |
| | **ಒಟ್ಟು** | **3,60,126** | **4,06,471** | **46,345** |

*ಮೂಲ: ಹಣಕಾಸು ಲೆಕ್ಕಗಳು*

** ಖಾತರಿ ವಿಮೋಚನಾ ನಿಧಿಯಲ್ಲಿ ಹೂಡಿಕೆ ಮಾಡಲಾದ ₹314 ಕೋಟಿ ಲೆಕ್ಕ ಹಾಕದ ಕಾರಣ ಅಂತಿಮ ನಗದು ಶಿಲ್ಕು ಕಳೆದ ವರ್ಷಕ್ಕಿಂತ ಭಿನ್ನವಾಗಿದೆ.*

**ನಕ್ಷೆ 2.1: ಸಂಪನ್ಮೂಲಗಳ ಸಂಯೋಜನೆ (ಶೇಕಡಾವಾರು)**




**ನಕ್ಷೆ 2.2: ಸಂಪನ್ಮೂಲಗಳ ಅನ್ವಯ (ಶೇಕಡಾವಾರು)**




*ಆಕರ: ಹಣಕಾಸು ಲೆಕ್ಕಗಳು*

## 2.4 ರಾಜ್ಯದ ಸಂಪನ್ಮೂಲಗಳು

ರಾಜ್ಯದ ಸಂಪನ್ಮೂಲಗಳು ರಾಜಸ್ವ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳು ಮತ್ತು ನಿವ್ವಳ ಸಾರ್ವಜನಿಕ ಲೆಕ್ಕದ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ. ಇವುಗಳ ಸಂಯೋಜನೆಯನ್ನು ಈಗಾಗಲೇ **ಅಧ್ಯಾಯ 1**ರ **ಕಂಡಿಕೆ–1.4**ರಲ್ಲಿ ಚರ್ಚಿಸಲಾಗಿದೆ. 2023–24 ಅವಧಿಯಲ್ಲಿ ರಾಜ್ಯದ ಒಟ್ಟಾರೆ ಸ್ವೀಕೃತಿಗಳ ಘಟಕಗಳು ಮತ್ತು ಉಪ–ಘಟಕಗಳನ್ನು **ನಕ್ಷೆ–2.3**ರಲ್ಲಿ ತೋರಿಸಲಾಗಿದೆ.

### *2.4.1 ರಾಜಸ್ವ ಸ್ವೀಕೃತಿಗಳು*

ಕರ್ನಾಟಕ ಸರ್ಕಾರದ ವಿತ್ತೀಯ ಸ್ಥಿತಿಯು ಬಹುತೇಕ ರಾಜಸ್ವ ಭಾಗದಿಂದ ಪ್ರಭಾವಿತವಾಗಿರುತ್ತದೆ. 2019–20 ರಿಂದ 2022–23ರ ಅವಧಿಯಲ್ಲಿ ಸರಾಸರಿ 66 ಪ್ರತಿಶತ ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. 2023–24ರಲ್ಲಿ, ಒಟ್ಟು ರಾಜಸ್ವ ಸ್ವೀಕೃತಿಗಳಲ್ಲಿ ರಾಜ್ಯದ ಸ್ವಂತ ಸಂಪನ್ಮೂಲಗಳು 76 ಪ್ರತಿಶತವನ್ನು ಒಳಗೊಂಡಿವೆ. ಉಳಿದ ಭಾಗವು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಭಾರತ ಸರ್ಕಾರದಿಂದ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ಮತ್ತು ಸಹಾಯಾನುದಾನ ವಂತಿಗೆಯ ರೂಪದಲ್ಲಿ ವರ್ಗಾಯಿಸಲಾಗಿದೆ. 2023–24ರಲ್ಲಿ ಸ್ವಂತ ತೆರಿಗೆ ಆದಾಯವು ಮೌಲ್ಯದ ದೃಷ್ಟಿಯಿಂದ ₹19,803 ಕೋಟಿಗಳಷ್ಟು ಹೆಚ್ಚಾಗಿದೆ ಮತ್ತು ಅದರ ವೃದ್ಧಿಯ ದರವು ಪ್ರತಿಶತ 13.78 ರಷ್ಟಿತ್ತು. 2023–24ರ ರಾಜಸ್ವ ಸ್ವೀಕೃತಿಯಲ್ಲಿ ಅದರ ಶೇಕಡಾವಾರು ಪಾಲು ಏಳರಷ್ಟು ಹೆಚ್ಚಾಗಿ ಮತ್ತು ಶೇಕಡಾ 70 ರಷ್ಟಿತ್ತು. ಮತ್ತೊಂದೆಡೆ, ರಾಜ್ಯದ ತೆರಿಗೆಯೇತರ ಆದಾಯವು 2023–24ರಲ್ಲಿ ₹797 ಕೋಟಿಗಳಷ್ಟು, ಅಂದರೆ ಹಿಂದಿನ ವರ್ಷಕ್ಕಿಂತ ಶೇಕಡಾ ಆರರಷ್ಟು ಕಡಿಮೆಯಾಗಿದೆ. 2019–20 ರಿಂದ 2022–23ರ

ಅವಧಿಯಲ್ಲಿ ತೆರಿಗೆಯೇತರ ಪಾಲು ಆದಾಯದ ನಾಲ್ಕರಿಂದ ಆರು ಪ್ರತಿಶತದವರೆಗೆ ಇದ್ದು, 2023–24ರ ಅವಧಿಯಲ್ಲಿಯೂ ಸಹ ಅದೇ ರೀತಿ ಶೇಕಡಾ ಆರರಲ್ಲಿ ಮುಂದುವರೆಯಿತು.

**ನಕ್ಷೆ–2.3: 2023–24ರಲ್ಲಿ ರಾಜ್ಯದ ಸ್ವೀಕೃತಿಗಳ ಸಂಯೋಜನೆ**




*ಆಕರ: ಹಣಕಾಸು ಲೆಕ್ಕಗಳು*

### *2.4.2 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ ಮತ್ತು ವೃದ್ಧಿ*

2019–20 ರಿಂದ 2023–24ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜ್ಯಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳನ್ನು ಮತ್ತು ಆದಾಯದ ಪ್ಲವನತೆಯನ್ನು **ಕೋಷ್ಟಕ–2.3** ಒದಗಿಸುತ್ತದೆ. ಇದಲ್ಲದೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ರಾಜಸ್ವ ಸ್ವೀಕೃತಿಗಳ ಸಂಯೋಜನೆಯನ್ನು ಕ್ರಮವಾಗಿ **ನಕ್ಷೆ–2.4** ಮತ್ತು **ನಕ್ಷೆ–2.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.3: ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ಬೆಳವಣಿಗೆ**

| ಪ್ರಮಿತಿಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| **ರಾಜಸ್ವ ಸ್ವೀಕೃತಿಗಳು (₹ ಕೋಟಿಗಳಲ್ಲಿ)** | 1,75,443 | 1,56,716 | 1,95,762 | 2,29,080 | 2,33,343 |
| **ರಾಜಸ್ವ ಸ್ವೀಕೃತಿಗಳ ದರ (ಶೇಕಡಾವಾರು)** | 6.34 | (–)10.67 | 24.92 | 17.02 | 1.86 |
| **ಸ್ವಂತ ತೆರಿಗೆ ರಾಜಸ್ವ (₹ ಕೋಟಿಗಳಲ್ಲಿ)** | 1,02,363 | 97,052 | 1,20,739 | 1,43,702 | 1,63,505 |
| **ತೆರಿಗೆಯೇತರ ರಾಜಸ್ವ (₹ ಕೋಟಿಗಳಲ್ಲಿ)** | 7,681 | 7,894 | 11,777 | 13,914 | 13,117 |
| **ರಾಜ್ಯದ ಸ್ವಂತ ರಾಜಸ್ವ (ಸ್ವಂತ–ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ)** | 1,10,044 | 1,04,946 | 1,32,516 | 1,57,616 | 1,76,622 |
| **ರಾಜ್ಯದ ಸ್ವಂತ ರಾಜಸ್ವದ ವೃದ್ಧಿಯ ದರ (ಸ್ವಂತ–ತೆರಿಗೆ ರಾಜಸ್ವ ಮತ್ತು ತೆರಿಗೆಯೇತರ ರಾಜಸ್ವ) (ಶೇಕಡಾ)** | 6.22 | (–)4.63 | 26.27 | 18.94 | 12.06 |
| **ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನ** | 34,480 | 30,076 | 29,962 | 36,868 | 15,528 |
| **ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನ ವೃದ್ಧಿಯ ದರ (ಶೇಕಡಾ)** | 35.32 | (–)12.77 | (–)0.38 | 23.05 | (–)57.88 |
| **ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) (₹ ಕೋಟಿಗಳಲ್ಲಿ)** | 16,15,827 | 16,41,460 | 19,78,094 | 22,69,995 | 25,67,340 |
| **ಜಿಎಸ್‌ಡಿಪಿ ವೃದ್ಧಿಯ ದರ (ಶೇಕಡಾ)** | 9.22 | 1.59 | 20.51 | 14.76 | 13.10 |
| **ರಾಜಸ್ವ ಸ್ವೀಕೃತಿಗಳು/ ಜಿಎಸ್‌ಡಿಪಿ (ಶೇಕಡಾ)** | 10.86 | 9.55 | 9.90 | 10.09 | 9.09 |
| **ಪ್ಲವನತೆ ಅನುಪಾತಗಳು[4]** | | | | | |
| **ಜಿಎಸ್‌ಡಿಪಿ ಕ್ಕೆ ರಾಜಸ್ವ ಪ್ಲವನತೆ[5]** | 0.68 | (–)6.73 | 1.21 | 1.15 | 0.14 |
| **ಜಿಎಸ್‌ಡಿಪಿ ಕ್ಕೆ ರಾಜ್ಯದ ಸ್ವಂತ ಆದಾಯದ ಪ್ಲವನತೆ[6]** | 0.70 | (–)2.92 | 1.28 | 1.28 | 0.92 |

*ಆಕರ: ಹಣಕಾಸು ಲೆಕ್ಕಗಳು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ*

[4] ಪ್ಲವನತೆಯ ಅನುಪಾತವು ಮೂಲ ವ್ಯತ್ಯಯದ ಬದಲಾವಣೆಗೆ ವಿತ್ತೀಯ ವ್ಯತ್ಯಯದ ಹೊಂದಿಕೊಳ್ಳುವಿಕೆ ಅಥವಾ ಸ್ಪಂದಿಸುವಿಕೆಯ ಮಟ್ಟವನ್ನು ಸೂಚಿಸುತ್ತದೆ.

[5] ರಾಜಸ್ವ ಪ್ಲವನತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ)ದ ವೃದ್ಧಿಯ ದರಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವನ್ನು ಸೂಚಿಸುತ್ತದೆ.

[6] ಸ್ವಂತ ಆದಾಯದ ಪ್ಲವನತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ)ದ ವೃದ್ಧಿಯ ದರಕ್ಕೆ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯದ ವೃದ್ಧಿಯ ದರವನ್ನು ಸೂಚಿಸುತ್ತದೆ. ಇದು ಭಾರತ ಸರ್ಕಾರದಿಂದ ಪಡೆದ ಬಾಬ್ತುಗಳನ್ನು ಹೊರತುಪಡಿಸುತ್ತದೆ.

**ನಕ್ಷೆ–2.4: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ*

**ನಕ್ಷೆ–2.5: ರಾಜಸ್ವ ಸ್ವೀಕೃತಿಗಳ ಘಟಕಗಳಲ್ಲಿನ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

**ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆ ಸಂಬಂಧಿಸಿದ ಸಾಮಾನ್ಯ ಪ್ರವೃತ್ತಿಗಳು ಈ ಕೆಳಗಿನಂತಿವೆ:**

- ರಾಜಸ್ವ ಸ್ವೀಕೃತಿಗಳು 2019–20ರಲ್ಲಿದ್ದ ₹1,75,443 ಕೋಟಿಯಿಂದ 2023–24ರಲ್ಲಿ ₹2,33,343 ಕೋಟಿಗೆ ಏರಿ ಶೇಕಡಾ 33ರಷ್ಟು ಹೆಚ್ಚಾಗಿದೆ. 2023–24ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಯು 1.86 ಪ್ರತಿಶತದಷ್ಟು ಹೆಚ್ಚಾಗಿದೆ.
- 2023–24ರಲ್ಲಿ ಸುಮಾರು 76 ಪ್ರತಿಶತದಷ್ಟು ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. ಕೇಂದ್ರ ತೆರಿಗೆ ವರ್ಗಾವಣೆಗಳು ಮತ್ತು ಅನುದಾನಗಳು ಒಟ್ಟಾಗಿ ಪ್ರತಿಶತ 24ರಷ್ಟು ಕೊಡುಗೆ

ನೀಡಿದ್ದು ಇದು ಕರ್ನಾಟಕದ ಹಣಕಾಸಿನ ಸ್ಥಿತಿಯು ಸ್ವಂತ ಸಂಪನ್ಮೂಲಗಳಿಂದ ಹೆಚ್ಚಾಗಿ ಪ್ರಭಾವಿತವಾಗಿದೆ ಎಂಬುದನ್ನು ಸೂಚಿಸುತ್ತದೆ.

- 2023–24ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಯಲ್ಲಿ ಶೇಕಡಾ 1.86ರಷ್ಟು (₹4,263 ಕೋಟಿ) ಹೆಚ್ಚಳವು ಮುಖ್ಯವಾಗಿ ಸ್ವಂತ–ತೆರಿಗೆ ಆದಾಯ (ಶೇಕಡಾ 13.78) ಮತ್ತು ಕೇಂದ್ರ ತೆರಿಗೆಗಳು ಮತ್ತು ಸುಂಕಗಳ ರಾಜ್ಯದ ಪಾಲಿನಿಂದ (ಶೇಕಡಾ 19.07) ಉಂಟಾಗಿದೆ. ತೆರಿಗೆಯೇತರ ಆದಾಯ (ಶೇಕಡಾ 5.73) ಮತ್ತು ಅನುದಾನದಲ್ಲಿನ (ಶೇಕಡಾ 57.88) ಇಳಿಕೆಯಿಂದ ಇದು ಪ್ರತಿತೋಲನವಾಗಿದೆ.
- 2020–21 ಹೊರತುಪಡಿಸಿ ಎಲ್ಲಾ ವರ್ಷಗಳಲ್ಲಿ ಜಿಎಸ್‌ಡಿಪಿ ಕ್ಕೆ ಸಂಬಂಧಿಸಿದಂತೆ ರಾಜ್ಯದ ರಾಜಸ್ವ ಪ್ಲವನತೆಯು ಧನಾತ್ಮಕವಾಗಿತ್ತು. 2020–21ರ ಅವಧಿಯಲ್ಲಿ ಕಡಿಮೆಯಾದ ರಾಜಸ್ವ ಪ್ಲವನತೆಯು 2021–22ರಲ್ಲಿ ಹೆಚ್ಚಳವನ್ನು ತೋರಿಸಿದೆ. ಇದು ಕೋವಿಡ್ 19ರ ಲಾಕ್‌ಡೌನ್ ನಂತರದ ಆರ್ಥಿಕತೆಯ ಪುನಶ್ಚೇತನದಿಂದ ಉಂಟಾಗಿದೆ. ಅದರ ನಂತರ, ರಾಜಸ್ವ ಪ್ಲವನತೆಯು ಕಡಿಮೆಯಾಗುವ ಪ್ರವೃತ್ತಿಯನ್ನು ತೋರಿಸುತ್ತಿದೆ.
- ಅದೇ ರೀತಿ, 2020–21 ಹೊರತುಪಡಿಸಿ ಉಳಿದ ಎಲ್ಲಾ ವರ್ಷಗಳಲ್ಲಿ ಜಿಎಸ್‌ಡಿಪಿ ಗೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ರಾಜಸ್ವದ ಪ್ಲವನತೆಯು ಧನಾತ್ಮಕವಾಗಿರುವುದನ್ನು (**ಕೋಷ್ಟಕ–2.3**) ತೋರಿಸಿದೆ. 2021–23ರಲ್ಲಿ ಸ್ಥಿರವಾಗಿದ್ದ ರಾಜ್ಯದ ಸ್ವಂತ ರಾಜಸ್ವದ ಪ್ಲವನತೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜ್ಯದ ಸ್ವಂತ ರಾಜಸ್ವದ ವೃದ್ಧಿಯ ದರದಲ್ಲಿನ ಇಳಿಕೆಯಿಂದಾಗಿ 2023–24ರಲ್ಲಿ ಕುಸಿತ ಕಂಡಿದೆ.

### *2.4.3 ರಾಜ್ಯದ ಸ್ವಂತ ಸಂಪನ್ಮೂಲಗಳು*

ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಡೀಕರಿಸುವಲ್ಲಿ ರಾಜ್ಯದ ಸಾಧನೆಯನ್ನು ಅದರ ಸ್ವಂತ ತೆರಿಗೆ ಮತ್ತು ತೆರಿಗೆಯೇತರ ಮೂಲಗಳ ಆದಾಯವನ್ನು ಒಳಗೊಂಡಿರುವ ಸ್ವಂತ ಸಂಪನ್ಮೂಲಗಳ ಪರಿಭಾಷೆಯಲ್ಲಿ ಪರಿಗಣಿಸಬೇಕಾಗುತ್ತದೆ.

2019–20 ರಿಂದ 2023–24ರ ಅವಧಿಯಲ್ಲಿ ಪ್ರಮುಖ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವಕ್ಕೆ ಸಂಬಂಧಿಸಿದಂತೆ ಒಟ್ಟು ಸಂಗ್ರಹಗಳು ಮತ್ತು ಜಿಎಸ್‌ಡಿಪಿ ದಲ್ಲಿ ಅದರ ಸಾಪೇಕ್ಷ ಪಾಲನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

#### 2.4.3.1 ಸ್ವಂತ ತೆರಿಗೆ ಆದಾಯ

2019–20 ರಿಂದ 2023–24ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆಯ ರಾಜಸ್ವದ ಪ್ರವೃತ್ತಿಯನ್ನು **ನಕ್ಷೆ–2.6** ಮತ್ತು **ನಕ್ಷೆ–2.7**ರಲ್ಲಿ ನೀಡಲಾಗಿದೆ.

**ನಕ್ಷೆ–2.6: 2019–20 ರಿಂದ 2023–24ರ ಅವಧಿಯಲ್ಲಿ ಸ್ವಂತ ತೆರಿಗೆ ರಾಜಸ್ವದ ಪ್ರವೃತ್ತಿ**



**ನಕ್ಷೆ–2.7: 2019–20 ರಿಂದ 2023–24ರ ಅವಧಿಯಲ್ಲಿ ಸ್ವಂತ ತೆರಿಗೆ ರಾಜಸ್ವದ ಹೆಚ್ಚಳ/ಇಳಿಕೆ**




*ಆಕರ: ಹಣಕಾಸು ಲೆಕ್ಕಗಳು*

2019–20 ರಿಂದ 2023–24ರ ಅವಧಿಯಲ್ಲಿ ಸಂಗ್ರಹಿಸಲಾದ ರಾಜ್ಯದ ಸ್ವಂತ ತೆರಿಗೆಯ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.4** ಮತ್ತು **ನಕ್ಷೆ–2.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.4: 2019–20 ರಿಂದ 2023–24ರ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಘಟಕಗಳು**

(₹ ಕೋಟಿಗಳಲ್ಲಿ)

| ರಾಜಸ್ವ ಸ್ವಂತ ತೆರಿಗೆ ಆದಾಯದ ಘಟಕಗಳು | | | | | | |
|---|---|---|---|---|---|---|
| ಆದಾಯ ಶೀರ್ಷಿಕೆ | 2019–20 | 2020–21 | 2021–22 | 2022–23 | 2023–24 | ಸ್ಪಾರ್ಕ್ ಲೈನ್ |
| ಮಾರಾಟ, ವ್ಯಾಪಾರ ಮೇಲಿನ ತೆರಿಗೆ ಇತ್ಯಾದಿ | 16,424 | 16,028 | 19,274 | 19,082 | 20,811 | |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 42,147 | 37,711 | 49,929 | 61,403 | 71,041 | |
| ರಾಜ್ಯ ಅಬಕಾರಿ | 21,584 | 23,332 | 26,378 | 29,920 | 34,629 | |
| ವಾಹನಗಳ ಮೇಲಿನ ತೆರಿಗೆ | 6,763 | 5,607 | 6,915 | 10,611 | 11,287 | |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 11,308 | 10,576 | 14,020 | 17,726 | 20,147 | |
| ಭೂ ಕಂದಾಯ | 203 | 184 | 181 | 364 | 860 | |
| ಇತರೆ ತೆರಿಗೆಗಳು | 3,934 | 3,614 | 4,042 | 4,596 | 4,730 | |
| ಒಟ್ಟು | **1,02,363** | **97,052** | **1,20,739** | **1,43,702** | **1,63,505** | |

*ಆಕರ: ಹಣಕಾಸು ಲೆಕ್ಕಗಳು*

ರಾಜ್ಯದ ಸ್ವಂತ ತೆರಿಗೆ ರಾಜಸ್ವವು 2022–23ರಲ್ಲಿದ್ದ ₹1,43,702 ಕೋಟಿಯಿಂದ 2023–24ರಲ್ಲಿ ₹1,63,505 ಕೋಟಿಗೆ ಏರಿಕೆಯಾಗಿ ₹19.803 ಕೋಟಿಯಷ್ಟು ಹೆಚ್ಚಿದೆ. ಕೋವಿಡ್ 19 ಸಾಂಕ್ರಾಮಿಕ ರೋಗವು ಹೇರಿದ ಲಾಕ್‌ಡೌನ್‌ನಿಂದಾಗಿ 2020–21ರ ಅವಧಿಯಲ್ಲಿ ಸ್ವಂತ–ತೆರಿಗೆ ಆದಾಯದ ವೃದ್ಧಿಯ ದರ ಕಡಿಮೆಯಾಗಿದೆ. ಪ್ರಸಕ್ತ ವರ್ಷದಲ್ಲಿ, ಸರಕು ಮತ್ತು ಸೇವಾ ತೆರಿಗೆ (ಶೇಕಡಾ 43), ರಾಜ್ಯ ಅಬಕಾರಿ (ಶೇಕಡಾ 21), ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಗಳು (ಶೇಕಡಾ 13) ಮತ್ತು ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು (ಶೇಕಡಾ 12) ತೆರಿಗೆ ಆದಾಯದ ಪ್ರಮುಖ ಕೊಡುಗೆಗಳಾಗಿವೆ.

**(ಎ) ರಾಜ್ಯ ಸರಕು ಮತ್ತು ಸೇವಾ ತೆರಿಗೆ**

2022–23 ಮತ್ತು 2023–24ರ ಅವಧಿಯಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ರಾಜಸ್ವದ ನೈಜ ಸಂಗ್ರಹವನ್ನು **ಕೋಷ್ಟಕ–2.5**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.5: ಕರ್ನಾಟಕ ಸರ್ಕಾರದ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 2022–23 | 2023–24 | ಹೆಚ್ಚಳ/ ಇಳಿಕೆ |
|---|---|---|---|
| **ತೆರಿಗೆ** | 30,315 | 36,258 | 5,943 |
| **ಸಮಗ್ರ ಸರಕು ಮತ್ತು ಸೇವಾ ತೆರಿಗೆಯಿಂದ ತೆರಿಗೆಗಳ ಮುಂಗಡ ಹಂಚಿಕೆ** | 2,090 | (–) 798 | (–)2,888 |
| **ಇತರೆ** | 28,998 | 35,581 | 6,583 |
| **ಒಟ್ಟು ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆ** | **61,403** | **71,041** | **9,638** |

*ಆಕರ: ಹಣಕಾಸು ಲೆಕ್ಕಗಳು*

2023–24ರಲ್ಲಿ, ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆಗಳು ₹71,041 ಕೋಟಿಗಳಾಗಿದ್ದು, 2022–23ಕ್ಕಿಂತ ₹9,638 ಕೋಟಿಗಳಷ್ಟು (ಶೇಕಡಾ 15.70) ಹೆಚ್ಚಳವಾಗಿದೆ. ಆದರೆ, ₹76,150 ಕೋಟಿಯ ಆಯವ್ಯಯ ಅಂದಾಜಿಗೆ ಹೋಲಿಸಿದರೆ ಶೇಕಡಾ 7.19ರಷ್ಟು ಕಡಿಮೆಯಾಗಿದೆ. ಇದು (–)₹798 ಕೋಟಿ ಮೊತ್ತದ ಸಮಗ್ರ ಸರಕು ಮತ್ತು ಸೇವಾ ತೆರಿಗೆಯಿಂದ ಮುಂಗಡ ಹಂಚಿಕೆಯನ್ನು ಒಳಗೊಂಡಿತ್ತು. ಜೊತೆಗೆ, ರಾಜ್ಯವು ಸಿಜಿಎಸ್‌ಟಿಯಿಂದ ನಿವ್ವಳ ಆದಾಯದ ಪಾಲು ₹12,501 ಕೋಟಿಯನ್ನು ಪಡೆದುಕೊಂಡಿದೆ. ಆದ್ದರಿಂದ, 2023–24ರಲ್ಲಿ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಅಡಿಯಲ್ಲಿ ಒಟ್ಟು ಸ್ವೀಕೃತಿಗಳು ₹83,543[7] ಕೋಟಿಗಳಾಗಿವೆ. 2023–24ರ ಅವಧಿಯಲ್ಲಿ ಜಿಎಸ್‌ಟಿ ಜಾರಿಯಿಂದ ಉಂಟಾದ ಆದಾಯ ನಷ್ಟದ ಲೆಕ್ಕದಲ್ಲಿ ರಾಜ್ಯವು ₹1,191 ಕೋಟಿ ಪರಿಹಾರವನ್ನು ಪಡೆದುಕೊಂಡಿದೆ.

**(ಬಿ) ರಾಜಸ್ವ ಬಾಕಿ ಮತ್ತು ನಿರ್ಧಾರಿತ ಬಾಕಿಗಳ ವಿಶ್ಲೇಷಣೆ**

ರಾಜಸ್ವ ಬಾಕಿಯು ಸರ್ಕಾರಕ್ಕೆ ಪಾವತಿಸಬೇಕಾದ ರಾಜಸ್ವದ ವಿಳಂಬವನ್ನು ಸೂಚಿಸುತ್ತದೆ. ಹಾಗೆಯೇ, ನಿರ್ಧಾರಿತ ಬಾಕಿಗಳು ವಿಳಂಬಿತ ನಿರ್ಧರಣೆಯಿಂದ ನಿರ್ಬಂಧಿತವಾದ ಸಂಭಾವ್ಯ ಆದಾಯವನ್ನು ಸೂಚಿಸುತ್ತವೆ. ಇವೆರಡೂ ರಾಜ್ಯದ ಸಂಭಾವ್ಯ ಆದಾಯ ಸ್ವೀಕೃತಿಗಳನ್ನು ಕಸಿದುಕೊಳ್ಳುತ್ತವೆ ಮತ್ತು ಅಂತಿಮವಾಗಿ ರಾಜಸ್ವ ಕೊರತೆಯ ಮೇಲೆ ಪರಿಣಾಮ ಬೀರುತ್ತವೆ.

**(ಸಿ) ರಾಜಸ್ವ ಬಾಕಿ**

31 ಮಾರ್ಚ್ 2024ರಲ್ಲಿದ್ದಂತೆ, ಆದಾಯದ ಪ್ರಮುಖ ಶೀರ್ಷಿಕೆಗಳಾದ ಮಾರಾಟ, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯವರ್ಧಿತ ತೆರಿಗೆ ಮುಂತಾದವುಗಳು (₹13,937.44 ಕೋಟಿ) ಮತ್ತು ಸರಕು

[7] ಪ್ರಧಾನ ಶೀರ್ಷಿಕೆ 0005 – ಸಿಜಿಎಸ್‌ಟಿ (₹ 12,501.46 ಕೋಟಿ), 0006 – ಎಸ್‌ಜಿಎಸ್‌ಟಿ (₹ 71,041.45 ಕೊಟಿ) ಮತ್ತು 0008 – ಐಜಿಎಸ್‌ಟಿ (ಇಲ್ಲ)

ಮತ್ತು ಸೇವಾ ತೆರಿಗೆ (₹16,082.29 ಕೋಟಿ) ಗಳ ಒಟ್ಟು ₹30,019.73 ಕೋಟಿಗಳು **ಕೋಷ್ಟಕ–2.6**ರಲ್ಲಿ ತೋರಿಸಿದಂತೆ ಬಾಕಿ ಇವೆ.

**ಕೋಷ್ಟಕ–2.6: ಆದಾಯದ ಬಾಕಿಗಳು**

(₹ ಕೋಟಿಗಳಲ್ಲಿ)

| ಕ್ರ. ಸಂ. | ರಾಜಸ್ವದ ಲೆಕ್ಕ ಶೀರ್ಷಿಕೆ | 31 ಮಾರ್ಚ್ 2024 ರಂತೆ ಬಾಕಿ ಉಳಿದಿರುವ ಮೊತ್ತ | 31 ಮಾರ್ಚ್ 2024 ರಂತೆ ಐದು ವರ್ಷಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿರುವ ಮೊತ್ತ |
|---|---|---|---|
| 1 | ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಗಳು/ ಮೌಲ್ಯವರ್ಧಿತ ತೆರಿಗೆ | 13,937.44 | – |
| 2 | ಸರಕು ಮತ್ತು ಸೇವಾ ತೆರಿಗೆ | 16,082.29 | – |
| | ಒಟ್ಟು | **30,019.73** | – |

*ಆಕರ: ಇಲಾಖಾ ಮಾಹಿತಿ*

**(ಡಿ) ಇಲಾಖೆಯು ಪತ್ತೆಹಚ್ಚಿದ ತೆರಿಗೆ ವಂಚನೆ, ವಾಪಸಾತಿ ಇತ್ಯಾದಿ, ಪ್ರಕರಣಗಳು**

ಪತ್ತೆ ಹಚ್ಚಿದ ತೆರಿಗೆ ವಂಚನೆ ಪ್ರಕರಣಗಳು, ಅಂತಿಮಗೊಳಿಸಿದ ಪ್ರಕರಣಗಳು, ಹೆಚ್ಚುವರಿ ತೆರಿಗೆ ತಗಾದೆಗಳು ರಾಜ್ಯ ಸರ್ಕಾರದ ಆದಾಯ ಸಂಗ್ರಹಣೆಯ ಪ್ರಯತ್ನಗಳ ಸೂಚಕಗಳಾಗಿವೆ. ವಾಪಸಾತಿ ಪ್ರಕರಣಗಳ ಇತ್ಯರ್ಥದಲ್ಲಿನ ಶೀಘ್ರತೆಯು ಸಂಬಂಧಿತ ಇಲಾಖೆಯ ಕಾರ್ಯನಿರ್ವಹಣೆಯ ಮುಖ್ಯ ಸೂಚಕವಾಗಿದೆ.

ಸಂಬಂಧಿತ ಇಲಾಖೆಗಳು ವರದಿ ಮಾಡಿರುವಂತೆ ಪತ್ತೆ ಹಚ್ಚಿದ ಅಬಕಾರಿ ಮತ್ತು ತೆರಿಗೆ ವಂಚನೆ ಪ್ರಕರಣಗಳು ಮತ್ತು 2023–24ರಲ್ಲಿ ಇತ್ಯರ್ಥವಾದ ಮತ್ತು ವಿಧಿಸಿದ ಹೆಚ್ಚುವರಿ ತೆರಿಗೆ ಪ್ರಕರಣಗಳ ವಿವರಗಳನ್ನು **ಕೋಷ್ಟಕ–2.7**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.7: ಪತ್ತೆಹಚ್ಚಿದ ತೆರಿಗೆ ವಂಚನೆ**

| ಕ್ರ. ಸಂ. | ಆದಾಯ ಶೀರ್ಷಿಕೆ | 31 ಮಾರ್ಚ್ 2023 ರಂದು ಬಾಕಿ ಇದ್ದ ಪ್ರಕರಣಗಳು | 2023–24ರಲ್ಲಿ ಪತ್ತೆಹಚ್ಚಿದ ಪ್ರಕರಣಗಳು | ಒಟ್ಟು | ದಂಡ ಇತ್ಯಾದಿಗಳನ್ನು ವಿಧಿಸಿ ನಿರ್ಧರಣೆ/ತಪಾಸಣೆ ಮುಗಿದ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2024 ರಂದು ಇತ್ಯರ್ಥವಾಗದೆ ಉಳಿದ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ನಿರ್ಧರಣೆಯ ಮೊತ್ತ (₹ಕೋಟಿಯಲ್ಲಿ) | |
| 1 | ಸರಕು ಮತ್ತು ಸೇವಾ ತೆರಿಗೆ | 6,180 | 15,757 | 21,937 | 11,744 | 3,257.26 | 10,193 |

*ಆಕರ: ಇಲಾಖಾ ಮಾಹಿತಿ*

2023–24ರಲ್ಲಿ ಜಿಎಸ್‌ಟಿ ಮತ್ತು ತೆರಿಗೆ/ ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ₹4,986.46 ಕೋಟಿ ಮತ್ತು ₹156.93 ಕೋಟಿಯನ್ನು ವಾಪಸ್ಸು ಮಾಡಲಾಗಿದೆ.

**2.4.3.2 ತೆರಿಗೆಯೇತರ ರಾಜಸ್ವ**

ತೆರಿಗೆಯೇತರ ಸ್ವೀಕೃತಿಗಳನ್ನು (ಶುಲ್ಕಗಳು, ಬಳಕೆದಾರರ ಶುಲ್ಕಗಳು, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಆದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಮೂಲಗಳು ಬಾಕಿ ಉಳಿದಿರುವ ಮುಂಗಡಗಳಿಂದ ಬಡ್ಡಿ ಸ್ವೀಕೃತಿಗಳು, ಲಾಭಾಂಶಗಳು ಮತ್ತು ಈಕ್ವಿಟಿ ಹೂಡಿಕೆಗಳಿಂದ ಲಾಭಗಳು, ಖನಿಜಗಳು, ಅರಣ್ಯಗಳು ಮತ್ತು ವನ್ಯಜೀವಿಗಳಂತಹ ಆಸ್ತಿಗಳ ಸುಫರ್ದುದಾರನಾಗಿ ಅಂತಹ ಆಸ್ತಿಗಳ ಬಳಕೆಗೆ ಅವಕಾಶ ನೀಡುವ ರಾಯಧನ ಶುಲ್ಕಗಳು ಅಥವಾ ಅಂತಹ ಸೇವೆಗಳು ಮತ್ತು ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಪಡೆದ ಬಳಕೆದಾರರ ಶುಲ್ಕಗಳು ಮುಂತಾದ ವಿತ್ತೀಯ ಸೇವೆಗಳಿಂದಾದ ಸ್ವೀಕೃತಿಗಳನ್ನು ಒಳಗೊಂಡಿವೆ,.

2019–20ರಲ್ಲಿ ರಾಜಸ್ವ ಸ್ವೀಕೃತಿಯಲ್ಲಿ ತೆರಿಗೆಯೇತರ ರಾಜಸ್ವದ ಪಾಲು ಶೇಕಡಾ ನಾಲ್ಕರಷ್ಟಿದ್ದರೆ, 2020–21ರ ಲ್ಲಿ ಇದು ಶೇಕಡಾ ಐದು ಮತ್ತು 2021–22 ರಿಂದ ಆರಕ್ಕೆ ಏರಿತು. ಮೌಲ್ಯದನ್ವಯ, ತೆರಿಗೆಯೇತರ ಆದಾಯವು 2022–23ರಲ್ಲಿದ್ದ ₹13,914 ಕೋಟಿಯಿಂದ 2023–24ರಲ್ಲಿ ₹13,117 ಕೋಟಿಗಳಾಗಿ ₹797 ಕೋಟಿಗಳಷ್ಟು ಕಡಿಮೆಯಾಗಿದೆ. ಹಿಂದಿನ ವರ್ಷಗಳ ವಿವಿಧ ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಎಸ್‌ಎಫ್‌ಎಆರ್‌ಗಳಲ್ಲಿನ ಅವಲೋಕನಗಳನ್ನು ಗಮನಿಸಿದ ಹಣಕಾಸು ನಿರ್ವಹಣೆ ಪರಿಶೀಲನಾ ಸಮಿತಿಯು ಎಫ್‌ಎಂಆರ್‌ಸಿಯು 2023–24ರ ಹಣಕಾಸು ವರ್ಷದಲ್ಲಿ ಎಲ್ಲಾ ಪ್ರಮುಖ ತೆರಿಗೆಯೇತರ ಆದಾಯ ಮೂಲಗಳನ್ನು ಪರಿಶೀಲಿಸಲು ಮತ್ತು ಹಲವು ವರ್ಷಗಳಿಂದ ಪರಿಷ್ಕರಿಸದ ಬಳಕೆದಾರರ ಶುಲ್ಕಗಳನ್ನು ಪರಿಷ್ಕರಿಸಲು (ಫೆಬ್ರವರಿ 2023) ಆರ್ಥಿಕ ಇಲಾಖೆಗೆ ಸೂಚಿಸಿತು.

ಹದಿನೈದನೆಯ ಹಣಕಾಸು ಆಯೋಗವು ಬಳಕೆದಾರರ ಶುಲ್ಕಗಳ ಮೇಲೆ ಗಮನಹರಿಸಬೇಕು ಮತ್ತು ಈ ಆದಾಯಗಳು ರಾಜ್ಯದ ಜಿಎಸ್‌ಡಿಪಿಯ ವೃದ್ಧಿಯೊಂದಿಗೆ ಸಮಗತಿಯನ್ನು ಹೊಂದಿರಬೇಕು ಎಂದು ಗಮನಿಸಿದೆ. ರಾಜ್ಯದ ವೆಚ್ಚ ಸುಧಾರಣಾ ಆಯೋಗವು ತನ್ನ ನಾಲ್ಕನೇ ವರದಿಯಲ್ಲಿ (ಜೂನ್ 2021) ಸರ್ಕಾರವು ಬಳಕೆದಾರರ ಶುಲ್ಕಗಳ ಬಗ್ಗೆ ಸ್ಪಷ್ಟವಾದ ನೀತಿಯನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದೆ. ಈ ನಿಟ್ಟಿನಲ್ಲಿ, ಆರ್ಥಿಕ ಇಲಾಖೆಯು ಮಾರ್ಚ್ 2022 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಹಣಕಾಸು ನಿರ್ವಹಣೆ ಪರಿಶೀಲನಾ ಸಮಿತಿಗೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ನೀಡಿದ ಉತ್ತರದಲ್ಲಿ (ಅಕ್ಟೋಬರ್ 2024) ಈ ಕೆಳಗಿನವುಗಳನ್ನು ಹೇಳಿದೆ:

- ತೆರಿಗೆಯೇತರ ಆದಾಯದ ಬೆಳವಣಿಗೆಯನ್ನು, ವ್ಯಾಪಕವಾದ ತೆರಿಗೆಯ ತಳಹದಿ ಮತ್ತು ಸಂಭಾವ್ಯ ಸೇವೆಗಳನ್ನು ಹೊಂದಿರುವ ತೆರಿಗೆಯ ಆದಾಯದೊಂದಿಗೆ ಹೋಲಿಸಲಾಗುವುದಿಲ್ಲ.
- ಅರಣ್ಯ, ಆಸ್ಪತ್ರೆ, ತೋಟಗಾರಿಕೆ ಇಲಾಖೆಗಳು ಇತ್ಯಾದಿಗಳ ಬಳಕೆದಾರರ ಶುಲ್ಕವನ್ನು ಆಯಾ ಇಲಾಖೆಗಳು ಬಳಸಿಕೊಂಡಿವೆಯಾದ್ದರಿಂದ ಅವು ರಾಜ್ಯದ ಸಂಚಿತ ನಿಧಿಯ ಭಾಗವಾಗುವುದಿಲ್ಲ.
- ಶುಲ್ಕಗಳ ಪರಿಷ್ಕರಣೆಗೆ ಉಪಕ್ರಮವನ್ನು ಪ್ರಾರಂಭಿಸಲು ಇಲಾಖೆಗಳಿಗೆ ಮತ್ತೊಮ್ಮೆ (ಅಕ್ಟೋಬರ್ 2023) ವಿನಂತಿಸಲಾಗಿದೆ.
- ರಾಜಸ್ವ ಸ್ವೀಕೃತಿಗಳ ಕುರಿತು ಅಧ್ಯಯನ ನಡೆಸಲು ಮತ್ತು ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳ ಉತ್ಪಾದನೆಯನ್ನು ಹೆಚ್ಚಿಸುವ ಮಾರ್ಗಗಳನ್ನು ಸೂಚಿಸಲು ಸಲಹಾ ತಂಡವನ್ನು ನೇಮಿಸಲಾಗಿದೆ.

ರಾಜ್ಯ ಸರ್ಕಾರದ ಉತ್ತರಕ್ಕೆ ವ್ಯತಿರಿಕ್ತವಾಗಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಸಂಗ್ರಹಿಸಲಾಗಿದ್ದ ₹7.57 ಕೋಟಿ ಬಳಕೆದಾರರ ಶುಲ್ಕವನ್ನು ಅರಣ್ಯೀಕರಣ ಕಾಮಗಾರಿಗೆ ಬಳಸದೆ ಬ್ಯಾಂಕ್ (ಚಾಲ್ತಿ) ಖಾತೆಯಲ್ಲಿ ಇಡಲಾಗಿದೆ. ಇದರಿಂದ, ಬಳಕೆದಾರರ ಶುಲ್ಕವನ್ನು ಇಲಾಖೆಯೊಂದಿಗೆ ಉಳಿಸಿಕೊಂಡಿರುವುದು ಅದರ ಉದ್ದೇಶವನ್ನು ಪೂರೈಸಲಿಲ್ಲ ಮತ್ತು ತೆರಿಗೆಯೇತರ ಆದಾಯವನ್ನು ಕಡಿಮೆ ತೋರಿಸುವಲ್ಲಿ ಕಾರಣವಾಯಿತು.

ಹೆಚ್ಚುವರಿಯಾಗಿ, **ಕಂಡಿಕೆ–4.2**ರಲ್ಲಿ ಚರ್ಚಿಸಿದಂತೆ, ಸರ್ಕಾರದ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು ರಾಜ್ಯದ ಸಂಚಿತ ನಿಧಿಗೆ ಪಾವತಿಸಲು ಆರ್ಥಿಕ ಇಲಾಖೆಯು ಎಲ್ಲಾ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿದ್ದರೂ, 64 ಸಂಸ್ಥೆಗಳು/ಸರ್ಕಾರಿ ಕಂಪನಿಗಳು/ಕಾರ್ಪೋರೇಷನ್‌ಗಳು 2020–21 ರಿಂದ 2023–24ರ ಅವಧಿಯಲ್ಲಿ ಗಳಿಸಿದ ₹14,549.91 ಕೋಟಿ ಮೊತ್ತವನ್ನು ಸರ್ಕಾರದ ಖಾತೆಗೆ ಪಾವತಿ ಜಮೆ ಮಾಡಲ್ಲಿಲ್ಲ.

2019–20 ರಿಂದ 2023–24ರ ಅವಧಿಯಲ್ಲಿ ಸಂಗ್ರಹಿಸಲಾದ ತೆರಿಗೆಯೇತರ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.8**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–2.8: ರಾಜ್ಯದ ತೆರಿಗೆಯೇತರ ಆದಾಯದ ಘಟಕಗಳು**

(₹ ಕೋಟಿಗಳಲ್ಲಿ)

| ರಾಜ್ಯದ ತೆರಿಗೆಯೇತರ ಆದಾಯದ ಘಟಕಗಳು | | | | | | |
|---|---|---|---|---|---|---|
| ರಾಜಸ್ವ ಶೀರ್ಷಿಕೆ | 2019–20 | 2020–21 | 2021–22 | 2022–23 | 2023–24 | ಸ್ಫುರಣೆ |
| ಬಡ್ಡಿ ಸ್ವೀಕೃತಿಗಳು | **895** | **920** | **1,315** | **1,377** | **1,493** | |
| ಲಾಭಾಂಶ ಮತ್ತು ಲಾಭಗಳು | **54** | **81** | **350** | **429** | **303** | |
| ಕಬ್ಬಿಣೇತರ ಗಣಿ ಮತ್ತು ಲೋಹದ ಉದ್ದಿಮೆ | **3,629** | **3,893** | **6,308** | **5,946** | **7,322** | |
| ಇತರೆ ತೆರಿಗೆಯೇತರ ಸ್ವೀಕೃತಿಗಳು | **3,103** | **3,000** | **3,804** | **6,162** | **3,999** | |
| ಎ. ವೈದ್ಯಕೀಯ ಮತ್ತು ಸಾಮಾನ್ಯ ಆರೋಗ್ಯ | 599 | 419 | 522 | 431 | 488 | |
| ಬಿ. ಇತರೆ ಆಡಳಿತಾತ್ಮಕ ಸೇವೆಗಳು | 305 | 388 | 417 | 1,156 | 570 | |
| ಸಿ. ಅರಣ್ಯೀಕರಣ ಮತ್ತು ವನ್ಯಜೀವಿ | 267 | 276 | 281 | 325 | 423 | |
| ಡಿ. ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ | 183 | 175 | 287 | 178 | 168 | |
| ಇ. ಪೋಲಿಸ್ | 308 | 367 | 500 | 579 | 349 | |
| ಎಫ್. ರಸ್ತೆಗಳು ಮತ್ತು ಸೇತುವೆಗಳು | 71 | 50 | 60 | 25 | 8 | |
| ಜಿ. ಇತರೆ | 1,370 | 1,325 | 1,737 | 3,468 | 1,993 | |
| ಒಟ್ಟು | **7,681** | **7,894** | **11,777** | **13,914** | **13,117** | |

*ಆಕರ: ಹಣಕಾಸು ಲೆಕ್ಕಗಳು*

2023–24ನೇ ಸಾಲಿನಲ್ಲಿ, ಹಿಂದಿನ ವರ್ಷಕ್ಕಿಂತ ಒಟ್ಟು ತೆರಿಗೆಯೇತರ ಆದಾಯದಲ್ಲಿ ₹797 ಕೋಟಿ (ಶೇಕಡಾ 5.73) ಕಡಿಮೆಯಾಗಿದೆ, ಇದು ಮುಖ್ಯವಾಗಿ ಇತರ ತೆರಿಗೆಯೇತರ ಸ್ವೀಕೃತಿಗಳಾದ ಇತರೆ ಆಡಳಿತ ಸೇವೆಗಳು (₹586 ಕೋಟಿ) ಮತ್ತು ಇತರೆ (₹1,475 ಕೋಟಿ). ಕಬ್ಬಿಣೇತರ ಗಣಿ ಮತ್ತು ಲೋಹದ ಉದ್ಯಮೆ ಅಡಿಯಲ್ಲಿ 2021–22ರ ಅವಧಿಯಲ್ಲಿ ಗಣನೀಯವಾಗಿ ಹೆಚ್ಚಿದ್ದ ರಾಯಧನವು 2022–23ರ ಅವಧಿಯಲ್ಲಿ ಕಡಿಮೆಯಾಗಿ, ಇದು 2023–24ರಲ್ಲಿ ಮತ್ತೊಮ್ಮೆ ₹1,376 ಕೋಟಿಗಳಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕಿಂತ ಲಾಭಾಂಶ ಮತ್ತು ಲಾಭದ ಅಡಿಯಲ್ಲಿ ₹126 ಕೋಟಿ ಇಳಿಕೆಯಾಗಿದೆ.

### *2.4.4 ಕೇಂದ್ರದಿಂದ ವರ್ಗಾವಣೆಗಳು*

ಕೇಂದ್ರದಿಂದ ವರ್ಗಾವಣೆಯಲ್ಲಿ ಎರಡು ಪ್ರಕಾರಗಳಿವೆ, ಅವುಗಳೆಂದರೆ ಕೇಂದ್ರ ತೆರಿಗೆ ವರ್ಗಾವಣೆಗಳು ಮತ್ತು ಭಾರತ ಸರ್ಕಾರದಿಂದ ಅನುದಾನ. ಕೇಂದ್ರದಿಂದ ವರ್ಗಾವಣೆಯ ಪ್ರವೃತ್ತಿಯನ್ನು **ನಕ್ಷೆ–2.8**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.8: ಕೇಂದ್ರದಿಂದ ವರ್ಗಾವಣೆಯ ಪ್ರವೃತ್ತಿಗಳು**



**ಕೇಂದ್ರದಿಂದ ತೆರಿಗೆ ವರ್ಗಾವಣೆ**

ಕೇಂದ್ರ ತೆರಿಗೆಗಳು ಮತ್ತು ಕಾರ್ಪೊರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು ಮುಂತಾದ ಸುಂಕಗಳಲ್ಲಿ ರಾಜ್ಯ ಸರ್ಕಾರದ ಪಾಲನ್ನು ಭಾರತ ಸರ್ಕಾರವು ವರ್ಗಾಯಿಸುತ್ತದೆ. 2019–20 ರಿಂದ 2023–24ರವರೆಗಿನ ಈ ತೆರಿಗೆ ವರ್ಗಾವಣೆಗಳಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ–2.10**ರಲ್ಲಿ ತೋರಿಸಲಾಗಿದೆ.

ಹದಿನೈದನೆಯ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳ ನಿವ್ವಳ ಆದಾಯದಲ್ಲಿ ರಾಜ್ಯದ ಪಾಲನ್ನು 3.647 ಪ್ರತಿಶತಕ್ಕೆ ನಿಗದಿಪಡಿಸಲು ಶಿಫಾರಸು ಮಾಡಿದೆ. 2015–16 ರಿಂದ 2023–24ರ ಅವಧಿಯಲ್ಲಿ ಹದಿನಾಲ್ಕನೆಯ ಹಣಕಾಸು ಆಯೋಗ ಮತ್ತು ಹದಿನೈದನೆಯ ಹಣಕಾಸು ಆಯೋಗಯಿಂದ ಮಾಡಲಾದ ಪ್ರಕ್ಷೇಪಗಳಿಗೆ ಪ್ರತಿಯಾಗಿ ರಾಜ್ಯ ಸರ್ಕಾರಕ್ಕೆ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ನೈಜ ಬಿಡುಗಡೆಯನ್ನು **ಕೋಷ್ಟಕ–2.9**ರಲ್ಲಿ ಪಟ್ಟಿಮಾಡಲಾಗಿದೆ.

**ಕೋಷ್ಟಕ–2.9: ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಹಣಕಾಸು ಆಯೋಗಗಳ ಪ್ರಕ್ಷೇಪಗಳಿಗೆ ಪ್ರತಿಯಾಗಿ ನೈಜ ಬಿಡುಗಡೆ**

(₹ ಕೋಟಿಗಳಲ್ಲಿ)

| ವರ್ಷ | ಹಣಕಾಸು ಆಯೋಗದ ಪ್ರಕ್ಷೇಪಣೆಗಳು | ಹಣಕಾಸು ಆಯೋಗದ ವರದಿಯಲ್ಲಿನ ಪ್ರಕ್ಷೇಪಣೆಗಳು | ನೈಜ ತೆರಿಗೆ ಬಿಡುಗಡೆ | ವ್ಯತ್ಯಾಸ |
|---|---|---|---|---|
| 2015–16 | ಪಾಲು ಮಾಡಬಹುದಾದ ಎಲ್ಲ ತೆರಿಗೆಗಳ ನಿವ್ವಳ ಗಳಿಕೆಯಲ್ಲಿ ಕರ್ನಾಟಕದ ಪಾಲು ಶೇಕಡಾ 4.713 ಮತ್ತು ಪಾಲು ಮಾಡಬಹುದಾದ ಸೇವಾ ತೆರಿಗೆಯ ಶೇಕಡಾ 4.822 | 27,419 | 23,983 | (–)3,436 |
| 2016–17 | | 31,641 | 28,760 | (–)2,881 |
| 2017–18 | | 36,563 | 31,752 | (–)4,811 |
| 2018–19 | | 42,303 | 35,895 | (–)6,408 |
| 2019–20 | | 48,999 | 30,919 | (–)18,080 |
| **ಹದಿನಾಲ್ಕನೆಯ ಹಣಕಾಸು ಆಯೋಗದ ಒಟ್ಟು** | | **1,86,925** | **1,51,309** | **(–)35,616** |
| 2020–21 | ತೆರಿಗೆಗಳ ನಿವ್ವಳ ಗಳಿಕೆಯಲ್ಲಿ ಕರ್ನಾಟಕದ ಪಾಲು 2020–21 ಮತ್ತು 2021–26ರಲ್ಲಿ ಕ್ರಮವಾಗಿ ಶೇಕಡಾ 3.646 ಮತ್ತು 3.647 | 31,180 | 21,694 | (–)9,486 |
| 2021–22 | | 24,019 | 33,284 | 9,265 |
| 2022–23 | | 26,719 | 34,596 | 7,877 |
| 2023–24 | | 30,065 | 41,193 | 11.128 |

**ಕೋಷ್ಟಕ–2.9**ರಲ್ಲಿ ನೋಡಿದಂತೆ, ರಾಜ್ಯಕ್ಕೆ ನೈಜವಾದ ಸ್ವೀಕೃತಿಗಳು ಹದಿನೈದನೆಯ ಹಣಕಾಸು ಆಯೋಗ ದಿಂದ ಮಾಡಿದ ಪ್ರಕ್ಷೇಪಗಳಿಗಿಂತ ಕಡಿಮೆಯಾಗಿದೆ, ಆದರೆ ಹದಿನೈದನೆಯ ಹಣಕಾಸು ಆಯೋಗ ಅವಧಿಯಲ್ಲಿ (2023–24ರವರೆಗೆ), ಬಿಡುಗಡೆಗಳು ಪ್ರಕ್ಷೇಪಣಗಳಿಗಿಂತ ಹೆಚ್ಚಾಗಿದೆ.

**ಕೋಷ್ಟಕ–2.10: ಕೇಂದ್ರ ತೆರಿಗೆ ವರ್ಗಾವಣೆಯ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| **ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ)** | 8,773.82 | 6,236.01 | 9,158.36 | 9,786.19 | 12,501.46 |
| **ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ)** | – | – | – | – | – |
| **ಕಾರ್ಪೊರೇಶನ್ ತೆರಿಗೆ** | 10,542.17 | 6,656.01 | 9,823.19 | 11,574.64 | 12,364.18 |
| **ಕಾರ್ಪೊರೇಶನ್ ತೆರಿಗೆ ಹೊರತುಪಡಿಸಿ ಆದಾಯ ತೆರಿಗೆಗಳು** | 8,260.51 | 6,837.75 | 9,623.93 | 11,335.59 | 14,279.02 |
| **ಸೀಮಾ ಸುಂಕ** | 1,959.84 | 1,110.05 | 2,573.81 | 1,361.47 | 1,443.54 |

| ಶೀರ್ಷಿಕೆ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಕೇಂದ್ರ ಅಬಕಾರಿ ಸುಂಕಗಳು | 1,362.62 | 714.26 | 1,539.33 | 427.12 | 546.27 |
| ಸೇವಾ ತೆರಿಗೆ | – | 119.03 | 528.33 | 54.17 | 7.66 |
| ಸಂಪತ್ತಿನ ಮೇಲಿನ ತೆರಿಗೆಗಳು | 0.46 | – | 2.63 | – | – |
| ಆದಾಯ ಮತ್ತು ವೆಚ್ಚದ ಮೇಲಿನ ಇತರೆ ತೆರಿಗೆಗಳು | – | – | 0.07 | – | – |
| ಇತರೆ ತೆರಿಗೆಗಳು ಮತ್ತು ಸುಂಕಗಳು ಮತ್ತು ಸರಕುಗಳು ಮತ್ತು ಸೇವೆಗಳು | 19.58 | 21.00 | 33.93 | 57.00 | 51.00 |
| ಒಟ್ಟು | **30,919.00** | **21,694.00** | **33,284.00** | **34,596.00** | **41,193.00** |
| ಹಿಂದಿನ ವರ್ಷದ ಮೇಲೆ ವೃದ್ಧಿಯ ಶೇಕಡಾ | (–)13.86 | (–)29.84 | 53.42 | 3.94 | 19.07 |
| ರಾಜಸ್ವ ಸ್ವೀಕೃತಿಗಳಿಗೆ ಕೇಂದ್ರ ತೆರಿಗೆ ವರ್ಗಾವಣೆಯ ಶತಾಂಶ | 17.62 | 13.84 | 17.00 | 15.10 | 17.65 |

*ಆಕರ: ಹಣಕಾಸು ಲೆಕ್ಕಗಳು*

2023–24ರ ಅವಧಿಯಲ್ಲಿ, ಕೇಂದ್ರ ತೆರಿಗೆಗಳು ಮತ್ತು ಸುಂಕಗಳ ವಿಭಜಿಸಬಹುದಾದ ಮೊತ್ತದಲ್ಲಿ ರಾಜ್ಯದ ಒಟ್ಟು ಪಾಲು ₹41,192.63[8] ಕೋಟಿಗಳಷ್ಟಿತ್ತು.

### *2.4.5 ಭಾರತ ಸರ್ಕಾರದ ಸಹಾಯಾನುದಾನ*

2022–23 ಹೊರತುಪಡಿಸಿ 2020–21 ರಿಂದ 2023–24ರವರೆಗೆ ಭಾರತ ಸರ್ಕಾರದಿಂದ ಸಹಾಯಧನವು ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು. ಈ ಅವಧಿಯಲ್ಲಿ ಅದು 23.05ರಷ್ಟು ಹೆಚ್ಚಾಗಿದೆ. ಆದಾಗ್ಯೂ, 2023–24ರಲ್ಲಿ ಇದು **ಕೋಷ್ಟಕ–2.11**ರಲ್ಲಿ ತೋರಿಸಿರುವಂತೆ ₹21,340 ಕೋಟಿಗಳಷ್ಟು (ಶೇಕಡಾ 57.88) ಕಡಿಮೆಯಾಗಿದೆ.

**ಕೋಷ್ಟಕ–2.11: ಭಾರತ ಸರ್ಕಾರದಿಂದ ಸಹಾಯಾನುದಾನ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು | 12,214 | 9,852 | 12,659 | 11,629 | 9,866 |
| ಇತರೆ ವರ್ಗಾವಣೆಗಳು/ ರಾಜ್ಯಗಳಿಗೆ ಅನುದಾನಗಳು[9] | 17,593 | 14,667 | 11,064 | 21,744 | 1,893 |
| ಹಣಕಾಸು ಆಯೋಗದ ಅನುದಾನಗಳು | 4,673 | 5,557 | 6,239 | 3,495 | 3,769 |
| **ಒಟ್ಟು** | **34,480** | **30,076** | **29,962** | **36,868** | **15,528** |
| ಹಿಂದಿನ ವರ್ಷಕ್ಕಿಂತ ಹೆಚ್ಚಳ/ಕಡಿಮೆ ಶೇಕಡಾವಾರು | 35.32 | (–)12.77 | (–)0.38 | 23.05 | (–)57.88 |
| ಸಹಾಯಾನುದಾನ ರಾಜಸ್ವ ಸ್ವೀಕೃತಿಗಳ ಶೇಕಡಾವಾರು | 19.65 | 19.19 | 15.31 | 16.09 | 6.65 |

*ಆಕರ: ಹಣಕಾಸು ಲೆಕ್ಕಗಳು*

---

[8] ಒಟ್ಟು ₹ 41,192.63 ಕೋಟಿಗಳ ಪ್ರಕ್ಷೇಪಗಳಲ್ಲಿ ಕಾರ್ಪೊರೇಷನ್ ತೆರಿಗೆ ಶೇಕಡಾ 30.02, ಆದಾಯ ತೆರಿಗೆ ಹೊರತು ಪಡಿಸಿ ಆದಾಯ ತೆರಿಗೆ ಶೇಕಡಾ 34.66, ಸೀಮಾಶುಲ್ಕ ಶೇಕಡಾ 3.50, ಕೇಂದ್ರ ಅಬಕಾರಿ ಸುಂಕ ಶೇಕಡಾ 1.33, ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಶೇಕಡಾ 30.35.

[9] ರಾಷ್ಟ್ರೀಯ ವಿಪತ್ತು ಅಪಾಯ ನಿರ್ವಹಣಾ ನಿಧಿಗೆ ಮತ್ತು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ನಷ್ಟಕ್ಕೆ ಪರಿಹಾರವನ್ನು ಒಳಗೊಂಡಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ 2023–24ರ ಅವಧಿಯಲ್ಲಿ ₹21,340 ಕೋಟಿ (ಶೇಕಡಾ 57.88) ಇಳಿಕೆಯಾಗಿದೆ ಈ ಇಳಿಕೆಯು ಮುಖ್ಯವಾಗಿ ರಾಜ್ಯಗಳಿಗೆ ಇತರೆ ವರ್ಗಾವಣೆ/ಅನುದಾನಗಳು ಅಡಿಯಲ್ಲಿ ₹19,851 ಕೋಟಿಗಳಷ್ಟು ಇದ್ದು ಜಿಎಸ್‌ಟಿ ಅನುಷ್ಠಾನದಿಂದ ಉಂಟಾದ ಆದಾಯದ ನಷ್ಟದ ಪರಿಹಾರದ ಅಡಿಯಲ್ಲಿ ಕಡಿಮೆಯಾಗಿದೆ.

**(ಎ) ಹದಿನೈದನೇ ಹಣಕಾಸು ಆಯೋಗದ ಶಿಫಾರಸುಗಳು**

27 ನವೆಂಬರ್ 2017 ರಂದು ಸಂವಿಧಾನದ 280 ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಗಳು ರಚಿಸಿರುವ ಹದಿನೈದನೇ ಹಣಕಾಸು ಆಯೋಗದ ಉಲ್ಲೇಖದ ನಿಯಮಗಳ ಪ್ರಕಾರ, ಐದು ವರ್ಷಗಳವರೆಗೆ (2020–2025) ತೆರಿಗೆಗಳ ಲಂಬ ಮತ್ತು ಅಡ್ಡ ವಿಕೇಂದ್ರೀಕರಣಕ್ಕೆ ಶಿಫಾರಸುಗಳನ್ನು ನೀಡಲು ಆಯೋಗವು ಎರಡು ವರದಿಗಳನ್ನು ಸಲ್ಲಿಸಿತು. ಮೊದಲ ವರದಿಯು 2020–21ರ ಹಣಕಾಸು ವರ್ಷಕ್ಕೆ ಶಿಫಾರಸುಗಳನ್ನು ಹೊಂದಿದ್ದರೆ, ಎರಡನೇ ಮತ್ತು ಅಂತಿಮ ವರದಿಯು 2021–22 ರಿಂದ 2024–25ರ ಅವಧಿಗೆ ಶಿಫಾರಸುಗಳನ್ನು ಹೊಂದಿದೆ.

ಹಣಕಾಸು ಆಯೋಗದ ಅನುದಾನಗಳ ಶಿಫಾರಸು ಮತ್ತು ವಾಸ್ತವ ಬಿಡುಗಡೆಯನ್ನು **ಕೋಷ್ಟಕ–2.12**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–2.12: 2023–24ರಲ್ಲಿ ಅನುದಾನಗಳ ಶಿಫಾರಸು ಮತ್ತು ನೈಜವಾದ ಬಿಡುಗಡೆ**

(₹ ಕೋಟಿಗಳಲ್ಲಿ)

| ಅನುದಾನದ ವರ್ಗ | ಶಿಫಾರಸು ಮಾಡಿದ ಅನುದಾನ | ವಾಸ್ತವ ಬಿಡುಗಡೆ | ಕಡಿತ (–) / ಹೆಚ್ಚು (+) |
|---|---|---|---|
| **ಗ್ರಾಮೀಣ ಸ್ಥಳೀಯ ಸಂಸ್ಥೆಗಳು** | 2,490.00 | 2,086.59 | (–)403.41 |
| **ನಗರ ಸ್ಥಳೀಯ ಸಂಸ್ಥೆಗಳು** | 1,282.00 | 727.40 | (–)554.60 |
| **ರಾಜ್ಯ ವಿಪತ್ತು ಅಪಾಯ ನಿರ್ವಹಣಾ ನಿಧಿ** | 871.50 | 697.60 | (–)173.90 |
| **ಆರೋಗ್ಯ** | 579.00 | 257.04 | (–) 321.96 |

*ಆಕರ: ಹದಿನೈದನೇ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

2023–24ರಲ್ಲಿ, ಶಿಫಾರಸುಗಳಿಗೆ ಪ್ರತಿಯಾಗಿ ಅನುದಾನಗಳ ಸ್ವೀಕೃತಿಯಲ್ಲಿ ಕೊರತೆ ಕಂಡುಬಂದಿದೆ, ಇದು ಮುಖ್ಯವಾಗಿ ಈ ಕೆಳಗಿನ ಕಾರಣಗಳಿಂದಾಗಿದೆ:

- ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವ ಅನುದಾನಕ್ಕಾಗಿ, ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರಸಂಸ್ಥೆಗಳು ಸರಿಯಾಗಿ ರಚಿತವಾಗಿದ್ದರೆ ಮಾತ್ರ ಅನುದಾನಕ್ಕೆ ಅರ್ಹವಾಗಿರುತ್ತವೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಪರಿಷತ್ ಮತ್ತು ತಾಲೂಕು ಪಂಚಾಯತ್‌ಗಳನ್ನು ರಚಿಸಲಾಗಿಲ್ಲ ಮತ್ತು ಆದ್ದರಿಂದ ಅನುಪಾತದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- ಹಣಕಾಸು ಲೆಕ್ಕಪರಿಶೋಧಕ ವರದಿಗಳ ಅನುಪಸ್ಥಿತಿ ಮತ್ತು 60 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆಯ ವರ್ಧನೆಯೊಂದಿಗೆ ಅನುವರ್ತನೆಯಾಗದ ಕಾರಣ, ಸಂಸ್ಥೆಗಳ ಸಂಖ್ಯೆಗೆ ಅನುಪಾತದ ಆಧಾರದ ಮೇಲೆ ರಾಜ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- 2023–24ರಲ್ಲಿ, ರಾಜ್ಯ ವಿಪತ್ತು ಅಪಾಯ ನಿರ್ವಹಣಾ ನಿಧಿ (ಎಸ್‌ಡಿಆರ್‌ಎಂಎಫ್) ಅಡಿಯಲ್ಲಿ, ಭಾರತ ಸರ್ಕಾರದಿಂದ ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಅಡಿಯಲ್ಲಿ ₹697.60 ಕೋಟಿ ಮತ್ತು ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್‌ಡಿಎಂಎಫ್) ಅಡಿಯಲ್ಲಿ ₹173.90 ಕೋಟಿ ಒಟ್ಟು ₹871.50 ಕೋಟಿಗಳ ಹಂಚಿಕೆಯಾಗಿದೆ. 2023–24ರ ಅವಧಿಯಲ್ಲಿ ಎಸ್‌ಡಿಆರ್‌ಎಫ್ ಅಡಿಯಲ್ಲಿ ರಾಜ್ಯವು ₹697.60 ಕೋಟಿಯನ್ನು ಕೇಂದ್ರದ ಭಾಗವಾಗಿ ವರ್ಗಾಯಿಸಿದೆ. ಆದಾಗ್ಯೂ, ಎಸ್‌ಡಿಎಂಎಫ್ ಅಡಿಯಲ್ಲಿ ಯಾವುದೇ ಮೊತ್ತವನ್ನು ನಿಗದಿಪಡಿಸಲಾಗಿಲ್ಲ. ಇದನ್ನು **ಕಂಡಿಕೆ–2.6.2** (ಬಿ) ಮತ್ತು (ಸಿ) ನಲ್ಲಿ ಚರ್ಚಿಸಲಾಗಿದೆ.

### *2.4.6 ಬಂಡವಾಳ ಸ್ವೀಕೃತಿಗಳು*

ರಾಜ್ಯ ಸರ್ಕಾರದ ಬಂಡವಾಳದ ಸ್ವೀಕೃತಿಗಳು ಸಾರ್ವಜನಿಕ ಋಣ ಸ್ವೀಕೃತಿಗಳು, ಹೂಡಿಕೆಗಳ ವಿಸರ್ಜನೆಯ ನಂತರ ನಿವ್ವಳ ಗಳಿಕೆ (ವಿವಿಧ ಬಂಡವಾಳ ಸ್ವೀಕೃತಿಗಳು ಅಡಿಯಲ್ಲಿ) ಮುಂತಾದ ಋಣಭಾರವಲ್ಲದ ಸ್ವೀಕೃತಿಗಳು ಮತ್ತು ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳನ್ನು ಒಳಗೊಂಡಿರುತ್ತದೆ. ನಿವ್ವಳ ಸಾರ್ವಜನಿಕ ಋಣದ ಸ್ವೀಕೃತಿಗಳು ಸಾರ್ವಜನಿಕ ಋಣ ವಾಪಸಾತಿ ಮತ್ತು ಇತರ ಬಂಡವಾಳ ಸ್ವೀಕೃತಿಗಳು ಸೇರಿ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ಆಗುತ್ತದೆ. 2019–20 ರಿಂದ 2023–24ರ ಅವಧಿಯಲ್ಲಿ ಬಂಡವಾಳದ ಸ್ವೀಕೃತಿಗಳ ಸಂಯೋಜನೆ ಮತ್ತು ವೃದ್ಧಿಯ ಪ್ರವೃತ್ತಿಯನ್ನು **ಕೋಷ್ಟಕ–2.13**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.13: ಬಂಡವಾಳ ಸ್ವೀಕೃತಿಗಳ ವೃದ್ಧಿ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ರಾಜ್ಯದ ಸ್ವೀಕೃತಿಗಳ ಆಕರ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಸಾರ್ವಜನಿಕ ಋಣ ಸ್ವೀಕೃತಿಗಳು | 50,459 | 84,528* | 80,641* | 44,549 | 90,280 |
| ಆಂತರಿಕ ಋಣ | 49,473 | 70,414 | 60,462 | 39,283 | 84,334 |
| ವೃದ್ಧಿಯ ದರ (ಶೇಕಡಾ) | 22.24 | 42.33 | (–)14.13 | (–)35.03 | 114.68 |
| ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 675 | 14,114# | 20,179# | 5,266 | 5,946 |
| ವೃದ್ಧಿಯ ದರ (ಶೇಕಡಾ) | (–)53.25 | 152.8 | 21.26 | 154.39 | 12.91 |
| ಸಂಕೀರ್ಣ ಬಂಡವಾಳ ಸ್ವೀಕೃತಿಗಳು | 45 | 45 | 6 | 2 | 36 |
| ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 203 | 270 | 127 | 478 | 306 |
| **ಬಂಡವಾಳ ಸ್ವೀಕೃತಿಗಳು** | **50,707** | **84,843** | **80,774** | **45,029** | **90,622** |
| ಋಣ ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾ) | 20.38 | 67.52 | (–)4.60 | (–)44.76 | 102.65 |
| ಋಣೇತರ ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾ) | 892 | 27.02 | (–) 57.78 | 260.90 | (–)28.75 |
| ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡಾ) | 20.91 | 67.32 | (–)4.80 | (–)44.25 | 101.25 |

*ಆಕರ: ಹಣಕಾಸು ಲೆಕ್ಕಗಳು*

** 2020–21ಕ್ಕೆ ₹12,407 ಕೋಟಿ ಮತ್ತು 2021–22 ಕ್ಕೆ ₹18,109 ಕೋಟಿಗಳ ಸರಕು ಮತ್ತು ಸೇವೆಗಳ ತೆರಿಗೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಪಡೆದ ಸರಕು ಮತ್ತು ಸೇವಾಪರಿಹಾರವನ್ನು ಕಡಿತಗೊಳಿಸಿದ ನಂತರ ನಿವ್ವಳ ಸಾರ್ವಜನಿಕ ಋಣವು ₹72,121 ಕೋಟಿ ಮತ್ತು ₹62,532 ಕೋಟಿ ಆಗಿರುತ್ತದೆ. ಭಾರತ ಸರ್ಕಾರದ ವೆಚ್ಚ ಇಲಾಖೆಯು ಕೇಂದ್ರ ಸರ್ಕಾರದ ಋಣ ಸ್ವೀಕೃತಿಗಳ ಅಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ಜಿಎಸ್‌ಟಿ ಪರಿಹಾರವನ್ನು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ನಿರ್ಧರಿಸಿದೆ.*

*# 2020–21ಕ್ಕೆ ₹12,407 ಕೋಟಿ ಮತ್ತು 2021–22 ಕ್ಕೆ ₹18,109 ಕೋಟಿಗಳ ಸರಕು ಮತ್ತು ಸೇವೆಗಳ ತೆರಿಗೆ ಪರಿಹಾರವನ್ನು ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಸ್ವೀಕರಿಸುವ ಮೂಲಕ ಭಾರತ ಸರ್ಕಾರದ ನಿವ್ವಳ ಸಾಲಗಳು ಮತ್ತು ಮುಂಗಡಗಳು ₹1,707 ಕೋಟಿ ಮತ್ತು ₹2,070 ಕೋಟಿ ಆಗುತ್ತವೆ. ಭಾರತ ಸರ್ಕಾರದ ವೆಚ್ಚ ಇಲಾಖೆಯು ಕೇಂದ್ರ ಸರ್ಕಾರದ ಋಣ ಸ್ವೀಕೃತಿಗಳ ಅಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ಸರಕು ಮತ್ತು ಸೇವೆಗಳ ತೆರಿಗೆ ಪರಿಹಾರವನ್ನು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ನಿರ್ಧರಿಸಿದೆ.*

2019–20 ಮತ್ತು 2020–21ರಲ್ಲಿ ಬಂಡವಾಳದ ಸ್ವೀಕೃತಿಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು 2021–22 ಮತ್ತು 2022–23ರಲ್ಲಿ ಕಡಿಮೆಯಾಗಿದೆ. ಆದಾಗ್ಯೂ, 2023–24ರಲ್ಲಿ (₹90,622 ಕೋಟಿ) ಶೇಕಡಾ 101ರಷ್ಟು ಗಣನೀಯವಾಗಿ ಏರಿಕೆಯಾಗಿದೆ. ಸಾರ್ವಜನಿಕ ಋಣವು ಬಂಡವಾಳ ಸ್ವೀಕೃತಿಗಳಲ್ಲಿ ಪ್ರಧಾನ

ಪಾಲನ್ನು ಹೊಂದಿರುವುದರಿಂದ, ಇದು ಬಂಡವಾಳದ ಸ್ವೀಕೃತಿಗಳ ಹೆಚ್ಚಳ/ಕಡಿಮೆಯ ಮೇಲೆ ಪ್ರಭಾವ ಬೀರಿದೆ. ಇದು 2019–20 ರಿಂದ 2023–24ರ ಅವಧಿಯಲ್ಲಿ ಸರಾಸರಿ 99.51 ಶತಾಂಶವನ್ನು ಹೊಂದಿದೆ.

ಸಾರ್ವಜನಿಕ ಋಣದ ಸ್ವೀಕೃತಿಗಳು 2019–20ರಲ್ಲಿದ್ದ ₹50,459 ಕೋಟಿಯಿಂದ 2023–24ರಲ್ಲಿ ₹90,280 ಕೋಟಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸಾರ್ವಜನಿಕ ಋಣದ ಸ್ವೀಕೃತಿಯಲ್ಲಿ ಹೆಚ್ಚಳ ಕಂಡುಬಂದಿದೆ. ಇದು ಮುಖ್ಯವಾಗಿ ರಾಜ್ಯದಿಂದ ಮಾರುಕಟ್ಟೆ ಎರವಲುಗಳ (ಶೇಕಡಾ 115) ಹೆಚ್ಚಳದಿಂದಾಗಿದೆ. ಈ ಅವಧಿಯಲ್ಲಿ ಸಾಲಗಳು ಮತ್ತು ಮುಂಗಡಗಳ ವಸೂಲಾತಿಯು ತೀರಾ ಕಡಿಮೆಯಾಗಿತ್ತು. ನಿಖರ ಪರಿಭಾಷೆಯಲ್ಲಿ, 2023–24ರಲ್ಲಿ ಚೇತರಿಕೆಯು ಹಿಂದಿನ ವರ್ಷಕ್ಕಿಂತ ₹172 ಕೋಟಿಗಳಷ್ಟು ಕಡಿಮೆಯಾಗಿದೆ.

### *2.4.7 ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆ*

ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಸ್ವಂತ–ತೆರಿಗೆ ಮತ್ತು ತೆರಿಗೆಯೇತರ ಮೂಲಗಳನ್ನು ಒಳಗೊಂಡಿರುವ ತನ್ನದೇ ಆದ ಸಂಪನ್ಮೂಲಗಳ ಪರಿಭಾಷೆಯಲ್ಲಿ ನಿರ್ಣಯಿಸಲಾಗುತ್ತದೆ. ರಾಜ್ಯ ಸರ್ಕಾರವು ಮಂಡಿಸಿದ ಆಯವ್ಯಯ ನಿರ್ದಿಷ್ಟ ಆರ್ಥಿಕ ವರ್ಷಕ್ಕೆ ಆದಾಯ ಮತ್ತು ವೆಚ್ಚದ ಪ್ರಕ್ಷೇಪಗಳು/ಅಂದಾಜುಗಳನ್ನು ಸೂಚಿಸುತ್ತದೆ. ಆಯವ್ಯಯ ಅಂದಾಜಿನ ವಿಚಲನಗಳು ವಿವಿಧ ಅಂಶಗಳ ಕಾರಣದಿಂದ ಅಪೇಕ್ಷಿತ ಹಣಕಾಸಿನ ಉದ್ದೇಶಗಳನ್ನು ಸಾಧಿಸದಿರುವುದು/ಉತ್ತಮಗೊಳಿಸದಿರುವಿಕೆಯನ್ನು ಸೂಚಿಸುತ್ತದೆ, ಅವುಗಳಲ್ಲಿ ಕೆಲವು ಸರ್ಕಾರದ ನಿಯಂತ್ರಣದಲ್ಲಿವೆ ಮತ್ತು ಕೆಲವು ಅವರ ನಿಯಂತ್ರಣಕ್ಕೆ ಮೀರಿವೆ. 2023–24ರ ಅವಧಿಯಲ್ಲಿ ಹದಿನೈದನೆಯ ವಿತ್ತ ಆಯೋಗ ಮತ್ತು ಆಯವ್ಯಯ ಪ್ರಕ್ಷೇಪಗಳ ಮೌಲ್ಯಮಾಪನಕ್ಕೆ ಹೋಲಿಸಿದರೆ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳನ್ನು **ಕೋಷ್ಟಕ–2.14** ಪ್ರಸ್ತುತಪಡಿಸುತ್ತದೆ.

**ಕೋಷ್ಟಕ–2.14: 2023–24ರಲ್ಲಿ ಪ್ರಕ್ಷೇಪಣಗಳಿಗೆ ಪ್ರತಿಯಾಗಿ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿ**

| | ಹದಿನೈದನೆಯ ಹಣಕಾಸು ಆಯೋಗದ ಮೌಲ್ಯಮಾಪನ | ಆಯವ್ಯಯ ಅಂದಾಜುಗಳು | ವಾಸ್ತವಗಳು | ವಾಸ್ತವದ ಶೇಕಡಾವಾರು ವ್ಯತ್ಯಾಸ | |
|---|---|---|---|---|---|
| | (₹ ಕೋಟಿಯಲ್ಲಿ) | | | ಹದಿನೈದನೆಯ ಹಣಕಾಸು ಆಯೋಗದ ಮೌಲ್ಯಮಾಪನ | ಆಯವ್ಯಯ ಅಂದಾಜುಗಳು |
| **ಸ್ವಂತ ತೆರಿಗೆ ಆದಾಯ** | 1,34,950 | 1,73,303 | 1,63,505 | 21.16 | (–)5.65 |
| **ತೆರಿಗೆಯೇತರ ಆದಾಯ** | 9,790 | 12,500 | 13,117 | 33.98 | 4.94 |

*ಆಕರ: ಹದಿನೈದನೆಯ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ, ಸ್ವಂತ–ತೆರಿಗೆಯೇತರ ಆದಾಯಕ್ಕೆ ಆಯವ್ಯಯ ಪ್ರಕ್ಷೇಪಣೆ ಮತ್ತು ಹದಿನೈದನೆಯ ಹಣಕಾಸು ಆಯೋಗ ಮೇಲಿನ ವಾಸ್ತವಗಳ ವ್ಯತ್ಯಾಸವು ಕ್ರಮವಾಗಿ ಶೇಕಡಾ (–) ಆರು ಮತ್ತು ಶೇಕಡಾ 21 ಆಗಿದ್ದು, ಇದು ಸ್ವೀಕೃತಿಗಳ ಅತಿಯಾದ ಅಂದಾಜನ್ನು ಸೂಚಿಸುತ್ತದೆ. ತೆರಿಗೆಯೇತರ ಆದಾಯವು ಅಂದಾಜುಗಳಿಗಿಂತ ಕ್ರಮವಾಗಿ ಶೇಕಡಾ ಐದು ಮತ್ತು ಶೇಕಡಾ 34ರಷ್ಟು ಹೆಚ್ಚಾಗಿದ್ದು, ರಾಜ್ಯವು ತನ್ನ ಬಡ್ಡಿ ಸ್ವೀಕೃತಿಗಳನ್ನು ಮತ್ತು ಖನಿಜಗಳ ಮೇಲಿನ ರಾಯಧನವನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಸೂಚಿಸುತ್ತದೆ.

## 2.5 ಸಂಪನ್ಮೂಲಗಳ ಅನ್ವಯ

ರಾಜ್ಯ ಸರ್ಕಾರದ ಮಟ್ಟದಲ್ಲಿ ಪ್ರಮುಖ ವೆಚ್ಚದ ಜವಾಬ್ದಾರಿಗಳನ್ನು ಅವರಿಗೆ ವಹಿಸಲಾಗಿದೆಯಾದ್ದರಿಂದ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ವೆಚ್ಚವು ಶಾಸನರಚನೆಯ ಹಣಕಾಸಿನ ಜವಾಬ್ದಾರಿಯ ಚೌಕಟ್ಟಿನೊಳಗೆ ಇರಬೇಕು. ಆದ್ದರಿಂದ, ರಾಜ್ಯ ಮಟ್ಟದಲ್ಲಿನ ಹಣಕಾಸಿನ ತಿದ್ದುಪಡಿ ಮತ್ತು ಕ್ರೋಢೀಕರಣ ಪ್ರಕ್ರಿಯೆಯು ವೆಚ್ಚದ ಮೇಲೆ ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿಗೆ ಉದ್ದೇಶಿಸಲಾದ ವೆಚ್ಚಗಳ ಮೇಲೆ ಪರಿಣಾಮ ಬೀರುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ.

ವಿವೇಚನಾಶೀಲ ಹಣಕಾಸಿನ ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಸ್ವೀಕೃತಿಗಳನ್ನು ಹೆಚ್ಚಿಸುವ ಮೂಲಕ ಉಳಿತಾಯವನ್ನು ಸೃಷ್ಟಿಸುವ ಗುರಿಯನ್ನು ಹೊಂದಿರಬೇಕು. ಎರವಲು ಪಡೆದ ಹಣವನ್ನು ನೇರವಾಗಿ ಆದಾಯ ನೀಡುವ ಚಟುವಟಿಕೆಗಳಿಗೆ ಅಥವಾ ಪರೋಕ್ಷವಾಗಿ ಉತ್ಪಾದಕ ಬಳಕೆಗಳಿಗೆ ಬಳಸುವುದರಿಂದ ತೆರಿಗೆ ಅಥವಾ ತೆರಿಗೆಯೇತರ ಆದಾಯಗಳ ಮೂಲಕ ಆದಾಯವನ್ನು ಸೃಷ್ಟಿಸುತ್ತದೆ, ಇದನ್ನು ಋಣ ಸೇವೆ ಮತ್ತು ಸಾಲಗಳ ಮರುಪಾವತಿಗೆ ಬಳಸಬಹುದು.

### *2.5.1 ವೆಚ್ಚದ ವೃದ್ಧಿ ಮತ್ತು ಸಂಯೋಜನೆ*

ಒಟ್ಟು ವೆಚ್ಚದ ಮೂಲಭೂತ ಪ್ರಮಿತಿಗಳು, ರಾಜಸ್ವ, ಬಂಡವಾಳ, ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಅದರ ಸಂಯೋಜನೆ ಮತ್ತು 2019–20 ರಿಂದ 2023–24ರ ಐದು ವರ್ಷಗಳ ಅವಧಿಯಲ್ಲಿ ಜಿಎಸ್‌ಡಿಪಿ ದೊಂದಿಗೆ ಅದರ ಹೋಲಿಕೆಯನ್ನು **ಕೋಷ್ಟಕ–2.15**ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ–2.15: ಒಟ್ಟು ವೆಚ್ಚ – ಪ್ರವೃತ್ತಿಗಳು ಮತ್ತು ಸಂಯೋಜನೆ**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಒಟ್ಟು ವೆಚ್ಚ | 2,13,857 | 2,24,129 | 2,61,511 | 2,76,183 | 2,99,207 |
| ರಾಜಸ್ವ ವೆಚ್ಚ | 1,74,258 | 1,76,054 | 2,09,428 | 2,15,584 | 2,42,614 |
| ಬಂಡವಾಳ ವೆಚ್ಚ | 35,530 | 45,406 | 47,874 | 57,349 | 52,120 |
| ಸಾಲಗಳು ಮತ್ತು ಮುಂಗಡಗಳು | 4,069 | 2,669 | 4,209 | 3,250 | 4,473 |
| ಜಿಎಸ್‌ಡಿಪಿ | 16,15,827 | 16,41,460 | 19,78,094 | 22,69,995 | 25,67,340 |
| ಒಟ್ಟು ವೆಚ್ಚ / ಜಿಎಸ್‌ಡಿಪಿ | 13.24 | 13.65 | 13.22 | 12.17 | 11.65 |
| ರಾಜಸ್ವ ವೆಚ್ಚ / ಜಿಎಸ್‌ಡಿಪಿ | 10.78 | 10.73 | 10.59 | 9.50 | 9.45 |
| ಬಂಡವಾಳ ವೆಚ್ಚ / ಜಿಎಸ್‌ಡಿಪಿ | 2.20 | 2.77 | 2.42 | 2.53 | 2.03 |
| ಸಾಲಗಳು ಮತ್ತು ಮುಂಗಡಗಳು / ಜಿಎಸ್‌ಡಿಪಿ | 0.25 | 0.16 | 0.21 | 0.14 | 0.17 |

*ಆಕರ: ಹಣಕಾಸು ಲೆಕ್ಕಗಳು*

2019–20 ರಿಂದ 2023–24ರ ಅವಧಿಯಲ್ಲಿ, ಸರಾಸರಿಯಾಗಿ, ಒಟ್ಟು ವೆಚ್ಚದ ಶೇಕಡಾ 80ರಷ್ಟು ರಾಜಸ್ವ ಲೆಕ್ಕದಲ್ಲಿದೆ. ಆದಾಗ್ಯೂ, ಎಸ್‌ಎನ್‌ಎ ಖಾತೆಗಳಿಂದ ಬಳಕೆಯಾಗದ ಮೊತ್ತದ ಮರುಪಾವತಿಯ ಲೆಕ್ಕದಲ್ಲಿ ಇದನ್ನು ₹2,256.06 ಕೋಟಿಗಳಷ್ಟು ಕಡಿಮೆ ಮಾಡಲಾಗಿದೆ. 2023–24ರಲ್ಲಿ, ಇದು ಹಿಂದಿನ ವರ್ಷದ 78 ಪ್ರತಿಶತದಿಂದ 81 ಪ್ರತಿಶತಕ್ಕೆ ಏರಿತು ಮತ್ತು ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಶೇಕಡಾ 19 ರಷ್ಟಿತ್ತು, ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ ಮೂರರಷ್ಟು ಕಡಿಮೆಯಾಗಿದೆ. 2019–20 ರಿಂದ 2023–24 ರವರೆಗಿನ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳ ಪಾಲನ್ನು **ನಕ್ಷೆ–2.9**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.9: ಒಟ್ಟು ವೆಚ್ಚ – ಅದರ ಘಟಕಗಳ ಪಾಲಿನ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

ಸಾಮಾನ್ಯ, ಸಾಮಾಜಿಕ, ಆರ್ಥಿಕ, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಧನದ ಅಡಿಯಲ್ಲಿನ ಚಟುವಟಿಕೆಗಳ ಮೂಲಕ ಒಟ್ಟು ವೆಚ್ಚದ ಪ್ರವೃತ್ತಿಗಳನ್ನು **ನಕ್ಷೆ–2.10**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.10: ಒಟ್ಟು ವೆಚ್ಚ – ಚಟುವಟಿಕೆಗಳ ವೆಚ್ಚಗಳು**




*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ನಕ್ಷೆಯಿಂದ, 2019–20 ರಿಂದ 2023–24ರ ಅವಧಿಯಲ್ಲಿ ಸಾಮಾನ್ಯ ಸೇವೆಗಳು, ಆರ್ಥಿಕ ಸೇವೆಗಳು ಮತ್ತು ಸಾಮಾಜಿಕ ಸೇವೆಗಳ ಸಾಪೇಕ್ಷ ಪಾಲು ವರ್ಷಾಂತರದಲ್ಲಿ ವ್ಯತ್ಯಾಸಗಳನ್ನು ಹೊಂದಿದೆ ಎಂಬುದನ್ನು ಕಾಣಬಹುದು. 2023–24ರಲ್ಲಿ, ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಪಾಲು ಶೇಕಡಾ

1.49ರಷ್ಟು ಹೆಚ್ಚಾಗಿದೆ, ಆರ್ಥಿಕ ಸೇವೆಗಳ ವೆಚ್ಚವು ಶೇಕಡಾ 1.53ರಷ್ಟು ಕಡಿಮೆಯಾಗಿದೆ ಮತ್ತು ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಾಮಾನ್ಯ ಸೇವೆಗಳ ಮೇಲಿನ ವೆಚ್ಚವು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ..

### *2.5.2 ರಾಜಸ್ವ ವೆಚ್ಚ*

ಪ್ರಸಕ್ತ ಮಟ್ಟದ ಸೇವೆಗಳು ಮತ್ತು ಹಿಂದಿನ ಬಾಧ್ಯತೆಯ ಪಾವತಿಯ ನಿರ್ವಹಣೆಯನ್ನು ರಾಜಸ್ವ ವೆಚ್ಚದಲ್ಲಿ ಭರಿಸಲಾಗುವುದು.

ರಾಜಸ್ವ ವೆಚ್ಚವು ವೇತನಗಳು ಮತ್ತು ಸಂಬಳಗಳು, ಬಡ್ಡಿ ಪಾವತಿಗಳು, ಪಿಂಚಣಿಗಳು, ಕಾರ್ಯಾಚರಣೆಗಳ ಮೇಲಿನ ವೆಚ್ಚಗಳು ಮತ್ತು ಬಂಡವಾಳ ಕಾಮಗಾರಿಗಳ ನಿರ್ವಹಣೆ, ಸಹಾಯಧನ ಮತ್ತು ಸ್ಥಳೀಯ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓಗಳು) ಇವುಗಳಿಗೆ ವರ್ಗಾವಣೆ ಮತ್ತು ಇತರವುಗಳನ್ನು ಒಳಗೊಂಡಿರುತ್ತದೆ. ವೆಚ್ಚವನ್ನು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಂತಹ ವಿವಿಧ ಕ್ರಿಯಾತ್ಮಕ ವರ್ಗಗಳಾಗಿ ವರ್ಗೀಕರಿಸಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ವೆಚ್ಚವನ್ನು ಭೌತಿಕ ಮೂಲಭೂತ ಸೌಕರ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಸೃಷ್ಟಿಸಲು ಭರಿಸಲಾಗುತ್ತದೆ ಮತ್ತು ಆದ್ದರಿಂದ ಉತ್ಪಾದಕವೆಂದು ಪರಿಗಣಿಸಲಾಗುತ್ತದೆ, ಆದರೆ ಸಾಮಾನ್ಯ ಸೇವೆಗಳು ಮತ್ತು ಋಣ ಸೇವೆಯ ಮೇಲಿನ ವೆಚ್ಚವನ್ನು ಅನುತ್ಪಾದಕವೆಂದು ಪರಿಗಣಿಸಲಾಗುತ್ತದೆ.

ಒಟ್ಟಾರೆ ರಾಜಸ್ವ ವೆಚ್ಚ, ಅದರ ವೃದ್ಧಿಯ ದರ, ಒಟ್ಟು ವೆಚ್ಚಕ್ಕೆ ಅದರ ಅನುಪಾತ ಮತ್ತು ಜಿಎಸ್‌ಡಿಪಿ ಮತ್ತು ರಾಜಸ್ವ ಸ್ವೀಕೃತಿಗಳ ಮುಖಾಮುಖಿ ಪ್ಲವನತೆಯನ್ನು **ಕೋಷ್ಟಕ–2.16**ರಲ್ಲಿ ಸೂಚಿಸಲಾಗಿದೆ. 2021–22ರಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದ ನಂತರ 2022–23ರಲ್ಲಿ ಜಿಎಸ್‌ಡಿಪಿ ದೊಂದಿಗೆ ರಾಜಸ್ವ ವೆಚ್ಚದ ಪ್ಲವನತೆಯು ಅತ್ಯಂತ ಕಡಿಮೆಯಿತ್ತು. ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ವೆಚ್ಚದ ಹೆಚ್ಚಿನ ವೃದ್ಧಿಯ ದರದಿಂದಾಗಿ 2023–24ರಲ್ಲಿ ಗಣನೀಯವಾಗಿ ಹೆಚ್ಚಾಗಿದೆ.

**ಕೋಷ್ಟಕ–2.16: ರಾಜಸ್ವ ವೆಚ್ಚ – ಮೂಲ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| **ಒಟ್ಟು ವೆಚ್ಚ** | 2,13,857 | 2,24,129 | 2,61,511 | 2,76,183 | 2,99,207 |
| **ರಾಜಸ್ವ ವೆಚ್ಚ** | 1,74,258 | 1,76,054 | 2,09,428 | 2,15,584 | 2,42,614 |
| **ರಾಜಸ್ವ ವೆಚ್ಚ ವೃದ್ಧಿಯ ದರ (ಶೇಕಡಾ)** | 6.06 | 1.03 | 18.96 | 2.94 | 12.54 |
| **ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚದ ಶೇಕಡಾ** | 81.48 | 78.55 | 80.08 | 78.06 | 81.09 |
| **ರಾಜಸ್ವ ವೆಚ್ಚ / ಜಿಎಸ್‌ಡಿಪಿ (ಶೇಕಡಾ)** | 10.78 | 10.73 | 10.59 | 9.50 | 9.45 |
| **ರಾಜಸ್ವ ಸ್ವೀಕೃತಿ (ರಾಸ್ವೀ)** | 1,75,443 | 1,56,716 | 1,95,762 | 2,29,080 | 2,33,343 |
| **ರಾಜಸ್ವ ಸ್ವೀಕೃತಿಯಲ್ಲಿ ರಾಜಸ್ವ ವೆಚ್ಚ (ಶೇಕಡಾ)** | 99.32 | 112.34 | 106.98 | 94.11 | 103.97 |
| **ರಾಜಸ್ವ ವೆಚ್ಚದ ಪ್ಲವನತೆ (ಅನುಪಾತ)** | | | | | |
| **ಜಿಎಸ್‌ಡಿಪಿ ಒಂದಿಗೆ** | 0.68 | 0.65 | 0.92 | 0.20 | 0.96 |
| **ರಾಜಸ್ವ ಸ್ವೀಕೃತಿಯೊಂದಿಗೆ** | 0.96 | (–)0.10 | 0.76 | 0.17 | 6.74 |

*ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು*

ರಾಜಸ್ವ ವೆಚ್ಚವು 2019–20ರಲ್ಲಿದ್ದ ₹1,74,258 ಕೋಟಿಯಿಂದ 2023–24ರಲ್ಲಿ ₹2,42,614 ಕೋಟಿಗೆ ಏರಿಕೆಯಾಗಿ ಶೇಕಡಾ 39ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ (ಶೇಕಡಾ 166), ವಿದ್ಯುತ್ (ಶೇಕಡಾ 69), ಆಹಾರ, ಸಂಗ್ರಹಣೆ ಮತ್ತು ಉಗ್ರಾಣ (ಶೇಕಡಾ 140),

ಬಡ್ಡಿ ಪಾವತಿ (ಶೇಕಡಾ ಎಂಟು), ಪೌಷ್ಟಿಕತೆ (ಶೇಕಡಾ 68), ಸಾಮಾನ್ಯ ಶಿಕ್ಷಣ (ಶೇಕಡಾ ಐದು), ಇತ್ಯಾದಿಗಳ ಹೆಚ್ಚಳದಿಂದಾಗಿ ಶೇಕಡಾ 13ರಷ್ಟು ಏರಿಕೆಯಾಗಿದೆ. 2023–24ರಲ್ಲಿ ವಲಯವಾರು ಸಾಮಾನ್ಯ ಸೇವೆಗಳಡಿ (ರಾಜ್ಯದ ಅಂಗಗಳು, ಆರ್ಥಿಕ ಸೇವೆಗಳು, ಬಡ್ಡಿ ಪಾವತಿಗಳು ಮತ್ತು ಋಣ ಸೇವೆಗಳು, ಆಡಳಿತಾತ್ಮಕ ಸೇವೆಗಳು ಮತ್ತು ಪಿಂಚಣಿ ಮತ್ತು ಇತರ ಸಾಮಾನ್ಯ ಸೇವೆಗಳು), ಸಾಮಾಜಿಕ ಸೇವೆಗಳು, ಆರ್ಥಿಕ ಸೇವೆಗಳು ಮತ್ತು ಸಹಾಯಾನುದಾನಗಳ ಹಂಚಿಕೆಯನ್ನು **ನಕ್ಷೆ–2.11**ರಲ್ಲಿ ನೀಡಲಾಗಿದೆ.

**ನಕ್ಷೆ–2.11: ರಾಜಸ್ವ ವೆಚ್ಚದ ವಲಯವಾರು ಹಂಚಿಕೆ**




*ಆಕರ: ಹಣಕಾಸು ಲೆಕ್ಕಗಳು*

ನಿಚ್ಚಳ ಪರಿಭಾಷೆಯಲ್ಲಿ ರಾಜಸ್ವ ವೆಚ್ಚವು ಹಿಂದಿನ ವರ್ಷಕ್ಕಿಂತ ₹27,030 ಕೋಟಿಗಳಷ್ಟು (ಸುಮಾರು ಶೇಕಡಾ 12.54) ಹೆಚ್ಚಾಗಿದೆ. ಆದಾಗ್ಯೂ, ಜಿಎಸ್‌ಡಿಪಿ ದ ಶೇಕಡಾವಾರು ರಾಜಸ್ವ ವೆಚ್ಚವು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ, ಆದರೆ ರಾಜಸ್ವ ಸ್ವೀಕೃತಿಗಳ ಶೇಕಡಾವಾರು ರಾಜಸ್ವ ವೆಚ್ಚವು ರಾಜಸ್ವ ವೆಚ್ಚದಲ್ಲಿನ ಹೆಚ್ಚಳದಿಂದಾಗಿ ಗಣನೀಯವಾಗಿ ಹೆಚ್ಚಾಗಿದೆ. ಜಿಎಸ್‌ಡಿಪಿ ದೊಂದಿಗೆ ರಾಜಸ್ವ ವೆಚ್ಚದ ಪ್ಲವನತೆ ಮತ್ತು 2022–23ರ ಅವಧಿಯಲ್ಲಿ ಕಡಿಮೆಯಾದ ರಾಜಸ್ವ ಸ್ವೀಕೃತಿಗಳೊಂದಿಗೆ ರಾಜಸ್ವ ವೆಚ್ಚದ ಪ್ಲವನತೆಯು, 2023–24ರ ಸಮಯದಲ್ಲಿ ಗಣನೀಯವಾಗಿ ಹೆಚ್ಚಾಗಿದೆ. ರಾಜಸ್ವ ವೆಚ್ಚದ ಹೆಚ್ಚಿನ ವೃದ್ಧಿಯ ದರದ ಹೆಚ್ಚಳ ಇದು ಪ್ರಮುಖ ಕಾರಣವಾಗಿದೆ.

### 2.5.2.1 ರಾಜಸ್ವ ವೆಚ್ಚದಲ್ಲಿ ಪ್ರಮುಖ ಬದಲಾವಣೆಗಳು

**ಕೋಷ್ಟಕ–2.17** ಪ್ರಸ್ತುತ ವರ್ಷ ಮತ್ತು ಹಿಂದಿನ ವರ್ಷದಲ್ಲಿ ರಾಜ್ಯದ ರಾಜಸ್ವ ವೆಚ್ಚಗಳಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿನ ಗಮನಾರ್ಹ ವ್ಯತ್ಯಾಸಗಳನ್ನು ವಿವರಿಸುತ್ತದೆ.

**ಕೋಷ್ಟಕ–2.17: 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ರಾಜಸ್ವ ವೆಚ್ಚದಲ್ಲಿನ ವ್ಯತ್ಯಾಸ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕ ಶೀರ್ಷಿಕೆ | 2022–23 | 2023–24 | ಹೆಚ್ಚಳ (+) / ಇಳಿಕೆ (–) | ಶೇಕಡಾವಾರು |
|---|---|---|---|---|
| **2235 – ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ** | 11,296.56 | 30,018.33 | 18,721.77 | 165.73 |
| **2801 – ವಿದ್ಯುಚ್ಛಕ್ತಿ** | 14,093.43 | 23,780.16 | 9,686.73 | 68.73 |
| **2408 – ಆಹಾರ, ಸಂಗ್ರಹಣೆ ಮತ್ತು ಉಗ್ರಾಣ** | 3,059.50 | 7,353.78 | 4,294.28 | 140.36 |
| **2049 – ಬಡ್ಡಿ ಪಾವತಿಗಳು** | 28,427.16 | 30,826.32 | 2,399.16 | 8.44 |

| ಪ್ರಧಾನ ಲೆಕ್ಕ ಶೀರ್ಷಿಕೆ | 2022-23 | 2023-24 | ಹೆಚ್ಚಳ (+) / ಇಳಿಕೆ (-) | ಶೇಕಡಾವಾರು |
|---|---|---|---|---|
| **2202 - ಸಾಮಾನ್ಯ ಶಿಕ್ಷಣ** | 29,489.66 | 31,033.86 | 1,544.20 | 5.24 |
| **2236 - ಪೌಷ್ಟಿಕತೆ** | 1,581.61 | 2,658.41 | 1,076.80 | 68.08 |
| **2515 - ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು** | 7,736.99 | 6,679.63 | (-)1,057.36 | (-)13.67 |
| **2215 - ನೀರು ಸರಬರಾಜು ಮತ್ತು ನೈರ್ಮಲ್ಯ** | 5,356.12 | 495.34 | (-)4,860.78 | (-)90.75 |
| **2217 - ನಗರಾಭಿವೃದ್ಧಿ** | 3403.21 | 1873.95 | (-)1,529.26 | (-)44.94 |
| **2401 - ಸಸ್ಯ ಸಂಗೋಪನೆ** | 6,478.56 | 3,834.01 | (-)2,644.55 | (-)40.82 |
| **2216 - ವಸತಿ** | 3,743.45 | 2,353.83 | (-)1,389.62 | (-)37.12 |
| **2245 - ನೈಸರ್ಗಿಕ ವಿಪತ್ತುಗಳ ಪರಿಹಾರ** | 3,015.11 | 1,231.26 | (-)1,783.85 | (-)59.16 |

*ಆಕರ: ಹಣಕಾಸು ಲೆಕ್ಕಗಳು*

ಕೆಲವು ಪ್ರಧಾನ ಶೀರ್ಷಿಕೆಗಳ ಅಡಿಯ ವೆಚ್ಚದಲ್ಲಿ ಹೆಚ್ಚಳ ಕಂಡುಬಂದಿದ್ದರೂ, ಕೆಲವು ಪ್ರಧಾನ ಶೀರ್ಷಿಕೆಗಳ ಅಡಿಯಲ್ಲಿ ಕುಸಿತಗಳು ಕಂಡುಬಂದಿವೆ. ಗಮನಾರ್ಹ ವ್ಯತ್ಯಾಸಗಳು (ಶೇಕಡಾ 90 ಕ್ಕಿಂತ ಹೆಚ್ಚು) ಮತ್ತು ಹೆಚ್ಚಳ / ಇಳಿಕೆಗೆ ಕಾರಣಗಳು ಕೆಳಕಂಡಂತಿವೆ:

- ಸಾಮಾಜಿಕ ಭದ್ರತೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದಂತೆ, ವೆಚ್ಚದಲ್ಲಿ ಶೇಕಡಾ 165.73ರಷ್ಟು ಹೆಚ್ಚಳವಾಗಿದ್ದು, ಇದಕ್ಕೆ ಸರ್ಕಾರವು ಪರಿಚಯಿಸಿದ ಗೃಹ ಲಕ್ಷ್ಮಿ ಯೋಜನೆ ಕಾರಣವಾಗಿದ್ದು, ಮತ್ತು ಅದು ಹೆಚ್ಚಳದ ಶೇಕಡಾ 91 ರಷ್ಟಿದೆ.
- ಆಹಾರ, ಸಂಗ್ರಹಣೆ ಮತ್ತು ಉಗ್ರಾಣಕ್ಕೆ ಸಂಬಂಧಿಸಿದಂತೆ, ವೆಚ್ಚದಲ್ಲಿ ಶೇಕಡಾ 140.36ರಷ್ಟು ಹೆಚ್ಚಳವಾಗಿದೆ, 2023-24ರಲ್ಲಿ ರಾಜ್ಯ ಸರ್ಕಾರವು ಪರಿಚಯಿಸಿದ ಅನ್ನ ಭಾಗ್ಯ ಯೋಜನೆಯಡಿ ಆಹಾರ ಸಹಾಯಧನ ವೆಚ್ಚವು ಇದಕ್ಕೆ ಕಾರಣವಾಗಿದೆ.
- ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮಗಳ ಅಡಿಯಲ್ಲಿ ಕಡಿಮೆ ಖರ್ಚು ಮತ್ತು ಗ್ರಾಮ ಪಂಚಾಯತ್‌ಗಳಿಗೆ ಕಡಿಮೆ ನೆರವು ನೀಡಿರುವ ಕಾರಣದಿಂದ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ, ಶೇಕಡಾ 90.75ರಷ್ಟು ಕುಸಿತ ಕಂಡುಬಂದಿದೆ.

### 2.5.2.2 ಬದ್ಧ ವೆಚ್ಚ

ರಾಜಸ್ವ ಲೆಕ್ಕದಲ್ಲಿ ರಾಜ್ಯ ಸರ್ಕಾರದ ಬದ್ಧ ವೆಚ್ಚವು ಸಂಬಳ ಮತ್ತು ವೇತನಗಳು, ಪಿಂಚಣಿ ಮತ್ತು ಬಡ್ಡಿ ಪಾವತಿಗಳನ್ನು ಹೊರತುಪಡಿಸಿ ರಾಜ್ಯದ ಹಣಕಾಸಿನ ಸ್ಥಿತಿಯನ್ನು ಲೆಕ್ಕಿಸದೆ ಮಾಡಲೇ ಬೇಕಾದ ವೆಚ್ಚವನ್ನು ಒಳಗೊಂಡಿರುತ್ತದೆ.

ಮೇಲಿನವುಗಳ ಹೊರತಾಗಿ, ಸಾಮಾನ್ಯವಾಗಿ ಬದಲಾಯಿಸಲಾಗದ ಅಥವಾ ಬದಲಾಗದ ಅಥವಾ ವಾರ್ಷಿಕ ಆಧಾರದ ಮೇಲೆ ಶಾಸನಬದ್ಧವಾಗಿ ಅಗತ್ಯವಿರುವ ಕೆಲವು ವೆಚ್ಚದ ಅಂಶಗಳಿವೆ. ಉದಾಹರಣೆಗೆ, ಈ ಕೆಳಗಿನ ಬಾಬುಗಳನ್ನು ಸಾಮಾನ್ಯವಾಗಿ ಬದಲಾಯಿಸಲಾಗುವುದಿಲ್ಲ:

(i) ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ - ವೇತನ ಮತ್ತು ಭತ್ಯೆಗಳಿಗಾಗಿ ಸ್ಥಳೀಯ ಸಂಸ್ಥೆಗಳಿಗೆ ಶಾಸನಬದ್ಧ ಹಂಚಿಕೆಗಳು (ಬಂಡವಾಳ ವೆಚ್ಚಕ್ಕಾಗಿ ಹಂಚಿಕೆ / ವರ್ಗಾವಣೆ).

(ii) ಮೀಸಲು ನಿಧಿಗಳಿಗೆ ಕೊಡುಗೆಯ ಶಾಸನಬದ್ಧ ಅವಶ್ಯಕತೆಗಳು - ಸಂಚಿತ ಋಣ ಪರಿಹಾರ ನಿಧಿ, ಖಾತರಿ ವಿಮೋಚನಾ ನಿಧಿ, ರಾಜ್ಯ ವಿಪತ್ತು ಉಪಶಮನ / ವಿಪತ್ತು ನಿರ್ವಹಣಾ ನಿಧಿಗೆ ಕೊಡುಗೆ.

(iii) ಸಾದಿಲ್ವಾರು ನಿಧಿಯ ಮರುಪಾವತಿ - ವರ್ಷದೊಳಗೆ ಮರುಪಾವತಿಸಲಾದ ಮೊತ್ತ.

(iv) ಶಾಸನಬದ್ಧವಾಗಿ ಅಗತ್ಯವಿರುವ ಮೀಸಲು ನಿಧಿ/ ಇತರ ನಿಗಮಕ್ಕೆ ಉಪಕರ ವರ್ಗಾವಣೆ.

(v) ಕೇಂದ್ರದಿಂದ ಸ್ವೀಕರಿಸಿದ ನಿಧಿಗೆ ಪ್ರತಿಯಾಗಿ ಕೇಂದ್ರ ಪುರಸ್ಕೃತ ಯೋಜನೆಯನ ಪಾಲಿನ ಕೊಡುಗೆ – ಏಕ ನೋಡಲ್ ಏಜೆನ್ಸಿಗಳಿಗೆ ವರ್ಗಾಯಿಸಬೇಕಾದ ರಾಜ್ಯದ ಪಾಲಿನ ಮೊತ್ತ / ರಾಜ್ಯವು ಮಾಡಿದ ಖರ್ಚು.

(vi) ಬಡ್ಡಿ ಸಹಿತ ನಿಧಿಗಳ ಶಿಲ್ಕುಗಳ ಮೇಲಿನ ಬಡ್ಡಿಯನ್ನು ಹೂಡಿಕೆ ಮಾಡಬಹುದಾಗಿದ್ದರೆ ಮತ್ತು ಸಾರ್ವಜನಿಕ ಋಣದ ಮೇಲಿನ ಬಡ್ಡಿಯನ್ನು ಪ್ರಭೃತ ವೆಚ್ಚವಾಗಿ ಪಾವತಿಸುವುದು – ಬಡ್ಡಿ ಪಾವತಿ.

ಪರಿಣಾಮವಾಗಿ, ಹೆಚ್ಚಿನ ರಾಜಸ್ವ ವೆಚ್ಚವು ಬದ್ಧ ವೆಚ್ಚದ ಸ್ವರೂಪದಲ್ಲಿದೆ.

ಆದಾಗ್ಯೂ, ರಾಜ್ಯ ಸರ್ಕಾರದ ಪ್ರಕಾರ (ಮಧ್ಯಮಾವಧಿ ವಿತ್ತೀಯ ಯೋಜನೆ 2022-26 ಮತ್ತು 2023-27ರಲ್ಲಿ ಹೇಳಿರುವಂತೆ), ಬದ್ಧ ವೆಚ್ಚವನ್ನು ಯೋಜನೆಯಲ್ಲದ ಬದ್ಧ ವೆಚ್ಚ ಮತ್ತು ಯೋಜನೆ ಆಧಾರಿತ ಬದ್ಧ ವೆಚ್ಚ ಎಂದು ವರ್ಗೀಕರಿಸಲಾಗಿದೆ. ಯೋಜನಾ ಆಧಾರಿತ ಬದ್ಧ ವೆಚ್ಚವು ಸಹಾಯಧನಗಳು, ಸಾಮಾಜಿಕ ಭದ್ರತಾ ಪಿಂಚಣಿ, ಹಣಕಾಸಿನ ನೆರವು, ಅನುದಾನ-ಸಹಾಯ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗಿದೆ. ಮತ್ತೊಂದೆಡೆ, ಯೋಜನೆಯಲ್ಲದ ಬದ್ಧ ವೆಚ್ಚವು ವೇತನಗಳು, ಬಡ್ಡಿ ಪಾವತಿಗಳು, ಪಿಂಚಣಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಂಡಿರುತ್ತದೆ.

2019-20 ರಿಂದ 2023-24ರವರೆಗಿನ ಅವಧಿಯನ್ನು ಒಳಗೊಂಡಿರುವ ಈ ಘಟಕಗಳ ಮೇಲಿನ ವೆಚ್ಚವನ್ನು **ಕೋಷ್ಟಕ-2.18**ರಲ್ಲಿ ನೀಡಲಾಗಿದೆ.

**ಕೋಷ್ಟಕ-2.18: ಬದ್ಧ ವೆಚ್ಚದ ಘಟಕಗಳು**

(₹ ಕೋಟಿಗಳಲ್ಲಿ)

| ಬದ್ಧ ವೆಚ್ಚದ ಘಟಕಗಳು | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ಸಂಬಳ ಮತ್ತು ಮಜೂರಿಗಳು# | 33,186 | 33,832 | 37,647 | 40,663 | 45,906 |
| ಪಿಂಚಣಿಗಳು | 18,404 | 18,936 | 20,666 | 24,020 | 24,859 |
| ಬಡ್ಡಿ ಪಾವತಿಗಳು | 19,903 | 23,433 | 26,276 | 29,643 | 31,872 |
| **ಬದ್ಧ ವೆಚ್ಚಗಳು** | **71,493** | **76,201** | **84,589** | **94,326** | **1,02,637** |
| **ಹೊಂದಿಕೊಳ್ಳದ ವೆಚ್ಚಗಳ ಘಟಕಗಳು** | | | | | |
| ಸ್ಥಳೀಯ ಸಂಸ್ಥೆಗಳಿಗೆ ಶಾಸನಬದ್ಧ ಹಂಚಿಕೆ | 26,777 | 25,818 | 27,192 | 29,085 | 29,961 |
| ಮೀಸಲು ನಿಧಿಗಳಿಗೆ ಕೊಡುಗೆ | 4,728 | 6,274 | 9,173 | 7,282 | 7,328 |
| ಸಾದಿಲ್ವಾರು ನಿಧಿಗೆ ಮರುಪಾವತಿ | - | - | 420 | - | - |
| ಮೀಸಲು ನಿಧಿ / ಇತರೆ ಸಂಸ್ಥೆಗಳಿಗೆ ಉಪಕರದ ವರ್ಗಾವಣೆ | 1,433 | 1,205 | 1,588 | 2,031 | 2,377 |
| ಕೇಂದ್ರ ನಿಧಿ ಸ್ವೀಕೃತಿಗೆ ಪ್ರತಿಯಾಗಿ ಕೇಂದ್ರ ಪ್ರಯೋಜಿತ ಯೋಜನೆಯ ಪಾಲಿನ ಕೊಡುಗೆ | 12,214 | 9,852 | 12,659 | 11,629 | 9,866 |
| ಬಡ್ಡಿಯನ್ನು ಹೊಂದಿರುವ ನಿಧಿಗಳ ಶಿಲ್ಕುಗಳ ಮೇಲಿನ ಬಡ್ಡಿಯನ್ನು ಹೂಡಿಕೆ ಮಾಡಬಹುದಾಗಿದ್ದರೆ ಮತ್ತು ಸಾರ್ವಜನಿಕ ಋಣದ ಮೇಲಿನ ಬಡ್ಡಿಯನ್ನು ಪ್ರಭೃತ ವೆಚ್ಚವಾಗಿ ಪಾವತಿಸುವುದು – ಬಡ್ಡಿ ಪಾವತಿ. | 15,769 | 19,207 | 22,010 | 25,298 | 27,276 |
| **ಅನಮ್ಯ ವೆಚ್ಚದ ಒಟ್ಟು** | **60,921** | **62,356** | **73,042** | **75,325** | **76,808** |
| **ಒಟ್ಟು** | **1,32,414** | **1,38,557** | **1,57,631** | **1,69,651** | **1,79,445** |
| **ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ** | | | | | |
| **ಬದ್ಧ ವೆಚ್ಚಗಳು** | | | | | |
| ಸಂಬಳ ಮತ್ತು ಮಜೂರಿಗಳು | 18.92 | 21.59 | 19.23 | 17.75 | 19.67 |
| ಪಿಂಚಣಿ | 10.49 | 12.08 | 10.56 | 10.49 | 10.65 |
| ಬಡ್ಡಿ ಪಾವತಿಗಳು | 11.34 | 14.95 | 13.42 | 12.94 | 13.66 |
| **ಒಟ್ಟು** | **40.75** | **48.62** | **43.21** | **41.18** | **43.99** |
| **ಅನಮ್ಯ ವೆಚ್ಚ** | **34.72** | **39.79** | **37.31** | **32.88** | **32.92** |

| ಬದ್ಧ ವೆಚ್ಚದ ಘಟಕಗಳು | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| **ಒಟ್ಟು (ಅನಮ್ಯ ವೆಚ್ಚ ಸೇರಿದಂತೆ)** | **75.47** | **88.41** | **80.52** | **74.06** | **76.90** |
| ರಾಜಸ್ವ ವೆಚ್ಚದ ಶತಾಂಶವಾಗಿ | | | | | |
| ಸಂಬಳ ಮತ್ತು ಮಜೂರಿಗಳು | 19.04 | 19.22 | 17.98 | 18.86 | 18.92 |
| ಪಿಂಚಣಿ | 10.56 | 10.76 | 9.87 | 11.14 | 10.25 |
| ಬಡ್ಡಿ ಪಾವತಿಗಳು | 11.42 | 13.31 | 12.55 | 13.75 | 13.14 |
| ಒಟ್ಟು | 41.03 | 43.28 | 40.39 | 43.75 | 42.30 |
| **ಅನಮ್ಯ ವೆಚ್ಚ** | **34.96** | **35.42** | **34.88** | **34.94** | **31.66** |
| **ಒಟ್ಟು (ಅನಮ್ಯ ವೆಚ್ಚ ಸೇರಿದಂತೆ)** | **75.99** | **78.70** | **75.27** | **78.69** | **73.96** |
| ಬದ್ಧವಲ್ಲದ ರಾಜಸ್ವ ವೆಚ್ಚ | 41,844 | 37,497 | 51,797 | 45,933 | 63,169 |
| ರಾಜಸ್ವ ವೆಚ್ಚದ ಶೇಕಡಾ | 24.01 | 21.30 | 24.73 | 21.31 | 26.04 |
| ಒಟ್ಟು ವೆಚ್ಚದ ಶೇಕಡಾ | 19.57 | 16.73 | 19.81 | 16.63 | 21.11 |
| ಸಹಾಯ ಧನಗಳು | 17,534 | 18,432 | 28,219 | 22,754 | 32,390 |
| ಬದ್ಧವಲ್ಲದ ವೆಚ್ಚದ ಶೇಕಡಾವಾರಾಗಿ ಸಹಾಯಧನಗಳು | 41.90 | 49.16 | 54.48 | 49.54 | 51.28 |

*ಆಕರ: ಹಣಕಾಸು ಲೆಕ್ಕಗಳು*

*# ಪಂಚಾಯತ್ ರಾಜ್ ಸಂಸ್ಥೆಗಳ ಸಂಬಳ (₹22,349.76 ಕೋಟಿ), ನಗರ ಸ್ಥಳೀಯ ಸಂಸ್ಥೆಗಳ ವೇತನಗಳು (1,817.45 ಕೋಟಿ) ಮತ್ತು ದಿನಗೂಲಿ (₹1,330.53 ಕೋಟಿ) ಸೇರಿವೆ.*

2019-20 ರಿಂದ 2023-24ರ ಅವಧಿಯಲ್ಲಿ, ಅನಮ್ಯ ವೆಚ್ಚವನ್ನು ಒಳಗೊಂಡಂತೆ ನಿಚ್ಚಳ ಪರಿಭಾಷೆಯಲ್ಲಿ ಬದ್ಧ ವೆಚ್ಚವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು ಇದು 2019-20ರಲ್ಲಿದ್ದ ₹1,32,414 ಕೋಟಿಗಳಿಂದ 2023-24ರಲ್ಲಿ ₹1,79,445 ಕೋಟಿಗಳಿಗೆ ಏರಿಕೆಯಾಗಿದೆ. ಆದಾಗ್ಯೂ, ರಾಜಸ್ವ ವೆಚ್ಚದ ಶೇಕಡಾವಾರು ಅಂತರ-ವರ್ಷದ ವ್ಯತ್ಯಾಸವನ್ನು ಹೊಂದಿತ್ತು ಮತ್ತು 74 ಮತ್ತು 79 ಪ್ರತಿಶತದ ನಡುವೆ ಇತ್ತು. ಈ ಅವಧಿಯಲ್ಲಿ ಬದ್ಧವಲ್ಲದ ವೆಚ್ಚವು 21 ಮತ್ತು 26 ಪ್ರತಿಶತದ ನಡುವೆ ಇತ್ತು. 2023-24ರಲ್ಲಿ ಇತರ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಲಭ್ಯವಿರುವ ರಾಜಸ್ವ ವೆಚ್ಚವು ಪ್ರತಿಶತ 26 ಮತ್ತು ಒಟ್ಟು ವೆಚ್ಚದ ಪ್ರತಿಶತ 21ರಷ್ಟಿತ್ತು. ಸಾಮಾಜಿಕ ಮತ್ತು ಆರ್ಥಿಕ ಮೂಲಸೌಕರ್ಯಗಳ ಹೆಚ್ಚುತ್ತಿರುವ ಅಗತ್ಯಗಳನ್ನು ಪೂರೈಸಲು ವೆಚ್ಚವನ್ನು ಆದ್ಯತೆ ನೀಡುವ ಮತ್ತು ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸುವಲ್ಲಿ ಬದ್ಧತೆಯ ವೆಚ್ಚದಲ್ಲಿನ ಏರುಮುಖ ಪ್ರವೃತ್ತಿಯು ರಾಜ್ಯದ ಕುಶಲತೆಯ ಮೇಲೆ ಪರಿಣಾಮ ಬೀರುತ್ತದೆ.

**(ಎ) ವೇತನಗಳು ಮತ್ತು ಮಜೂರಿಗಳು**

2019-20ರಲ್ಲಿ ₹33,186 ಕೋಟಿಯಿದ್ದ ವೇತನ ಮತ್ತು ಮಜೂರಿ ಮೇಲಿನ ವೆಚ್ಚ 2023-24ರಲ್ಲಿ ₹45,906 ಕೋಟಿಗೆ ಹೆಚ್ಚಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ₹5,243 ಕೋಟಿ (ಶೇಕಡಾ 13) ಯಷ್ಟು ಅಲ್ಪ ಏರಿಕೆ ಕಂಡಿದೆ. ಇದು 2023-24ರಲ್ಲಿ ರಾಜಸ್ವ ವೆಚ್ಚದ 19 ಪ್ರತಿಶತವನ್ನು ಹೊಂದಿದೆ. ಇದು ಪಂಚಾಯತ್ ರಾಜ್‌ಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವೇತನಗಳನ್ನು ಒಳಗೊಂಡಿದೆ.

**(ಬಿ) ಪಿಂಚಣಿಗಳು**

2023-24ರ ಅವಧಿಯಲ್ಲಿ ಪಿಂಚಣಿ ವೆಚ್ಚವು ₹24,859 ಕೋಟಿಗಳಾಗಿದ್ದು, ಹಿಂದಿನ ವರ್ಷಕ್ಕಿಂತ ₹839 ಕೋಟಿಯಷ್ಟು (ಶೇಕಡಾ ಮೂರು) ಹೆಚ್ಚಳವಾಗಿದೆ.

- **ಹೊಸ ಪಿಂಚಣಿ ವ್ಯವಸ್ಥೆ**

01 ಏಪ್ರಿಲ್ 2006 ರಂದು ಅಥವಾ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಎಂದು ಕರೆಯಲ್ಪಡುವ ನಿರ್ಧಾರಿತ ವಂತಿಗೆ ಪಿಂಚಣಿ ಯೋಜನೆಯು 01 ಏಪ್ರಿಲ್ 2010 ರಿಂದ ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಹೊಸ ಪಿಂಚಣಿ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಖಜಾನೆಗಳ ಆಯುಕ್ತರ ಅಡಿಯಲ್ಲಿ ಒಂದು ಮೀಸಲಾದ ಎನ್‌ಪಿಎಸ್ ಕೋಶವನ್ನು ರಚಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ

ಪ್ರಾಧಿಕಾರ (ಪಿಎಫ್ಆರ್‌ಡಿಎ)ವು ವಿನ್ಯಾಸಗೊಳಿಸಿದ ಎನ್‌ಪಿಎಸ್ ಆರ್ಕಿಟೆಕ್ಚರ್ ಅನ್ನು ಅಳವಡಿಸಿಕೊಂಡಿದೆ ಮತ್ತು ಎನ್‌ಪಿಎಸ್‌ಗಾಗಿ ಕೇಂದ್ರೀಯ ದಾಖಲೆ ನಿರ್ವಹಣೆಯ ಏಜೆನ್ಸಿ (ಸಿಆರ್‌ಎ) ಆಗಿ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಅನ್ನು ನೇಮಿಸಿದೆ. ಆಕ್ಸಿಸ್ ಬ್ಯಾಂಕ್ ಪಿಂಚಣಿ ನಿಧಿಗಳ ಕಾರ್ಯಾಚರಣೆಯ ಉಸ್ತುವಾರಿ ಟ್ರಸ್ಟಿ ಬ್ಯಾಂಕ್ ಆಗಿದೆ.

2023–24ರಲ್ಲಿ (ನಿಯಮಿತ ಮತ್ತು ಹಿಂದಿನ ಬಾಕಿ[10] ಸೇರಿ) ಖಜಾನೆಗಳ ಆಯುಕ್ತರು (ಆಗಸ್ಟ್ 2024) ಒದಗಿಸಿದ ಮಾಹಿತಿಯಂತೆ ರಾಜ್ಯ ಸರ್ಕಾರ ಮತ್ತು ನೌಕರರು ನೀಡಿದ ವಂತಿಗೆಯು ಕ್ರಮವಾಗಿ ₹2,059.36 ಕೋಟಿ ಮತ್ತು ₹1,471.48 ಕೋಟಿಯಷ್ಟಿದೆ.

ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿಯಲ್ಲಿ ನಿರ್ವಹಿಸಲಾದ ದಾಖಲೆಗಳ ಪ್ರಕಾರ, ಸರ್ಕಾರದ ಕೊಡುಗೆ ₹2,064.46 ಕೋಟಿ ಮತ್ತು ನೌಕರರ ವಂತಿಗೆ (ನಿಯಮಿತ ಮತ್ತು ಹಿಂದಿನ ಬಾಕಿ ಸೇರಿ) ₹1,520.56 ಕೋಟಿಯಿದೆ.

ಆದ್ದರಿಂದ ಖಜಾನೆಗಳ ಆಯುಕ್ತರ ಎನ್‌ಪಿಎಸ್ ಸೆಲ್ ಮತ್ತು ಮಹಾಲೇಖಾಪಾಲರ (ಲೆ ಮತ್ತು ಹ) ಕಚೇರಿಯ ನಡುವಿನ ₹54.18 ಕೋಟಿ ವ್ಯತ್ಯಾಸದ ಅಂಕಿಅಂಶಗಳ ಸಮನ್ವಯದ ಅಗತ್ಯವಿದೆ.

**(ಸಿ) ಬಡ್ಡಿ ಪಾವತಿಗಳು**

2019–20ರಲ್ಲಿ ₹19,903 ಕೋಟಿಗಳಷ್ಟಿದ್ದ ಬಡ್ಡಿ ಪಾವತಿಯು 2023–24ರಲ್ಲಿ ₹31,872 ಕೋಟಿಗೆ ಏರಿ ₹11,969 ಕೋಟಿ (ಶೇಕಡಾ 60)ಯಷ್ಟು ಹೆಚ್ಚಾಗಿದೆ. 2022–23ಕ್ಕೆ ಹೋಲಿಸಿದರೆ, ಬಡ್ಡಿ ಪಾವತಿಯು ಶೇಕಡಾ 7.52ರಷ್ಟು ಹೆಚ್ಚಾಗಿದೆ. 2023–24ರಲ್ಲಿನ ಬಡ್ಡಿ ಪಾವತಿಗಳು ಆಂತರಿಕ ಸಾಲದ ಮೇಲಿನ ಬಡ್ಡಿಯನ್ನು (₹26,398 ಕೋಟಿ), ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ (₹3,550 ಕೋಟಿ), ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ (₹845 ಕೋಟಿ), ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹1,046 ಕೋಟಿ), ಮೀಸಲು ನಿಧಿಗಳ ಮೇಲಿನ ಬಡ್ಡಿ (₹28 ಕೋಟಿ) ಮತ್ತು ಇತರ ಬಾಧ್ಯತೆಗಳ ಮೇಲಿನ ಬಡ್ಡಿ (₹ಐದು ಕೋಟಿ) ಯನ್ನು ಒಳಗೊಂಡಿದೆ..

ಆಂತರಿಕ ಸಾಲದ ಮೇಲಿನ ಬಡ್ಡಿಯು 2022–23ರಲ್ಲಿನ ₹24,743 ಕೋಟಿಯಿಂದ 2023–24 ರಲ್ಲಿ ₹26,398 ಕೋಟಿಯಾಗಿ ಶೇಕಡಾ 6.69ರಷ್ಟು ಹೆಚ್ಚಾಗಿದ್ದು ಇದು ಮಾರುಕಟ್ಟೆ ಸಾಲದ ಮೇಲಿನ ಬಡ್ಡಿ ಪಾವತಿಯಲ್ಲಿ ₹1,730 ಕೋಟಿಗಳಷ್ಟು (ಶೇಕಡಾ ಏಳು) ಹೆಚ್ಚಳದಿಂದಾಗಿದೆ. ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿಯು 2022–23ರ ಅವಧಿಯಲ್ಲಿದ್ದ ₹517 ಕೋಟಿಗಳಿಂದ 2023–24ರಲ್ಲಿ ₹845 ಕೋಟಿಗಳಿಗೆ ಏರಿ ₹329 ಕೋಟಿಗಗಳಷ್ಟು ಹೆಚ್ಚಾಗಿದು, ಇದು ಮುಖ್ಯವಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶ ಯೋಜನೆಗಳ ಸಾಲಗಳ ಮೇಲಿನ ಬಡ್ಡಿದರದ ಹೆಚ್ಚಳ (ಶೇಕಡಾ 79) ದಿಂದಾಗಿದೆ.

**2.5.2.3 ಅನಮ್ಯ ವೆಚ್ಚ**

2019–20 ರಿಂದ 2023–24ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಶಾಸನಬದ್ಧ ವಿಕೇಂದ್ರೀಕರಣ ಮತ್ತು ಮೀಸಲು ನಿಧಿಗಳಿಗೆ ಕೊಡುಗೆಯನ್ನು ಒಳಗೊಂಡಿರುವ ಅನಮ್ಯ ವೆಚ್ಚದ ಅಂಶಗಳು ನಿರಂತರ ಹೆಚ್ಚಳವನ್ನು ತೋರಿಸಿದೆ. ಅಂತೆಯೇ, ಬಡ್ಡಿಹೊಂದಿರುವ ಶಿಲ್ಕುಗಳ ಮೇಲಿನ ಬಡ್ಡಿಯ ಪಾವತಿಯು ಈ ಅವಧಿಯಲ್ಲಿ ಹೆಚ್ಚಾಯಿತು. ರಾಜಸ್ವ ವೆಚ್ಚದ ಶೇಕಡಾವಾರು ಪ್ರಮಾಣದಲ್ಲಿ, ಅನಮ್ಯ ವೆಚ್ಚವು 2019–20ರಲ್ಲಿದ್ದ ಶೇಕಡಾ 34.96 ದಿಂದ 2023–24ರಲ್ಲಿ ಶೇಕಡಾ 31.66 ಕ್ಕೆ ಇಳಿದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಪ್ರಮಾಣದಲ್ಲಿ, ಇದು ಸುಮಾರು ಶೇಕಡಾ 33 ರಷ್ಟರಲ್ಲಿಯೇ ಬಹುತೇಕ

---

[10] ಸರ್ಕಾರಿ ನೌಕರನು ತಾನು ಸೇವೆಗೆ ಸೇರಿದ ದಿನಾಂಕದಿಂದ ಯೋಜನೆಯ ಅನುಷ್ಠಾನದ ದಿನಾಂಕದ ವರೆಗೆ ನೀಡಬೇಕಾದ ವಂತಿಗೆಯನ್ನು ಸೂಚಿಸುತ್ತದೆ.

ನಿಶ್ಚಲವಾಗಿದೆ. 2023–24ರಲ್ಲಿ ಹಿಂದಿನ ವರ್ಷಕ್ಕಿಂತ (₹75,325 ಕೋಟಿ) ಅನಮ್ಯ ವೆಚ್ಚವು (₹76,808 ಕೋಟಿ) ಸ್ವಲ್ಪಮಟ್ಟಿಗೆ ಶೇಕಡಾ ಎರಡರಷ್ಟು ಹೆಚ್ಚಾಗಿದೆ.

### 2.5.2.4 ಸಹಾಯಧನಗಳು

2023–24ರ ಅವಧಿಯಲ್ಲಿ ಸಹಾಯಧನಗಳು ಮೇಲಿನ ವೆಚ್ಚದಲ್ಲಿ ಗಣನೀಯ ಏರಿಕೆ ಕಂಡುಬಂದಿದ್ದು, **ಕೋಷ್ಟಕ–2.19**ರಲ್ಲಿ ನೀಡಲಾದ ವಿವರಗಳಿಂದ ನೋಡಬಹುದಾಗಿದೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇಕಡಾ 42ರಷ್ಟು ಹೆಚ್ಚಾಗಿದೆ. ಮುಖ್ಯವಾಗಿ ರಾಜ್ಯ ಸರ್ಕಾರವು ಸಹಾಯಧನಗಳ ಅಡಿಯಲ್ಲಿ ಜಾರಿಗೊಳಿಸಿದ ಮೂರು ಖಾತರಿಗಳ ಲೆಕ್ಕದಲ್ಲಿ ಹೆಚ್ಚಳವಾಗಿದೆ, ಅಂದರೆ ವಿದ್ಯುತ್ ಅಡಿಯಲ್ಲಿ ಗೃಹ ಜ್ಯೋತಿ, ಸಾರಿಗೆ ಅಡಿಯಲ್ಲಿ ಸ್ತ್ರೀ ಶಕ್ತಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜುಗಳ ಅಡಿಯಲ್ಲಿ ಅನ್ನಭಾಗ್ಯ **(ಕಂಡಿಕೆ–1.6 (ಎ)** ಅನ್ನು ನೋಡಿ). ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಸಹಾಯಧನಗಳು 2022–23ರಲ್ಲಿದ್ದ ಶೇಕಡಾ 10 ರಿಂದ 2023–24ರಲ್ಲಿ ಶೇಕಡಾ 14ಕ್ಕೆ ಏರಿತು ಮತ್ತು ರಾಜಸ್ವ ವೆಚ್ಚದ ಶೇಕಡಾವಾರು 2022–23ರಲ್ಲಿದ್ದ ಶೇಕಡಾ 11 ರಿಂದ 2023–24ರಲ್ಲಿ ಶೇಕಡಾ 13ಕ್ಕೆ ಏರಿತು.

**ಕೋಷ್ಟಕ–2.19: 2019–20 ರಿಂದ 2023–24ರ ಅವಧಿಯಲ್ಲಿ ಸಬ್ಸಿಡಿಗಳ ಮೇಲಿನ ವೆಚ್ಚ**

| ಸಹಾಯಧನಗಳು ಮತ್ತು ಅದರ ಪ್ರಮಿತಿಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಸಹಾಯಧನಗಳು (₹ ಕೊಟಿಗಳಲ್ಲಿ) | 17,534 | 18,432 | 28,219 | 22,754 | 32,390 |
| ವಿದ್ಯುತ್ ಸಹಾಯಧನಗಳು (₹ ಕೊಟಿಗಳಲ್ಲಿ) | 9,110 | 9,139 | 14,736 | 11,512 | 18,603 |
| ಆಹಾರ ಮತ್ತು ಸರಬರಾಜುಗಳ ಮೇಲೆ ಸಹಾಯಧನಗಳು (₹ ಕೋಟಿಯಲ್ಲಿ) | 2,692 | 2,324 | 6,057 | 2,015 | 5,680 |
| ಇತರ ಸಹಾಯಧನಗಳು (₹ ಕೋಟಿಯಲ್ಲಿ) | 5,732 | 6,969 | 7,426 | 9,227 | 8,107 |
| ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಸಹಾಯಧನಗಳು | 9.99 | 11.76 | 14.41 | 9.93 | 13.88 |
| ರಾಜಸ್ವ ವೆಚ್ಚದ ಶೇಕಡಾವಾರು ಸಹಾಯಧನಗಳು | 10.06 | 10.47 | 13.47 | 10.55 | 13.35 |
| ಒಟ್ಟು ವೆಚ್ಚದ ಶೇಕಡಾವಾರು ಸಹಾಯಧನಗಳು | 8.20 | 8.22 | 10.79 | 8.24 | 10.83 |
| ಒಟ್ಟು ಸಹಾಯಧನಕ್ಕೆ ಶೇಕಡಾವಾರು ವಿದ್ಯುತ್ ಸಹಾಯಧನಗಳು | 51.96 | 49.58 | 52.22 | 50.59 | 57.43 |

*ಆಕರ: ಹಣಕಾಸು ಲೆಕ್ಕಗಳು*

ಗೃಹ ಜ್ಯೋತಿ ಮತ್ತು ಕೃಷಿ ಪಂಪ್ ಸೆಟ್‌ಗಳ ಬಳಕೆಗಾಗಿ ರೈತರಿಗೆ ಉಚಿತ ವಿದ್ಯುತ್ ಪೂರೈಕೆಗಾಗಿ ಒದಗಿಸಲಾದ ಸಹಾಯಧನಗಳನ್ನು ಒಳಗೊಂಡಿರುವ ವಿದ್ಯುತ್ ಸಹಾಯಧನಗಳು ಅತಿದೊಡ್ಡ ಸಹಾಯಧನಗಳು ಅಂಶವಾಗಿದೆ. ಇದರ ನಂತರ ಆಹಾರ ಸಹಾಯಧನಗಳು, ಸಾರಿಗೆ ಮತ್ತು ಬೆಳೆ ಸಾಲಕ್ಕೆ ಬಡ್ಡಿ ಸಹಾಯಧನ. ವಿದ್ಯುತ್ ಸಹಾಯಧನಗಳು ಒಟ್ಟು ಸಹಾಯಧನಗಳು ಸುಮಾರು 57 ಪ್ರತಿಶತದ ಪ್ರಮುಖ ಭಾಗವನ್ನು ಹೊಂದಿದೆ ಮತ್ತು ಆಹಾರ ಮತ್ತು ಸರಬರಾಜುಗಳ ಮೇಲಿನ ಸಹಾಯಧನಗಳು 2023–24ರಲ್ಲಿ ಸುಮಾರು 18 ಪ್ರತಿಶತವನ್ನು ಹೊಂದಿದೆ. ಮೇಲಿನ **ಕೋಷ್ಟಕ–2.19**ರಲ್ಲಿ ತೋರಿಸಿರುವಂತೆ ಹಿಂದಿನ ವರ್ಷಕ್ಕೆ ಹೋಲಿಸಿದರೆ 2023–24ರಲ್ಲಿ ರಾಜಸ್ವ ಸ್ವೀಕೃತಿಗಳು, ರಾಜಸ್ವ ವೆಚ್ಚಗಳು ಮತ್ತು ಒಟ್ಟು ವೆಚ್ಚಗಳ ಶೇಕಡಾವಾರು ಸಹಾಯಧನಗಳು ಹೆಚ್ಚಾಗಿದೆ.

ಕಳೆದ ಐದು ವರ್ಷಗಳ ಸಹಾಯಧನಗಳ ವಿವರಗಳನ್ನು **ಅನುಬಂಧ–2.3**ರಲ್ಲಿ ನೀಡಲಾಗಿದೆ ಮತ್ತು 2023–24 ವರ್ಷಕ್ಕೆ **ನಕ್ಷೆ–2.12**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.12: 2023–24ರ ಅವಧಿಯಲ್ಲಿ ಸಹಾಯಧನಗಳು**

(₹ ಕೋಟಿಗಳಲ್ಲಿ)




*ಆಕರ: ಹಣಕಾಸು ಲೆಕ್ಕಗಳು*

ಆದಾಗ್ಯೂ, ಕೋಷ್ಟಕದಲ್ಲಿ ಸಹಾಯಧನಗಳನ್ನು ಕಡಿಮೆ ತೋರಿಸಲಾಗಿದೆ ಏಕೆಂದರೆ ಇದು ಉದ್ದೇಶ ಶೀರ್ಷಿಕೆ 106ರ ಅಡಿಯಲ್ಲಿನ ವೆಚ್ಚವನ್ನು ಮಾತ್ರ ಒಳಗೊಂಡಿರುತ್ತದೆ. 2023–2024ರ ಅವಧಿಯಲ್ಲಿ ಉದ್ದೇಶ ಶೀರ್ಷಿಕೆ 422 ಎಸ್‌ಸಿಪಿ ಮತ್ತು 423 ಟಿಎಸ್ಪಿ ಅಡಿಯಲ್ಲಿ ನೀಡಲಾದ ₹9,292.23 ಕೋಟಿಯಷ್ಟು ಸಹಾಯಧನಗಳನ್ನು ತೋರಿಸಲಾಗಿಲ್ಲ ಮತ್ತು ಆದರಿಂದಾಗಿ ಆ ಮಟ್ಟಿಗೆ ಕಡಿಮೆ ತೋರಿಸಲಾಗಿದೆ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಜನವರಿ 2025) ಉದ್ದೇಶ ಶೀರ್ಷಿಕೆ 422 ಮತ್ತು 423 ಅಡಿಯಲ್ಲಿ ಬಿಡುಗಡೆ ಮಾಡಿದ ಸಹಾಯಧನಗಳನ್ನು ಒಳಗೊಂಡಿಲ್ಲದ ಕಾರಣ ಸಹಾಯಧನಗಳನ್ನು ತೋರಿಸಲಾಗಿದೆ ಎಂಬುದನ್ನು ಒಪ್ಪಿಕೊಂಡಿತು.

**ಹಣಕಾಸಿನ ನೆರವು, ಪ್ರೋತ್ಸಾಹಕಗಳು ಇತ್ಯಾದಿ ರೂಪದಲ್ಲಿ ಸಹಾಯಧನ**

ರಾಜ್ಯ ಸರ್ಕಾರವು ಒದಗಿಸುವ ಸಹಾಯಧನಗಳು ಎರಡು ರೀತಿಯದ್ದಾಗಿರಬಹುದು, ಅಂದರೆ, ಖಚಿತ[11] ಮತ್ತು ಅಂತರ್ಗತ ಸಹಾಯಧನಗಳು. ಖಚಿತ ಸಹಾಯಧನಗಳು ಎಂದರೆ ರಾಜ್ಯವು ಸಹಾಯಧನಗಳು ಸ್ವರೂಪದಲ್ಲಿ ವೆಚ್ಚವನ್ನು ಒದಗಿಸುವುದು ಮತ್ತು ಇನ್ನೊಂದು ಸರ್ಕಾರದ ಕೆಲವು ರಾಜ್ಯ ಯೋಜನೆಗಳಿಗೆ ಅನುದಾನವನ್ನು ಒದಗಿಸುವುದು. ಈ ಸಹಾಯಧನಗಳು ಪರೋಕ್ಷ, ರೀತಿಯ ಅಥವಾ ತೆರಿಗೆ ರಿಯಾಯಿತಿಗಳ ಸ್ವರೂಪವನ್ನು ತೆಗೆದುಕೊಳ್ಳಬಹುದು .

ಹಣಕಾಸಿನ ನೆರವಿನ ರೂಪದಲ್ಲಿ ಈ ಸಹಾಯಧನಗಳು 2019–20ರಲ್ಲಿ ₹3,280.74 ಕೋಟಿಗಳಿಂದ 2023–24ರ ಅವಧಿಯಲ್ಲಿ ₹19,091.80 ಕೋಟಿಗಳಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಇದು ₹16,080.94 ಕೋಟಿ (ಶೇಕಡಾ 534) ಹೆಚ್ಚಾಗಿದೆ, ಇದು ಮುಖ್ಯವಾಗಿ 2023–24ರಲ್ಲಿ ಜಾರಿಗೊಳಿಸಸಲ್ಪಟ್ಟ ಗೃಹ ಲಕ್ಷ್ಮಿ ಯೋಜನೆ (₹16,964.40 ಕೋಟಿ) ಮತ್ತು ಯುವನಿಧಿ ಯೋಜನೆ (₹88.88 ಕೋಟಿ) ಗಳಿಂದ ಉಂಟಾಗಿದೆ. ಇದು ಬೀಜಪೂರೈಕೆ ಮತ್ತು ಇತರ ಸಾಧನಗಳು (ಕೃಷಿ ಸಾಧನ ಮತ್ತು ಗುಣಮಟ್ಟ ನಿಯಂತ್ರಣ), ಯಶಸ್ವಿನಿ ಮತ್ತು ನೇಕಾರರ ಪ್ಯಾಕೇಜ್‌ಗಳಲ್ಲಿನ ಇಳಿಕೆಯಿಂದ

[11] ಸರ್ಕಾರದ ಕೆಲವು ಯೋಜನೆಗಳಿಗೆ ಸಹಾಯಧನ ಅಥವಾ ಬಡ್ಡಿ ಸಹಾಯಧನ ರೂಪದಲ್ಲಿ ವೆಚ್ಚವನ್ನು ಒದಗಿಸುವುದು ಖಚಿತ ಸಹಾಯಧನವಾಗಿದೆ. ಈ ರೀತಿಯ ಸಹಾಯಧನಗಳು ಖಾಯಂ ಹೆಚ್ಚುವರಿ ಆಸರೆಯ ಮೂಲವಾಗವುದಿಲ್ಲ ಮತ್ತು ಇದರಿಂದಾಗಿ ಈ ವಲಯಗಳ ಸುಧಾರಣೆಯನ್ನು ಕೈಗೊಳ್ಳಲು ಅಡ್ಡಿಯಾಗುವುದಿಲ್ಲ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಸವಾಲು ಎಂಬುದನ್ನು ಒತ್ತಿ ಹೇಳಲಾಗಿದೆ.

ಸರಿದೂಗಿಸಲ್ಪಟ್ಟಿದೆ. 2019–20 ರಿಂದ 2023–24ರವರೆಗೆ ಒದಗಿಸಸಲಾದ ಈ ಸಹಾಯಧನಗಳನ್ನು **ಅನುಬಂಧ–2.4**ರಲ್ಲಿ ವಿವರಿಸಲಾಗಿದೆ. ಹೀಗಾಗಿ, ಆರ್ಥಿಕ ಸಹಾಯದ ರೂಪದಲ್ಲಿ ಸಹಾಯಧನಗಳನ್ನು ಪರಿಗಣಿಸಿದರೆ, ಸಹಾಯಧನಗಳ ನೈಜ ವೆಚ್ಚವು ₹60,774.13 ಕೋಟಿಗೆ ಹೆಚ್ಚಾಗುತ್ತದೆ.

**2.5.2.5 ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು.**

- **ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳು.**

2019–20 ರಿಂದ 2023–24ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನದ ಮೂಲಕ ಒದಗಿಸಲಾದ ಸಹಾಯದ ಪ್ರಮಾಣವನ್ನು **ಕೋಷ್ಟಕ–2.20**ರಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ–2.20: ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಸ್ಥಳೀಯ ಸಂಸ್ಥೆಗಳು | | | | | |
| ನಗರಸಭೆಗಳು ಮತ್ತು ಪುರಸಭೆಗಳು | 6,424.72 | 5,681.04 | 6,615.83 | 5,661.86 | 6,229.10 |
| ಪಂಚಾಯತ್ ರಾಜ್ ಸಂಸ್ಥೆಗಳು | 38,049.61 | 38106.18 | 39,835.19 | 44,947.51 | 47,898.31 |
| ಒಟ್ಟು(ಎ) | 44,474.33 | 43,787.22 | 46,451.02 | 50,609.37 | 54,127.41 |
| ಇತರೆ | | | | | |
| ಶಿಕ್ಷಣ ಸಂಸ್ಥೆಗಳು (ಅನುದಾನಿತ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು, ಇತ್ಯಾದಿ) | 1,405.90 | 1,140.43 | 1,134.75 | 1,217.01 | 1,865.62 |
| ಅಭಿವೃದ್ಧಿ ಪ್ರಾಧಿಕಾರಗಳು | 184.66 | 1,864.88 | 2,564.04 | 2,586.85 | 1,031.72 |
| ಇತರೆ ಸಂಸ್ಥೆಗಳು | 6,848.00 | 6,978.06 | 7,432.23 | 8,294.53 | 9,014.52 |
| ಒಟ್ಟು (ಬಿ) | 8,438.56 | 9,983.37 | 11,131.02 | 12,098.39 | 11,911.86 |
| ಒಟ್ಟು (ಎ+ಬಿ) | 52,912.89 | 53,770.59 | 57,582.04 | 62,707.76 | 66,039.27 |
| ಸಂಬಳಕ್ಕಾಗಿ ಸಹಾಯಾನುದಾನ | 5,282.39 | 4,883.45 | 4,919.17 | 5,037.84 | 5,193.88 |
| ಬಂಡವಾಳದ ಸ್ವತ್ತುಗಳ ಸೃಷ್ಟಿಗೆ ಸಹಾಯಾನುದಾನ | 2,724.70 | 1,862.66 | 1,815.24 | 2,722.46 | 1,272.33 |
| ಸಂಬಳೇತರ ಸಹಾಯಾನುದಾನ | 747.57 | 955.47 | 1,066.21 | 1,299.51 | 1,343.88 |
| ರಾಜಸ್ವ ವೆಚ್ಚ | 1,74,258 | 1,76,054 | 2,09,428 | 2,15,584 | 2,42,614 |
| ಸಹಾಯಾನುದಾನ ರಾಜಸ್ವ ವೆಚ್ಚದ ಶೇಕಡಾವಾರು | 30.36 | 30.54 | 27.49 | 29.09 | 27.22 |

*ಆಕರ: ಹಣಕಾಸು ಲೆಕ್ಕಗಳು*

**ಕೋಷ್ಟಕ–2.20**ರಲ್ಲಿ ನೋಡಿದಂತೆ, 2019–20 ರಿಂದ 2023–24ರ ಅವಧಿಯಲ್ಲಿ, 2020–21 ವರ್ಷವನ್ನು ಹೊರತುಪಡಿಸಿ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ನೆರವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ. 2022–23 ರವರೆಗೆ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದ ಇತರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಣಕಾಸಿನ ನೆರವು 2023–24ರ ಅವಧಿಯಲ್ಲಿ ಕಡಿಮೆಯಾಗಿದೆ. 2023–24ರಲ್ಲಿ, ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು ಹಿಂದಿನ ವರ್ಷಕ್ಕಿಂತ ₹3,332 ಕೋಟಿಗಳಷ್ಟು (ಶೇಕಡಾ ಐದು) ಹೆಚ್ಚಾಗಿದೆ. ಈ ಏರಿಕೆಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಿದ ₹2,951 ಕೋಟಿ (ಶೇಕಡಾ ಏಳು) ಸಹಾಯದ ಹೆಚ್ಚಳದಿಂದಾಗಿದೆ.

2020–21ರ ಅವಧಿಯಲ್ಲಿ ಕಡಿಮೆಯಾದ ಸಂಬಳದ ಹಣಕಾಸಿನ ನೆರವು ಅಂದಿನಿಂದ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಕಂಡರೆ, 2022–23 ಹೊರತುಪಡಿಸಿ ಬಂಡವಾಳ ಸ್ವತ್ತುಗಳ ಸೃಷ್ಟಿಗೆ ಸಹಾಯವು ಕಡಿಮೆಯಾಗುವ ಪ್ರವೃತ್ತಿಯನ್ನು ತೋರಿಸಿದೆ. 2023–24ರ ಅವಧಿಯಲ್ಲಿ ಬಂಡವಾಳ ಆಸ್ತಿಗಳ ಸೃಷ್ಟಿಗೆ ₹1,272 ಕೋಟಿ ಒದಗಿಸಿದ್ದು ಹಿಂದಿನ ವರ್ಷಕ್ಕಿಂತ ₹1,450 ಕೋಟಿ (ಸುಮಾರು 53 ಪ್ರತಿಶತ)

ಕಡಿಮೆಯಾಗಿದೆ. 2023–24ರಲ್ಲಿ, ಸಂಬಳ ಮತ್ತು ಸಂಬಳೇತರ ಆರ್ಥಿಕ ನೆರವು ಹಿಂದಿನ ವರ್ಷಕ್ಕಿಂತ ಕ್ರಮವಾಗಿ ಶೇಕಡಾ 3.10 ಮತ್ತು ಶೇಕಡಾ 3.41ರಷ್ಟು ಹೆಚ್ಚಾಗಿದೆ.

### *2.5.3 ಬಂಡವಾಳ ವೆಚ್ಚ*

ಬಂಡವಾಳ ವೆಚ್ಚವು ಹೆಚ್ಚಿನ ಗುಣಕ ಪರಿಣಾಮವನ್ನು ಹೊಂದಿದೆ, ಇದು ಆರ್ಥಿಕತೆಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆಗೆ ಪ್ರಮುಖ ಕೊಡುಗೆಯಾಗಿದೆ.

ಬಂಡವಾಳ ವೆಚ್ಚವು ಪ್ರಾಥಮಿಕವಾಗಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಇತ್ಯಾದಿಗಳಂತಹ ಸ್ಥಿರ ಮೂಲಸೌಕರ್ಯ ಸ್ವತ್ತುಗಳ ರಚನೆಯ ಮೇಲಿನ ವೆಚ್ಚವನ್ನು ಒಳಗೊಂಡಿರುತ್ತದೆ. ಬಂಡವಾಳ ವೆಚ್ಚವನ್ನು ಆಯವ್ಯಯ ಬೆಂಬಲ ಮತ್ತು ಹೆಚ್ಚುವರಿ ಆಯವ್ಯಯ / ಆಯವ್ಯಯದ ಹೊರಗಿನ ಸಂಪನ್ಮೂಲಗಳಿಂದ ಭರಿಸಲಾಗುತ್ತದೆ. ಇತ್ತೀಚೆಗೆ, ಮೂಲಸೌಕರ್ಯ ಅಗತ್ಯತೆಗಳು ಬಹುಪಟ್ಟು ಹೆಚ್ಚಿವೆ ಮತ್ತು ಬಂಡವಾಳದ ವೆಚ್ಚದ ಬಹುಭಾಗವನ್ನು ನಿರ್ವಹಿಸಲು ವಿಶೇಷ ಉದ್ದೇಶ ಸಾಧನಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದ ಬಂಡವಾಳ ವೆಚ್ಚವು 2019–20ರಲ್ಲಿನ ₹35,530 ಕೋಟಿಯಿಂದ 2023–24ರಲ್ಲಿ ₹52,120 ಕೋಟಿಗೆ ಏರಿಕೆಯಾಗಿದೆ. 2023–24ರ ಅವಧಿಯಲ್ಲಿ, ಹಿಂದಿನ ವರ್ಷಕ್ಕೆ (₹57,349 ಕೋಟಿ) ಹೋಲಿಸಿದರೆ ಬಂಡವಾಳ ವೆಚ್ಚವು ₹5,229 ಕೋಟಿಗಳಷ್ಟು ಕಡಿಮೆಯಾಗಿದೆ. ಆಯವ್ಯಯ ಹಂಚಿಕೆಗೆ ಬಂಡವಾಳ ವೆಚ್ಚದ ಹೋಲಿಕೆಯನ್ನು **ನಕ್ಷೆ–2.13**ರಲ್ಲಿ ಸೂಚಿಸಲಾಗಿದೆ.

**ನಕ್ಷೆ–2.13: 2019–20 ರಿಂದ 2023–24ರವರೆಗಿನ ಬಂಡವಾಳ ವೆಚ್ಚದ ಪ್ರವೃತ್ತಿ**




*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ನಕ್ಷೆಯಲ್ಲಿ ನೋಡಿದಂತೆ, 2021–22 ಮತ್ತು 2022–23 ಹೊರತುಪಡಿಸಿ ಎಲ್ಲಾ ವರ್ಷಗಳಲ್ಲಿ ನೈಜ ವೆಚ್ಚವು ಅಂದಾಜು ಬಂಡವಾಳ ವೆಚ್ಚಕ್ಕಿಂತ ಕಡಿಮೆಯಾಗಿದೆ. 2020–21ರಿಂದ ಬಂಡವಾಳ ವೆಚ್ಚಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಬಡ್ಡಿರಹಿತ ಸಾಲವನ್ನು ಒದಗಿಸಿದ ಕಾರಣ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾಗಿದೆ. **ಕೋಷ್ಟಕ–2.21**ರಲ್ಲಿ ವಿವರಿಸಿದಂತೆ 2020–21ರಿಂದ ರಾಜ್ಯವು ₹8,035 ಕೋಟಿಗಳನ್ನು ಸ್ವೀಕರಿಸಿದೆ. ಕೇಂದ್ರದ ನೆರವಿನ ಹೊರತಾಗಿಯೂ, ಜಿಎಸ್‌ಡಿಪಿ ಬಂಡವಾಳ ವೆಚ್ಚದ ಅನುಪಾತವು ಶೇಕಡಾ ಎರಡರಿಂದ ಮೂರರ ನಡುವೆ ಮುಂದುವರಿಯುತ್ತಿದೆ.

**ಕೋಷ್ಟಕ–2.21: ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಸಹಾಯ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಸಾಲಗಳು**

(₹ ಕೋಟಿಗಳಲ್ಲಿ)

| 2020–21 | 2021–22 | 2022–23 | 2023–24 |
|---|---|---|---|
| 305 | 452 | 3,399 | 3,879 |

**(ಎ) ಬಂಡವಾಳ ವೆಚ್ಚದಲ್ಲಿ ಪ್ರಮುಖ ಬದಲಾವಣೆಗಳು**

ಹಿಂದಿನ ವರ್ಷಕ್ಕೆ ಹೋಲಿಸಿದರೆ 2023–24ರ ಅವಧಿಯಲ್ಲಿ ಬಂಡವಾಳದ ವೆಚ್ಚದಲ್ಲಿ ವಿವಿಧ ಖಾತೆಗಳ ಗಮನಾರ್ಹ ಹೆಚ್ಚಳ ಅಥವಾ ಇಳಿಕೆಯ ಗಣನಾರ್ಹ ಪ್ರಕರಣಗಳನ್ನು **ಕೋಷ್ಟಕ–2.22** ತೋರಿಸುತ್ತದೆ.

**ಕೋಷ್ಟಕ–2.22: 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ಬಂಡವಾಳ ವೆಚ್ಚ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕ ಶೀರ್ಷಿಕೆಗಳು | 2022–23 | 2023–24 | ಏರಿಕೆ (+) / ಇಳಿಕೆ (–) | ವ್ಯತ್ಯಾಸ ಶತಾಂಶ |
|---|---|---|---|---|
| **5054 – ರಸ್ತೆ ಮತ್ತು ಸೇತುವೆಗಳ ಮೇಲಿನ ಬಂಡವಾಳ ವೆಚ್ಚ** | 12,706.29 | 8,760.80 | (–)3,945.49 | (–)31.05 |
| **4701 – ಮಧ್ಯಮ ನೀರಾವರಿ ಮೇಲಿನ ಬಂಡವಾಳದ ವೆಚ್ಚ** | 17,989.46 | 14,655.02 | (–)3,334.44 | (–)18.54 |
| **4217 – ನಗರಾಭಿವೃದ್ಧಿ ಮೇಲಿನ ಬಂಡವಾಳದ ವೆಚ್ಚ** | 5,818.39 | 297.50 | (–)5,520.89 | (–)94.89 |
| **4059 – ಲೋಕೋಪಯೋಗಿ ಕಾಮಗಾರಿಗಳ ಮೇಲಿನ ಬಂಡವಾಳ ವೆಚ್ಚ** | 1,037.07 | 2,338.95 | 1,301.88 | 125.53 |
| **4215 – ನೀರು ಸರಬರಾಜು ಮತ್ತು ನೈರ್ಮಲ್ಯದ ಮೇಲಿನ ಬಂಡವಾಳದ ವೆಚ್ಚ** | 911.92 | 5,981.22 | 5,069.30 | 555.89 |
| **5475 – ಇತರೆ ಸಾಮಾನ್ಯ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚ** | 70.59 | 3597.69 | 3527.10 | 4996.60 |
| **4210 – ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಮೇಲಿನ ಬಂಡವಾಳ ವೆಚ್ಚ** | 1,230.26 | 1,113.82 | (–)116.44 | (–)9.46 |

*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕವು ಮುಖ್ಯವಾಗಿ ಬಂಡವಾಳ ವೆಚ್ಚದಲ್ಲಿನ ಹೆಚ್ಚಳವು ನೀರು ಸರಬರಾಜು ಮತ್ತು ನೈರ್ಮಲ್ಯದ ಮೂಲಸೌಕರ್ಯ ಅಭಿವೃದ್ಧಿಗೆ ಆರ್ಥಿಕ ಬೆಂಬಲವಾಗಿ ಇತರ ಸಾಮಾನ್ಯ ಆರ್ಥಿಕ ಸೇವೆಗಳ ಮೇಲಿನ ಬಂಡವಾಳದ ವೆಚ್ಚ ಮತ್ತು ನಂತರ ಸಾರ್ವಜನಿಕ ಕಾಮಗಾರಿಗಳ ಅಡಿಯಲ್ಲಿ ಎಂದು ಪ್ರಕಟಪಡಿಸುತ್ತದೆ. ಬಂಡವಾಳ ವೆಚ್ಚದಲ್ಲಿ ಇಳಿಕೆಯು ಮುಖ್ಯವಾಗಿ ನಗರಾಭಿವೃದ್ಧಿ, ರಸ್ತೆಗಳು ಮತ್ತು ಸೇತುವೆಗಳು, ರಸ್ತೆ ಸಾರಿಗೆ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿತ್ತು. ರಾಜ್ಯವು (ಎಂಟಿಎಫ್‌ಪಿ 2023–27) ವಿಶೇಷವಾಗಿ ಶಿಕ್ಷಣ, ಆರೋಗ್ಯ, ಕೌಶಲ್ಯ ಅಭಿವೃದ್ಧಿ, ಮೂಲಸೌಕರ್ಯ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಬಂಡವಾಳ ಹೂಡಿಕೆ ಮಾಡುವಲ್ಲಿ ಪ್ರಾಥಮಿಕ ಪಾತ್ರವನ್ನು ಹೊಂದಿದೆ ಎಂದು ಒಪ್ಪಿಕೊಂಡಿದ್ದರೂ, ರಸ್ತೆಗಳು ಮತ್ತು ಸೇತುವೆಗಳು, ನಗರಾಭಿವೃದ್ಧಿ ಮತ್ತು ಆರೋಗ್ಯದ ಅಡಿಯಲ್ಲಿ ಬಂಡವಾಳ ವೆಚ್ಚವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ಕೋಷ್ಟಕದಿಂದ ತಿಳಿಯಬಹುದಾಗಿದೆ.

### *2.5.4 ಬಂಡವಾಳ ವೆಚ್ಚದ ಗುಣಮಟ್ಟ*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯ್ದೆಯ (ಕೆಎಫ್‌ಆರ್‌ಎ) ನಂತರದ ಚೌಕಟ್ಟಿನಲ್ಲಿ, ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು (ಸಾಲಗಳು) ಕಡಿಮೆ ಮಟ್ಟದಲ್ಲಿ ಇಟ್ಟುಕೊಳ್ಳಬೇಕಿದೆ ಆದರೂ, ತನ್ನ ಬಂಡವಾಳ ವೆಚ್ಚ/ಹೂಡಿಕೆ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಹೆಚ್ಚುವರಿಯಾಗಿ, ರಾಜ್ಯ ಸರ್ಕಾರವು ಸಾಲಗಳು ಪಡೆದ ನಿಧಿಯ ವೆಚ್ಚದಲ್ಲಿ ಸಹಾಯಧನ ರೂಪದಲ್ಲಿ ತನ್ನ ಹೂಡಿಕೆಯ ಮೇಲೆ ಸಾಕಷ್ಟು ಲಾಭವನ್ನು ಗಳಿಸುವ ಕ್ರಮಗಳನ್ನು ಪ್ರಾರಂಭಿಸಬೇಕು ಮತ್ತು ಹಣಕಾಸಿನ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆಯನ್ನು ತುಂಬಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದರೆ 2023–24ರ ಅವಧಿಯಲ್ಲಿ ಸರ್ಕಾರವು ಕೈಗೊಂಡ ಹೂಡಿಕೆಗಳು ಮತ್ತು ಇತರ ಬಂಡವಾಳ ವೆಚ್ಚಗಳ ವಿಸ್ತೃತ ಆರ್ಥಿಕ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ

#### 2.5.4.1 ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿ ಹೂಡಿಕೆಗಳು

31 ಮಾರ್ಚ್ 2024 ರಲ್ಲಿದ್ದಂತೆ, ಸರ್ಕಾರವು ₹73,486.87 ಕೋಟಿಗಳ ಮೊತ್ತವನ್ನು, 100[12] ಸರ್ಕಾರಿ ಕಂಪನಿಗಳಲ್ಲಿ (₹62,440.34 ಕೋಟಿ), ಒಂಬತ್ತು ಶಾಸನಬದ್ಧ ನಿಗಮಗಳು (₹4,328.44 ಕೋಟಿ), 44 ಜಂಟಿ ಸ್ಟಾಕ್ ಕಂಪನಿಗಳು (₹6,279.50 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಆರು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹438.59 ಕೋಟಿ) ಹೂಡಿಕೆ ಮಾಡಿದೆ. 2023–24ರಲ್ಲಿ, ಸರ್ಕಾರವು ₹687.08[13] ಕೋಟಿಯನ್ನು ಈಕ್ವಿಟಿಯಾಗಿ ಸರ್ಕಾರಿ ಕಂಪನಿಗಳಲ್ಲಿ (ಕಾರ್ಯನಿರತ) (₹363.08 ಕೋಟಿ), ಜಂಟಿ ಸ್ಟಾಕ್ ಕಂಪನಿಗಳಲ್ಲಿ (₹208.83 ಕೋಟಿ) ಮತ್ತು ಶಾಸನಬದ್ಧ ನಿಗಮಗಳಲ್ಲಿ (₹131.91 ಕೋಟಿ) ಹೂಡಿಕೆ ಮಾಡಿದೆ.

ಶಾಸನಬದ್ಧ ನಿಗಮಗಳ ಅಡಿಯಲ್ಲಿ 2023–24ರ ಅವಧಿಯಲ್ಲಿ ಹೂಡಿಕೆಯಲ್ಲಿ ಹೆಚ್ಚಳ ಕಂಡುಬಂದಿದೆ ಮತ್ತು ಹಿಂದಿನ ವರ್ಷಕ್ಕಿಂತ ಇದು ಶೇಕಡಾ ಮೂರುರಷ್ಟು ಹೆಚ್ಚಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆಯ ಹಿಂತೆಗೆದುಕೊಳ್ಳುವಿಕೆಯಿಂದಾಗಿ ಸಹಕಾರ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ಹೂಡಿಕೆಯು ₹16.73 ಕೋಟಿಗಳಷ್ಟು ಕಡಿಮೆಯಾಗಿದೆ.

ಶಾಸನಬದ್ಧ ನಿಗಮಗಳು ಮತ್ತು ಸರ್ಕಾರಿ ಕಂಪನಿಗಳ ಅಡಿಯಲ್ಲಿ ಹೂಡಿಕೆಯು ವಿವಿಧ ಕ್ಷೇತ್ರಗಳ ಅಡಿಯಲ್ಲಿ ಹರಡಿದ್ದು[14] ಮತ್ತು ಕೆಲವನ್ನು ಹೆಸರಿಸಲು ನೀರಾವರಿ, ವಿದ್ಯುತ್, ಮೂಲಸೌಕರ್ಯ, ಹಣಕಾಸು ಇತ್ಯಾದಿ.

- **ಹೂಡಿಕೆಯ ಮೇಲಿನ ಪ್ರತಿಫಲ**

ಕಳೆದ ಐದು ವರ್ಷಗಳಲ್ಲಿ ಹೂಡಿಕೆಯ ವಿವರಗಳು ಮತ್ತು ಅದರ ಮೇಲಿನ ಆದಾಯವನ್ನು **ಕೋಷ್ಟಕ–2.23**ರಲ್ಲಿ ಸೂಚಿಸಲಾಗಿದೆ. ಹೂಡಿಕೆಯ ಮೇಲಿನ ಲಾಭವು ಅತ್ಯಲ್ಪವಾಗಿದೆ ಎಂಬುದು ಕೋಷ್ಟಕದಿಂದ ಸ್ಪಷ್ಟವಾಗಿದೆ.

**ಕೋಷ್ಟಕ–2.23: ಹೂಡಿಕೆಯ ಮೇಲಿನ ಪ್ರತಿಫಲ**

| | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| **ವರ್ಷದ ಅಂತ್ಯದಲ್ಲಿ ಹೂಡಿಕೆಗಳು (₹ ಕೋಟಿಯಲ್ಲಿ)** | 67,816.71 | 68,256.68 | 70,657.43 | 72,799.77 | 73,486.87 |
| **ಪ್ರತಿಫಲ (₹ ಕೋಟಿಯಲ್ಲಿ)** | 53.64 | 80.7 | 349.77 | 425.23 | 290.74 |
| **ಪ್ರತಿಫಲ (ಶೇಕಡಾ)** | 0.10 | 0.12 | 0.49 | 0.58 | 0.40 |
| **ಸರ್ಕಾರಿ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರ (ಶೇಕಡಾ)** | 7.51 | 7.29 | 6.93 | 7.08 | 6.82 |
| **ಬಡ್ಡಿ ದರ ಮತ್ತು ಹೂಡಿಕೆಯ ಮೇಲಿನ ಪ್ರತಿಫಲದ ನಡುವಿನ ವ್ಯತ್ಯಾಸ (ಶೇಕಡಾ)** | (–)7.41 | (–)7.17 | (–)6.44 | (–)6.50 | (–)6.42 |

*ಆಕರ: ಹಣಕಾಸು ಲೆಕ್ಕಗಳು*

*ಸರಾಸರಿ ಹೂಡಿಕೆಯ ಮೇಲಿನ ಪ್ರತಿಫಲ = ಬಡ್ಡಿ ಪಾವತಿಗಳು/ಹಿಂದಿನ ಮತ್ತು ಪ್ರಸ್ತುತ ಹಣಕಾಸು ವರ್ಷದ ಬಾಕಿ ಉಳಿದಿರುವ ಹೊಣೆಗಾರಿಕೆಗಳ ಸರಾಸರಿ*100.*

[12] 16 ನಿಷ್ಕ್ರಿಯ ಸರ್ಕಾರಿ ಕಂಪನಿಗಳಲ್ಲಿ ಹೂಡಿದ ₹68 ಕೋಟಿಗಳನ್ನು ಒಳಗೊಂಡಿದೆ

[13] ಇದು ಸಹಕಾರಿ ಸಂಸ್ಥೆಗಳಲ್ಲಿ (–)₹16.47 ಕೋಟಿಗಳ ಹೂಡಿಕೆ ಹಿಂತೆಗೆತ, ಹಿಂದಿನ ಅವಧಿ ಹೊಂದಾಣಿಕೆಗಳು (ಐಜಿಎಎಸ್ 4 – ₹22.91 ಕೋಟಿ) ಮತ್ತು ಪ್ರೊಫಾರ್ಮಾ ಕಡಿತಗಳ ₹280.63 ಕೋಟಿಗಳನ್ನು ಒಳಗೊಂಡಿದೆ.

[14] ನೀರಾವರಿ (₹36,779.37 ಕೋಟಿ), ವಿದ್ಯುಚ್ಛಕ್ತಿ (₹13,119.14 ಕೋಟಿ), ಮೂಲಭೂತ ಸೌಲಭ್ಯ (₹4,741.21 ಕೋಟಿ), ಆರ್ಥಿಕ (₹3,696.50 ಕೋಟಿ), ಸಾರಿಗೆ (₹2,946.92 ಕೋಟಿ), ವಸತಿ (₹1,233.05 ಕೋಟಿ), ಕೈಗಾರಿಕೆ (₹1,848.43 ಕೋಟಿ), ಮತ್ತು ಇತರೆ (₹2,333.48 ಕೋಟಿ).

ಹೂಡಿಕೆಯ ಮೇಲಿನ ಪ್ರತಿಫಲವು 2019–20ರಲ್ಲಿದ್ದ ₹53.64 ಕೋಟಿಯಿಂದ 2023–24ರಲ್ಲಿ ₹290.74 ಕೋಟಿಗೆ ಏರಿಕೆಯಾಗಿದೆ, ಆದರೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇಕಡಾ 32 (₹134.49 ಕೋಟಿ)ರಷ್ಟು ಕಡಿಮೆಯಾಗಿದೆ. ಪ್ರಮುಖವಾಗಿ ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ (₹234.24 ಕೋಟಿ), ಕರ್ನಾಟಕ ರೇಷ್ಮೆ ಕಾರ್ಖಾನೆ ನಿಗಮ ನಿಯಮಿತ (₹16.69 ಕೋಟಿ) ಇತ್ಯಾದಿಗಳ ಅಡಿಯಲ್ಲಿ ಇಳಿಕೆಯಾಗಿದೆ.

ಸಂಸ್ಥೆಗಳು ಗಳಿಸಿದ ಲಾಭದ ಶೇಕಡಾ 30ಕ್ಕಿಂತ ಕಡಿಮೆಯಿಲ್ಲದಂತೆ ಲಾಭಾಂಶವನ್ನು ಸರ್ಕಾರಕ್ಕೆ ಪಾವತಿಸಲು ಮಾರ್ಗಸೂಚಿಗಳನ್ನು ಹೊರಡಿಸುವ ಮೂಲಕ ರಾಜ್ಯ ಸರ್ಕಾರವು ಕೈಗೊಂಡ ಕ್ರಮದಿಂದಾಗಿ 2019–20 ರಿಂದ 2023–24ರ ಅವಧಿಯಲ್ಲಿ ಪ್ರತಿಫಲವು ಶೇಕಡಾ 0.10 ರಿಂದ 0.40ಕ್ಕೆ ಏರಿಕೆಯಾಗಿದೆ. ಆದಾಗ್ಯೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇಕಡಾವಾರು ಪ್ರತಿಫಲವು 0.58 ರಿಂದ 2023–24ರಲ್ಲಿ 0.40 ಕ್ಕೆ ಇಳಿದಿದೆ.

ರಾಜ್ಯದಲ್ಲಿ ಸರ್ಕಾರವು ಹೂಡಿಕೆ ಮಾಡಿರುವ 159 ಎಸ್‌ಪಿಎಸ್‌ಇಗಳಲ್ಲಿ 16 ಕೆಲಸ ಮಾಡುತ್ತಿಲ್ಲ ಮತ್ತು 54 2022–23ರಲ್ಲಿ ನಷ್ಟವನ್ನು ಅನುಭವಿಸಿವೆ. ನಷ್ಟವನ್ನುಂಟುಮಾಡುತ್ತಿರುವ ಪ್ರಮುಖ ಕಂಪನಿಗಳಲ್ಲಿನ ಹೂಡಿಕೆಯನ್ನು ನಂತರದ ಕಂಡಿಕೆಯಲ್ಲಿ ಚರ್ಚಿಸಲಾಗಿದೆ.

- **ನಷ್ಟದಲ್ಲಿರುವ ಕಂಪನಿಗಳಲ್ಲಿ ಹೂಡಿಕೆ**

ಮೇಲಿನ ಹೇಳಿರುವ ಹೂಡಿಕೆಯು ₹43,355 ಕೋಟಿಗಳಷ್ಟು (ಶೇಕಡಾ 59) ಗಮನಾರ್ಹ ನಷ್ಟವನ್ನು ಹೊಂದಿರುವ ಈ ಕೆಳಗಿನ ಕಂಪನಿಗಳು/ನಿಗಮಗಳಲ್ಲಿ ಮಾಡಿರುವ ಹೂಡಿಕೆಗಳನ್ನು ಒಳಗೊಂಡಿತ್ತು ಮತ್ತು ಹೂಡಿಕೆಗಳು ಗಣನೀಯ ಪ್ರಮಾಣದಲ್ಲಿದ್ದವು (**ಕೋಷ್ಟಕ–2.24**).

**ಕೋಷ್ಟಕ–2.24: ನಷ್ಟದಲ್ಲಿರುವ ಕಂಪನಿಗಳಲ್ಲಿ ಮಾಡಿದ ಹೂಡಿಕೆಗಳು**

(₹ ಕೋಟಿಗಳಲ್ಲಿ)

| ಶಾಸನಬದ್ಧ ಕಂಪನಿ/ನಿಗಮ | 2019–20ರ ಅಂತ್ಯದಲ್ಲಿದ್ದ ಸಂಚಿತ ನಷ್ಟ | 2020–21ರ ಅಂತ್ಯದಲ್ಲಿದ್ದ ಸಂಚಿತ ನಷ್ಟ | 2021–22ರ ಅಂತ್ಯದಲ್ಲಿದ್ದ ಸಂಚಿತ ನಷ್ಟ | 2022–23ರ ಅಂತ್ಯದಲ್ಲಿದ್ದ ಸಂಚಿತ ನಷ್ಟ | 2023–24ರವರೆಗೆ ಮಾಡಿದ ಹೂಡಿಕೆ |
|---|---|---|---|---|---|
| ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 881.55 | 1,068.00 | 1,068 | 1,919.66 | 593.91 |
| ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ | 610.65 | 699.92 | 699.92 | 1,112.19 | 575.76 |
| ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ | 386.17 | 361.35 | 318.46 | 168.59 | 1,383.01 |
| ಸರಕಾರಿ ಕಂಪನಿಗಳು | | | | | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 2,811.73 | 2,946.51 | 3,419.93 | 34.70 | 23,745.34 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 4,469.21 | 5,149.92 | 6,333.94 | 7,512.32 | 13,034.03 |
| ಮೈಸೂರು ಶುಗರ್ ಕಂಪನಿ ಲಿಮಿಟೆಡ್ (ಮೈಶುಗರ್) | 460.89 | 460.89 | 463.89 | 504.02 | 335.78 |
| ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ | 425.95 | 425.95 | 519.50 | 51.95 | 237.37 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) | 1,955.76 | 2,637.98 | 5,128.24 | 6,421.87 | 1,413.95 |
| ಗುಲ್ಬರ್ಗಾ ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ನಿಯಮಿತ (ಜೆಸ್ಕಾಮ್) | 1,002.44 | 1,995.03 | 3,112.65 | 3,101.41 | 1,094.06 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಸೆಸ್ಕಾಮ್) | 875.74 | 1,242.37 | 1,965.56 | 2,388.40 | 941.37 |
| **ಒಟ್ಟು** | **13,880.09** | **16,987.92** | **23,030.09** | **23,215.11** | **43,354.58** |

*ಆಕರ: ಹಣಕಾಸು ಲೆಕ್ಕಗಳು*

₹23,215.11 ಕೋಟಿಯ ಸಂಚಿತ ನಷ್ಟದ ಪೈಕಿ ಶೇಕಡಾ 51ರಷ್ಟು ನಷ್ಟವು ರಾಜ್ಯ ವಿದ್ಯುತ್ ಕಂಪನಿಗಳ (ಎಸ್ಕಾಂಗಳು) ಕೊಡುಗೆಯಾಗಿದೆ. ಮಾರ್ಚ್ 2024ರ ಅಂತ್ಯದ ವೇಳೆಗೆ ರಾಜ್ಯ ಸರ್ಕಾರವು ₹44,246.81 ಕೋಟಿಗಳಿಗೆ ಖಾತರಿ ನೀಡಿತ್ತು, ಅದರಲ್ಲಿ ₹27,230.95 ಕೋಟಿ (ಶೇಕಡಾ 62) ಎಸ್ಕಾಂಗಳು ಮತ್ತು

ಕರ್ನಾಟಕ ವಿದ್ಯುತ್ ಕಾರ್ಪೋರೇಷನ್ ನಿಯಮಿತಗಳ ಸಾಲಕ್ಕೆ ಸಂಬಂಧಿಸಿದೆ. ಎಸ್ಕಾಂಗಳಿಗೆ ಒದಗಿಸಲಾದ ಸಹಾಯಧನಗಳು ಸುಮಾರು 62 ಪ್ರತಿಶತದಷ್ಟು ಹೆಚ್ಚಾಗಿದೆ. 2023-24ರಲ್ಲಿ ಎಸ್ಕಾಂಗಳಿಗೆ ₹18,603 ಕೋಟಿ ಸಹಾಯಧನ ನೀಡಲಾಗಿದೆ.

#### 2.5.4.2 ರಾಜ್ಯ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು

ಕಂಪನಿಗಳು, ನಿಗಮಗಳು ಮತ್ತು ಸಹಕಾರ ಸಂಸ್ಥೆಗಳಲ್ಲಿ ಹೂಡಿಕೆಯ ಜೊತೆಗೆ, ಸರ್ಕಾರವು ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡಗಳನ್ನು ಸಹ ಒದಗಿಸಿದೆ. 31 ಮಾರ್ಚ್ 2024 ರಂತೆ ಬಾಕಿ ಉಳಿದಿರುವ ಸಾಲಗಳು ಮತ್ತು ಮುಂಗಡಗಳ ಮತ್ತು ಕಳೆದ ಐದು ವರ್ಷಗಳಲ್ಲಿ ಬಡ್ಡಿ ಪಾವತಿಗಳಿಗೆ ಹೋಲಿಸಿದರೆ ಬಡ್ಡಿ ಸ್ವೀಕೃತಿಗಳ ಸ್ಥಿತಿಯನ್ನು **ಕೋಷ್ಟಕ-2.25** ಪ್ರಸ್ತುತಪಡಿಸುತ್ತದೆ

**ಕೋಷ್ಟಕ-2.25: ಕಳೆದ ಐದು ವರ್ಷಗಳ ಅವಧಿಯಲ್ಲಿ ವಿತರಿಸಲಾದ ಮತ್ತು ವಸೂಲಿ ಮಾಡಿದ ಸಾಲಗಳ ಪ್ರಮಾಣ**

(₹ ಕೋಟಿಗಳಲ್ಲಿ)

| ವಿವರಗಳು | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| **ಬಾಕಿ ಉಳಿದಿರುವ ಸಾಲಗಳ ಆರಂಭಿಕ ಶಿಲ್ಕು** | 24,981 | 28,847 | 31,247 | 35,329 | 38,101 |
| **ಮುಂಗಡ ನೀಡಿದ ಮೊತ್ತ** | 4,069 | 2,669 | 4,209 | 3,250 | 4,473 |
| **ವಸೂಲಿ ಮಾಡಿದ ಮೊತ್ತ** | 203 | 270 | 127 | 478 | 306 |
| ಬಾಕಿ ಉಳಿದ ಸಾಲಗಳ ಮೊತ್ತ | 28,847 | 31,246 | 35,329 | 38,101 | 42,268 |
| **ಪಡೆದ ಬಡ್ಡಿ** | 357 | 278 | 309 | 7 | 479 |
| **ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಸಾಲಗಳ ಬಡ್ಡಿ ದರ** | 1.24 | 0.89 | 0.87 | 0.02 | 1.13 |
| **ಬಾಕಿ ಇರುವ ಸಾಲಗಳ ಮೇಲೆ ಸರ್ಕಾರ ಪಾವತಿ ಮಾಡಿದ ಬಡ್ಡಿ ದರ** | 6.88 | 6.62 | 6.50 | 6.83 | 6.36 |
| **ಪಡೆದ ಬಡ್ಡಿ ದರ ಮತ್ತು ಪಾವತಿಸಿದ ಬಡ್ಡಿ ದರದ ನಡುವಿನ ವ್ಯತ್ಯಾಸ (ಶತಾಂಶ)** | (-)5.64 | (-)5.73 | (-)5.63 | (-)6.81 | (-)5.23 |

*ಆಕರ: ಹಣಕಾಸು ಲೆಕ್ಕಗಳು*

*ಪರಿಣಾಮಕಾರಿ ಬಡ್ಡಿ ದರ = ಬಡ್ಡಿ ಪಾವತಿಗಳು / ಪ್ರಸ್ತುತ ಆರ್ಥಿಕ ವರ್ಷದ ಬಾಕಿ ಇರುವ ಹೊಣಗಾರಿಕೆಗಳು * 100*

- 31 ಮಾರ್ಚ್ 2024ರಂತೆ ಬಾಕಿ ಉಳಿದಿರುವ ಸಾಲಗಳು ಒಟ್ಟು ₹42,268 ಕೋಟಿಗಳಾಗಿವೆ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲದ ಲೆಕ್ಕಗಳಿಗೆ ಸಂಬಂಧಿಸಿದಂತೆ ಮಾರ್ಚ್ 2024ರ ಅಂತ್ಯದ ವೇಳೆಗೆ ಬಾಕಿಯಿರುವ ಬಡ್ಡಿಯು ₹7,580.09 ಕೋಟಿ ಆಗಿತ್ತು. 2023-24ರಲ್ಲಿ, ಪಡೆದ ಬಡ್ಡಿಯು ₹479 ಕೋಟಿಗಳಷ್ಟಿತ್ತು, ಇದು ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳ ಮೇಲಿನ ಬಡ್ಡಿಯ 6.32 ಪ್ರತಿಶತದಷ್ಟು ಇದೆ. ಆದರೆ, ರಾಜ್ಯ ಸರಕಾರ ನಿರ್ವಹಿಸಿರುವ ಸಾಲಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಬಡ್ಡಿಯ ಮಾಹಿತಿ ಲಭ್ಯವಾಗಿಲ್ಲ.
- 2023-24ರಲ್ಲಿ ನೀಡಿದ ಒಟ್ಟು ಸಾಲಗಳಲ್ಲಿ (₹4,473 ಕೋಟಿ), ಸಾಮಾಜಿಕ ಸೇವೆಗಳು ₹3,078 ಕೋಟಿ (ಶೇಕಡಾ 69), ಆರ್ಥಿಕ ಸೇವೆಗಳು ₹1,380 ಕೋಟಿ (ಶೇಕಡಾ 31) ಮತ್ತು ಉಳಿದ ₹15 ಕೋಟಿ ಸರ್ಕಾರಿ ನೌಕರರಿಗೆ ಸಂಬಂಧಿಸಿದೆ. ಸಾಮಾಜಿಕ ಸೇವೆಗಳ ವಲಯದಲ್ಲಿ , ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿಯು ₹3,078 ಕೋಟಿಯ ಪ್ರಮುಖ ಪಾಲನ್ನು ಪಡೆದಿದೆ ಮತ್ತು ಆರ್ಥಿಕ ಸೇವೆಗಳಲ್ಲಿ, ಪ್ರಮುಖ ಪಾಲನ್ನು ಕೈಗಾರಿಕೆ ಮತ್ತು ಖನಿಜಗಳಿಗೆ (₹1,001 ಕೋಟಿ) ನೀಡಲಾಗಿದೆ.
- 21 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಾಲಗಳ ವಸೂಲಾತಿಯ ವಿವರವಾದ ಲೆಕ್ಕಗಳನ್ನು ಮಹಾಲೇಖಾಪಾಲರು (ಲೆ ಮತ್ತು ಹ)ಕಚೇರಿಯಿಂದ ನಿರ್ವಹಿಸಲಾಗುತ್ತದೆ ಮತ್ತು ಇತರ ಸಂಸ್ಥೆಗಳ ಲೆಕ್ಕಗಳನ್ನು ಇಲಾಖೆಗಳ ಮುಖ್ಯಸ್ಥರು / ಕರ್ನಾಟಕ ಸರ್ಕಾರದ ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುತ್ತಾರೆ.

- 2021–22 ಹೊರತುಪಡಿಸಿ 2019–20 ರಿಂದ 2022–23ರ ಅವಧಿಯಲ್ಲಿ ಸಾಲಗಳು ಮತ್ತು ಮುಂಗಡಗಳ ಮರುಪಾವತಿಯು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ. ಆದಾಗ್ಯೂ, 2023–24ರಲ್ಲಿ, ಚೇತರಿಕೆಯು ಹಿಂದಿನ ವರ್ಷಕ್ಕಿಂತ 36 ಪ್ರತಿಶತದಷ್ಟು ಕಡಿಮೆಯಾಗಿದೆ.
- ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲದ ಲೆಕ್ಕಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2024ಕ್ಕೆ ಸಾಲಗಳು ಮತ್ತು ಮುಂಗಡಗಳ ಒಟ್ಟು ಮೊತ್ತ ₹17,969.87 ಕೋಟಿಗಳು (ಅಸಲು: ₹10,389.78 ಕೋಟಿ ಮತ್ತು ಬಡ್ಡಿ: ₹7,580.09 ಕೋಟಿ) ಅವಧಿ ಮೀರಿ ಬಾಕಿ ಉಳಿದಿದೆ **(ಅನುಬಂಧ–2.5)**.
- ಆದಾಗ್ಯೂ, ಇಲಾಖೆಗಳ ಮುಖ್ಯಸ್ಥರು / ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುವ ಸಾಲಗಳ ಮಾಹಿತಿಯು ಸಂಸ್ಥೆಗಳಿಂದ ಒದಗಿಸದ ಕಾರಣ ಅವಧಿ ಮೀರಿದ ಅಸಲು ಮತ್ತು ಬಡ್ಡಿಗೆ ಸಂಬಂಧಿಸಿದ ಮಾಹಿತಿಯು ಅಪೂರ್ಣವಾಗಿದೆ ಮತ್ತು ಇದು 2023–24ರ **ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ.7**ರ ಭಾಗವಾಗಿರುವುದಿಲ್ಲ.
- ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳ (ಐಜಿಎಎಸ್–3) ನ್ವಯ ಅಂತಹ ಸಾಲಗಳನ್ನು ನಿಯಂತ್ರಿಸುವ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳಿಲ್ಲದೆ ಮಂಜೂರಾದ ಸಾಲಗಳನ್ನು ಪ್ರಕಟಪಡಿಸುವ ಅಗತ್ಯವಿದೆ. 2023–24ರಲ್ಲಿ ರಾಜ್ಯ ಸರ್ಕಾರ ಮಂಜೂರು ಮಾಡಿದ ₹4,472.85 ಕೋಟಿ ಮೌಲ್ಯದ 49 ಸಾಲಗಳಲ್ಲಿ ₹3,449.20 ಕೋಟಿ ಮೌಲ್ಯದ 35 ಸಾಲಗಳನ್ನು ಯಾವುದೇ ಷರತ್ತುಗಳನ್ನು ನಿರ್ದಿಷ್ಟಪಡಿಸದೆ ಮಂಜೂರು ಮಾಡಲಾಗಿದೆ. ಇದರ ವಿವರಗಳನ್ನು **ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ.18**ರ ಅಡಿಯಲ್ಲಿ ಹೆಚ್ಚುವರಿ ಪ್ರಕಟಗಳಾಗಿ ಲಭ್ಯವಿದೆ.

### 2.5.4.3 ಅಪೂರ್ಣ ಯೋಜನೆಗಳಲ್ಲಿ ಬಂಧಿತವಾದ ಬಂಡವಾಳ

ವ್ಯಾಜ್ಯ ಇತ್ಯಾದಿ ಕಾರಣಗಳಿಂದ ಸ್ಥಗಿತಗೊಂಡ ಕಾಮಗಾರಿಗಳನ್ನು ಒಳಗೊಂಡಿರುವ ಅಪೂರ್ಣ ಕಾಮಗಾರಿಗಳಲ್ಲಿ ಹಣವು ಬಂಧಿತವಾಗುವುದು ವೆಚ್ಚದ ಗುಣಮಟ್ಟದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. 31 ಮಾರ್ಚ್ 2024ರಲ್ಲಿದ್ದಂತೆ ಅಪೂರ್ಣ ಯೋಜನೆಗಳ ವರ್ಷವಾರು ವಿವರವನ್ನು **ಕೋಷ್ಟಕ–2.26**ರಲ್ಲಿ ತೋರಿಸಲಾಗಿದೆ ಮತ್ತು ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ–2.27**ರಲ್ಲಿ ನೀಡಲಾಗಿದೆ.

**ಕೋಷ್ಟಕ: 2.26: 31.3.2024ರಲ್ಲಿದ್ದಂತೆ ₹ ಒಂದು ಕೋಟಿಗೆ ಮೀರಿದ ಮೌಲ್ಯದ ಅಪೂರ್ಣ ಯೋಜನೆಗಳ ವರ್ಷವಾರು ವಿವರ (₹ ಕೋಟಿಯಲ್ಲಿ)**

| ವರ್ಷ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| **2013–14 ರವರೆಗೆ** | 269 | 750 | 418 |
| **2014–15** | 28 | 82 | 27 |
| **2015–16** | 43 | 173 | 95 |
| **2016–17** | 57 | 181 | 100 |
| **2017–18** | 68 | 221 | 112 |
| **2018–19** | 75 | 227 | 145 |
| **2019–20** | 153 | 524 | 378 |
| **2020–21** | 235 | 588 | 499 |
| **2021–22** | 323 | 792 | 543 |
| **2022–23** | 653 | 1,803 | 990 |
| **2023–24** | 1,236 | 3,579 | 1,175 |
| **ಒಟ್ಟು** | **3,140** | **8,920** | **4,482** |

**ಕೋಷ್ಟಕ: 2.27: 31.3.2024ರಲ್ಲಿದ್ದಂತೆ ಇಲಾಖಾವಾರು ₹ ಒಂದು ಕೋಟಿಗೆ ಮೀರಿದ ಮೌಲ್ಯದ ಅಪೂರ್ಣ ಯೋಜನೆಗಳ ವಿವರ (₹ ಕೋಟಿಯಲ್ಲಿ)**

| ಕಾಮಗಾರಿ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| ರಸ್ತೆ ಮತ್ತು ಸೇತುವೆಗಳು | 2,104 | 6,236 | 3,047 |
| ನೀರಾವರಿ | 694 | 1,709 | 921 |
| ಕಟ್ಟಡಗಳು | 208 | 590 | 337 |
| ಇತರೆ | 134 | 385 | 176 |
| **ಒಟ್ಟು** | **3,140** | **8,920** | **4,482** |

*ಆಕರ: ಹಣಕಾಸು ಲೆಕ್ಕಗಳು*

ಮಾರ್ಚ್ 2024 ಅಥವಾ ಅದಕ್ಕೂ ಮೊದಲು ಪೂರ್ಣಗೊಳ್ಳಲು ನಿಗದಿಪಡಿಸಲಾಗಿದ್ದ 3,140 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆರಂಭಿಕ ಆಯವ್ಯಯ ಅಂದಾಜಿನ ಮೊತ್ತ ₹8,920 ಕೋಟಿಗೆ

ಪ್ರತಿಯಾಗಿ ಈವರೆಗಿನ ವೆಚ್ಚವು ₹4,482 ಕೋಟಿಗಳಾಗಿವೆ. ಯೋಜನೆಗಳಲ್ಲಿನ ವಿಳಂಬವು ಐದು ವರ್ಷಗಳಿಗಿಂತ ಹೆಚ್ಚು (540), ಐದು ವರ್ಷಗಳಿಗಿಂತ ಕಡಿಮೆ ಆದರೆ ಒಂದು ವರ್ಷಕ್ಕಿಂತ ಹೆಚ್ಚು (1,364) ಮತ್ತು ಒಂದು ವರ್ಷಕ್ಕಿಂತ ಕಡಿಮೆ (1,236) ವ್ಯಾಪ್ತಿಯಲ್ಲಿದೆ. ಕಾಮಗಾರಿಯ ವಿಳಂಬಕ್ಕೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಮತ್ತು ನೀರಾವರಿ ಇಲಾಖೆಗಳು ಯಾವುದೇ ಕಾರಣಗಳನ್ನು ನೀಡಿಲ್ಲ.

31 ಮಾರ್ಚ್ 2024 ರಂತೆ ಅಪೂರ್ಣವಾಗಿದ್ದ 3,140 ಯೋಜನೆಗಳಲ್ಲಿ, 30 ಪ್ರತಿಶತ ಯೋಜನೆಗಳು ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ ಅಪೂರ್ಣವಾಗಿಯೇ ಉಳಿದಿವೆ. ಹಣಕಾಸು ನಿರ್ವಹಣ ಸಮೀಕ್ಷಾ ಸಮಿತಿ(ಎಫ್‌ಎಂಆರ್‌ಸಿ)ಸಲಹೆಯಂತೆ (ಜುಲೈ 2018) ಸಮಯ ಮತ್ತು ವೆಚ್ಚದ ಹೆಚ್ಚಳವನ್ನು ಕಡಿಮೆ ಮಾಡಲು, ಪೂರ್ಣಗೊಳ್ಳುತ್ತಿರುವ ಯೋಜನೆಗಳಿಗೆ ಆದ್ಯತೆಯ ಮೇಲೆ ಹಣವನ್ನು ಒದಗಿಸಬೇಕು. ಆದಾಗ್ಯೂ, ಅಪೂರ್ಣ ಯೋಜನೆಗಳ ಸಂಖ್ಯೆಯು 31 ಮಾರ್ಚ್ 2023 ರಂದು ಇದ್ದ 1,864 ರಿಂದ 31 ಮಾರ್ಚ್ 2024 ಕ್ಕೆ 3,140 ಕ್ಕೆ ಏರಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. **ಕಂಡಿಕೆ–2.5.3 (ಎ)** ನಲ್ಲಿ ಚರ್ಚಿಸಿದಂತೆ ರಸ್ತೆಗಳು ಮತ್ತು ಸೇತುವೆಗಳ ಮೇಲಿನ ಬಂಡವಾಳ ವೆಚ್ಚದಲ್ಲಿನ ಹಂಚಿಕೆಯಲ್ಲಿನ ಇಳಿಕೆಯು ಇದಕ್ಕೆ ಪ್ರಮುಖ ಕಾರಣವಾಗಿದೆ. ಇದಲ್ಲದೆ, ರಸ್ತೆ ಮತ್ತು ಸೇತುವೆಗಳಿಗೆ ಸಂಬಂಧಿಸಿದಂತೆ, ₹ 12.05 ಕೋಟಿ ಉಳಿತಾಯವಾಗಿದ್ದು, ಇದು ಸಂಪೂರ್ಣ ಹಂಚಿಕೆಯನ್ನು ಸಹ ಬಂಡವಾಳ ಸೃಷ್ಟಿಗೆ ವೆಚ್ಚ ಮಾಡಲು ಸಾಧ್ಯವಾಗಲಿಲ್ಲ ಎಂಬ ಅಂಶವನ್ನು ಸೂಚಿಸುತ್ತದೆ. ಈ ಮೇಲಿನ ಎಲ್ಲಾ ಯೋಜನೆಗಳನ್ನು ಸಮಯ ಮೀರಿದ ಕಾರಣ ಮತ್ತು ಹೆಚ್ಚಿನ ವೆಚ್ಚವನ್ನು ತಪ್ಪಿಸಲು ವಿಳಂಬವಿಲ್ಲದೆ ಪೂರ್ಣಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

#### 2.5.4.4 ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳು

ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಸರ್ಕಾರ ಅಥವಾ ಶಾಸನಬದ್ಧ ಘಟಕ ಮತ್ತು ಖಾಸಗಿ ವಲಯದ ಘಟಕದ ನಡುವಿನ ಒಂದು ವ್ಯವಸ್ಥೆಯಾಗಿದ್ದು, ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಸಾರ್ವಜನಿಕರ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಒಟ್ಟಾಗಿ ಕೆಲಸ ಮಾಡಲು ಅನುವು ಮಾಡಿಕೊಡುವ ಚೌಕಟ್ಟನ್ನು ಒದಗಿಸುತ್ತದೆ. ಕರ್ನಾಟಕದಲ್ಲಿ, ಪಿಪಿಪಿ ನೀತಿಯು ಮೂಲಭೂತ ಸೌಕರ್ಯಗಳ ಗುಣಮಟ್ಟ ಮತ್ತು ಪ್ರಮಾಣವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಮತ್ತು ಪಿಪಿಪಿ ಯೋಜನೆಗಳನ್ನು ಸ್ವೀಕರಿಸುವ ಮತ್ತು ಮೌಲ್ಯಮಾಪನ ಮಾಡುವ ಒಂದು ನೋಡಲ್ ಏಜೆನ್ಸಿಯಾದ ಪಿಪಿಪಿ ಕೋಶ ಮೂಲಕ ಕಾರ್ಯಗತಗೊಳಿಸಲಾಗುತ್ತದೆ. ಪಿಪಿಪಿ ಅಡಿಯಲ್ಲಿ ತೆಗೆದುಕೊಳ್ಳಲಾದ ಒಟ್ಟು ಯೋಜನೆಗಳು ಮತ್ತು ಕೈಬಿಡಲಾದ ಯೋಜನೆಗಳನ್ನು **ಕೋಷ್ಟಕ–2.28**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–2.28: 31 ಮಾರ್ಚ್ 2024ರಲ್ಲಿದ್ದಂತೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳ ಸ್ಥಿತಿ**

(₹ **ಕೋಟಿಗಳಲ್ಲಿ**)

| ಕ್ರ.ಮ. ಸಂಖ್ಯೆ | ಇಲಾಖೆ | ಒಟ್ಟು ಯೋಜನೆಗಳು | | ಕೈಬಿಡಲಾದ ಯೋಜನೆಗಳು | |
|---|---|---|---|---|---|
| | | ಸಂಖ್ಯೆ | ಅಂದಾಜು ವೆಚ್ಚ | ಸಂಖ್ಯೆ | ಅಂದಾಜು ವೆಚ್ಚ |
| 1 | ಪ್ರವಾಸೋದ್ಯಮ | 7 | 201.40 | 1 | – |
| 2 | ಯುವ ಸಬಲೀಕರಣ ಮತ್ತು ಕ್ರೀಡೆ | 9 | 1,505.15 | 2 | 131.15 |
| 3 | ಪಶು ಸಂಗೋಪನೆ | 3 | 132.50 | – | – |
| 4 | ಸಾರಿಗೆ | 2 | 240.00 | – | – |
| 5 | ಮೂಲಭೂತ ಸೌಕರ್ಯ ಅಭಿವೃದ್ಧಿ | 11 | 5,189.00 | – | – |
| ಒಟ್ಟು | | **32** | **7,268.05** | **3** | **131.15** |

*ಆಕರ: ಮೂಲಭೂತ ಸೌಕರ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ*

### *2.5.5 ವೆಚ್ಚದ ಆದ್ಯತೆಗಳು*

ಸಾಮಾಜಿಕ ವಲಯ ಮತ್ತು ಆರ್ಥಿಕ ಮೂಲಭೂತಸೌಕರ್ಯಕ್ಕೆ ಸಂಬಂಧಿಸಿದ ವೆಚ್ಚದ ಜವಾಬ್ದಾರಿಗಳು ಬಹುತೇಕ ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿಯ ಮಟ್ಟವನ್ನು ಹೆಚ್ಚಿಸಲು ರಾಜ್ಯಗಳು ಶಿಕ್ಷಣ,

ಆರೋಗ್ಯ ಮುಂತಾದ ಪ್ರಮುಖ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸುವ ಅಗತ್ಯವಿದೆ. ನಿರ್ದಿಷ್ಟ ವೆಚ್ಚದ ಶೀರ್ಷಿಕೆಗೆ ನೀಡಲಾದ ಹಂಚಿಕೆಯು ಸಾಮಾನ್ಯ ವರ್ಗದ ರಾಜ್ಯದ (ಜಿಸಿಎಸ್) ಸರಾಸರಿಗಿಂತ ಕಡಿಮೆಯಿದ್ದರೆ/ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ವಿತ್ತೀಯ ಆದ್ಯತೆಯನ್ನು (ಒಟ್ಟಾರೆ ವೆಚ್ಚಕ್ಕೆ ವೆಚ್ಚದ ವರ್ಗದ ಅನುಪಾತ) ನಿರ್ದಿಷ್ಟ ವಲಯಕ್ಕೆ ನೀಡಲಾಗಿದೆ ಎನಿಸುತ್ತದೆ. ಒಟ್ಟು ವೆಚ್ಚಕ್ಕೆ ಈ ಘಟಕಗಳ ಅನುಪಾತವು ಹೆಚ್ಚಾಗಿದ್ದರೆ , ವೆಚ್ಚದ ಗುಣಮಟ್ಟವನ್ನು ಉತ್ತಮವೆಂದು ಪರಿಗಣಿಸಲಾಗುತ್ತದೆ. ಪ್ರಸಕ್ತ ವರ್ಷ 2023–24ರಲ್ಲಿ ಜಿಸಿಎಸ್ ಮತ್ತು ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹಣಕಾಸಿನ ಆದ್ಯತೆಯನ್ನು **ಕೋಷ್ಟಕ–2.29** ವಿಶ್ಲೇಷಿಸುತ್ತದೆ.

**ಕೋಷ್ಟಕ–2.29: 2023–24ರಲ್ಲಿ ರಾಜ್ಯಗಳ ವಿತ್ತೀಯ ಆದ್ಯತೆ**

**(ಶೇಕಡಾವಾರು)**

| | ಒಟ್ಟು ವೆಚ್ಚ / ಜಿಎಸ್‌ಡಿಪಿ | ಬಂಡವಾಳ ವೆಚ್ಚ / ಒಟ್ಟು ವೆಚ್ಚ | ಅಭಿವೃದ್ಧಿ ವೆಚ್ಚ / ಒಟ್ಟು ವೆಚ್ಚ | ಶಿಕ್ಷಣ / ಒಟ್ಟು ವೆಚ್ಚ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ / ಒಟ್ಟು ವೆಚ್ಚ |
|---|---|---|---|---|---|
| **ಸಾಮಾನ್ಯ ವರ್ಗ ರಾಜ್ಯಗಳು (ಸಾವರಾ)** | 15.66 | 16.50 | 67.93 | 14.36 | 5.71 |
| **ಕರ್ನಾಟಕ** | 11.65 | 17.44 | 70.13 | 11.47 | 4.50 |

*ಆಕರ: ಹಣಕಾಸು ಲೆಕ್ಕಗಳು*

*ಒಟ್ಟು ವೆಚ್ಚ, ಬಂಡವಾಳ ವೆಚ್ಚ, ಅಭಿವೃದ್ಧಿ ವೆಚ್ಚ (ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಒಟ್ಟು ವೆಚ್ಚವನ್ನು ಒಳಗೊಂಡಿದೆ)*

2023–24ರ ತುಲನಾತ್ಮಕ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ.

- ರಾಜ್ಯದ ಬಂಡವಾಳ ವೆಚ್ಚ ಮತ್ತು ಒಟ್ಟು ವೆಚ್ಚ ಅನುಪಾತವು ಜಿಸಿಎಸ್ ಅನುಪಾತಕ್ಕಿಂತ ಹೆಚ್ಚಾಗಿರುತ್ತದೆ, ಇದು ಇತರ ಜಿಸಿಎಸ್ ಗಳಿಗೆ ಹೋಲಿಸಿದರೆ ರಾಜ್ಯವು ಉತ್ತಮ ಗುಣಮಟ್ಟದ ವೆಚ್ಚವನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ.
- ಜಿಸಿಎಸ್ ಗೆ ಹೋಲಿಸಿದರೆ ರಾಜ್ಯದ ಅನಮ್ಯ ವೆಚ್ಚ / ಒಟ್ಟು ವೆಚ್ಚ ಅನುಪಾತವು ಹೆಚ್ಚಿತ್ತು.
- ಸಾಮಾನ್ಯ ವರ್ಗ ರಾಜ್ಯಗಳಿಗೆ ಹೋಲಿಸಿದರೆ ಹೋಲಿಸಿದರೆ ರಾಜ್ಯದ ಶಿಕ್ಷಣ/ ಒಟ್ಟು ವೆಚ್ಚ ಅನುಪಾತವು ಕಡಿಮೆಯಾಗಿದೆ.
- ಒಟ್ಟು ವೆಚ್ಚಕ್ಕೆ ಆರೊಗ್ಯ ವೆಚ್ಚದ ಅನುಪಾತವು ಸಾಮಾನ್ಯ ವರ್ಗ ರಾಜ್ಯಗಳ ಅನುಪಾತಕ್ಕೆ ಹೋಲಿಸಿದರೆ ಕಡಿಮೆ ಇರುವುದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ / ಒಟ್ಟು ವೆಚ್ಚ ಅನುಪಾತಕ್ಕೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ.

## 2.6 ಸಾರ್ವಜನಿಕ ಲೆಕ್ಕ

ಸಂಚಿತ ನಿಧಿಯ ಭಾಗವಾಗಿರದ ಸಣ್ಣ ಉಳಿತಾಯ, ಭವಿಷ್ಯ ನಿಧಿ, ಮೀಸಲು ನಿಧಿಗಳು, ಠೇವಣಿಗಳು, ಅಮಾನತ್ತು, ಇರಸಾಲು ಮುಂತಾದ ಕೆಲವು ವಹಿವಾಟುಗಳಿಗೆ ಸಂಬಂಧಿಸಿದಂತೆ ಸ್ವೀಕೃತಿಗಳು ಮತ್ತು ವಿತರಣೆಗಳು ಸಂವಿಧಾನದ 266 (2) ನೇ ವಿಧಿಯ ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಖಾತೆಯಲ್ಲಿ ಇರಿಸಲ್ಪಡುತ್ತದೆ ಮತ್ತು ರಾಜ್ಯ ಶಾಸನಾಂಗದ ಮತಕ್ಕೆ ಒಳಪಡುವುದಿಲ್ಲ. ಈ ವಹಿವಾಟುಗಳು ಕೇವಲ ಪಾಸ್–ಥ್ರೂ ವಹಿವಾಟುಗಳಾಗಿರುವುದರಿಂದ ಸಾರ್ವಜನಿಕ ಹಣದ ಸುಪರ್ದಿಗಾಗಿ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ.

### *2.6.1 ನಿವ್ವಳ ಸಾರ್ವಜನಿಕ ಲೆಕ್ಕದ ನಿವ್ವಳ ಶಿಲ್ಕುಗಳು*

2019–20 ರಿಂದ 2023–24ರವರೆಗಿನ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದ ಅಡಿಯಲ್ಲಿನ ನಿವ್ವಳ ವಹಿವಾಟುಗಳನ್ನು **ಕೋಷ್ಟಕ–2.30**ರಲ್ಲಿ ಸೂಚಿಸಲಾಗಿದೆ ಮತ್ತು ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿನ ವಾರ್ಷಿಕ ಬದಲಾವಣೆಗಳನ್ನು **ನಕ್ಷೆ–2.14**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.30: ವರ್ಷದ 31 ಮಾರ್ಚ್ ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕದಲ್ಲಿ ಘಟಕ–ವಾರು ನಿವ್ವಳ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ವಲಯ | ಉಪ ವಲಯ | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| ಐ. ಸಣ್ಣ ಉಳಿತಾಯ, ಭವಿಷ್ಯ ನಿಧಿಗಳು, ಇತ್ಯಾದಿ | ಸಣ್ಣ ಉಳಿತಾಯ, ಭವಿಷ್ಯ ನಿಧಿಗಳು, ಇತ್ಯಾದಿ | 4,156 | 3,632 | 3,522 | 3,403 | 3,554 |
| ಜೆ. ಮೀಸಲು ನಿಧಿಗಳು | (ಎ) ಬಡ್ಡಿ ಸಹಿತ ಮೀಸಲು ನಿಧಿಗಳು | 839 | (–)99 | (–)46 | (–)141 | 14 |
| | (ಬಿ) ಬಡ್ಡಿರಹಿತ ಮೀಸಲು ನಿಧಿಗಳು | 3,889 | 6,374 | 9,219 | 7,422 | 7,314 |
| ಕೆ. ಠೇವಣಿಗಳು ಮತ್ತು ಮುಂಗಡಗಳು | (ಎ) ಬಡ್ಡಿಸಹಿತಠೇವಣಿಗಳು | 99 | 16 | (–)18 | 51 | 62 |
| | (ಬಿ) ಬಡ್ಡಿರಹಿತಠೇವಣಿಗಳು | 3,074 | (–)702 | 2826 | 26,141 | 7,412 |
| | (ಸಿ) ಮುಂಗಡಗಳು | – | – | – | – | – |
| ಎಲ್. ಅಮಾನತ್ತು ಮತ್ತು ಇತರೆ | (ಎ) ಅಮಾನತ್ತುಗಳು | 178 | (–)242 | (–)60 | (–)72 | 873 |
| | (ಬಿ) ಇತರೆ ಲೆಕ್ಕಗಳು | (–)1,542 | (–)2,679 | (–) 93 | 1,268 | 1,733 |
| | (ಸಿ) ವಿದೇಶಿ ಸರ್ಕಾರಗಳೊಂದಿಗೆ ಲೆಕ್ಕಗಳು | – | – | – | – | – |
| | (ಡಿ) ಇತರೆ | – | – | – | – | – |
| ಎಂ. ಇರಸಾಲುಗಳು | (ಎ) ಹಣದ ಆದೇಶಗಳು ಮತ್ತು ಇತರೆ ಸಾಲಗಳು | (–)263 | (–)53 | – | (–)0.01 | – |
| | (ಬಿ) ಅಂತರ ಸರ್ಕಾರಿ ಹೊಂದಾಣಿಕೆ ಲೆಕ್ಕಗಳು | (–)84 | 17 | (–)133 | 159 | 56 |
| **ಒಟ್ಟು** | | **10,346** | **6,264** | **15,217** | **38,232** | **21,018** |

*ಆಕರ: ಹಣಕಾಸು ಲೆಕ್ಕಗಳು*

*ಟಿಪ್ಪಣಿ: (+) ಎನ್ನುವುದು ಖರ್ಚು ಶಿಲ್ಕನ್ನು ಮತ್ತು (–) ಜಮೆ ಶಿಲ್ಕನ್ನು ಸೂಚಿಸುತ್ತದೆ*

**ನಕ್ಷೆ–2.14: ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿ ವಾರ್ಷಿಕ ಬದಲಾವಣೆಗಳು**

**(₹ ಕೋಟಿಗಳಲ್ಲಿ)**




| | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮುಂತಾದವುಗಳು | 4,156 | 3,632 | 3,522 | 3,403 | 3,554 |
| ಮೀಸಲು ನಿಧಿಗಳು | 4,728 | 6,275 | 9,173 | 7,281 | 7,328 |
| ಠೇವಣಿಗಳು ಮತ್ತು ಮುಂಗಡಗಳು | 3,173 | -686 | 2,808 | 26,192 | 7,474 |
| ಅಮಾನತ್ತು ಮತ್ತು ಇತರೆ | -1,364 | -2,921 | -153 | 1,196 | 2,606 |
| ಇರಸಾಲುಗಳು | -347 | -36 | -133 | 159 | 56 |

*ಆಕರ: ಹಣಕಾಸು ಲೆಕ್ಕಗಳು*

ಸಾರ್ವಜನಿಕ ಲೆಕ್ಕದಿಂದ ನಿವ್ವಳ ಸ್ವೀಕೃತಿಯು 2019–20ರಲ್ಲಿನ ₹10,346 ಕೋಟಿಗಳಿಂದ 2023–24ರಲ್ಲಿ ₹21,018 ಕೋಟಿಗಳಿಗೆ ಹೆಚ್ಚಾಗಿದೆ. ಆದಾಗ್ಯೂ, 2023–24ರಲ್ಲಿ ನಿವ್ವಳ ಶಿಲ್ಕು (₹17,214 ಕೋಟಿ) ಹಿಂದಿನ ವರ್ಷಕ್ಕಿಂತ ಶೇಕಡಾ 45ರಷ್ಟು ಕಡಿಮೆಯಾಗಿದ್ದು ಇದು ಮುಖ್ಯವಾಗಿ ಠೇವಣಿ ಮತ್ತು ಮುಂಗಡಗಳ ಅಡಿಯಲ್ಲಿ ಕಡಿಮೆಯಾಗಿದೆ. ಮೀಸಲು ನಿಧಿಗಳು, ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿ ಅಡಿಯಲ್ಲಿನ ನಿವ್ವಳ ಲಭ್ಯತೆಯು ಹಣಕಾಸಿನ ಕೊರತೆಯನ್ನು ನೀಗಿಸುವಲ್ಲಿ ಪ್ರಮುಖ ಪಾಲನ್ನು ಹೊಂದಿದೆ.

### *2.6.2 ಮೀಸಲು ನಿಧಿಗಳು*

ರಾಜ್ಯ ಸರ್ಕಾರದ ಲೆಕ್ಕಗಳಲ್ಲಿ (ಸಾರ್ವಜನಿಕ ಲೆಕ್ಕ) 'ಜೆ' ವಲಯದಡಿಯಲ್ಲಿ ನಿರ್ದಿಷ್ಟ ಮತ್ತು ಸ್ಪಷ್ಟವಾಗಿ ಹೇಳಲಾದ ಉದ್ದೇಶಗಳಿಗಾಗಿ ಮೀಸಲು ನಿಧಿಗಳನ್ನು ರಚಿಸಲಾಗಿದೆ. ಈ ನಿಧಿಯನ್ನು ಭಾರತದ ಸಂಚಿತ ನಿಧಿ ಅಥವಾ ರಾಜ್ಯ ಅಥವಾ ಹೊರಗಿನ ಏಜೆನ್ಸಿಗಳಿಂದ ಕೊಡುಗೆಗಳು ಅಥವಾ ಅನುದಾನಗಳಿಂದ ತುಂಬಲಾಗುತ್ತದೆ. ಈ ನಿಧಿಗೆ ನೀಡಿದ ಕೊಡುಗೆಗಳನ್ನು ಸಂಚಿತ ನಿಧಿ ಅಡಿಯಲ್ಲಿ ವೆಚ್ಚ ಎಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿ ಅಡಿಯಲ್ಲಿ ಲೆಕ್ಕ ಹಾಕಲಾಗುತ್ತದೆ, ಇದಕ್ಕಾಗಿ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸುವ ಸಮಯದಲ್ಲಿ, ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ. ಮೀಸಲು ನಿಧಿಗಳನ್ನು ಮುಂದೆ 'ಬಡ್ಡಿ ಹೊಂದಿರುವ ನಿಧಿಗಳು' ಮತ್ತು 'ಬಡ್ಡಿಯನ್ನು ಹೊಂದಿರದ ನಿಧಿಗಳು' ಎಂದು ವರ್ಗೀಕರಿಸಬಹುದು.

2023–24 ನೇ ಸಾಲಿನ ಸರ್ಕಾರದ ಹೊಣೆಗಾರಿಕೆ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಮೀಸಲು ನಿಧಿಗಳ ವಿಶ್ಲೇಷಣೆ ಮತ್ತು ಅವುಗಳ ನಿಧಿಸಂಗ್ರಹ ಮತ್ತು ವೆಚ್ಚವನ್ನು ಕೆಳಗೆ ವಿವರಿಸಲಾಗಿದೆ.

**(ಎ) ಖಾತರಿ ವಿಮೋಚನಾ ನಿಧಿ**

ಹನ್ನೆರಡನೆಯ ಹಣಕಾಸು ಆಯೋಗದ ಶಿಫಾರಸುಗಳ ಮೇರೆಗೆ, ರಾಜ್ಯ ಸ್ವಾಮ್ಯದ ಸಂಸ್ಥೆಗಳ ಪರವಾಗಿ ರಾಜ್ಯವು ನೀಡಿದ ಖಾತರಿಗಳ ಬಾಧ್ಯತೆಗಳನ್ನು ಪೂರೈಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಡಿಸೆಂಬರ್ 2007ರಲ್ಲಿ ಖಾತರಿ ವಿಮೋಚನಾ ನಿಧಿ (ಜಿಆರ್‌ಎಫ್) ಅನ್ನು ರಚಿಸಿತು. (2013–14ರ ಹಣಕಾಸು ವರ್ಷದಿಂದ ಜಾರಿಗೆ ಬರುವಂತೆ ಜನವರಿ 2014ರಲ್ಲಿ ಪರಿಷ್ಕರಿಸಲಾಗಿದೆ). ಮಾರ್ಗಸೂಚಿಗಳ ಪ್ರಕಾರ, ರಾಜ್ಯ ಸರ್ಕಾರವು ಹಿಂದಿನ ವರ್ಷದ (2012–13) ಅಂತ್ಯದಲ್ಲಿ ಬಾಕಿ ಉಳಿದಿರುವ ಖಾತರಿಗಳ ಕನಿಷ್ಠ ಪ್ರತಿಶತ ಒಂದರಷ್ಟು ಆರಂಭಿಕ ಕೊಡುಗೆಯನ್ನು ನೀಡಬೇಕಾಗಿತ್ತು ಮತ್ತು ಮುಂದಿನ ಐದು ವರ್ಷಗಳಲ್ಲಿ ಬಾಕಿ ಇರುವ ಖಾತರಿಗಳ ಕನಿಷ್ಠ ಮೂರು ಪ್ರತಿಶತದಷ್ಟನ್ನು ಸಾಧಿಸಲು ಪ್ರತಿ ಹಿಂದಿನ ವರ್ಷದ ಅಂತ್ಯದಲ್ಲಿ ಬಾಕಿ ಇರುವ ಖಾತರಿಗಳ ಕನಿಷ್ಠ 0.50 ಪ್ರತಿಶತದಷ್ಟು ಗ್ಯಾರಂಟಿಗಳನ್ನು ನೀಡಬೇಕಾಗಿತ್ತು.

ಕರ್ನಾಟಕ ಸರ್ಕಾರ ಖಾತರಿಗಳ ಮೇಲೆ ಮಿತಿ ಅಧಿನಿಯಮ 1999 ದಲ್ಲಿ, ಖಾತರಿ ವಿಮೋಚನಾ ನಿಧಿಯನ್ನು ಸ್ಥಾಪಿಸಲು ವಿಧಿಸದಿದ್ದರೂ, ಖಾತರಿಗಳ ಮೇಲಿನ ರಾಜ್ಯದ ಬಾಧ್ಯತೆಯ ಹಠಾತ್ ವಿಸರ್ಜನೆಯನ್ನು ಭರಿಸುವ ಸಲುವಾಗಿ, ಕರ್ನಾಟಕ ಸರ್ಕಾರವು 1999–2000ರಲ್ಲಿ ಲೆಕ್ಕ ಶೀರ್ಷಿಕೆ 8235–00–200–0–02 ಅಡಿಯಲ್ಲಿ ₹ಒಂದು ಕೋಟಿಯ ಮೂಲಧನದೊಂದಿಗೆ ನಿಧಿಯನ್ನು ಸ್ಥಾಪಿಸಿತು. 2023–24ನೇ ಸಾಲಿನಲ್ಲಿ, ನಿಧಿಯು ₹314 ಕೋಟಿಯ ಆರಂಭಿಕ ಶಿಲ್ಕನ್ನು ಹೊಂದಿತ್ತು ಮತ್ತು ರಾಜ್ಯ ಸರ್ಕಾರವು ₹187.13 ಕೋಟಿ ಹೂಡಿಕೆ ಮಾಡಿದೆ. 31 ಮಾರ್ಚ್ 2024ರ ಅಂತ್ಯದ ವೇಳೆಗೆ, ಖಾತರಿ ವಿಮೋಚನಾ ನಿಧಿಯಯಲ್ಲಿನ ಶಿಲ್ಕು ₹502.13 ಕೋಟಿಗಳಷ್ಟಿತ್ತು.

**(ಬಿ) ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್)**

ವಿಪತ್ತು ನಿರ್ವಹಣಾ ಕಾಯಿದೆ, 2005ರ ಅಡಿಯಲ್ಲಿ ರಚಿಸಲಾದ ರಾಜ್ಯ ವಿಪತ್ತು ನಿರ್ವಹಣಾ ನಿಧಿ, 2010–11 ರಿಂದ ಬಡ್ಡಿಸಹಿತ ಮೀಸಲು ನಿಧಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ನೈಸರ್ಗಿಕ ವಿಕೋಪಗಳಾದ ಬರ,

ಪ್ರವಾಹ, ಚಂಡಮಾರುತ, ಭೂಕಂಪ, ಬೆಂಕಿ ಮುಂತಾದವುಗಳು ಈ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಅರ್ಹವಾಗಿವೆ.

ಹದಿನಾಲ್ಕನೆ ಹಣಕಾಸು ಆಯೋಗದ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ 75:25 ಹಂಚಿಕೆ ಮಾದರಿಯು ಹದಿನೈದನೆ ಹಣಕಾಸು ಆಯೋಗದ ಅವಧಿಯಲ್ಲೂ ಮುಂದುವರಿದಿದೆ. 2023–24ರಲ್ಲಿ, ಹದಿನೈದನೆ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಕ್ರಮವಾಗಿ ₹697.20 ಕೋಟಿ (ಶೇಕಡಾ 75) ಮತ್ತು ₹232.40 ಕೋಟಿ (ಶೇಕಡಾ 25), ಒಟ್ಟು ₹929.60 ಕೋಟಿ ಮೊತ್ತವನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸಬೇಕಾಗಿತ್ತು, ಆದರೆ, ಭಾರತ ಸರ್ಕಾರವು ₹697.20 ಕೋಟಿಯ ಅವಶ್ಯಕತೆಗೆ ಪ್ರತಿಯಾಗಿ, ₹697.60 ಕೋಟಿಯನ್ನು (₹0.40 ಕೋಟಿ ಹೆಚ್ಚು) ಮತ್ತು ಕರ್ನಾಟಕ ಸರ್ಕಾರವು ₹232.53 ಕೋಟಿಯನ್ನು (₹0.13 ಕೋಟಿ ಹೆಚ್ಚು) ವರ್ಗಾಯಿಸಿದೆ. ಹೀಗಾಗಿ ಒಟ್ಟು ₹0.53 ಕೋಟಿ ಹೆಚ್ಚಿಗೆ ಬಿಡುಗಡೆಯಾಗಿದೆ. 2023–24ರಲ್ಲಿ ಸಂಪೂರ್ಣ ₹930.13 ಕೋಟಿಯನ್ನು ನಿಧಿಗೆ ವರ್ಗಾಯಿಸಲಾಗಿದೆ.

2023–24ರಲ್ಲಿ, ನಿಧಿಗೆ ವರ್ಗಾಯಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ರಾಜ್ಯವು ಕೇಂದ್ರದಿಂದ ಯಾವುದೇ ವಂತಿಗೆಯನ್ನು ಸ್ವೀಕರಿಸಿಲ್ಲ.

ಪ್ರಧಾನ ಶೀರ್ಷಿಕೆ '2245–ನೈಸರ್ಗಿಕ ವಿಕೋಪಗಳ ಪರಿಹಾರ' ಅಡಿಯಲ್ಲಿ ಜಿಲ್ಲಾಧಿಕಾರಿಗಳಿಗೆ ₹1,019.33 ಕೊಡುಗೆಯನ್ನು ಬಿಡುಗಡೆ ಮಾಡಲಾಗಿದೆ. ಹೀಗಾಗಿ, ಶೂನ್ಯ ಮುಕ್ತಾಯ ಶಿಲ್ಕು ಇತ್ತು, ಆದರೆ ಆರಂಭಿಕ ಶಿಲ್ಕು ₹89.20 ಕೋಟಿ ಹೊಂದಿತ್ತು. ಆದಾಗ್ಯೂ, ನಿಧಿಯಲ್ಲಿ ಯಾವುದೇ ಶಿಲ್ಕುಗಳನ್ನು ಉಳಿಸಿಕೊಂಡ ಅವಧಿಯವರೆಗೆ ಆರಂಭಿಕ ಶಿಲ್ಕುಗಳ ಮೇಲೆ ಕಡಿತ ಶಿಲ್ಕುಗಳ ಪ್ರಕಾರ ಯಾವುದೇ ಬಡ್ಡಿಯನ್ನು ಒದಗಿಸಲಾಗಿಲ್ಲ.

ನಿರ್ಗಮನ ಸಮಾವೇಶದಲ್ಲಿ (ಜನವರಿ 2025) ರಾಜ್ಯ ಸರ್ಕಾರವು ಆರ್ಥಿಕ ವರ್ಷ 2023–24ರಲ್ಲಿ ಆರಂಭಿಕ ಶಿಲ್ಕು ₹89.20ಕೋಟಿಯೂ ಸೇರಿದಂತೆ ಒಟ್ಟು ವೆಚ್ಚವು ₹930.13 ಕೋಟಿಗಳಾಗಿದ್ದು ಇದನ್ನು ನಿಧಿಯ ಲೆಕ್ಕದಲ್ಲಿ ಭರಿಸಲಾಗಿದೆ ಎಂದು ಉತ್ತರಿಸಿದೆ. ಆರಂಭಿಕ ಶಿಲ್ಕು ₹89.20 ಕೋಟಿಯನ್ನು 2023–24ರಲ್ಲಿ ವೆಚ್ಚ ಮಾಡಿದ್ದರೂ ಆರಂಭಿಕ ಶಿಲ್ಕು ನಿಧಿಯ ಲೆಕ್ಕದಲ್ಲಿ ಉಳಿದಿದ್ದ ಅವಧಿಗೆ ಬಡ್ಡಿಯನ್ನು ನೀಡಬೇಕಾಗಿದ್ದುದರಿಂದ ಉತ್ತರವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

**(ಸಿ) ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್‌ಡಿಎಂಎಫ್)**

ಈ ನಿಧಿಯನ್ನು ನವೆಂಬರ್ 2013ರಲ್ಲಿ ವಿಪತ್ತು ಉಪಶಮನ ಕಾಯಿದೆ 2005ರ ಪರಿಚ್ಛೇದ 48(ಸಿ) ಅಡಿಯಲ್ಲಿ, ಸಾರ್ವಜನಿಕ ಲೆಕ್ಕದಲ್ಲಿ ಬಡ್ಡಿಹೊಂದಿರುವ ಮೀಸಲು ನಿಧಿಗಳ ಅಡಿ ಪ್ರಧಾನ ಲೆಕ್ಕ ಶೀರ್ಷಿಕೆ 8121 ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳು ಅಡಿಯಲ್ಲಿ ಈ ನಿಧಿಯನ್ನು ಸ್ಥಾಪಿಸಲಾಗಿದ್ದು ರಾಜ್ಯ ಮಟ್ಟದ ಪ್ರಾಮುಖ್ಯತೆಯ ಯೋಜನೆಗಳಿಗೆ ಸ್ವತ್ತುಗಳ ಸಂರಕ್ಷಣೆ, ಪರಿಸರ ವ್ಯವಸ್ಥೆಗಳು ಪುನರ್ವಸತಿ, ವಿಪತ್ತುಗಳ ಶಮನಕ್ಕೆ ಪ್ರಾದೇಶಿಕ ಮಾರ್ಗಗಳ ಉತ್ತೇಜನ ಇತ್ಯಾದಿಗಳಿಗೆ ಈ ನಿಧಿಯು ಹಣವನ್ನು ಒದಗಿಸುತ್ತದೆ,

ರಾಜ್ಯ ವಿಪತ್ತು ಉಪಶಮನ ನಿಧಿಯ ಬಡ್ಡಿಹೊಂದಿರುವ ಮೀಸಲು ನಿಧಿ ಅಡಿಯಲ್ಲಿರುವುದರಿಂದ, ರಿಸರ್ವ್ ಬ್ಯಾಂಕಿನ ಓವರ್‌ಡ್ರಾಫ್ಟ್ ನಿಯಂತ್ರಣ ಮಾರ್ಗಸೂಚಿಗಳ ಅಡಿಯಲ್ಲಿ ಓವರ್‌ಡ್ರಾಫ್ಟ್‌ಗಳಿಗೆ ಅನ್ವಯವಾಗುವ ದರದಲ್ಲಿ ಗುರುತಿಸಲಾದ ಬಡ್ಡಿ–ಸಹಿತ ಸಾಧನಗಳಲ್ಲಿ ಹೂಡಿಕೆ ಮಾಡದ ಮೊತ್ತಕ್ಕೆ ರಾಜ್ಯ ಸರ್ಕಾರವು ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ನಿಧಿಗೆ ವಂತಿಗೆಯು ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ 75:25ರ ಅನುಪಾತದಲ್ಲಿದೆ.

2023–24ರ ಅವಧಿಯಲ್ಲಿ, ಹದಿನೈದನೆ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ಒಟ್ಟು ₹232.40 ಕೋಟಿ ಮೊತ್ತವನ್ನು ಕೇಂದ್ರ ಮತ್ತು ರಾಜ್ಯದಿಂದ ನಿಧಿ ಖಾತೆಗೆ ವರ್ಗಾಯಿಸಬೇಕಾಗಿತ್ತು. ಆದರೆ, ಪ್ರಸಕ್ತ

ವರ್ಷದಲ್ಲಿ ಭಾರತ ಸರ್ಕಾರದಿಂದ ಎಸ್‌ಡಿಎಂಎಫ್ ಗೆ ರಾಜ್ಯವು ಅನುದಾನವನ್ನು ಪಡೆದಿರಲಿಲ್ಲ. ಪರಿಣಾಮವಾಗಿ, ರಾಜ್ಯವು ತನ್ನ ಪಾಲನ್ನು ವರ್ಗಾಯಿಸಲಿಲ್ಲ. ಎಸ್‌ಡಿಎಂಎಫ್‌ನೊಂದಿಗೆ ರಾಜ್ಯವು ₹237.10 ಕೋಟಿ ಆರಂಭಿಕ ಶಿಲ್ಕು ಹೊಂದಿದ್ದು, ಅದಕ್ಕೆ ಬಡ್ಡಿಯನ್ನು ಜಮಾ ಮಾಡಬೇಕಿತ್ತು. ಆದರೆ, ರಾಜ್ಯ ಸರ್ಕಾರ ಯಾವುದೇ ಬಡ್ಡಿ ನೀಡಿಲ್ಲ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು (ನವೆಂಬರ್ 2023) 2023–24ರಲ್ಲಿ ಶೇಕಡಾ 8.50ರ ದರದಲ್ಲಿ ಎರಡು ವರ್ಷಗಳ ಬಡ್ಡಿಯನ್ನು ನೀಡಲಾಗುವುದು ಎಂದು ಹೇಳಿತ್ತು. ಆದಾಗ್ಯೂ, ನಿಧಿಗೆ ಯಾವುದೇ ಬಡ್ಡಿಯನ್ನು ಒದಗಿಸಲಾಗಿಲ್ಲ.

ಪ್ರವೇಶ ಮತ್ತು ನಿರ್ಗಮನ ಸಮಾವೇಶದಲ್ಲಿ (ಅಕ್ಟೋಬರ್ 2023) ರಾಜ್ಯ ಸರ್ಕಾರವು ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಬಡ್ಡಿಗೆ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ಹೇಳಿದೆ, ಇದು ನಿಧಿ ಖಾತೆಗೆ ಬಡ್ಡಿ ಮೊತ್ತವನ್ನು ವರ್ಗಾವಣೆ ಮಾಡಿಲ್ಲದುದರಲ್ಲಿ ಫಲಿತವಾಗಿದೆ. 2024–25ರಲ್ಲಿ ಇದನ್ನು ಒದಗಿಸಲಾಗುವುದು ಎಂದು ಹೇಳಲಾಗಿದೆ.

2023–24ರಲ್ಲಿ ಎಸ್‌ಡಿಆರ್‌ಎಫ್ / ಎಸ್‌ಡಿಎಂಎಫ್ ಅಡಿಯಲ್ಲಿ ವೆಚ್ಚ / ಸ್ವೀಕೃತಿಗಳ ವಿವರಗಳನ್ನು **ಕೋಷ್ಟಕ–2.31**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.31: ಎಸ್‌ಡಿಆರ್‌ಎಫ್ / ಎಸ್‌ಡಿಎಂಎಫ್ ಅಡಿಯಲ್ಲಿ ವೆಚ್ಚ / ಸ್ವೀಕೃತಿಗಳ ವಿವರಗಳು**

(₹ ಕೋಟಿಗಳಲ್ಲಿ)

| | ಒಳ ಲೆಕ್ಕ ಶೀರ್ಷಿಕೆ | 2023–24ರಲ್ಲಿ ವೆಚ್ಚ |
|---|---|---|
| | **ಆರಂಭಿಕ ಶಿಲ್ಕು** | **89.20** |
| **05 – ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್)** | ಮೀಸಲು ನಿಧಿ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆ – ಎಸ್‌ಡಿಆರ್‌ಎಫ್ | 930.13 |
| | ಮೀಸಲು ನಿಧಿ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆ – ಎನ್‌ಡಿಆರ್‌ಎಫ್ | 0.00 |
| | ಕಡಿತ – ಎಸ್‌ಡಿಆರ್‌ಎಫ್ ನಿಂದ ಪೂರೈಸಲಾದ ಮೊತ್ತ | (–)1,019.33 |
| | ಕಡಿತ–ಮೊತ್ತವನ್ನು ಎನ್‌ಡಿಆರ್‌ಎಫ್ ರಿಂದ ಪೂರೈಸಲಾಗಿದೆ | 0.00 |
| | 2023–24ರ ಅವಧಿಯಲ್ಲಿ ಎಸ್‌ಡಿಆರ್‌ಎಫ್ ಅಡಿಯಲ್ಲಿ ಬಳಕೆಯಾಗದ ಮೊತ್ತಕ್ಕೆ ಸಂಬಂಧಿಸಿದಂತೆ ಬಡ್ಡಿ ವರ್ಗಾವಣೆಗಳು | – |
| | **ಅಂತಿಮ ಶಿಲ್ಕು** | – |
| **10 – ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್‌ಡಿಎಂಎಫ್)** | **ಆರಂಭಿಕ ಶಿಲ್ಕು** | **237.10** |
| | ಮೀಸಲು ನಿಧಿ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆ – ಎಸ್‌ಡಿಆರ್‌ಎಫ್ | – |
| | ಕಡಿತ – ಎಸ್‌ಡಿಆರ್‌ಎಫ್ ನಿಂದ ಪೂರೈಸಲಾದ ಮೊತ್ತ | – |
| | 2023–24ರ ಅವಧಿಯಲ್ಲಿ ಎಸ್‌ಡಿಆರ್‌ಎಫ್ ಅಡಿಯಲ್ಲಿ ಬಳಕೆಯಾಗದ ಮೊತ್ತಕ್ಕೆ ಸಂಬಂಧಿಸಿದಂತೆ ಬಡ್ಡಿ ವರ್ಗಾವಣೆಗಳು | – |
| | **ಅಂತಿಮ ಶಿಲ್ಕು** | **237.10** |

*ಆಕರ: ಹದಿನೈದನೇ ಹಣಕಾಸು ಆಯೋಗದ ವರದಿ ಮತ್ತು ಲೆಡ್ಜರ್*

31 ಮಾರ್ಚ್ 2024 ರಂತೆ ಎಸ್‌ಡಿಆರ್‌ಎಫ್ ಮತ್ತು ಎಸ್‌ಡಿಎಂಎಫ್ ನಲ್ಲಿನ ಶಿಲ್ಕು ಕ್ರಮವಾಗಿ ಶೂನ್ಯ ಮತ್ತು ₹237.10 ಕೋಟಿ. ಎಸ್‌ಡಿಆರ್‌ಎಫ್ ಮತ್ತು ಎಸ್‌ಡಿಎಂಎಫ್‌ನ ಆರಂಭಿಕ ಶಿಲ್ಕುಗಳ ಮೇಲಿನ ಬಡ್ಡಿಯನ್ನು ವರ್ಗಾವಣೆ ಮಾಡದಿರುವುದು ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆ ಹೇಳಲು ಕಾರಣವಾಯಿತು.

ರಾಜ್ಯ ಸರ್ಕಾರವು (ಜನವರಿ 2025) ಎಸ್‌ಡಿಎಂಎಫ್‌ನಲ್ಲಿ ಬಡ್ಡಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರಿಸಿದೆ.

**(ಡಿ) ಕರ್ನಾಟಕ ಸ್ಥಿರಾಸ್ತಿ  ನಿಯಂತ್ರಣ ಪ್ರಾಧಿಕಾರ ನಿಧಿ**

ಕರ್ನಾಟಕದಲ್ಲಿ, ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಮತ್ತು ಅಭಿವೃದ್ಧಿ ನಿಯಮಗಳು 2017 ಅನ್ನು 10 ಜುಲೈ 2017 ರಂದು ಅನುಮೋದಿಸಿ ಅಧಿಸೂಚಿಸಲಾಗಿದೆ. 14 ಜುಲೈ 2017ರ ಸರ್ಕಾರಿ ಆದೇಶದ ಪ್ರಕಾರ, ಬಡ್ಡಿ ಹೊಂದಿರುವ ಠೇವಣಿ ಶೀರ್ಷಿಕೆ 8342–00–120–0–02 – ಸ್ಥಿರಾಸ್ತಿ ನಿಯಂತ್ರಣ ನಿಧಿ ಅಡಿಯಲ್ಲಿ ಖಾತೆಯನ್ನು ತೆರೆಯಲಾಗಿದೆ ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ಮತ್ತು ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ವೇತನಗಳು ಮತ್ತು ಭತ್ಯೆಗಳು ಮತ್ತು ಆಡಳಿತಾತ್ಮಕ ವೆಚ್ಚಗಳು ಮತ್ತು ಅದರ ಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮತ್ತು ಈ ಕಾಯಿದೆಯ ಉದ್ದೇಶಗಳಿಗಾಗಿ ಕರ್ನಾಟಕ ಸ್ಥಿರಾಸ್ತಿ  ನಿಯಂತ್ರಣ ಪ್ರಾಧಿಕಾರದ ಯಾವುದೇ ಇತರ ವೆಚ್ಚಗಳಿಗೆ ಸಂಬಂಧಿಸಿದ ವೆಚ್ಚವನ್ನು ಪೂರೈಸಲು ನಿಧಿಯಲ್ಲಿನ ಸಂಗ್ರಹವನ್ನು ರಾಜ್ಯ ಸರ್ಕಾರವು ಬಳಸಿಕೊಳ್ಳುತ್ತದೆ.

2021–22ರ ಅವಧಿಯಲ್ಲಿ, ಕರ್ನಾಟಕ ಸರ್ಕಾರವು (ಏಪ್ರಿಲ್ 2021) ಸ್ಥಿರಾಸ್ತಿ ಪ್ರಾಧಿಕಾರ ನಿಯಂತ್ರಣ ಮೀಸಲು ನಿಧಿ ಎಂಬ ಹೊಸ ಬಡ್ಡಿರಹಿತ ಮೀಸಲು ನಿಧಿಯನ್ನು ಲೆಕ್ಕ ಶೀರ್ಷಿಕೆ 8235–00–200–0–22ರ ಅಡಿಯಲ್ಲಿ ಸ್ಥಾಪಿಸಿದೆ. ತತ್ಪರಿಣಾಮವಾಗಿ, ಹಿಂದಿನ ಠೇವಣಿ ಅಡಿಯಲ್ಲಿದ್ದ ಶಿಲ್ಕನ್ನು ಹೊಸ ಮೀಸಲು ನಿಧಿಗೆ ವರ್ಗಾಯಿಸಲಾಯಿತು.

2023–24ನೇ ಸಾಲಿನಲ್ಲಿ ₹18.10 ಕೋಟಿ ಮೊತ್ತವನ್ನು ನಿಧಿಗೆ ವರ್ಗಾಯಿಸಲಾಗಿದೆ (ಸಂಚಿತ ನಿಧಿಯ ಲೆಕ್ಕ ಶೀರ್ಷಿಕೆ 0216–02–800–0–01 – ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ಅಡಿಯಲ್ಲಿ ಸಂಗ್ರಹಿಸಿದ ಶುಲ್ಕದಲ್ಲಿ) ಮತ್ತು ₹11.85 ಕೋಟಿ ವೆಚ್ಚವನ್ನು ನಿಧಿಗೆ ದಾಖಲಿಸಲಾಗಿದೆ. ಆದಾಗ್ಯೂ, 2017–18 ಮತ್ತು 2018–19ರ ಅವಧಿಯಲ್ಲಿ ಸಂಗ್ರಹಿಸಿದ ಸ್ವೀಕೃತಿಗಳು ಮತ್ತು ಮಾಡಿದ ವೆಚ್ಚವನ್ನು ವರ್ಗಾಯಿಸಲಾಗಿಲ್ಲ. ಹಿಂದಿನ ವರ್ಷಗಳ ರಾಜ್ಯದ ಹಣಕಾಸಿನ ವ್ಯವಹಾರದ ವರದಿಯಲ್ಲಿ ಲೆಕ್ಕಪರಿಶೋಧನೆಯ ಮೂಲಕ ಗಮನಸೆಳೆದಿದ್ದರೂ, ಸ್ವೀಕೃತಿಗಳು ಮತ್ತು ವೆಚ್ಚವನ್ನು ನಿಧಿ ಖಾತೆಗೆ ವರ್ಗಾಯಿಸಲು ಯಾವುದೇ ಕ್ರಮವನ್ನು ಪ್ರಾರಂಭಿಸಲಾಗಿಲ್ಲ. 31 ಮಾರ್ಚ್ 2024 ರಂತೆ ನಿಧಿಯ ಜಮೆಯಲ್ಲಿನ ಮುಕ್ತಾಯದ ಶಿಲ್ಕು ₹72.91 ಕೋಟಿ ಆಗಿತ್ತು.

2017–18 ಮತ್ತು 2018–19 ನೇ ಸಾಲಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚವನ್ನು ಲೆಕ್ಕ ಸಮನ್ವಯದ ನಂತರ ನಿಧಿಗೆ ವರ್ಗಾಯಿಸಲಾಗುವುದು ಎಂದು ರಾಜ್ಯ ಸರ್ಕಾರ ಹಿಂದಿನ ವರ್ಷ ಉತ್ತರ ನೀಡಿದ್ದರೂ, ಈ ನಿಟ್ಟಿನಲ್ಲಿ ಇನ್ನೂ ಕ್ರಮ ಕೈಗೊಂಡಿಲ್ಲ.

ರಾಜ್ಯ ಸರ್ಕಾರವು (ಜನವರಿ 2025) 2017–18 ಮತ್ತು 2018–19ರಲ್ಲಿ ಸ್ವೀಕೃತವಾದ ₹10.38 ಲಕ್ಷ ಮೊತ್ತವನ್ನು ನಿಧಿಗೆ ವರ್ಗಾವಣೆ ಮಾಡಲು ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ಕೋರಿದೆ ಎಂದು ಉತ್ತರಿಸಿದೆ. ವಸತಿ ಇಲಾಖೆಯಿಂದ ಪ್ರಸ್ತಾವನೆ ಬಂದ ನಂತರ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದೆ.

**(ಇ) ಗ್ರಾಹಕ ಕಲ್ಯಾಣ ನಿಧಿ**

ಗ್ರಾಹಕ ಕಲ್ಯಾಣ ನಿಧಿ ಮತ್ತು ಗ್ರಾಹಕ ಕಲ್ಯಾಣ ಮೂಲಧನ ನಿಧಿಯನ್ನು ಕ್ರಮವಾಗಿ ಸಾರ್ವಜನಿಕ ಲೆಕ್ಕದ ಅಡಿಯ ಬಡ್ಡಿ ರಹಿತ ಮೀಸಲು ನಿಧಿ ಮತ್ತು ಬಡ್ಡಿ ಸಹಿತ ಮೀಸಲು ನಿಧಿ ಠೇವಣಿ ಲೆಕ್ಕದ ಅಡಿಯಲ್ಲಿ ರಚಿಸಲಾಗಿದೆ.

ಕರ್ನಾಟಕ ರಾಜ್ಯ ಗ್ರಾಹಕ ನಿಧಿ ನಿಯಮಗಳು, 2005ರ ಜೊತೆಗೆ ಓದಲಾದ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಪ್ರಕಾರ, ಭಾರತ ಸರ್ಕಾರದಿಂದ ಕೇಂದ್ರ ಗ್ರಾಹಕ ಕಲ್ಯಾಣ ನಿಧಿಯಿಂದ ಮೂಲಧನ, ಕೇಂದ್ರ ಸರ್ಕಾರದಿಂದ ಒದಗಿಸಲಾದ ನೆರವು, ರಾಜ್ಯ ಸರ್ಕಾರದಿಂದ ಹೊಂದಾಣಿಕೆಯ ಅನುದಾನ, ಜಿಲ್ಲಾ ಮತ್ತು ರಾಜ್ಯ ಗ್ರಾಹಕರ ವೇದಿಕೆಯೊಂದಿಗೆ ಸಂಚಿತವಾದ ನ್ಯಾಯಾಲಯದ ಶುಲ್ಕ/ದಂಡ, ಉತ್ಪಾದನೆಯಿಂದ

ಹಿಂತಿರುಗಿಸಲಾಗದ ಹಣ ಇತ್ಯಾದಿ. ಮೂಲಗಳ ಸಂಗ್ರಹಣೆಯನ್ನು ನಿಧಿಗೆ ಜಮಾ ಮಾಡಬೇಕು. ನಿಧಿಯಲ್ಲಿ ಸಂಗ್ರಹವಾಗಿರುವ ಹಣವನ್ನು ರಾಜ್ಯ ಸರ್ಕಾರವು ಗ್ರಾಹಕರ ಕಲ್ಯಾಣಕ್ಕಾಗಿ ಬಳಸಿಕೊಳ್ಳಬೇಕು.

ಇವುಗಳ ಹೊರತಾಗಿ, ಗ್ರಾಹಕ ಕಲ್ಯಾಣ ನಿಧಿಯ ಶೀರ್ಷಿಕೆ 8342–00–120–29 – ಬಡ್ಡಿ ಹೊಂದಿರುವ ಠೇವಣಿ ಖಾತೆಯ ಅಡಿಯಲ್ಲಿ ₹7.50 ಕೋಟಿ ಕೇಂದ್ರದ ಮತ್ತು ₹2.50 ಕೋಟಿ ರಾಜ್ಯದ ಪಾಲನ್ನು ಸಾರ್ವಜನಿಕ ಲೆಕ್ಕದಲ್ಲಿ ಜಮಾ ಮಾಡುವ ಮೂಲಕ ಗ್ರಾಹಕ ಕಲ್ಯಾಣ ಮೂಲಧನ ನಿಧಿಯನ್ನು 2013–14 ರಲ್ಲಿ ಸ್ಥಾಪಿಸಲಾಯಿತು. ಭಾರತ ಸರ್ಕಾರ ಮಾರ್ಗಸೂಚಿಗಳ ಪ್ರಕಾರ, ಮೂಲಧನವನ್ನು ಯಾವುದೇ ಚಟುವಟಿಕೆಗಳಿಗೆ ಖರ್ಚು ಮಾಡಬಾರದು ಮತ್ತು ಮೂಲಧನ ನಿಧಿಯಿಂದ ಉತ್ಪತ್ತಿಯಾಗುವ ಬಡ್ಡಿಯನ್ನು ಮಾತ್ರ ಸ್ಥಳೀಯ ಕಾರ್ಯಕ್ರಮಗಳು ಮತ್ತು ಗ್ರಾಹಕರ ಕಲ್ಯಾಣ ಮತ್ತು ರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳ ವೆಚ್ಚವನ್ನು ಪೂರೈಸಲು ಬಳಸಬೇಕು.

ಆಹಾರ ಮತ್ತು ನಾಗರಿಕ ಪೂರೈಕೆಯಿಂದ ರಚಿತವಾಗಿರುವ ಗ್ರಾಹಕರ ಕಲ್ಯಾಣ ನಿಧಿ, ಕೆಜಿಎಸ್‌ಟಿ ಕಾಯ್ದೆಯಡಿ ಗ್ರಾಹಕರ ಕಲ್ಯಾಣ ನಿಧಿ, ಗ್ರಾಹಕ ಕಲ್ಯಾಣ ಮೂಲಧನ ನಿಧಿಯು ಕ್ರಮವಾಗಿ ₹0.94 ಕೋಟಿ, ₹0.39 ಕೋಟಿ ಮತ್ತು ₹15.09 ಕೋಟಿ ಆರಂಭಿಕ ಶಿಲ್ಕನ್ನು ಹೊಂದಿತ್ತು.

2023–24ರ ಅವಧಿಯಲ್ಲಿ ₹0.05 ಕೋಟಿಯ ಸಂಪೂರ್ಣ ಸ್ವೀಕೃತಿಗಳನ್ನು ಕೆಜಿಎಸ್‌ಟಿ ಅಡಿಯಲ್ಲಿ ಗ್ರಾಹಕ ಕಲ್ಯಾಣ ನಿಧಿ ಖಾತೆಗಳಿಗೆ ವರ್ಗಾಯಿಸಲಾಗಿದೆ ಮತ್ತು ಆಹಾರ ಮತ್ತು ನಾಗರಿಕ ಪೂರೈಕೆಯಡಿಯಲ್ಲಿ ಗ್ರಾಹಕರ ಕಲ್ಯಾಣ ನಿಧಿಗೆ ಸಂಬಂಧಿಸಿದಂತೆ ₹0.30 ಕೋಟಿ ಸ್ವೀಕೃತಿಗಳನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. ಆದಾಗ್ಯೂ, ಆಹಾರ ಮತ್ತು ನಾಗರಿಕ ಸರಬರಾಜುಗಳಿಂದ ಗ್ರಾಹಕರ ಕಲ್ಯಾಣ ಮತ್ತು ರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ವೆಚ್ಚವಾದ ₹0.10 ಕೋಟಿಯನ್ನು ನಿಧಿಗೆ ವರ್ಗಾಯಿಸಲಾಗಿದೆ. ಹೀಗಾಗಿ ಕ್ರಮವಾಗಿ ₹0.84 ಕೋಟಿ ಮತ್ತು ₹0.44 ಕೋಟಿ ಮುಕ್ತಾಯ ಶಿಲ್ಕು ಇತ್ತು.

2023–24ರಲ್ಲಿ ರಾಜ್ಯ ಸರ್ಕಾರವು ಗ್ರಾಹಕರ ಕಲ್ಯಾಣ ಮೂಲಧನ ನಿಧಿಯಲ್ಲಿನ (₹15.09 ಕೋಟಿ) ಶಿಲ್ಕನ್ನು ಸಾರ್ವಜನಿಕ ಲೆಕ್ಕದಲ್ಲಿರುವ ಮೀಸಲು ನಿಧಿಯಿಂದ ಸರ್ಕಾರಿ ಲೆಕ್ಕದ ವ್ಯಾಪ್ತಿಯ ಹೊರಗಿನ ಬ್ಯಾಂಕ್ ಖಾತೆಗೆ ವರ್ಗಾಯಿಸಿದೆ. ಆದಾಗ್ಯೂ, ಬ್ಯಾಂಕ್ ಖಾತೆಯಲ್ಲಿನ ಠೇವಣಿಯಿಂದ ಬರುವ ಬಡ್ಡಿಯನ್ನು ಮೇಲ್ವಿಚಾರಣೆ ಮಾಡಲು ಯಾವುದೇ ವಿಧಾನಗಳನ್ನು ಇರಿಸಲಾಗಿಲ್ಲ.

ಅಗತ್ಯ ಕ್ರಮ ಕೈಗೊಳ್ಳಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ (ಜನವರಿ 2025) ಸೂಚನೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರವು (ಜನವರಿ 2025) ಉತ್ತರಿಸಿದೆ.

**(ಎಫ್) ಕೇಂದ್ರ ರಸ್ತೆ ಮತ್ತು ಮೂಲಭೂತ ಸೌಕರ್ಯ ನಿಧಿ(ಸಿ.ಆರ್.ಐ.ಎಫ್)**

ಭಾರತ ಸರ್ಕಾರವು ನಿರ್ದಿಷ್ಟ ರಸ್ತೆ ಯೋಜನೆಗಳಿಗೆ ಖರ್ಚು ಮಾಡಲು ರಾಜ್ಯಗಳಿಗೆ ಸಿ.ಆರ್.ಐ.ಎಫ್ ಅಡಿಯಲ್ಲಿ ವಾರ್ಷಿಕ ಅನುದಾನವನ್ನು ಒದಗಿಸುತ್ತದೆ. ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಅನುದಾನವನ್ನು ಆರಂಭದಲ್ಲಿ ಶೀರ್ಷಿಕೆ 1601–ಸಹಾಯಾನುದಾನ ಅಡಿಯಲ್ಲಿ ರಾಜಸ್ವ ಸ್ವೀಕೃತಿಗಳಾಗಿ ಜಮೆ ಮಾಡಲಾಗುತ್ತದೆ ಮತ್ತು ನಂತರ ಸಾರ್ವಜನಿಕ ಲೆಕ್ಕದ ಪ್ರಧಾನ ಶೀರ್ಷಿಕೆ 8449–00–103 – ಕೇಂದ್ರ ರಸ್ತೆ ನಿಧಿಯಿಂದ ಉಪದಾನಗಳು ಅಡಿಯಲ್ಲಿ ವರ್ಗಾಯಿಸಲಾಗುತ್ತದೆ ಸಿ.ಆರ್.ಐ.ಎಫ್. ಅಡಿಯಲ್ಲಿ ನಿಗದಿತ ರಸ್ತೆ ಕಾಮಗಾರಿಗಳ ಮೇಲಿನ ಈ ವೆಚ್ಚವನ್ನು ಮೊದಲು ಸಂಬಂಧಿತ ಬಂಡವಾಳ ಶೀರ್ಷಿಕೆ ಅಂದರೆ, 5054–04–337–0–05 ಅಡಿಯಲ್ಲಿ ಲೆಕ್ಕ ಹಾಕಲಾಗುತ್ತದೆ, ಇದನ್ನು ಸಂಬಂಧಪಟ್ಟ ಪ್ರಧಾನ ಲೆಕ್ಕ ಶೀರ್ಷಿಕೆ ಕಡಿತದ ವೆಚ್ಚವಾಗಿ ಮೀಸಲು ನಿಧಿಗೆ ವರ್ಗಾಯಿಸಲಾಗುತ್ತದೆ.

2023–24ರ ಅವಧಿಯಲ್ಲಿ , ರಾಜ್ಯವು ಸಿಆರ್‌ಐಎಫ್ ಅಡಿಯಲ್ಲಿ ₹660.91 ಕೋಟಿ ಗಳನ್ನು ಸ್ವೀಕರಿಸಿ ಅದನ್ನು ನಿಧಿಗೆ ವರ್ಗಾಯಿಸಲಾಯಿತು. ಆದಾಗ್ಯೂ, ಲೆಕ್ಕ ಶೀರ್ಷಿಕೆ 5054–04–337–0–05ರ ಅಡಿಯಲ್ಲಿನ ₹492.12 ಕೋಟಿ ವೆಚ್ಚವನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. ರಾಜ್ಯ ಸರ್ಕಾರವು ಜಂಟಿ ಪ್ರವೇಶ ಮತ್ತು ನಿರ್ಗಮನ ಸಮಾವೇಶಗಳಲ್ಲಿ (ನವೆಂಬರ್ 2024) ಮತ್ತು ಅವರ ಉತ್ತರದಲ್ಲಿ (ಜನವರಿ 2025) ಮುಂದಿನ

ವರ್ಷಗಳಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ನಿಧಿಯ ಶಿಲ್ಕನ್ನು ಬಳಸಿಕೊಳ್ಳಲಾಗುವುದು ಎಂದು ಹೇಳಿದೆ.

ಸಿ.ಆರ್.ಐ.ಎಫ್. ಕಾಯಿದೆ, 2000ರ ಸೆಕ್ಷನ್ 11ರ ಅನ್ವಯ, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಆಡಳಿತವು ಯಾವುದೇ ಸಮಯದಲ್ಲಿ ಸಮಂಜಸವಾದ ಕಾರಣವಿಲ್ಲದೆ ಹಂಚಿಕೆ ಅಥವಾ ಮರು–ಹಂಚಿಕೆ ಮಾಡಿದ ನಿಧಿಯ ಯಾವುದೇ ಭಾಗವನ್ನು ರಾಜ್ಯದೊಳಗಿನ ವೆಚ್ಚಕ್ಕಾಗಿ ಅನ್ವಯಿಸುವಲ್ಲಿ ವಿಳಂಬಗೊಳಿಸಿದರೆ ಕೇಂದ್ರ ಸರ್ಕಾರವು ಆ ಸಮಯದಲ್ಲಿ ಆ ರಾಜ್ಯದ ವೆಚ್ಚಕ್ಕಾಗಿದ್ದ ಮೊತ್ತವನ್ನು ಒಟ್ಟು ಅಥವಾ ಭಾಗಶಃ ಹಿಂಪಡೆಯಬಹುದಾಗಿದೆ. ಈ ಸನ್ನಿವೇಶದಲ್ಲಿ, ರಾಜ್ಯವು ವರ್ಷದಲ್ಲಿ ಮಾಡಿದ ವೆಚ್ಚವನ್ನು ಅದೇ ವರ್ಷದಲ್ಲಿ ನಿಧಿ ಖಾತೆಗೆ ವರ್ಗಾಯಿಸಬೇಕಾಗಿತ್ತು. ಅದರಿಂದಾಗಿ ಉತ್ತರವು ಸ್ವೀಕಾರಾರ್ಹವಲ್ಲ.

ಬಂಡವಾಳ ವೆಚ್ಚವನ್ನು ನಿಧಿಗೆ ವರ್ಗಾಯಿಸದಿರುವುದು ಬಂಡವಾಳ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಆ ಮಟ್ಟಿಗೆ ಹೆಚ್ಚಿಗೆ ಹೇಳಲು ಕಾರಣವಾಯಿತು.

ನಿರ್ಗಮನ ಸಮಾವೇಶದಲ್ಲಿ (ಜನವರಿ 2025) ರಾಜ್ಯ ಸರ್ಕಾರವು ಸ್ವೀಕೃತಿ ಮತ್ತು ವೆಚ್ಚ ಎರಡನ್ನೂ ವರ್ಗಾಯಿಸಲು 2024–25ರ ಆರ್ಥಿಕ ವರ್ಷದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

### *2.6.3 ನಿಷ್ಕ್ರಿಯ ಮೀಸಲು ನಿಧಿಗಳು*

31 ಮಾರ್ಚ್ 2024ರ ಅಂತ್ಯದ ವೇಳೆಗೆ, 52 ಮೀಸಲು ನಿಧಿಗಳಲ್ಲಿ, 14 ನಿಷ್ಕ್ರಿಯವಾಗಿ ಉಳಿದಿವೆ. ಈ 14 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 31 ಮಾರ್ಚ್ 2024 ರಂತೆ ಎಂಟು ಮೀಸಲು ನಿಧಿಗಳು ₹33.52 ಕೋಟಿ ಜಮೆ ಶಿಲ್ಕು ಮತ್ತು ಆರು ಮೀಸಲು ನಿಧಿಗಳು ₹8.23 ಕೋಟಿ ಖರ್ಚು ಶಿಲ್ಕನ್ನು ಹೊಂದಿದ್ದವು.

ಸರಿಯಾದ ಸಮನ್ವಯದ ನಂತರ ಅಂತಹ ನಿಷ್ಕ್ರಿಯ ಮೀಸಲುನಿಧಿಗಳ ನ್ನು ಮುಕ್ತಾಯಗೊಳಿಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಉಳಿದ ಹಣವನ್ನು ಸಂಚಿತ ನಿಧಿಗೆ ಜಮಾ ಮಾಡಬೇಕಾಗುತ್ತದೆ.

### *2.6.4 ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ (ಸಿಎಎಂಪಿಎ)*

ಪರಿಹಾರ ಅರಣ್ಯೀಕರಣ ಕಾಯಿದೆ (ಸಿಎಎಫ್), 2016ರ ಜಾರಿಯ ನಂತರ, ರಾಜ್ಯ ಪರಿಹಾರ ಅರಣ್ಯೀಕರಣ ನಿಧಿ (ಎಸ್‌ಸಿಎಎಫ್) – ಕರ್ನಾಟಕ ವನ್ನು ಸಿಎಎಫ್ ಕಾಯಿದೆ, 2016ರ ಪರಿಚ್ಛೇದ 4ರ ಅಡಿಯಲ್ಲಿ (ಫೆಬ್ರವರಿ 2019) ರಚಿಸಲಾಯಿತು. ಇದರೊಂದಿಗೆ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯವು ಸಿಎಎಫ್ ಸೆಕ್ಷನ್ 30ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಪ್ರತಿ ವರ್ಷ ರಾಷ್ಟ್ರೀಯ ನಿಧಿ (ಎನ್‌ಸಿಎಎಫ್) ಮತ್ತು ರಾಜ್ಯ ನಿಧಿ (ಎಸ್‌ಸಿಎಎಫ್) ಗೆ ಮೊತ್ತವನ್ನು ಜಮಾ ಮಾಡುವ ವಿಧಾನವನ್ನು ನಿಯಂತ್ರಿಸಲು ಸಿಎಎಫ್ (ಲೆಕ್ಕಪತ್ರ ನಿರ್ವಹಣೆ) ನಿಯಮಗಳು, 2018 ಅನ್ನು ರೂಪಿಸಿದೆ. ಕಾಯಿದೆ, 2016 ನಿಯಮಗಳನ್ನು ಮುಂದುವರಿಸಿ, ಸಚಿವಾಲಯವು (28 ಜನವರಿ 2019) ವರದಿಗಳಲ್ಲಿ ಪಾರದರ್ಶಕತೆ ಮತ್ತು ಏಕರೂಪತೆಯನ್ನು ಕಾಪಾಡಿಕೊಳ್ಳಲು ಎಲ್ಲಾ ರಾಜ್ಯಗಳಿಗೆ ಎನ್‌ಸಿಎಎಫ್ ಮತ್ತು ಎಸ್‌ಸಿಎಎಫ್ ಗಾಗಿ ನಿಗದಿತ ಲೆಕ್ಕ ಶೀರ್ಷಿಕೆಗಳನ್ನು ತೆರೆಯಲು ಸೂಚಿಸಿದೆ. .

ಸಿಎಎಫ್ (ಲೆಕ್ಕಪತ್ರ ಕಾರ್ಯವಿಧಾನಗಳು) ನಿಯಮಗಳು, 2018ರ ಅನುಸಾರವಾಗಿ, ಸಚಿವಾಲಯವು (19 ಆಗಸ್ಟ್ 2019) ₹13,50,37,43,189 ಅನ್ನು ಎನ್‌ಸಿಎಎಫ್ ನಿಂದ ಎಸ್‌ಸಿಎಎಫ್ ಗೆ ವರ್ಗಾಯಿಸಿದ್ದರೂ, ಸಿಎಎಫ್ ನಿಯಮಗಳು 2018ರ ಅನುಗುಣವಾಗಿ ಪರಿವೇಶ್ ಪೋರ್ಟಲ್[15] ನಲ್ಲಿ ಸೂಕ್ತ ಕಾರ್ಯವಿಧಾನವನ್ನು ಅಳವಡಿಸಿಕೊಂಡಿಲ್ಲ. ಇದರ ಪರಿಣಾಮವಾಗಿ, ಬಳಕೆದಾರರ ಶುಲ್ಕ ಸಂಗ್ರಹಣೆ ಮತ್ತು ವರ್ಗಾವಣೆಯು ಸಿಎಎಫ್ ನಿಯಮಗಳು 2018ರ ಜಾರಿಯ ಹಿಂದಿನಂತೆಯೇ ಮುಂದುವರೆದಿದ್ದು

[15] ಬಳಕೆದಾರರ ಶುಲ್ಕ ಸಂಗ್ರಹ ಮತ್ತು ಎಸ್‌ಸಿಎಎಫ್‌ಗೆ ಅದರ ವರ್ಗಾವಣೆಗಾಗಿ ಅರಣ್ಯ, ಪರಿಸರ, ಮತ್ತು ಹವಾಮಾನ ಬದಲಾವಣೆಗಳ ರಾಷ್ಟ್ರೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನಿರ್ವಹಿಸಿರುವ ಪೋರ್ಟಲ್ ಇದಾಗಿದೆ.

ಸಂಗ್ರಹಿಸಲಾದ ಬಳಕೆದಾರರ ಶುಲ್ಕ ಸಂಗ್ರಹಣೆಯನ್ನು ಶೇಕಡಾ 10ರ ಬದಲಿಗೆ ಸಂಪೂರ್ಣವಾಗಿ ಎನ್‌ಸಿಎಎಫ್ ಗೆ ವರ್ಗಾಯಿಸಲಾಯಿತು. ಹಿಂದಿನ ಎರಡು ವರ್ಷಗಳ ರಾಜ್ಯದ ಹಣಕಾಸು ವ್ಯವಹಾರಗಳ ಮೇಲಿನ ವರದಿಗಳಲ್ಲಿ ಗಮನಸೆಳೆದ ಮೇಲೆ, ರಾಜ್ಯ ಸರ್ಕಾರವು ಸಿಇಒ, ಎನ್‌ಸಿಎಎಫ್‌ಗೆ ಪತ್ರವ್ಯವಹಾರ ಮಾಡಲು ಕ್ರಮ ಕೈಗೊಂಡಿದ್ದು, ಬಳಕೆದಾರರ ಶುಲ್ಕದ 90 ಪ್ರತಿಶತವನ್ನು ಎನ್‌ಸಿಎಎಫ್‌ಗೆ ವರ್ಗಾಯಿಸಲಾಯಿತು. ಇದಲ್ಲದೆ, ಸಿಇಒ, ರಾಷ್ಟ್ರೀಯ ಪ್ರಾಧಿಕಾರ, ಆರ್ಥಿಕ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ (ಸೆಪ್ಟೆಂಬರ್ 2022) ಬಳಕೆದಾರರ ಏಜೆನ್ಸಿಗಳು ಬಳಕೆದಾರರ ಶುಲ್ಕಗಳನ್ನು ಆನ್‌ಲೈನ್‌ನಲ್ಲಿ ಎಸ್‌ಸಿಎಎಫ್‌ಗೆ ರವಾನೆ ಮಾಡಲು ಪರಿವೇಶ್ ಪೋರ್ಟಲ್‌ನೊಂದಿಗೆ ಸಂಯೋಜಿಸಲಾದ ಸೂಕ್ತ ಕಾರ್ಯವಿಧಾನವನ್ನು ರಚಿಸಲು ವಿನಂತಿಸಲಾಗಿದೆ ಎಂದು ಸರ್ಕಾರವು ಹೇಳಿದೆ.

ಆದರೂ, 2023–24ರ ಅವಧಿಯಲ್ಲಿ, ಪರಿವೇಶ್ ಪೋರ್ಟಲ್‌ನಲ್ಲಿ ಯಾವುದೇ ಹೊಸ ಕಾರ್ಯವಿಧಾನವನ್ನು ಸಂಯೋಜಿಸಲಾಗಿಲ್ಲ ಮತ್ತು ₹500.95 ಕೋಟಿಗಳ ಸಂಪೂರ್ಣ ಬಳಕೆದಾರರ ಶುಲ್ಕವನ್ನು ಎನ್‌ಸಿಎಎಫ್‌ಗೆ ವರ್ಗಾಯಿಸಲಾಯಿತು. ಇದಲ್ಲದೆ, ರಾಜ್ಯವು 2023–24ರ ಅವಧಿಯಲ್ಲಿ, 2019–20 ರಿಂದ 2021–22ರವರೆಗೆ ಬಳಕೆದಾರರ ಶುಲ್ಕದ ಶೇಕಡಾ 90ರಷ್ಟು ₹363.44 ಕೋಟಿಗಳನ್ನು ಸ್ವೀಕರಿಸಿದೆ. 2022–23ನೇ ಸಾಲಿಗೆ ₹162.98 ಕೋಟಿ ಮತ್ತು 2023–24ನೇ ಸಾಲಿಗೆ ₹450.86 ಕೋಟಿ ಬಾಕಿಯನ್ನು ಎನ್‌ಸಿಎಎಫ್‌ನಿಂದ ಪಡೆಯಬೇಕಿದೆ.

2023–24ರ ಅವಧಿಯಲ್ಲಿ, ನಿಧಿ ಖಾತೆಯ ಆರಂಭಿಕ ಶುಲ್ಕ ₹661.93 ಕೋಟಿಯಾಗಿದ್ದು, ₹391.42 ಕೋಟಿ(₹27.98 ಕೋಟಿ ಬಡ್ಡಿ ಮತ್ತು 2019–20 ರಿಂದ 2021–22ರವರೆಗೆ ಎನ್‌ಸಿಎಎಫ್‌ನಿಂದ ಸ್ವೀಕರಿಸಲಾದ ₹363.44 ಕೋಟಿ) ಯನ್ನು ನಿಧಿ ಲೆಕ್ಕಕ್ಕೆ ಜಮೆ ಮಾಡಲಾಗಿ ₹288.51ಕೋಟಿ ವೆಚ್ಚವಾಗಿ, ನಿಧಿಯ ಅಡಿಯಲ್ಲಿ ₹764.85 ಮುಕ್ತಾಯದ ಶಿಲ್ಕು ಉಳಿದಿದೆ.

ರಾಜ್ಯ ಸರ್ಕಾರವು (ಜನವರಿ 2025) ಕೇಂದ್ರ ಸರ್ಕಾರವು ಸಿಎಎಫ್ ನಿಯಮಗಳು, 2018 ಗೆ ಅನುಗುಣವಾಗಿ ಪರಿವೇಶ್ ಪೋರ್ಟಲ್‌ನಲ್ಲಿ ಸೂಕ್ತವಾದ ಕಾರ್ಯವಿಧಾನವನ್ನು ಸಂಯೋಜಿಸಿಲ್ಲ ಮತ್ತು ಇದರ ಪರಿಣಾಮವಾಗಿ, ರಾಜ್ಯವು 2023–24ರ ಸಂಪೂರ್ಣ ಬಳಕೆದಾರರ ಶುಲ್ಕವನ್ನು ಎನ್‌ಸಿಎಎಫ್ ಗೆ ವರ್ಗಾಯಿಸಬೇಕಾಯಿತು. ಇದಲ್ಲದೆ, ರಾಜ್ಯ ಸರ್ಕಾರವು ಸಿಇಒ, ಎನ್‌ಸಿಎಎಫ್‌ನೊಂದಿಗೆ ಮಾಡಿದ ಪತ್ರವ್ಯವಹಾರದ ನಂತರ, ಬಳಕೆದಾರರ ಶುಲ್ಕದ 90 ಪ್ರತಿಶತವನ್ನು ಎಸ್‌ಸಿಎಎಫ್‌ಗೆ ಹಿಂತಿರುಗಿಸಲಾಗುತ್ತಿದೆ ಮತ್ತು ಎನ್‌ಸಿಎಎಫ್‌ನಿಂದ ಯಾವುದೇ ಬಾಕಿ ಉಳಿದಿಲ್ಲ ಎಂದು ಹೇಳಿದೆ. 2024–25ರಲ್ಲಿ ರಾಜ್ಯವು ಕ್ರಮವಾಗಿ 2022–23 ಮತ್ತು 2023–24 ವರ್ಷಗಳಿಗೆ ಸಂಬಂಧಿಸಿದ ₹165.63 ಕೋಟಿ ಮತ್ತು ₹441.44 ಕೋಟಿ ಬಳಕೆದಾರರ ಶುಲ್ಕವನ್ನು ಸ್ವೀಕರಿಸಿದೆ.

## 2.7 ಋಣ ನಿರ್ವಹಣೆ

ಋಣ ನಿರ್ವಹಣೆಯು ಸರ್ಕಾರದ ಸಾಲವನ್ನು ನಿರ್ವಹಿಸುವ ಕಾರ್ಯತಂತ್ರವನ್ನು ರೂಪಿಸುವ ಮತ್ತು ಅಗತ್ಯವಿರುವ ಪ್ರಮಾಣದ ಹಣವನ್ನು ಸಂಗ್ರಹಿಸಲು, ವೆಚ್ಚದ ಉದ್ದೇಶಗಳನ್ನು ಮತ್ತು ಸಂಭಾವ್ಯ ಹಾನಿಗಳನ್ನು ನಿಭಾಯಿಸುವ, ಸರ್ಕಾರವು ಜಾರಿಗೊಳಿಸಿದ ವಾರ್ಷಿಕ ಆಯವ್ಯಯ ಅಥವಾ ಯಾವುದೇ ಇತರ ಪ್ರಕಟಣೆಗಳ ಮೂಲಕ ಹೊಂದಿಸಬಹುದಾದ, ಇತರ ಯಾವುದೇ ಸಾರ್ವಭೌಮ ಸಾಲ ನಿರ್ವಹಣೆ ಗುರಿಗಳನ್ನು ಪೂರೈಸಲು ನಡೆಸುವ ಪ್ರಕ್ರಿಯೆಯಾಗಿದೆ. 2019–20 ರಿಂದ 2023–24ರ ಅವಧಿಯಲ್ಲಿ ಒಟ್ಟು ಬಾಕಿ ಇರುವ ಸಾಲ ಮತ್ತು ಜಿಎಸ್‌ಡಿಪಿ ಗೆ ಅದರ ಶೇಕಡಾವಾರು ಸ್ಥಿತಿಯನ್ನು **ನಕ್ಷೆ–2.15**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–2.15: 2019–20 ರಿಂದ 2023–24ರ ಅವಧಿಯಲ್ಲಿ ಬಾಕಿ ಉಳಿದಿರುವ ಸಾಲ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಶತಾಂಶ**




*ಆಕರ: ಹಣಕಾಸು ಲೆಕ್ಕಗಳು*

** ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿ ಕೇಂದ್ರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ) ಸಾಲ– ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅನುಪಾತವನ್ನು ಲೆಕ್ಕ ಹಾಕಲು ಸಾಲವೆಂದು ಪರಿಗಣಿಸಲಾಗಿಲ್ಲ.*

ಮೇಲಿನ ನಕ್ಷೆಯಿಂದ ನೋಡಿದಂತೆ, ಜಿಎಸ್‌ಡಿಪಿ ಗೆ ಶೇಕಡಾವಾರು ಬಾಕಿ ಇರುವ ಸಾಲವು (ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಂತೆ) 2019–20ರಲ್ಲಿದ್ದ ಶೇಕಡಾ20.89 ರಿಂದ 2023–24ರಲ್ಲಿ ಶೇಕಡಾ 23.49 ಕ್ಕೆ ಏರಿಕೆಯಾಗಿದೆ. ಆದಾಗ್ಯೂ, ಇದು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ(ಕೆಎಫ್‌ಆರ್‌ಎ) ಗುರಿಯ ಶೇಕಡಾ 25 ರೊಳಗೆ ಇದ್ದಿತು. ಇದು ಹಣಕಾಸು ಆಯೋಗವು ನಿಗದಿ ಪಡಿಸಿದ ಯಾವುದೇ ಮಾನದಂಡಗಳಿಗೆ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ರಾಜ್ಯದ ಸಾಲವಾಗಿ ಪರಿಗಣಿಸದ ಕಾರಣದಿಂದ ಉಂಟಾಗಿದೆ.

### 2.7.1 ಋಣಚಿತ್ರದ ಘಟಕಗಳು

ರಾಜ್ಯ ಸರ್ಕಾರದ ಒಟ್ಟು ಋಣವು ಸಾಮಾನ್ಯವಾಗಿ ರಾಜ್ಯದ ಆಂತರಿಕ ಸಾಲ (ಮಾರುಕಟ್ಟೆ ಸಾಲಗಳು, ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಮಾರ್ಗೋಪಾಯಗಳು ಮತ್ತು ಮುಂಗಡಗಳು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗೆ ನೀಡಲಾದ ವಿಶೇಷ ಭದ್ರತೆಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲಗಳು ಇತ್ಯಾದಿ.), ಕೇಂದ್ರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಹೊಣೆಗಾರಿಕೆಗಳು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಿರುತ್ತದೆ.

ಋಣದ ಘಟಕವಾರು ವಿವರಗಳು, ಅವುಗಳ ಬೆಳವಣಿಗೆಯ ದರ, ಜಿಎಸ್‌ಡಿಪಿ ಗೆ ಈ ಹೊಣೆಗಾರಿಕೆಗಳ ಅನುಪಾತವನ್ನು **ಕೋಷ್ಟಕ–2.32**ರಲ್ಲಿ ತೋರಿಸಲಾಗಿದೆ ಮತ್ತು ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಣಕಾಸಿನ ಹೊಣೆಗಾರಿಕೆಗಳ ಪ್ಲವನತೆಯನ್ನು **ಅನುಬಂಧ–2.2**ರಲ್ಲಿ ತರಲಾಗಿದೆ. ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2019–20ರಲ್ಲಿದ್ದ ₹3,37,520 ಕೋಟಿಯಿಂದ 2023–24ರಲ್ಲಿ ₹6,33,531 ಕೋಟಿಗೆ ಶೇಕಡಾ 88ರಷ್ಟು ಏರಿಕೆಯಾಗಿದೆ. 2023–24ರ ಅವಧಿಯಲ್ಲಿ ಒಟ್ಟಾರೆ ಸಾಲದ ಸಂಯೋಜನೆಯನ್ನು **ನಕ್ಷೆ–2.16**ರಲ್ಲಿ ಪ್ರಸ್ತುತಪಡಿಸಲಾಗಿದೆ. 2019–20 ರಿಂದ 2023–

24ರ ಅವಧಿಯಲ್ಲಿ ಮಾಡಿದ ಆಂತರಿಕ ಸಾಲ ಮತ್ತು ಸಾಲದ ಮರುಪಾವತಿಯನ್ನು **ನಕ್ಷೆ–2.17**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.32: ಘಟಕವಾರು ಋಣದ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಆರ್ಥಿಕ ಹೊಣೆಗಾರಿಕೆಗಳ ಘಟಕಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಬಾಕಿ ಉಳಿದಿರುವ ಒಟ್ಟು ಹೊಣೆಗಾರಿಕೆ | 3,37,520 | 4,15,926* | 4,90,256* | 5,53,363* | 6,33,531* |
| ಸಾರ್ವಜನಿಕ ಋಣ | | | | | |
| ಆಂತರಿಕ ಸಾಲ | 2,20,337 | 2,81,140 | 3,29,042 | 3,53,894 | 4,17,455 |
| ಭಾರತ ಸರ್ಕಾರದಿಂದ ಸಾಲಗಳು | 13,908 | 26,617^ | 45,385^ | 49,139^ | 53,406^ |
| ಸಾರ್ವಜನಿಕ ಲೆಕ್ಕ ಹೊಣೆಗಾರಿಕೆಗಳು | 85,172 | 89,748 | 99,147 | 1,33,024 | 1,49,192 |
| ಸಣ್ಣಉಳಿತಾಯ, ಭವಿಷ್ಯನಿಧಿ, ಇತ್ಯಾದಿ | 35,179 | 38,811 | 42,333 | 45,736 | 49,290 |
| ಬಡ್ಡಿ ಹೊಂದಿದ ಮೀಸಲು ನಿಧಿಗಳು | 1,273 | 1,175 | 1,129 | 988 | 1,002 |
| ಬಡ್ಡಿ ಹೊಂದಿರದ ಮೀಸಲು ನಿಧಿಗಳು | 17,160 | 18,888 | 22,003 | 26,425 | 31,552 |
| ಬಡ್ಡಿ ಹೊಂದಿರುವ ಠೇವಣಿಗಳು | 502 | 518 | 500 | 551 | 612 |
| ಬಡ್ಡಿ ಹೊಂದಿರದ ಠೇವಣಿಗಳು | 31,058 | 30,356 | 33,182 | 59,324 | 66,736 |
| ಬಾಕಿ ಇರುವ ಒಟ್ಟು ಹೊಣೆಗಾರಿಕೆಯ ವೃದ್ಧಿದರ (ಶೇಕಡಾ) | 18.33 | 23.23 | 10.53 | 12.87 | 14.49 |
| ಜಿಎಸ್‌ಡಿಪಿ | 16,15,827 | 16,41,460 | 19,78,094 | 22,69,995 | 25,67,340 |
| ಹೊಣೆಗಾರಿಕೆ / ಜಿಎಸ್‌ಡಿಪಿ (ಶೇಕಡಾ)* | 20.89 | 24.58 | 23.24 | 23.03 | 23.49 |
| ಒಟ್ಟು ಸ್ವೀಕೃತಿಗಳು | 50,459 | 84,528 | 80,641 | 44,549 | 90,280 |
| ಒಟ್ಟು ಮರುಪಾವತಿಗಳು | 10,180 | 11,016 | 13,972 | 15,942 | 22,453 |
| ನಿವ್ವಳ ನಿಧಿ ಲಭ್ಯತೆ | 40,279 | 73,512 | 66,669 | 28,607 | 67,827 |
| ಮರುಪಾವತಿಗಳು / ಸ್ವೀಕೃತಿಗಳು (ಶೇಕಡಾ) | 20.17 | 13.03 | 17.33 | 35.79 | 24.87 |

*ಆಕರ: ಹಣಕಾಸು ಲೆಕ್ಕಗಳು*

*^ ಭಾರತ ಸರ್ಕಾರದಿಂದ ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು 2020–21ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ₹14,210 ಕೋಟಿಗಳು, 2021–22 ವರ್ಷಾಂತ್ಯಕ್ಕೆ ₹14,869 ಕೋಟಿಗಳು ಮತ್ತು 2022–23 ವರ್ಷಾಂತ್ಯಕ್ಕೆ ₹18,623 ಕೋಟಿಗಳು ಇದ್ದು ರಾಜ್ಯಕ್ಕೆ 2020–21 ಮತ್ತು 2021–22ರಲ್ಲಿ ಋಣ ಸ್ವೀಕೃತಿಯಡಿಯಲ್ಲಿ ನೀಡಿದ ಕ್ರಮವಾಗಿ ₹12,407 ಕೋಟಿ ಮತ್ತು ₹18,109 ಕೋಟಿ ಬ್ಯಾಕ್ ಟು ಬ್ಯಾಕ್ ಸಾಲವನ್ನು ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ನಿರ್ಧರಿಸಿತ್ತು.*

** ಬಾಕಿ ಇರುವ ಆರ್ಥಿಕ ಹೊಣೆಗಾರಿಕೆಗಳು ₹4,03,519 ಕೋಟಿ, ₹4,59,740 ಕೋಟಿ, ₹5,22,847 ಕೋಟಿ ಮತ್ತು ₹6,03,015 ಕೋಟಿ ಆಗಿ ಇದು ಭಾರತ ಸರ್ಕಾರದ ವೆಚ್ಚ ಇಲಾಖೆಯು 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗೆ GST ಪರಿಹಾರವನ್ನು ಬ್ಯಾಕ್ ಟು ಬ್ಯಾಕ್ ಸಾಲವಾಗಿ ನೀಡಿ ಋಣ ಸ್ವೀಕೃತಿಗಳಡಿಯಲ್ಲಿ ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ನಿರ್ಧರಿಸಿತ್ತು.*

ರಾಜ್ಯದ ಒಟ್ಟು ಋಣ ಹೊಣೆಗಾರಿಕೆಗಳು 2019–20 ರಿಂದ 2023–24ರ ಅವಧಿಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು ₹2,96,011 ಕೋಟಿ ಏರಿಕೆಯಾಗಿದೆ. ಈ ಏರಿಕೆಯು ಪ್ರಮುಖವಾಗಿ ಆಂತರಿಕ ಋಣ ₹1,97,118 ಕೋಟಿ, ಭಾರತ ಸರ್ಕಾರದಿಂದ ಪಡೆದ ಸಾಲ ₹39,498 ಕೋಟಿ ಮತ್ತು ₹64,020 ಕೋಟಿ ಸಾರ್ವಜನಿಕ ಖಾತೆ ಹೊಣೆಗಾರಿಕೆಯಲ್ಲಿ ಹೆಚ್ಚಳವಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಾಕಿ ಇರುವ ಹೊಣೆಗಾರಿಕೆಯು ₹80,168 ಕೋಟಿಗಳಷ್ಟು ಹೆಚ್ಚಾಗಿದೆ. ಇದು ಮುಖ್ಯವಾಗಿ ಆಂತರಿಕ ಋಣದ ಅಡಿಯಲ್ಲಿ (₹63,561 ಕೋಟಿ) ನಂತರ ಬಡ್ಡಿ ಹೊಂದಿರದ ಮೀಸಲು ನಿಧಿ (₹5,127 ಕೋಟಿ) ಮತ್ತು ಬಡ್ಡಿಯನ್ನು ಹೊಂದಿರದ ಠೇವಣಿ (₹7,412 ಕೋಟಿ) ಇಂದ ಉಂಟಾಗಿದೆ.

2023–24ರ ಅವಧಿಯಲ್ಲಿ, ರಾಜ್ಯವು ಪಡೆದ ಸಾರ್ವಜನಿಕ ಸಾಲವು ಹಿಂದಿನ ವರ್ಷಕ್ಕಿಂತ ₹67,828 ಕೋಟಿಗಳಷ್ಟು ಅಧಿಕವಾಗಿ ₹4,03,033 ಕೋಟಿಗಳಿಂದ ₹4,70,861 ಕೋಟಿಗಳಿಗೆ ಏರಿಕೆಯಾಗಿದೆ.

**ನಕ್ಷೆ–2.16: 2023–24ರ ಆರ್ಥಿಕ ವರ್ಷದ ಕೊನೆಯಲ್ಲಿ ಒಟ್ಟಾರೆ ಋಣದ ವಿಭಜನೆ**

(₹ ಕೋಟಿಗಳಲ್ಲಿ)




*ಆಕರ: ಹಣಕಾಸು ಲೆಕ್ಕಗಳು*

**ನಕ್ಷೆ–2.17: ಆಂತರಿಕ ಋಣ ಸ್ವೀಕೃತಿಗಳಿಗೆ ಮುಖಾಮುಖಿಯಾಗಿ ಮರುಪಾವತಿ**




*ಆಕರ: ಹಣಕಾಸು ಲೆಕ್ಕಗಳು*

ಒಟ್ಟು ಬಾಕಿ ಸಾಲದಲ್ಲಿ, ಮಾರುಕಟ್ಟೆ ಸಾಲಗಳು, ನಬಾರ್ಡ್, ಎಲ್ಐಸಿ, ಜಿಐಸಿ ಮತ್ತು ಕೇಂದ್ರ ಸರ್ಕಾರದ ಎನ್ಎಸ್ಎಸ್ಎಫ್‌ಗೆ ನೀಡಲಾದ ವಿಶೇಷ ಭದ್ರತೆಗಳ ಸಾಲಗಳನ್ನು ಒಳಗೊಂಡಿರುವ ಆಂತರಿಕ ಸಾಲವು ಶೇಕಡಾ 65.89 (₹4,17,455 ಕೋಟಿ) ರಷ್ಟಿದೆ. ಸಾರ್ವಜನಿಕ ಲೆಕ್ಕದ ಹೊಣೆಗಾರಿಕೆಗಳು ಶೇಕಡಾ 23.55 ರಷ್ಟಿದೆ, ಭಾರತ ಸರ್ಕಾರದಿಂದ ಪಡೆದ ಸಾಲಗಳು ಶೇಕಡಾ 8.3 ಮತ್ತು ಆಯವ್ಯಯದ ಹೊರಗಿನ ಸಾಲಗಳು ಶೇಕಡಾ 2.13 ಅನ್ನು ಒಳಗೊಂಡಿವೆ.

#### 2.7.1.1 ಆಯವ್ಯಯದ ಹೊರಗಿನ  ಸಾಲಗಳು

ರಾಜ್ಯ ಸರ್ಕಾರದ ಸಾಲಗಳನ್ನು ಭಾರತ ಸಂವಿಧಾನದ 293 (1) ನೇ ಅನುಚ್ಛೇದ ಮೂಲಕ ವ್ಯವಸ್ಥೆಗೊಳಿಸಲಾಗುತ್ತದೆ. ಸರ್ಕಾರಿ ಕಂಪನಿಗಳು/ನಿಗಮಗಳು/ಮಂಡಳಿಗಳು ಪಡೆದ ಸಾಲಗಳಿಗೆ ರಾಜ್ಯವು ಖಾತರಿಯನ್ನು ನೀಡುತ್ತದೆ. ಈ ಕಂಪನಿಗಳು/ ನಿಗಮಗಳು/ಮಂಡಳಿಗಳು ರಾಜ್ಯ ಆಯವ್ಯಯದ ಹೊರಗೆ ಯೋಜಿಸಲಾದ ವಿವಿಧ ರಾಜ್ಯ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರುಕಟ್ಟೆ/ಹಣಕಾಸು ಸಂಸ್ಥೆಗಳಿಂದ ಹಣವನ್ನು ಸಾಲ ಪಡೆಯುತ್ತವೆ. ಈ ಸಂಸ್ಥೆಗಳ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ  ಸಾಲಗಳು' (ಒಬಿಬಿ) ಎಂದು ಕರೆಯಲ್ಪಡುವ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗಿ ಹೊರಹೊಮ್ಮುತ್ತವೆ. ರಾಜ್ಯದಲ್ಲಿ, ಇವುಗಳನ್ನು ಆಯವ್ಯಯ ಅವಲೋಕನದಲ್ಲಿ ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆಗಳಲ್ಲಿ ತೋರಿಸಲಾಗುವುದು..

2019–20 ರಿಂದ 2023–24ರ ಅವಧಿಯಲ್ಲಿ ಆಯವ್ಯಯದ ಹೊರಗಿನ  ಸಾಲಗಳ ಪ್ರವೃತ್ತಿಯನ್ನು **ಕೋಷ್ಟಕ–2.33**ರಲ್ಲಿ ವಿವರಿಸಲಾಗಿದೆ. 2019–20 ರಿಂದ 2021–22ರ ಅವಧಿಯಲ್ಲಿ ಮತ್ತು 2022–23ರಲ್ಲಿ ರಾಜ್ಯದ ಆಯವ್ಯಯದ ಹೊರಗಿನ  ಸಾಲಗಳು ಕಡಿಮೆಯಾಗುವ ಪ್ರವೃತ್ತಿಯಲ್ಲಿದ್ದರೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ₹1,679 ಕೋಟಿಗಳಷ್ಟು ಹೆಚ್ಚಾಗಿದೆ. ಆದಾಗ್ಯೂ, 2023–24ರಲ್ಲಿ ರಾಜ್ಯ ಸರ್ಕಾರವು ಯಾವುದೇ ಆಯವ್ಯಯದ ಹೊರಗಿನ  ಸಾಲವನ್ನು ಪಡೆಯಲಿಲ್ಲ.

**ಕೋಷ್ಟಕ–2.33: ಆಯವ್ಯಯದ ಹೊರಗಿನ  ಸಾಲಗಳ ಪ್ರವೃತ್ತಿ**

(₹ ಕೋಟಿಗಳಲ್ಲಿ)

| ವರ್ಷ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| **ಆಯವ್ಯಯದ ಹೊರಗಿನ ಸಾಲಗಳು** | 4,435.49 | 3,045.10 | 2,350.00 | 4,029.00 | – |

ರಾಜ್ಯದಲ್ಲಿ, ಬಂಡವಾಳ ಲೆಕ್ಕದ ಅಡಿಯಲ್ಲಿ ನಿಯಮಿತ ಆಯವ್ಯಯ ಅವಕಾಶಗಳ ಮೂಲಕ ಬಡ್ಡಿಯನ್ನು ಒಳಗೊಂಡಂತೆ ಈ ಕಂಪನಿಗಳು / ನಿಗಮಗಳು / ಮಂಡಳಿಗಳು ಪಡೆದ ಸಾಲಗಳನ್ನು ಸರ್ಕಾರವು ಮರುಪಾವತಿ ಮಾಡುತ್ತಿದೆ. 2023–24ರಲ್ಲಿ, ₹52,120 ಕೋಟಿಗಳ ಬಂಡವಾಳ ವೆಚ್ಚವು ₹3,827 ಕೋಟಿಗಳ ಆಯವ್ಯಯ ಹೊರಗಿನ ಸಾಲಗಳ ಅಸಲು ಮೊತ್ತದ ಸೇವೆಯನ್ನು ಒಳಗೊಂಡಿದೆ. ಪ್ರಸಕ್ತವರ್ಷದಲ್ಲಿ ₹1,046 ಕೋಟಿ ಬಡ್ಡಿ ಪಾವತಿಯಾಗಿದೆ. **ಕೋಷ್ಟಕ–2.34**ರಲ್ಲಿ 2023–24ರ ಕೊನೆಯಲ್ಲಿರುವಂತೆ ಸಾಲಗಳ ಘಟಕ–ವಾರು ಸ್ಥಿತಿಯನ್ನು ನೀಡಲಾಗಿದೆ.

**ಕೋಷ್ಟಕ–2.34: ಆಯವ್ಯಯ ಹೊರಗಿನ ಸಾಲಗಳ ಸಂಸ್ಥಾವಾರು ಸ್ಥಿತಿ**

(₹ ಕೋಟಿಗಳಲ್ಲಿ)

| ಕಂಪನಿ/ ನಿಗಮ/ ಮಂಡಳಿ | ಬಾಕಿ ಇರುವ ಆಯವ್ಯಯ ಹೊರಗಿನ ಸಾಲ | 2023–24ರಲ್ಲಿ ಪಡೆದ ಸಾಲ | 2023–24ರಲ್ಲಿ ಮರುಪಾವತಿ | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| **ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ** | 5,651 | 0 | 1,599 | 348 | 4,052 |
| **ಕರ್ನಾಟಕ ನೀರಾವರಿ ನಿಗಮ ನಿಯಮಿತ** | 4,405 | 0 | 821 | 278 | 3,585 |
| **ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ** | 743 | 0 | 35 | 55 | 708 |
| **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ** | 2,800 | 0 | 550 | 166 | 2,250 |
| **ಕಾವೇರಿ ನೀರಾವರಿ ನಿಗಮ ನಿಯಮಿತ** | 965 | 0 | 263 | 73 | 702 |

| ಕಂಪನಿ/ ನಿಗಮ/ ಮಂಡಳಿ | ಬಾಕಿ ಇರುವ ಆಯವ್ಯಯ ಹೊರಗಿನ ಸಾಲ | 2023-24ರಲ್ಲಿ ಪಡೆದ ಸಾಲ | 2023-24ರಲ್ಲಿ ಮರುಪಾವತಿ | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | 2,274 | 0 | 466 | 118 | 1,808 |
| ಕೌಶಲ್ಯ ಅಭಿವೃದ್ಧಿ | 468 | 0 | 94 | 8 | 374 |
| **ಒಟ್ಟು** | **17,306** | **0** | **3,828** | **1,046** | **13,478** |

*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಎಲ್ಲಾ ಏಳು ಘಟಕಗಳು ತಮ್ಮದೇ ಆದ ಆದಾಯದ ಮೂಲವನ್ನು ಹೊಂದಿಲ್ಲ ಮತ್ತು ನಷ್ಟವನ್ನು ಅನುಭವಿಸುತ್ತಿವೆ.

ರಾಜ್ಯದ ಆಯವ್ಯಯದ ಹೊರಗಿನ ಸಾಲಗಳನ್ನು ಗಣನೆಗೆ ತೆಗೆದುಕೊಂಡರೆ, ಮಾರ್ಚ್ 2024ರ ಅಂತ್ಯದ ವೇಳೆಗೆ ಒಟ್ಟು ಹೊಣೆಗಾರಿಕೆಗಳು ₹6,33,531 ಕೋಟಿಯಷ್ಟಾಗುತ್ತದೆ. ಭಾರತ ಸರ್ಕಾರದಿಂದ ಪಡೆದ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿ ₹30,516 ಕೋಟಿಗಳ ಬ್ಯಾಕ್-ಟು-ಬ್ಯಾಕ್ ಸಾಲವನ್ನು ಹೊರತುಪಡಿಸಿ ₹6,03,015 ಕೋಟಿ (ಆಯವ್ಯಯ ಹೊರಗಿನ ಸಾಲಗಳು ಸೇರಿದಂತೆ) ನಿವ್ವಳ ಬಾಕಿ ಇರುವ ಹೊಣೆಗಾರಿಕೆಗಳ ದರವು ವರ್ಷಾಂತ್ಯದಲ್ಲಿ ಜಿಎಸ್‌ಡಿಪಿ ಶೇಕಡಾ 23.49ರಷ್ಟು ಇದೆ. 2019-20 ರಿಂದ 2023-24ರವರೆಗೆ ರಾಜ್ಯದ ಜಿಎಸ್‌ಡಿಪಿ ಗೆ ವಿತ್ತೀಯ ಕೊರತೆ ಮತ್ತು ಬಾಕಿ ಇರುವ ಸಾಲದ ಸ್ಥಿತಿಯನ್ನು **ಕೋಷ್ಟಕ-2.35**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ-2.35: ಹಣಕಾಸಿನ ಸೂಚಕಗಳ ಮೇಲೆ ಆಯವ್ಯಯದ ಹೊರಗಿನ ಸಾಲಗಳ ಪರಿಣಾಮ**

(₹ ಕೋಟಿಗಳಲ್ಲಿ)

| ವರ್ಷ | ಜಿಎಸ್‌ಡಿಪಿ | ಆಯವ್ಯಯದ ಹೊರಗಿನ ಸಾಲ | ವಿತ್ತೀಯ ಕೊರತೆ | ವಿತ್ತೀಯ ಕೊರತೆ + ಆಯವ್ಯಯ ಹೊರಗಿನ ಸಾಲ | ವಿತ್ತೀಯ ಕೊರತೆ/ ಜಿಎಸ್‌ಡಿಪಿ | (ವಿತ್ತೀಯ ಕೊರತೆ + ಆಯವ್ಯಯ ಹೊರಗಿನ ಸಾಲ) / ಜಿಎಸ್‌ಡಿಪಿ | ಬಾಕಿ ಸಾಲ/ ಜಿಎಸ್‌ಡಿಪಿ |
|---|---|---|---|---|---|---|---|
| 2019-20 | 16,15,827 | 4,435.49 | 38,166 | 42,601 | 2.36 | 2.64 | 20.89 |
| 2020-21 | 16,41,460 | 3,045.10 | 67,098 | 70,143 | 4.09 | 4.27 | 24.58 |
| 2021-22 | 19,78,094 | 2,350.00 | 66,036 | 68,386 | 3.34 | 3.46 | 23.24 |
| 2022-23 | 22,69,995 | 4,029.00 | 46,623 | 50,652 | 2.05 | 2.23 | 23.03 |
| 2023-24 | 25,67,340 | 0.00 | 65,522 | 65,522 | 2.55 | 2.55 | 23.49 |

ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯ ಲೆಕ್ಕದಲ್ಲಿ ರಾಜ್ಯ ಸರ್ಕಾರವು 1,046 ಕೋಟಿಗಳನ್ನು ಪಾವತಿಸಿದೆ ಎಂದು ಉಲ್ಲೇಖಿಸುವುದು ಸಮಂಜಸವಾಗಿದೆ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ನವೆಂಬರ್ 2023) ಪ್ರಸಕ್ತ ಹಣಕಾಸು ವರ್ಷದ ಸಾಲಗಳ ಮರುಪಾವತಿಯನ್ನು (ಆಯವ್ಯಯದ ಹೊರಗಿನ) ಈಗಾಗಲೇ ರಾಜ್ಯದ ವಿತ್ತೀಯ ಕೊರತೆಯಲ್ಲಿ ಸೇರಿಸಲಾಗಿರುವುದರಿಂದ, ಆಯವ್ಯಯದ ಹೊರಗಿನ ಸಾಲಗಳನ್ನು ಸೇರಿಸುವ ಮೂಲಕ ವಿತ್ತೀಯ ಕೊರತೆಯನ್ನು ಅಳೆಯುವುದು ಸರಿಯಲ್ಲ, ಏಕೆಂದರೆ ಈ ಸಾಲಗಳನ್ನು ಅವುಗಳ ಮುಕ್ತಾಯದ ಆಧಾರದ ಮೇಲೆ ಮುಂದಿನ ವರ್ಷಗಳಲ್ಲಿ ಪೂರೈಸಲಾಗುತ್ತದೆ ಎಂದು ಹೇಳಿದೆ.

ಆಯವ್ಯಯದ ಹೊರಗಿನ ಸಾಲಗಳನ್ನು ಸೇರಿಸಿದ ನಂತರವೂ ವಿತ್ತೀಯ ಕೊರತೆಯ ಅನುಪಾತವು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಕೆಎಫ್‌ಆರ್‌ಎ 2002 ನಿಗದಿಪಡಿಸಿದ ಗುರಿಗಳಿಗಿಂತ ಕಡಿಮೆಯಾಗಿದೆ.

ಹದಿನೈದನೆ ಹಣಕಾಸು ಆಯೋಗವು ಇವುಗಳು ಸೂಚ್ಯ ಸಾಂದರ್ಭಿಕ ಹೊಣೆಗಾರಿಕೆಗಳಾಗಿದ್ದು, ಅಂತಿಮವಾಗಿ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆ ಬೀಳಬಹುದು ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಆಯವ್ಯಯದ ಹೊರಗಿನ ಸಾಲದ ಹೊರೆಗೆ ಮತ್ತಷ್ಟು ಸೇರ್ಪಡೆಗಳನ್ನು ವಿರೋಧಿಸುವ ಮೂಲಕ ಕಟ್ಟುನಿಟ್ಟಾದ ಶಿಸ್ತನ್ನು ಪಾಲಿಸಲು ಶಿಫಾರಸು ಮಾಡಲಾಗಿದೆ ಏಕೆಂದರೆ ಇದು ಹಣಕಾಸಿನ ಪಾರದರ್ಶಕತೆಯ ಮಾನದಂಡಕ್ಕೆ ವಿರುದ್ಧವಾಗಿದೆ ಮತ್ತು ಹಣಕಾಸಿನ ಸುಸ್ಥಿರತೆಗೆ ಹಾನಿಕಾರಕವಾಗಿದೆ. ಇದಲ್ಲದೆ, ಈ ಬಾಧ್ಯತೆಗಳನ್ನು ಕಾಲಮಿತಿಯೊಳಗೆ ತೆರವುಗೊಳಿಸಬೇಕಾಗಿದೆ ಎಂದು ಹೇಳಲಾಗಿದೆ ಮತ್ತು ತೆರವುಗೊಳಿಸಲು ತೆರಿಗೆ ಮತ್ತು ತೆರಿಗೆಯೇತರ ನಿಯಮಿತ ಸಂಪನ್ಮೂಲಗಳು ಒಳಹರಿವಿನಿಂದ ಇರಬಾರದು, ಆದರೆ ಸರ್ಕಾರವು ಹೆಚ್ಚುವರಿ ಸಂಪನ್ಮೂಲಗಳನ್ನು ಸಜ್ಜುಗೊಳಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಇದರಲ್ಲಿ ಸ್ವತ್ತುಗಳ ನಗದೀಕರಣವೂ ಸೇರಿರಬಹುದು.

### *2.7.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಹಣ ಒದಗಿಸುವ ವ್ಯವಸ್ಥೆ*

ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ವ್ಯವಸ್ಥೆಯ ಮಾದರಿಯು **ಕೋಷ್ಟಕ-2.36**ರಲ್ಲಿ ತೋರಿಸಿರುವಂತೆ ಸಂಯೋಜನಾ ಬದಲಾವಣೆಗೆ ಒಳಗಾಗಿದೆ. ವಿತ್ತೀಯ ಕೊರತೆಯ ವಿಂಗಡಣೆಯು ರಾಜ್ಯವು ತನ್ನ ಆದಾಯ ಮತ್ತು ಸಾಲವಲ್ಲದ ಸ್ವೀಕೃತಿಗಳನ್ನು ಮೀರಿದ ಅಗತ್ಯವನ್ನು ಪೂರೈಸಲು ಆಶ್ರಯಿಸಿದ ವಿವಿಧ ಸಾಲಗಳ ವ್ಯಾಪ್ತಿಯನ್ನು ಬಹಿರಂಗಪಡಿಸುತ್ತದೆ.

**ಕೋಷ್ಟಕ-2.36 : ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಹಣ ಒದಗಿಸುವ ವ್ಯವಸ್ಥೆ**

(₹ ಕೋಟಿಗಳಲ್ಲಿ)

| ಕ್ರ.ಸಂ. | ವಿವರಗಳು | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|
| | ವಿತ್ತೀಯ ಕೊರತೆಯ ಸಂಯೋಜನೆ | (-)38,166 | (-)67,098 | (-)66,036 | (-)46,623 | (-)65,522 |
| 1 | ರಾಜಸ್ವ ಹೆಚ್ಚಳ / ಕೊರತೆ | 1,185 | (-)19,338 | (-)13,666 | 13,496 | (-)9,271 |
| 2 | ನಿವ್ವಳ ಬಂಡವಾಳ ವೆಚ್ಚ | 35,485 | 45,361 | 47,868 | 57,347 | 52,084 |
| 3 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 3,866 | 2,399 | 4,082 | 2,772 | 4,167 |
| 4 | ಸಾದಿಲ್ವಾರು ನಿಧಿಗೆ ಧನ ವಿನಿಯೋಗ | - | - | 420 | - | - |
| ವಿತ್ತೀಯ ಕೊರತೆಯ ಭರಿಸುವ ಹಣಕಾಸು ವ್ಯವಸ್ಥೆ* | | | | | | |
| 1 | ಮಾರುಕಟ್ಟೆ ಸಾಲಗಳು | 42,499 | 61,900 | 49,000 | 26,000 | 63,003 |
| 2 | ಭಾರತ ಸರ್ಕಾರದಿಂದ ಸಾಲಗಳು | (-)749 | 12,709^ | 18,767^ | 3,755 | 4,267 |
| 3 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ನೀಡಲಾದ ವಿಶೇಷ ಭದ್ರತೆ | (-)1,628 | (-)1,628 | (-)1,628 | (-)1,627 | (-)1,628 |
| 4 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 156 | 531 | 529 | 480 | 2,186 |
| 5 | ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿ | 4,156 | 3,632 | 3,522 | 3,403 | 3,554 |
| 6 | ಠೇವಣಿಗಳು ಮತ್ತು ಮುಂಗಡಗಳು | 3,174 | (-)685 | 2,808 | 26,192 | 7,474 |
| 7 | ಅಮಾನತ್ತು ಮತ್ತು ಇತರೆ | (-)1,364 | (-)2,921 | (-)153 | 1,196 | 2,606 |
| 8 | ಇರಸಾಲುಗಳು | (-)347 | (-)35 | (-)133 | 159 | 56 |
| 9 | ಮೀಸಲು ನಿಧಿಗಳು | 4,728 | 6,275 | 9,173 | 7,282 | 7,328 |
| 10 | **ಒಟ್ಟಾರೆ ಕೊರತೆ** | 50,625 | 79,778 | 81,885 | 66,840 | 88,846 |
| 11 | **ಸಾದಿಲ್ವಾರು ನಿಧಿಗೆ ಧನ ವಿನಿಯೋಗ** | - | - | 420 | - | - |
| 12 | ಹೆಚ್ಚಳ (-)/ಕಡಿಮೆ (+) ನಗದು ಬಾಕಿ | (-)12,459 | (-)12,680 | (-)16,269 | (-)20,217 | (-)23,324 |
| 13 | **ಒಟ್ಟು ವಿತ್ತೀಯ ಕೊರತೆ** | 38,166 | 67,098 | 66,036 | 46,623 | 65,522 |

*ಆಕರ: ಹಣಕಾಸು ಲೆಕ್ಕಗಳು*

** ಮೇಲಿನ ಎಲ್ಲ ಅಂಕಿಗಳು ಪ್ರಸಕ್ತ ವರ್ಷದ ನಿವ್ವಳ ವಿತರಣೆಗಳು/ಹೊರಹರಿವುಗಳು*

*^ ಭಾರತ ಸರ್ಕಾರದಿಂದ ಬಂದ ನಿವ್ವಳ ಸಾಲಗಳು ಮತ್ತು ಮುಂಗಡಗಳು 2020–21ರ ₹12,407 ಕೋಟಿ ಮತ್ತು 2021–22ರ ₹18,109 ಕೋಟಿ ಮೊತ್ತದ ಜಿಎಸ್‌ಟಿ ಪರಿಹಾರ ವನ್ನು ಕಳೆದು ನೀಡಿದ ₹1,707 ಕೋಟಿ ಮತ್ತು ₹2,070 ಕೋಟಿ ಆಗಿದ್ದು ಬ್ಯಾಕ್ ಟು ಬ್ಯಾಕ್ ಸಾಲವಾಗಿ ನೀಡಲಾಗಿದೆ.*

ರಾಜ್ಯವು 2004–05ರಿಂದ ರಾಜಸ್ವ ಹೆಚ್ಚಳವನ್ನು ಸಾಧಿಸಿದ್ದು ಇದರೊಂದಿಗೆ ಮಾರುಕಟ್ಟೆ ಸಾಲಗಳು, ಭಾರತ ಸರ್ಕಾರದ ಸಾಲಗಳು ಇತ್ಯಾದಿಗಳನ್ನು ಬಂಡವಾಳ ವೆಚ್ಚಕ್ಕೆ ಹಣ ಒದಗಿಸಲು ಬಳಕೆ ಮಾಡಿಕೊಳ್ಳಲಾಗಿದೆ. 2020–21 ಮತ್ತು 2021–22ರಲ್ಲಿ ರಾಜ್ಯವು ಕೋವಿಡ್ – 19ರ ಕಾರಣದಿಂದ ಉಂಟಾದ ರಾಜಸ್ವ ಕೊರತೆಯನ್ನು ಎದುರಿಸಲು ಸಾಲದ ಮೊತ್ತಗಳನ್ನು ರಾಜಸ್ವ ವೆಚ್ಚವನ್ನು ಭರಿಸಲು ಉಪಯೋಗಿಸಿಕೊಂಡಿದ್ದು ಮತ್ತೆ 2022–23ರಲ್ಲಿ ರಾಜಸ್ವ ಹೆಚ್ಚಳವನ್ನು ಸಾಧಿಸಿತು. ಆದರೆ 2023–24ರಲ್ಲಿ ರಾಜ್ಯವು ಮತ್ತೆ ₹9,271 ಕೋಟಿಗಳ ರಾಜಸ್ವ ಕೊರತೆಯನ್ನು ಎದುರಿಸಿತು. 2023–24ರ ವಿತ್ತೀಯ ಕೊರತೆಗೆ ಹಣದ ವ್ಯವಸ್ಥೆಯ ವಿಧಾನವನ್ನು **ಕೋಷ್ಟಕ–2.37**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.37: 2023–24ರಲ್ಲಿ ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ಘಟಕಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳು**

(₹ ಕೋಟಿಗಳಲ್ಲಿ)

| ಕ್ರ.ಸಂ. | ವಿವರಗಳು | ಸ್ವೀಕೃತಿ | ವಿತರಣೆ | ನಿವ್ವಳ |
|---|---|---|---|---|
| 1 | ಮಾರುಕಟ್ಟೆ ಸಾಲಗಳು | 81,000 | 17,997 | 63,003 |
| 2 | ಭಾರತ ಸರ್ಕಾರದಿಂದ ಸಾಲಗಳು | 5,946 | 1,679 | 4,267 |
| 3 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ನೀಡಲಾದ ವಿಶೇಷ ಭದ್ರತೆ | 0 | 1,628 | (–)1,628 |
| 4 | ರಿಸರ್ವ್ ಬ್ಯಾಂಕಿನಿಂದ ಮಾರ್ಗೋಪಾಯ ಮುಂಗಡಗಳು | 0 | 0 | 0 |
| 5 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 3,334 | 1,148 | 2,186 |
| 6 | ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿ | . 9,861 | 6,307 | 3,554 |
| 7 | ಠೇವಣಿಗಳು ಮತ್ತು ಮುಂಗಡಗಳು | 79,962 | 72,488 | 7,474 |
| 8 | ಅಮಾನತ್ತು ಮತ್ತು ಇತರೆ | 2,69,299 | 2,66,693 | 2,606 |
| 9 | ಇರಸಾಲುಗಳು | 0 | (–) 56 | 56 |
| 10 | ಮೀಸಲು ನಿಧಿಗಳು | 9,677 | 2,349 | 7,328 |
| 11 | **ಒಟ್ಟಾರೆ ಕೊರತೆ** | **4,59,079** | **3,70,233** | **88,846** |
| 12 | ನಗದು ಶಿಲ್ಕಿನಲ್ಲಿ ಹೆಚ್ಚಳ/ಕಡಿಮೆ | 83,941 | 1,07,265 | (–)23,324 |
| 13 | ಸಾದಿಲ್ವಾರು ಧಿಗೆ ಧನ ವಿನಿಯೋಗ | 0 | 0 | 0 |
| 14 | **ಒಟ್ಟು ವಿತ್ತೀಯ ಕೊರತೆ** | **5,43,020** | **4,77,498** | **65,522** |

*ಆಕರ: ಹಣಕಾಸು ಲೆಕ್ಕಗಳು*

2023–24ರ ಅವಧಿಯಲ್ಲಿ, ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ಪ್ರಮುಖ ಕೊಡುಗೆದಾರರು ಮಾರುಕಟ್ಟೆಯ ಎರವಲುಗಳು, ಮೀಸಲು ನಿಧಿಗಳು ಮತ್ತು ಠೇವಣಿಗಳು ಮತ್ತು ಮುಂಗಡಗಳು.

### *2.7.3 ಋಣ ಚಿತ್ರಣ: ಅವಧಿ ಪೂರ್ಣ ಋಣ ಮತ್ತು ಮರುಪಾವತಿ*

ಅವಧಿ ಪೂರ್ಣ ಸಾಲ ಮತ್ತು ಮರುಪಾವತಿಯ ಚಿತ್ರವು ಸಾಲ ಮರುಪಾವತಿ ಅಥವಾ ಋಣ ಸೇವೆಗಾಗಿ ಸರ್ಕಾರದ ಕಡೆಯಿಂದ ಬದ್ಧತೆಯನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ಸಾರ್ವಜನಿಕ ಸಾಲದ ಅಸಲು ಮತ್ತು ಬಡ್ಡಿ (ವ್ಯತ್ಯಾಸ ಸಾಧ್ಯ) ಮರುಪಾವತಿಯನ್ನು **ಕೋಷ್ಟಕ–2.38** ಮತ್ತು **ನಕ್ಷೆ–2.18**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.38: ಸಾರ್ವಜನಿಕ ಋಣದ ಅವಧಿಪೂರ್ಣತೆಯ ಚಿತ್ರ**

(₹ ಕೋಟಿಗಳಲ್ಲಿ)

| ಅವಧಿಪೂರ್ಣತೆಯ ವರ್ಷ | ಮೊತ್ತ | | |
|---|---|---|---|
| | ಸಾರ್ವಜನಿಕ ಋಣ | ಬಡ್ಡಿ | ಒಟ್ಟು |
| **2024–25** | 23,300.83 | 30,701.93 | 54,002.76 |
| **2025–26** | 24,040.48 | 29,072.31 | 53,112.79 |
| **2026–27** | 31,795.00 | 27,152.48 | 58,947.48 |
| **2027–28** | 32,237.71 | 24,736.81 | 56,974.52 |
| **2028–29** | 31,731.17 | 22,451.90 | 54,183.07 |
| **2029–30** | 32,331.73 | 19,961.79 | 52,293.52 |
| **2030–31** | 31,315.81 | 17,346.51 | 48,662.32 |
| **2031–32** | 29,186.63 | 15,503.70 | 44,690.33 |
| **2032–33** | 26,384.92 | 13,555.19 | 39,940.11 |
| **2033–34** | 25,847.73 | 11,636.95 | 37,484.68 |
| **2034–35** | 27,339.09 | 9,736.79 | 37,075.88 |
| **2035–36** | 18,303.06 | 7,708.80 | 26,011.86 |
| **2036–37** | 20,179.15 | 6,388.06 | 26,567.21 |
| **2037–38** | 23,676.91 | 4,895.97 | 28,572.88 |
| **2038–39** | 15,532.45 | 3,130.18 | 18,662.63 |
| **2039–40 ಮುಂದಕ್ಕೆ** | 77,946.23 | 4,422.42 | 82,368.65 |
| **ಒಟ್ಟು** | **4,71,148.90** | **2,48,401.79** | **7,19,550.69** |

*ಆಕರ: ಹಣಕಾಸು ಲೆಕ್ಕಗಳು*

**ನಿವ್ವಳ ಸಾರ್ವಜನಿಕ ಋಣವು ₹ (–)288.55 ಕೋಟಿಗಳ ಇತರೆ ಮೊತ್ತಗಳನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ₹4,71,148.90 ಕೋಟಿ ಇರುತ್ತದೆ.*

**ನಕ್ಷೆ–2.18: ಸಾರ್ವಜನಿಕ ಋಣದ ಅವಧಿಪೂರ್ಣತೆಯ ಚಿತ್ರ**



31 ಮಾರ್ಚ್ 2024 ರಂತೆ ಸಾರ್ವಜನಿಕ ಋಣದ ಅವಧಿಪೂರ್ಣತೆಯ ಚಿತ್ರವು ₹4,71,148.90 ಕೋಟಿಯ ಸಾರ್ವಜನಿಕ ಋಣದ ಪೈಕಿ 37.24 ಶತಾಂಶ 1–6 ವರ್ಷಗಳ ಅವಧಿ ಪೂರ್ಣತೆಯ ವರ್ಷಕ್ಕೆ (₹1,75,436.92 ಕೋಟಿ), 23.93 ಶತಾಂಶ (₹1,12,735.09 ಕೋಟಿ ) 7–10 ವರ್ಷಗಳ ಅವಧಿ ಪೂರ್ಣತೆಯ ವರ್ಷಕ್ಕೆ ಮತ್ತು 38.84 ಶತಾಂಶ (₹1,82,976.89 ಕೋಟಿ) ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿ ಪೂರ್ಣತೆಯ ವರ್ಷಕ್ಕೆ ಸೇರಿದೆ ಎಂದು ಸೂಚಿಸುತ್ತದೆ. ರಾಜ್ಯವು ತನ್ನ ವೆಚ್ಚದ ಅಂಶವನ್ನು ಪೂರೈಸಲು ಹೆಚ್ಚುವರಿ ಸಾಲವನ್ನು ಪಡೆಯುವುದು ಅಗತ್ಯವೆಂದು ಹಿಂದಿನ ಉತ್ತರದಲ್ಲಿ ಒಪ್ಪಿಕೊಂಡಿದೆ ಮತ್ತು ಇದು ಮುಂದಿನ ದಿನಗಳಲ್ಲಿ ಸಾಲ ಮರುಪಾವತಿಯೊಂದಿಗೆ ರಾಜ್ಯಕ್ಕೆ ಹೊರೆಯಾಗುತ್ತದೆ. ಎಫ್‌ಎಂಆರ್‌ಸಿ (ಫೆಬ್ರವರಿ 2023) ತನ್ನ ಬದ್ಧ ವೆಚ್ಚವನ್ನು ಕಡಿಮೆ ಮಾಡಲು ಸೂಚಿಸಿದ್ದರೂ ಸಹ, ರಾಜ್ಯದ ಆಂತರಿಕ ಸಾಲದ ಹೆಚ್ಚಳದಿಂದಾಗಿ ಬಡ್ಡಿ ಪಾವತಿಯ ಹೆಚ್ಚಳದ ಕಾರಣ ಬದ್ಧ ವೆಚ್ಚದಲ್ಲಿ ಹೆಚ್ಚಳವಾಗುತ್ತದೆ. **ಕೋಷ್ಟಕ–2.38**ರಲ್ಲಿ ನೋಡಿದಂತೆ, ಮುಂದಿನ ಎರಡು ವರ್ಷಗಳಲ್ಲಿ ಅಂದರೆ 2024–25 ಮತ್ತು 2025–26ರಲ್ಲಿ, ಬಡ್ಡಿಯ ಮರುಪಾವತಿಯು ಅಸಲನ್ನು ಮೀರುತ್ತದೆ. ಮುಂದಿನ ಏಳು ವರ್ಷಗಳಲ್ಲಿ, ಇದು ಕಡಿಮೆಯಾಗುತ್ತಿದ್ದರೂ, ಅಸಲಿನ 50 ಪ್ರತಿಶತಕ್ಕಿಂತ ಹೆಚ್ಚಾಗುತ್ತದೆ.

## 2.8 ಋಣ ಸಮರ್ಥನೀಯತೆಯ ವಿಶ್ಲೇಷಣೆ

ಹಣಕಾಸಿನ ಮತ್ತು ಋಣ ಪ್ರಮಿತಿಗಳ ಡೊಮರ್ ವಿಧಾನ ಮತ್ತು ಆಯಾ ಎಫ್‌ಆರ್‌ಬಿಎಂ ಗುರಿಗಳಿಗೆ ಬೃಹತ್ ಹಣಕಾಸಿನ–ವಿತ್ತೀಯ ಪ್ರಮಿತಿಗಳ ಅನುಸರಣೆ ಆಧಾರದ ಮೇಲೆ ಋಣದ ಸಮರ್ಥನೀಯತೆಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ವಿಶ್ಲೇಷಣೆಯ ಫಲಿತಾಂಶಗಳನ್ನು ಈ ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ:

ಸರ್ಕಾರದ ಸಾರ್ವಜನಿಕ ಋಣವು ಸರ್ಕಾರದ ಎಲ್ಲಾ ಆರ್ಥಿಕ ಹೊಣೆಗಾರಿಕೆಗಳನ್ನು ಸೂಚಿಸುತ್ತದೆ, ಅವುಗಳು ಯಾರ ಹೊಣೆಗಾರಿಕೆಯಾಗಿದೆ ಎಂಬುದನ್ನು ಲೆಕ್ಕಿಸದೆ ರಾಜ್ಯವು ಪ್ರಸ್ತುತ ಮತ್ತು ಭವಿಷ್ಯದಲ್ಲಿ ತನ್ನ ಸಾಲವನ್ನು ಪೂರೈಸಲು ಸಾಧ್ಯವಾದರೆ ಸಾಲವನ್ನು ಸಮರ್ಥನೀಯವೆಂದು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರದ ಸಾಲದ ಪ್ರಮಾಣವನ್ನು ಹೊರತುಪಡಿಸಿ, ರಾಜ್ಯದ ಸಾಲದ ಸಮರ್ಥನೀಯತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸುವುದು ಮುಖ್ಯವಾಗಿದೆ. ಸಾಲದ ಸಮರ್ಥನೀಯತೆಯ ಸೂಚಕಗಳು ಸಾಲದ ಅರ್ಹತೆ ಮತ್ತು ರಾಜ್ಯದ ದ್ರವ್ಯತೆ ಸ್ಥಿತಿಯನ್ನು ನಿರ್ಣಯಿಸಲು ಪ್ರಯತ್ನಿಸುತ್ತವೆ, ಸಕಾಲಿಕ ಬಡ್ಡಿ ಪಾವತಿಗಳ ಮೂಲಕ ಸಾಲವನ್ನು ಪೂರೈಸುವ ಮತ್ತು ಪ್ರಸ್ತುತ ಮತ್ತು ನಿಯಮಿತ ಆದಾಯದ ಮೂಲಗಳಿಂದ ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯವನ್ನು ಪರಿಶೀಲಿಸುತ್ತವೆ.

ಈ ವಿಭಾಗವು ಸಾಲ– ಜಿಎಸ್‌ಡಿಪಿ ಅನುಪಾತ, ವಿತ್ತೀಯ ಕೊರತೆ ಮತ್ತು ಬಡ್ಡಿ ಪಾವತಿಗಳ ಹೊರೆಗಳ (ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತದಿಂದ ಅಳೆಯಲಾಗುತ್ತದೆ) ಪರಿಭಾಷೆಯಲ್ಲಿ ರಾಜ್ಯ ಸರ್ಕಾರದ ಋಣ/ಹೊಣೆಗಾರಿಕೆಗಳ ಸಮರ್ಥನೀಯತೆಯನ್ನು ನಿರ್ಣಯಿಸುತ್ತದೆ.

2019–20ರಿಂದ ಪ್ರಾರಂಭವಾಗುವ ಐದು ವರ್ಷಗಳ ಅವಧಿಗೆ ಈ ಸೂಚಕಗಳ ಪ್ರಕಾರ ವಿವಿಧ ಅಸ್ಥಿರಗಳ ಮೇಲಿನ ಸಮಯದ ಸರಣಿ ದತ್ತಾಂಶವನ್ನು ಮತ್ತು ರಾಜ್ಯದ ಸಾಲದ ಸಮರ್ಥನೀಯತೆಯನ್ನು **ಕೋಷ್ಟಕ–2.39** ಸೂಚಿಸುತ್ತದೆ.

**ಕೋಷ್ಟಕ–2.39 : ಋಣ ಸಮರ್ಥನೀಯತೆಯ ಸೂಚಕಗಳಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಕ್ರ.ಸಂ. | ಋಣ ಸಮರ್ಥನೀಯತೆಯ ಸೂಚಕಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| 1 | ಒಟ್ಟಾರೆ ಹೊಣೆ ಅಥವಾ ಒಟ್ಟಾರೆ ಋಣ | 3,37,520 | 4,15,926 | 4,90,256 | 5,53,363 | 6,33,531 |
| 2 | ಒಟ್ಟಾರೆ ಸಾಲದ ವೃದ್ಧಿಯ ದರ (ಶೇಕಡಾ) | 18.33 | 23.23 | 17.87 | 12.87 | 14.49 |
| 3 | ಜಿಎಸ್‌ಡಿಪಿ (ನಾಮಮಾತ್ರದಲ್ಲಿ) | 16,15,827 | 16,41,460 | 19,78,094 | 22,69,995 | 25,67,340 |
| 4 | ನಾಮಮಾತ್ರ ಜಿಎಸ್‌ಡಿಪಿಯ ವೃದ್ಧಿ (ಶೇಕಡಾ) | 9.22 | 1.59 | 20.51 | 14.76 | 13.10 |

| ಕ್ರ.ಸಂ. | ಋಣ ಸಮರ್ಥನೀಯತೆಯ ಸೂಚಕಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| 5 | ಒಟ್ಟಾರೆ ಹೊಣೆ / ಜಿಎಸ್‌ಡಿಪಿ (ಶೇಕಡಾ) | 20.89 | 24.58 | 23.24* | 23.03* | 23.49* |
| 6 | **ಎಲ್ಲ ಮಾದರಿಯ ಸಾಲಗಳ ಅವಧಿಪೂರ್ಣತೆಯ ಚಿತ್ರಣ** | | | | | |
| 6ಎ | (0–2) ವರ್ಷಗಳು | 23,330 | 26,335 | 34,518 | 44,784 | 47,341 |
| 6ಬಿ | (2–5) ವರ್ಷಗಳು | 52,695 | 63,451 | 76,662 | 87,251 | 95,764 |
| 6ಸಿ | (5–10) ವರ್ಷಗಳು | 1,40,798 | 1,54,736 | 1,50,575 | 1,41,126 | 1,45,067 |
| 6ಡಿ | 10 ವರ್ಷಗಳಿಗಿಂತ ಹೆಚ್ಚು | 8,140 | 40,763 | 71,290 | 87,467 | 1,39,066 |
| 7 | ಒಟ್ಟು ಸಾಲಗಳಲ್ಲಿ ಮರುಪಾವತಿ (ಶೇಕಡಾ)# | 60.69 | 67.27 | 72.98 | 62.77 | 74.55 |
| 8 | ಒಟ್ಟು ಸಾಲಗಳ ಶತಾಂಶವಾಗಿ ನಿವ್ವಳ ಸಾಲಗಳ ಲಭ್ಯತೆ | 39.31 | 32.73 | 27.02 | 37.23 | 25.45 |
| 9 | ಒಟ್ಟಾರೆ ಹೊಣೆಗಳ ಮೇಲೆ ಬಡ್ಡಿ ಪಾವತಿ | 19,903 | 23,433 | 26,276 | 29,643 | 31,872 |
| 10 | ಒಟ್ಟಾರೆ ಸಾಲದ ಮೇಲೆ ಪರಿಣಾಮಕಾರಿ ಬಡ್ಡಿ ದರ (ಶೇಕಡಾ) | 7.51 | 7.29 | 6.93 | 7.08 | 6.82 |
| 11 | ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಶತಾಂಶ | 11.34 | 14.95 | 13.42 | 12.94 | 13.66 |
| 12 | ರಾಜಸ್ವ ಕೊರತೆ / ಹೆಚ್ಚಳ | 1,185 | (–)19,338 | (–)13,666 | 13,496 | (–)9,271 |
| 13 | ಪ್ರಾಥಮಿಕ ರಾಜಸ್ವ ಶಿಲ್ಕು (ಪಿಆರ್‌ಬಿ) | 21,088 | 4,095 | 12,610 | 43,139 | 22,601 |
| 14 | ಪ್ರಾಥಮಿಕ ಶಿಲ್ಕು (ಪಿಬಿ) | (–)18,263 | (–)43,665 | (–)39,760 | (–)16,980 | (–)33,650 |
| 15 | ಒಟ್ಟಾರೆ ಹೊಣೆಗಳ ಮೇಲೆ ಬಡ್ಡಿದರ ಮತ್ತು ಪರಿಣಾಮಕಾರಿ ಬಡ್ಡಿದರದ ನಡುವಿನ ವ್ಯತ್ಯಾಸ | (–)7.41 | (–)7.17 | (–)6.44 | (–)6.50 | (–)6.42 |
| 16 | ದ್ರವತೆ ನಿರ್ವಹಣೆ (ಆರ್‌ಬಿಐನಲ್ಲಿ ಲಭ್ಯವಿರುವ ಹಣಕಾಸು ಹೊಂದಿಕೆ ಸಾಧನಗಳ ಬಳಕೆ) (ಸಂದರ್ಭಗಳ ಸಂಖ್ಯೆಯಲ್ಲಿ) | 310.49 (02) | – | – | 1,798 (05) | – |
| 17 | ಋಣ ಸ್ಥಿರೀಕರಣ (ಪರಿಮಾಣ ಹರಡು + ಪ್ರಾಥಮಿಕ ಶಿಲ್ಕು) | (–)13,318 | (–)63,826 | 15,108 | 16,344 | (–)2,201 |
| 18 | ಡೋಮರ್ ನ ಮಾನದಂಡ | | | | | |
| ಎ | ಜೆಎಸ್‌ಡಿಪಿ (ಸ್ಥಿರ ಪರಿಮಿತಿಗಳಲ್ಲಿ) | 11,51,393 | 11,24,942 | 12,35,377 | 13,35,052 | 14,23,229 |
| ಬಿ | ವಾಸ್ತವ ವೃದ್ಧಿ (ಸ್ಥಿರ ಪರಿಮಿತಿಗಳಲ್ಲಿ) 'ಜಿ' | 6.10 | (–)2.30 | 9.80 | 8.10 | 6.60 |
| ಸಿ | ಸಿಪಿಐ ಆಧಾರಿತ ಹಣದುಬ್ಬರ (ಶೇಕಡಾ) | 5.57 | 5.26 | 6.11 | 5.48 | 5.79 |
| ಡಿ | ಒಟ್ಟಾರೆ ಹೊಣೆಗಳ ಮೇಲೆ ಪರಿಣಾಮಕಾರಿ ಬಡ್ಡಿ ದರ( ಕ್ರಮ ಸಂಖ್ಯೆ 10ರಲ್ಲಿ ಇದ್ದಂತೆ) | 7.51 | 7.29 | 6.93 | 7.08 | 6.82 |
| ಇ | ವಾಸ್ತವ ಪರಿಣಾಮಕಾರಿ ಬಡ್ಡಿ ದರ (ಪರಿಣಾಮಕಾರಿ ಬಡ್ಡಿ ದರ – ಹಣದುಬ್ಬರ) (18ಡಿ–18ಸಿ) 'ಆರ್' | 1.94 | 2.03 | 0.82 | 1.60 | 1.03 |
| ಎಫ್ | ಬಡ್ಡಿ ವ್ಯತ್ಯಾಸ ವೃದ್ಧಿ (ವಾಸ್ತವ ವೃದ್ಧಿ– ವಾಸ್ತವ ಪರಿಣಾಮಕಾರಿ ಬಡ್ಡಿ ದರ) (18ಬಿ–18ಇ) 'ಜಿ' – 'ಆರ್' | 4.16 | (–)4.33 | 8.98 | 6.50 | 5.57 |

*ಆಕರ: ಹಣಕಾಸು ಲೆಕ್ಕಗಳು*

*1.ಒಟ್ಟಾರೆ ಹೊಣೆಗಳು ಅಥವಾ ಒಟ್ಟಾರೆ ಋಣವು ಸಾರ್ವಜನಿಕ ಋಣ (ಮಾರ್ಗೋಪಾಯ ಮುಂಗಡಗಳನ್ನು ಒಳಗೊಂಡಂತೆ) ಮತ್ತು ಸಾರ್ವಜನಿಕ ಲೆಕ್ಕಹೊಣೆ (ಬಡ್ಡಿ ಸಹಿತ ಮತ್ತು ಬಡ್ಡಿ ರಹಿತ ಮೀಸಲು ನಿಧಿಗಳು ಮತ್ತು ಠೇವಣಿಗಳು ಸೇರಿ) ಗಳನ್ನು ಒಳಗೊಂಡಿದೆ.*

*2.ಪಿಆರ್‌ಬಿ: ರಾಜಸ್ವ ಸ್ವೀಕೃತಿ – ರಾಜಸ್ವ ವೆಚ್ಚ (ನಿವ್ವಳ ಬಡ್ಡಿ ಪಾವತಿ), ಇಲ್ಲಿ (–) ಪಿಬಿ ಯು ಪ್ರಾಥಮಿಕ ಕೊರತೆ ಮತ್ತು ವಿಪರ್ಯಯಿಯನ್ನು ಸೂಚಿಸುತ್ತದೆ.*

*3.ಪಿಬಿ: ಒಟ್ಟು ಸ್ವೀಕೃತಿದಿಗಳು (ಸಾಲಗಳ ನಿವ್ವಳ) – ಒಟ್ಟು ವೆಚ್ಚ (ಬಡ್ಡಿ ಪಾವತಿಗಳ ನಿವ್ವಳ), ಇಲ್ಲಿ (–) ಪಿಬಿ ಯು ಪ್ರಾಥಮಿಕ ಕೊರತೆ ಮತ್ತು ವಿಪರ್ಯಯಿಯನ್ನು ಸೂಚಿಸುತ್ತದೆ.*

*4.ಪರಿಣಾಮಕಾರಿ ಬಡ್ಡಿ ದರ: ಬಡ್ಡಿ ಪಾವತಿಗಳು / ಹಿಂದಿನ ಮತ್ತು ಪ್ರಸ್ತುತ ಹಣಕಾಸು ವರ್ಷದ ಸರಾಸರಿ ಬಾಕಿ ಸಾಲ. ಇದನ್ನು ಬಡ್ಡಿ ಹೊಂದಿರದ ಮೀಸಲು ನಿಧಿಗಳು ಮತ್ತು ಠೇವಣಿಗಳನ್ನು ಬಿಟ್ಟು ಲೆಕ್ಕ ಹಾಕಬಹುದು.*

*5.ಭಾರತ ಸರ್ಕಾರದಿಂದ ಜಿಎಸ್‌ಟಿ ಪರಿಹಾರಕ್ಕೆ ಬದಲಾಗಿ ಪಡೆದ 2020–21ರ ₹12,407 ಕೋಟಿ ಮತ್ತು 2021–22ರ ₹18,109 ಕೋಟಿ ಮೊತ್ತದ ಬ್ಯಾಕ್ ಟು ಬ್ಯಾಕ್ ಸಾಲವನ್ನು, ಬಡ್ಡಿ ರಹಿತ ನಿಧಿಗಳು ಮತ್ತು ಬಂಡವಾಳ ವೆಚ್ಚ/ಹೂಡಿಕೆಗಾಗಿ ವಿಶೇಷ ಸಹಾಯ ಯೋಜನೆಯಲ್ಲಿ ಪಡೆದ ಐವತ್ತು ವರ್ಷ ಅವಧಿಯ ಬಡ್ಡಿ ರಹಿತ ಸಾಲವನ್ನು, ಸಾಲಕ್ಕಾಗಿ ಪರಿಣಾಮಕಾರಿ ಬಡ್ಡಿ ದೆ ಲೆಕ್ಕ ಹಾಕಲು ಪರಿಗಣಿಸಿಲ್ಲ.*

*6.ಬಡ್ಡಿ / ದರ.ಹರಹು: ರಾಒಆಂಉ ದ ಸಹಜ ವೃದ್ಧಿ – ಪರಿಣಾಮಕಾರಿ ಬಡ್ಡಿ ದರ*

*7.ಪರಿಮಾಣ ಹರಹು: (ಬಡ್ಡಿ ಹರಹು* / ಸಾಲ) / 100*

*8.ನಿವ್ವಳ ಸಾಲ ನೀಡಿಕೆ: ಬಾಕಿ ಇರುವ ಸಾಲ ಮತ್ತು ಮುಂಗಡಗಳ ವಿತರಣೆ (ವಿತರಿಸಿದ ಸಾಲ ಮತ್ತು ಮುಂಗಡಗಳು – ನಿವ್ವಳ ವಸೂಲಿ*

*9.ಪರಿಣಾಮಕಾರಿ ಬಡ್ಡಿ ದರ ಸ್ವೀಕೃತಿ: ಬಡ್ಡಿ ಸ್ವೀಕೃತಿ / ಹಿಂದಿನ ಮತ್ತು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರಾಸರಿ ಬಾಕಿ ಇರುವ ಋಣ ಸಾಲ ಮತ್ತು ಮುಂಗಡಗಳು*

*10.ಹೂಡಿಕೆಯ ಮೇಲಿನ ಪ್ರತಿಫಲ: (ನಿವ್ವಳ ಸಾಲ ವಿತರಣೆಯ ಪ್ರಯುಕ್ತ ಬಡ್ಡಿ ಸ್ವೀಕೃತಿಗೆ ಲೆಕ್ಕ ಹಾಕಿದ ಪರಿಣಾಮಕಾರಿ ಬಡ್ಡಿ ದರ)*

*11.ದ್ರವತೆ ನಿರ್ವಹಣೆ: ಎಸ್ ಡಿ ಎಫ್, ಮಾರ್ಗೋಪಾಯ ಮುಂಗಡ ಮತ್ತು ಓವರ್ ಡ್ರಾಫ್ಟ್ ಮೂಲಕ ಪಡೆದ ಮೊತ್ತ & ಸಾರ್ವಜನಿಕ ಋಣದ ಅವಧಿಪೂರ್ಣ ಚಿತ್ರ*

*12. * ಭಾರತ ಸರ್ಕಾರದಿಂದ ಜಿಎಸ್‌ಟಿ ಪರಿಹಾರಕ್ಕೆ ಬದಲಾಗಿ ಪಡೆದ 2020–21ರ ₹12,407 ಕೋಟಿ ಮತ್ತು 2021–22ರ ₹18,109 ಕೋಟಿ ಮೊತ್ತದ ಬ್ಯಾಕ್ ಟು ಬ್ಯಾಕ್ ಸಾಲವನ್ನು ಲೆಕ್ಕ ಹಾಕಲು ಸಾಲ ಎಂದು ಪರಿಗಣಿಸಿಲ್ಲ.*

*13. # ಈ ವರ್ಷಗಳ ಬಡ್ಡಿ ಪಾವತಿಯನ್ನು ರಾಜಸ್ವ ಹೆಚ್ಚಳದಿಂದಾಗಿ ರಾಜಸ್ವ ಸ್ವೀಕೃತಿಗಳಿಂದ ಭರಿಸಿರುವುದರಿಂದ ಸಾಲ ಮರುಪಾವತಿಯು ಬಡ್ಡಿ ಪಾವತಿಯನ್ನು ಒಳಗೊಂಡಿರುವುದಿಲ್ಲ.*

2020–21, 2021–22, 2022–23 ಮತ್ತು 2023–24ರ ಪರಿಣಾಮಕಾರಿ ಬಾಕಿ ಇರುವ ಸಾರ್ವಜನಿಕ ಸಾಲವು ಕ್ರಮವಾಗಿ ₹4,03,519 ಕೋಟಿ, ₹4,59,740 ಕೋಟಿ, ₹5,22,847 ಕೋಟಿ ಮತ್ತು ₹6,03,015 ಕೋಟಿಗಳಾಗಿದ್ದು ಇದು ಭಾರತ ಸರ್ಕಾರದ ವೆಚ್ಚ ಇಲಾಖೆಯು 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ ಮೊತ್ತವನ್ನು ಋಣ ಸ್ವೀಕೃತಿಗಳ ಅಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾಗಿದ್ದು ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲ ಎಂದು ಪರಿಗಣಿಸಲಾಗುವುದಿಲ್ಲ ಎಂದು ನಿರ್ಧರಿಸಿದ್ದರಿಂದಾಗಿದೆ. ರಾಜ್ಯದ ಸಾರ್ವಜನಿಕ ಋಣವು 2019–20ರಲ್ಲಿದ್ದ ₹3,37,520 ಕೋಟಿಯಿಂದ 2023–24ರಲ್ಲಿ ₹6,33,531 ಕೋಟಿಗೆ ಏರಿಕೆಯಾಗಿದೆ. ಮೇಲಿನ ಕೋಷ್ಟಕದ ವಿಶ್ಲೇಷಣೆ ಮತ್ತು ಹದಿನೈದನೆಯ ಹಣಕಾಸು ಆಯೋಗವು ಶಿಫಾರಸು ಮಾಡಿದ ಹಣಕಾಸಿನ ಏಕೀಕೃತ ದಿಕ್ಸೂಚಿಯ ಆಧಾರದ ಮೇಲೆ, ಈ ಕೆಳಗಿನವುಗಳನ್ನು ಗಮನಿಸಲಾಗಿದೆ:

- ಕುಸಿಯುತ್ತಿರುವ ಸಾಲ– ಜೆಎಸ್‌ಡಿಪಿ ಅನುಪಾತವು (ಶೇಕಡಾವಾರು ಪ್ರಮಾಣದಲ್ಲಿ) ಸ್ಥಿರತೆಯತ್ತ ಮುನ್ನಡೆಸುತ್ತಿದೆ ಎಂದು ಪರಿಗಣಿಸಬಹುದು. ಸಾಲ– ಜೆಎಸ್‌ಡಿಪಿ ಅನುಪಾತವು 2021–22 ಮತ್ತು 2022–23ರ ಅವಧಿಯಲ್ಲಿ ಇಳಿಕೆಯ ಪ್ರವೃತ್ತಿಯನ್ನು ಕಂಡಿದೆ. ಆದಾಗ್ಯೂ, 2023–24ರಲ್ಲಿ ಅನುಪಾತವು ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದೆ. ಇದು ಜೆಎಸ್‌ಡಿಪಿ ಯ ಬೆಳವಣಿಗೆಯ ದರವು ಬಾಕಿ ಉಳಿದಿರುವ ಸಾರ್ವಜನಿಕ ಸಾಲದ ಬೆಳವಣಿಗೆಯ ದರಕ್ಕಿಂತ ಕಡಿಮೆಯಾಗಿದ್ದ ಕಾರಣದಿಂದಾಗಿದೆ.
- ಇದೇ ಅವಧಿಯಲ್ಲಿ ಸಾರ್ವಜನಿಕ ಸಾಲದ ಮೇಲಿನ ಬಡ್ಡಿ ಪಾವತಿಯು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ.
- ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತವು ಸಾಲದ ಸಮರ್ಥನೀಯತೆಯ ಉತ್ತಮ ಅಳತೆಯಾಗಿದೆ. ಈ ಅನುಪಾತವು 2020–21 ರಿಂದ 2022–23ರವರೆಗೆ ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು, ಆದರೆ, 2023–24ರಲ್ಲಿ ಮತ್ತೆ ಶೇಕಡಾ 13.66ಕ್ಕೆ ಏರಿಕೆಯಾಗಿದೆ. ಹೆಚ್ಚಳವು ಬಡ್ಡಿಯ ಹೊರೆ ಹೆಚ್ಚುತ್ತಿದೆ ಎಂಬುದನ್ನು ಸೂಚಿಸುತ್ತದೆ.
- ತಾತ್ತ್ವಿಕವಾಗಿ, ಸಾರ್ವಜನಿಕ ಋಣದ ಮರುಪಾವತಿಯ ಅನುಪಾತವು ಹೆಚ್ಚಾಗಿದ್ದರೆ, ಇದು ಉತ್ಪಾದಕತೆಗಿಂತ ಸಾಲದ ಸ್ವೀಕೃತಿಗಳ ಪ್ರಮಾಣವು , ಋಣ ಸೇವೆಗಾಗಿ ಬಳಸಲಾಗಿದೆ ಎಂದು ಸೂಚಿಸುತ್ತದೆ. 2019–20 ರಿಂದ 2023–24ರ ಅವಧಿಯಲ್ಲಿ, ಸಾರ್ವಜನಿಕ ಸಾಲದ ಸ್ವೀಕೃತಿಗಳಿಗೆ ಸಾರ್ವಜನಿಕ ಸಾಲ ಮರುಪಾವತಿಯ ಶೇಕಡಾವಾರು ಪ್ರಮಾಣವು 60.69 ರಿಂದ 74.55 ರಷ್ಟಿತ್ತು

ಎಂದು ಅರ್ಥೈಸಿಕೊಳ್ಳಬಹುದು ಸಾಲದ ಮರುಪಾವತಿಗೆ ಬಳಸಿಕೊಳ್ಳಲಾಗಿದ್ದು, ಉತ್ಪಾದಕತೆಗೆ ಕಡಿಮೆ ಅವಕಾಶವನ್ನು ನೀಡಿ ಸಾಲದ ಮರುಪಾವತಿಗೆ ಬಳಸಿಕೊಳ್ಳಲಾಗಿದೆ, 2023–24ರಲ್ಲಿ, ಅನುಪಾತವು ಅತಿ ಹೆಚ್ಚಾಗಿದೆ.

- ಕರ್ನಾಟಕಕ್ಕೆ ಡೊಮರ್ ವಿಶ್ಲೇಷಣೆಯನ್ನು ಅನ್ವಯಿಸಿದಾಗ, 2020–21 ಹೊರತುಪಡಿಸಿ, ಎಲ್ಲಾ ವರ್ಷಗಳಲ್ಲಿ ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ಡೊಮರ್ ಅಂತರವು ( ಜಿ – ಆರ್) ಧನಾತ್ಮಕವಾಗಿದೆ ಎಂದು ಗಮನಿಸಲಾಗಿದೆ. ಇದು ಕೋವಿಡ್ ಪೂರ್ವ ಅವಧಿಯಲ್ಲಿ ಅಂದರೆ, 2019–20ರ ಅವಧಿಯಲ್ಲಿ ರಾಜ್ಯವು ಬಲವಾದ ಆರ್ಥಿಕ ಬೆಳವಣಿಗೆಯನ್ನು ಹೊಂದಿತ್ತು ಎಂದು ಸೂಚಿಸುತ್ತದೆ, ಜಿಎಸ್‌ಡಿಪಿ ನೈಜ ಬೆಳವಣಿಗೆಯ ದರವು ಶೇಕಡಾ 6.10 ಮತ್ತು ಡೊಮರ್ ಅಂತರವು ( ಜಿ – ಆರ್ ಎಂದು ವ್ಯಕ್ತಪಡಿಸಿದೆ) ಧನಾತ್ಮಕವಾಗಿಯೇ ಉಳಿದಿದೆ ಆದರೆ ರಾಜ್ಯದಲ್ಲಿ ಪ್ರಾಥಮಿಕ ಕೊರತೆಯಿದೆ. 2020–21ರ ಅವಧಿಯಲ್ಲಿ ಕೋವಿಡ್–19 ಜಿಎಸ್‌ಡಿಪಿ ದ ನೈಜ ಬೆಳವಣಿಗೆಯ ದರದ ಮೇಲೆ ಪರಿಣಾಮ ಬೀರಿತ್ತು ಮತ್ತು ಡೊಮರ್ ಅಂತರವು ವರ್ಷದಲ್ಲಿ ಋಣಾತ್ಮಕವಾಗಿದೆ. ನಂತರದ ವರ್ಷಗಳಲ್ಲಿ (2021–22, 2022–23 ಮತ್ತು 2023–24), ಡೊಮರ್ ಅಂತರವು ಧನಾತ್ಮಕವಾಯಿತು. ಇದು ಪ್ರಾಥಮಿಕ ಕೊರತೆಯ ಜೊತೆಗೆ ಜಿಎಸ್‌ಡಿಪಿ ಶೇಕಡಾವಾರು ಸಾರ್ವಜನಿಕ ಸಾಲವು ಸ್ಥಿರ ಮೌಲ್ಯದ ಕಡೆಗೆ ಒಲವು ತೋರುತ್ತದೆ ಮತ್ತು ಆದ್ದರಿಂದ ಸಮರ್ಥನೀಯವಾಗಿದೆ ಎಂದು ಪ್ರತಿಬಿಂಬಿಸುತ್ತದೆ. ಸಂಚಿತ ಸಾಲ /ಹೊಣೆಗಾರಿಕೆಯನ್ನು ಅವಲಂಬಿಸಿ, ಅದು ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ, ಶೂನ್ಯಕ್ಕಿಂತ ಹೆಚ್ಚಿನ ಸ್ಥಿರ ಮಟ್ಟವನ್ನು ತಲುಪಲು ಸಮಯ ತೆಗೆದುಕೊಳ್ಳುತ್ತದೆ. ಸಾರ್ವಜನಿಕ ಸಾಲದ ಸುಸ್ಥಿರತೆಯು ನೈಜ ಬಡ್ಡಿದರವನ್ನು ನಿಯಂತ್ರಣದಲ್ಲಿಟ್ಟುಕೊಂಡು ದೀರ್ಘಾವಧಿಯಲ್ಲಿ ನೈಜ ಬೆಳವಣಿಗೆಯ ದರವನ್ನು ರಾಜ್ಯ ಆರ್ಥಿಕತೆಯು ನಿರ್ವಹಿಸುತ್ತದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ಹೇಳಬಹುದು.

### *2.8.1 ಎರವಲು ಪಡೆದ ಹಣದ ಬಳಕೆ*

ಎರವಲು ಪಡೆದ ಹಣವನ್ನು ಬಂಡವಾಳ ಸೃಷ್ಟಿ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಧನಸಹಾಯ ಮಾಡಲು ಸೂಕ್ತವಾಗಿ ಬಳಸಬೇಕು. ದಿನನಿತ್ಯದ ವೆಚ್ಚವನ್ನು ಪೂರೈಸಲು ಮತ್ತು ಬಾಕಿ ಇರುವ ಸಾಲಗಳ ಮೇಲಿನ ಬಡ್ಡಿಯ ಮರುಪಾವತಿ ಮಾಡಲು ಎರವಲು ಪಡೆದ ಹಣವನ್ನು ಬಳಸುವುದು ಸಮರ್ಥನೀಯವಲ್ಲ. 2019–20 ರಿಂದ 2023–24ರ ಅವಧಿಯಲ್ಲಿ ಎರವಲು ಪಡೆದ ನಿಧಿಯ ಬಳಕೆಯ ವಿವರಗಳನ್ನು **ಕೋಷ್ಟಕ–2.40**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.40: ಎರವಲು ಪಡೆದ ನಿಧಿಯ ಬಳಕೆ**

(₹ ಕೋಟಿಗಳಲ್ಲಿ)

| ಕ್ರ.ಸಂ. | ವಿವರಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|
| 1 | ಒಟ್ಟು ಸಾಲಗಳು | 50,459 | 84,528* | 80,641* | 44,549 | 90,280 |
| 2 | ಹಿಂದಿನ ಸಾಲಗಳ ಮರುಪಾವತಿ (ಅಸಲು) | 10,180 | 11,016 | 13,972 | 15,942 | 22,453 |
| 3 | ನಿವ್ವಳ ಬಂಡವಾಳ ವೆಚ್ಚ | 35,485 | 45,361 | 47,868 | 57,347 | 52,084 |
| 4 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 3,866 | 2,399 | 4,082 | 2,772 | 4,167 |
| 5 | ಎರವಲು ಪಡೆದ ನಿಧಿಯ ನಿವ್ವಳ ಲಭ್ಯತೆ(1–2–3–4) | 928 | 25,752 | 14,719 | (–)31,512 | 11,576 |

*ಆಕರ: ಹಣಕಾಸು ಲೆಕ್ಕಗಳು*

** 2020–21 ಮತ್ತು 2021–22ರ ಅವಧಿಯಲ್ಲಿ, ಒಟ್ಟು ಸಾಲಗಳು ಬ್ಯಾಕ್–ಟು–ಬ್ಯಾಕ್ ಸಾಲವನ್ನು ಒಳಗೊಂಡಿರುತ್ತವೆ. 2020–21 ಮತ್ತು 2021–22ರ ಅವಧಿಯಲ್ಲಿ ಕ್ರಮವಾಗಿ ಸಾಲದ ಸ್ವೀಕೃತಿಯ ಅಡಿಯಲ್ಲಿ ರಾಜ್ಯಕ್ಕೆ ನೀಡಲಾದ ₹12,407 ಕೋಟಿ ಮತ್ತು ₹18,109 ಕೋಟಿಯ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರ ನಿರ್ಧರಿಸಿದೆ.*

ಮೇಲಿನ ಕೋಷ್ಟಕದಿಂದ, 2019–20 ರಿಂದ 2021–22ರ ಅವಧಿಯಲ್ಲಿ, ಎರವಲು ಪಡೆದ ನಿಧಿಗಳು ಬಂಡವಾಳ ವೆಚ್ಚವನ್ನು (ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪೂರೈಸಲು ಸಾಕಾಗುತ್ತದೆ ಎಂದು ಗಮನಿಸಲಾಗಿದೆ. 2022–23ರಲ್ಲಿ ರಾಜ್ಯವು ರಾಜಸ್ವದ ಹೆಚ್ಚುವರಿಯನ್ನು ಕಂಡಿತ್ತು ಮತ್ತು ಇದರ ಪರಿಣಾಮವಾಗಿ ರಾಜ್ಯವು ಕಡಿಮೆ ಸಾಲವನ್ನು ತೆಗೆದುಕೊಂಡಿತು. ಆದಾಗ್ಯೂ, 2023–24ರಲ್ಲಿ ರಾಜ್ಯವು ಮತ್ತೆ ರಾಜಸ್ವ ಕೊರತೆಯನ್ನು ಕಂಡಿತು ಮತ್ತು ಸಾಲವನ್ನು ರಾಜಸ್ವ ವೆಚ್ಚಕ್ಕೆ ಬಳಸಿಕೊಳ್ಳಲಾಯಿತು.

### *2.8.2 ಖಾತರಿಗಳ ಸ್ಥಿತಿ – ಸಾಂದರ್ಭಿಕ ಹೊಣೆಗಾರಿಕೆಗಳು*

ಸರ್ಕಾರದ ಖಾತರಿಗಳನ್ನು ಪಡೆದ ಸಾಲಗಾರರು ಸಾಲ ಮರುಪಾವತಿಯನ್ನು ಮಾಡಲು ತಪ್ಪಿದಲ್ಲಿ ಖಾತರಿಗಳು ರಾಜ್ಯದ ಸಂಚಿತ ನಿಧಿಯ ಹೊಣೆಗಾರಿಕೆಗಳಾಗುತ್ತವೆ. ಕರ್ನಾಟಕ ಖಾತರಿಗಳ ಮೇಲಿನ ಮಿತಿಯ ಅಧಿಸೂಚನೆ 1999ರ ಅನ್ವಯ, ಸರ್ಕಾರವು ನೀಡಿದ ಖಾತರಿಗಳ ಯಾವುದೇ ವರ್ಷದ ಏಪ್ರಿಲ್ ಮೊದಲ ದಿನದಂದು ಬಾಕಿಯ ಮೊತ್ತವು ಅಂದಿಗೆ ಹಿಂದಿನ ಎರಡನೇ ವರ್ಷದ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡಾ 80 ರಷ್ಟನ್ನು ಮೀರಬಾರದು. ಸರ್ಕಾರವು ನೀಡಿದ ಖಾತರಿಗಳ ಕಳೆದ ಐದು ವರ್ಷಗಳ ವಿವರಗಳನ್ನು **ಕೋಷ್ಟಕ–2.41**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.41: ರಾಜ್ಯ ಸರ್ಕಾರವು ನೀಡಿದ ಖಾತರಿಗಳು**

(₹ ಕೋಟಿಗಳಲ್ಲಿ)

| ಖಾತರಿಗಳು | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಬಾಕಿ ಉಳಿದಿರುವ ಖಾತರಿಗಳಿಗೆ ಅನ್ವಯಿಸುವ ಮಿತಿ (ಹಿಂದಿನ ಎರಡನೇ ವರ್ಷದ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡಾ 80) | 1,17,600 | 1,31,983 | 1,40,354 | 1,25,343 | 1,56,610 |
| ಬಾಕಿ ಇರುವ ಖಾತರಿಗಳ ಮೊತ್ತ | 26,830 | 32,733 | 33,192 | 38,356 | 44,247 |

*ಆಕರ: ಹಣಕಾಸು ಲೆಕ್ಕಗಳು*

ಬಾಕಿ ಇರುವ ಗ್ಯಾರಂಟಿಗಳು ಪ್ರತಿ ವರ್ಷ ಏಪ್ರಿಲ್ 1 ರಂದು ನಿಗದಿತ ಮಿತಿಯೊಳಗೆ ಇರುತ್ತವೆ. 2023–24ರ ಅಂತ್ಯದಲ್ಲಿ ₹44,247 ಕೋಟಿ ಮೊತ್ತದ ಬಾಕಿ ಇರುವ ಖಾತರಿಗಳು (ಅಸಲು + ಬಡ್ಡಿ) ವಿವಿಧ ವಲಯಗಳ ಅಡಿಯಲ್ಲಿ 146 ಸಂಸ್ಥೆಗಳು/ಕಂಪನಿಗಳಿಗೆ ವಿಸ್ತರಿಸಲಾದ ಖಾತರಿಗಳನ್ನು ಒಳಗೊಂಡಿವೆ[16].

ರಾಜ್ಯ ಸರ್ಕಾರವು ವರದಿ ಮಾಡಿದಂತೆ 2023–24ರಲ್ಲಿ ಒಟ್ಟು ಅಂದಾಜು ₹647.70 ಕೋಟಿಗಳ ಖಾತರಿ ಶುಲ್ಕಕ್ಕೆ ಪ್ರತಿಯಾಗಿ ₹306.69 ಕೋಟಿ ಮಾತ್ರ ಸ್ವೀಕರಿಸಲಾಗಿದೆ. ಸ್ವೀಕರಿಸಿದ ಖಾತರಿ ಶುಲ್ಕವು ವಿವಿಧ ಸಂಸ್ಥೆಗಳಿಗೆ ಸರ್ಕಾರವು ನೀಡಬೇಕಾಗಿದ ಸಹಾಯಧನಗಳು/ಧನಸಹಾಯ/ಆರ್ಥಿಕ ಸಹಾಯಕ್ಕೆ ರಾಜ್ಯ ಸರ್ಕಾರವು ಮಾಡಿದ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿರುತ್ತದೆ.

12ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ರಾಜ್ಯ ಸರ್ಕಾರವು 1999–2000ರಲ್ಲಿ ₹ಒಂದು ಕೋಟಿ ಮೂಲಧನದೊಂದಿಗೆ ಖಾತರಿ ವಿಮೋಚನಾ ನಿಧಿಯನ್ನು ಸ್ಥಾಪಿಸಿತು. ಆದಾಗ್ಯೂ, ಯಾವುದೇ ವಹಿವಾಟುಗಳಿಲ್ಲದ ಕಾರಣ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ವರದಿಯಲ್ಲಿ (ಜುಲೈ 2015) ಖಾತರಿ ಮೀಸಲು ನಿಧಿಯನ್ನು ನಿರ್ವಹಿಸಲು ಮತ್ತು ಮುಂದುವರಿಸಲು ಸೂಕ್ತ ಪ್ರಯತ್ನಗಳನ್ನು ಮಾಡಬೇಕು ಎಂದು ಶಿಫಾರಸು ಮಾಡಿದೆ. ಹಿಂದಿನ ವರ್ಷಗಳ ಹಣಕಾಸು ವ್ಯವಹಾರಗಳ ಮೇಲಿನ ವರದಿಯ ಅವಲೋಕನಗಳನ್ನು ಗಮನಿಸಿ ಮತ್ತು ಪಿಎಸಿಯ ಶಿಫಾರಸಿನ ಆಧಾರದ ಮೇಲೆ, ರಾಜ್ಯ ಸರ್ಕಾರವು 2022–23ರ ಅವಧಿಯಲ್ಲಿ ₹314 ಕೋಟಿ ಮತ್ತು ₹187.13 ಕೋಟಿಯನ್ನು ಖಾತರಿ ವಿಮೋಚನಾ ನಿಧಿ ಹೂಡಿಕೆ ಲೆಕ್ಕದ ಅಡಿಯಲ್ಲಿ ಹೂಡಿಕೆ ಮಾಡಿದೆ.

[16] ನೀರಾವರಿ (₹10,948 ಕೋಟಿ), ಸಹಕಾರ (₹1,492 ಕೋಟಿ), ಆರ್ಥಿಕ (₹459 ಕೋಟಿ), ವಿದ್ಯುಚ್ಛಕ್ತಿ (₹27,928 ಕೋಟಿ), ವಸತಿ (₹1,774 ಕೋಟಿ), ಸಾರಿಗೆ (₹1,026 ಕೋಟಿ) ಮತ್ತು ಇತರೆ (₹620 ಕೋಟಿ)

### 2.8.3 ನಗದು ಶಿಲ್ಕುಗಳ ನಿರ್ವಹಣೆ

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ನೊಂದಿಗಿನ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರವು ಬ್ಯಾಂಕ್‌ನೊಂದಿಗೆ ಕನಿಷ್ಠ ₹2.63 ಕೋಟಿ ದೈನಿಕ ನಗದು ಶಿಲ್ಕನ್ನು ನಿರ್ವಹಿಸಬೇಕು. ಯಾವುದೇ ದಿನದಲ್ಲಿ ಶಿಲ್ಕು ಒಪ್ಪಿದ ಕನಿಷ್ಠಕ್ಕಿಂತ ಕಡಿಮೆಯಾದರೆ, ಕಾಲಕಾಲಕ್ಕೆ ರಿಸರ್ವ್ ಬ್ಯಾಂಕ್ ನಿಂದ ಸಾಮಾನ್ಯ ಮಾರ್ಗೋಪಾಯ ಮುಂಗಡಗಳು(ಡಬ್ಲ್ಯೂಎಂಎ)/ ವಿಶೇಷ ಮಾರ್ಗೋಪಾಯ ಮುಂಗಡಗಳು(ಎಸ್ ಡಬ್ಲ್ಯೂಎಂಎ)/ ಓವರ್‌ಡ್ರಾಫ್ಟ್‌ಗಳ(ಓಡಿ) ಮುಖಾಂತರ ಕೊರತೆಯನ್ನು ತುಂಬಲಾಗುತ್ತದೆ. ರಾಜ್ಯ ಸರ್ಕಾರಕ್ಕೆ ಸಾಮಾನ್ಯ ಮಾರ್ಗೋಪಾಯ ಮುಂಗಡಗಳ ಮಿತಿಗಳನ್ನು ಕಾಲಕಾಲಕ್ಕೆ ರಿಸರ್ವ್ ಬ್ಯಾಂಕ್ ಪರಿಷ್ಕರಿಸುತ್ತದೆ.

- ರಿಸರ್ವ್ ಬ್ಯಾಂಕ್ ಸಾಮಾನ್ಯ ಮತ್ತು ವಿಶೇಷ ಮಾರ್ಗೋಪಾಯ ಮುಂಗಡಗಳನ್ನು ನೀಡುತ್ತದೆ. ರಾಜ್ಯಕ್ಕೆ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು 01 ಏಪ್ರಿಲ್ 2020ರಲ್ಲಿದ್ದ ₹3,176 ಕೋಟಿಗಳಿಂದ 31 ಮಾರ್ಚ್ 2022 ರಿಂದ ₹3,137 ಕೋಟಿಗಳಿಗೆ ಕಡಿಮೆ ಮಾಡಲಾಗಿದೆ. ಮಾರ್ಚ್ 1999 ರಿಂದ, ರಾಜ್ಯ ಸರ್ಕಾರದ ವಿಶೇಷ ಮಾರ್ಗೋಪಾಯ ಮುಂಗಡದ ಮಿತಿಗೆ ಪ್ರತ್ಯೇಕವಾಗಿ ಭಾರತ ಸರ್ಕಾರದ ಭದ್ರತೆಗಳೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ. ಈ ಮುಂಗಡಗಳು ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತಹ ದರಗಳಲ್ಲಿ ಬಡ್ಡಿಯನ್ನು ಹೊಂದಿರುತ್ತವೆ.
- 2022–23ರಲ್ಲಿ, ರಾಜ್ಯ ಸರ್ಕಾರವು ರಿಸರ್ವ್ ಬ್ಯಾಂಕ್ ನಿಂದ ಯಾವುದೇ ಮಾರ್ಗೋಪಾಯ ಮುಂಗಡಗಳನ್ನು ಪಡೆದಿರಲಿಲ್ಲ[17].
- ರಾಜ್ಯ ಸರ್ಕಾರವು ದೊಡ್ಡ ಪ್ರಮಾಣದ ನಗದು ಶಿಲ್ಕುಗಳನ್ನು ಹೊಂದಿದ್ದರೂ ಸಹ ಅದನ್ನು ಉತ್ಪಾದಕ ವೆಚ್ಚಕ್ಕೆ ಬಳಸಿಕೊಳ್ಳದೆ ಮಾರುಕಟ್ಟೆ ಸಾಲಗಳನ್ನು ಅವಲಂಬಿಸಿ ಮತ್ತಷ್ಟು ನಗದು ಶಿಲ್ಕಿನ ಸಂಚಯನಕ್ಕೆ ಕಾರಣವಾಗಿರುವುದು ಅಪೇಕ್ಷಣೀಯವಲ್ಲ. 2023–24ರಲ್ಲಿ ರಾಜ್ಯ ಸರ್ಕಾರದ ಮಾಡಿದ ನಗದು ಶಿಲ್ಕುಗಳು ಮತ್ತು ಹೂಡಿಕೆಗಳನ್ನು **ಕೋಷ್ಟಕ–2.42**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.42: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆ**

(₹ ಕೋಟಿಗಳಲ್ಲಿ)

| | 1 ಏಪ್ರಿಲ್ 2023 ರಂದು ಆರಂಭಿಕ ಶಿಲ್ಕು | 31 ಮಾರ್ಚ್ 2024 ರಂದು ಅಂತಿಮ ಶಿಲ್ಕು |
|---|---|---|
| **ಎ. ಸಾಮಾನ್ಯ ನಗದು ಶಿಲ್ಕು** | | |
| ಭಾರತೀಯ ರಿಸರ್ವ್ ಬ್ಯಾಂಕ್ ಠೇವಣಿಗಳು | 2,788.21 | 4,699.34 |
| ರವಾನೆಯಲ್ಲಿರುವ ಇರಸಾಲುಗಳು | 0.01 | 0.01 |
| ನಗದು ಶಿಲ್ಕಿನ ಹೂಡಿಕೆಗಳ ಲೆಕ್ಕದಲ್ಲಿನ ಹೂಡಿಕೆಗಳು | 47,919.99 | 67,143.36 |
| **ಒಟ್ಟು (ಎ)** | **50,708.21** | **71,842.71** |
| **ಬಿ. ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು** | | |
| ಅರಣ್ಯ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ನಗದು | 2.09 | 2.09 |
| ಸಾಂದರ್ಭಿಕ ವೆಚ್ಚಕ್ಕಾಗಿ ಇಲಾಖಾ ಅಧಿಕಾರಿಗಳೊಂದಿಗೆ ಖಾಯಂ ಮುಂಗಡಗಳು | 3.9 | 4.11 |
| ಮೀಸಲಿಟ್ಟ ನಿಧಿಗಳ ಹೂಡಿಕೆ | 33,228.43 | 35,415.56 |
| **ಒಟ್ಟು (ಬಿ)** | **33,234.42** | **35,421.76** |
| **ಒಟ್ಟು (ಎ + ಬಿ)** | **83,942.63** | **1,07,264.47** |
| **ಬಡ್ಡಿ ಗಳಿಕೆ** | 1,139.09 | 792.78 |

*ಆಕರ: ಹಣಕಾಸು ಲೆಕ್ಕಗಳು*

[17] ತಃಖ್ತೆ 2ರ ಅನುಬಂಧದ ಪ್ರಕಾರ ಹಣಕಾಸು ಲೆಕ್ಕಗಳು, ಸಂಪುಟ–I

ಖಜಾನೆಗಳು/ಇಲಾಖೆಗಳೊಂದಿಗೆ ನಗದು, ರಿಸರ್ವ್ ಬ್ಯಾಂಕ್ ಠೇವಣಿ ಮತ್ತು ರವಾನೆ ರೂಪದಲ್ಲಿನ ಇರಸಾಲು ನಗದು ಮತ್ತು ನಗದು ಸಮಾನ. ಖಜಾನೆ ಬಿಲ್‌ಗಳ ಜೊತೆಗೆ, ನಗದು ಶಿಲ್ಕನ್ನು ಸಂಚಿತ ಋಣ ಪರಿಹಾರ ನಿಧಿ, ಖಾತರಿ ವಿಮೋಚನಾ ನಿಧಿ ಇತ್ಯಾದಿ ಮೀಸಲಿಟ್ಟ ನಿಧಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ₹35,415.56 ಕೋಟಿ ಮೀಸಲಿಟ್ಟ ನಿಧಿಗಳ ಹೂಡಿಕೆಯಲ್ಲಿ ₹13,600 ಕೋಟಿಯನ್ನು ಸಂಚಿತ ಋಣ ಪರಿಹಾರ ನಿಧಿಯ ಲ್ಲಿ ಹೂಡಿಕೆ ಮಾಡಲಾಗಿದೆ ಮತ್ತು ₹502 ಕೋಟಿಯನ್ನು ಖಾತರಿ ವಿಮೋಚನಾ ನಿಧಿಯಲ್ಲಿ ಹೂಡಿಕೆ ಮಾಡಲಾಗಿದೆ.

ಸಾಮಾನ್ಯ ನಗದು ಶಿಲ್ಕಿನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 42ರಷ್ಟು ಹೆಚ್ಚಳವಾಗಿದೆ. 2022–23ರಲ್ಲಿದ್ದ ₹50,708.20 ಕೋಟಿಯಿಂದ 2023–24ರಲ್ಲಿ ₹71,842.70 ಕೋಟಿಗಳಷ್ಟಾಗಿ ವರ್ಷಾಂತ್ಯದಲ್ಲಿ ರಾಜ್ಯ ಸರ್ಕಾರದ ಸಾಮಾನ್ಯ ನಗದು ಶಿಲ್ಕು ₹21,134.50 ಕೋಟಿಗಳಷ್ಟು ಗಣನೀಯವಾಗಿ ಏರಿಕೆಯಾಗಿದೆ. ಇದರಲ್ಲಿ ಕೆಎಂಇಆರ್‌ಸಿಯು ಖಜಾನೆ ಬಿಲ್‌ಗಳಲ್ಲಿ ಹೂಡಿಕೆ ಮಾಡಿದ ₹26,192.08 ಕೋಟಿಗಳು ಸೇರಿದೆ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ನವೆಂಬರ್ 2023) ಮೀಸಲಿಟ್ಟ ನಿಧಿಗಳ ಹೂಡಿಕೆಗಳು ರಾಜ್ಯದ ನಗದು ಶಿಲ್ಕಿನ ಭಾಗವಾಗಿರಬಾರದು ಎಂದು ಹೇಳಿದೆ. ಆದರೆ, ಹಣಕಾಸು ಲೆಕ್ಕಗಳ ತಃಖ್ತೆ 2ರ ಅನುಬಂಧದ ಪ್ರಕಾರ ಈ ಹೂಡಿಕೆಗಳು ನಗದು ಶಿಲ್ಕಿನ ಭಾಗವಾಗಿರುವುದರಿಂದ, ಅದನ್ನು ಸೇರಿಸಲಾಗಿದೆ.

ರಾಜ್ಯ ಸರ್ಕಾರವು ತನ್ನ ಹೆಚ್ಚುವರಿ ನಗದು ಶಿಲ್ಕನ್ನು ಅಲ್ಪ ಮತ್ತು ದೀರ್ಘಾವಧಿಯ ಭಾರತ ಸರ್ಕಾರದ ಭದ್ರತೆಗಳು ಮತ್ತು ಖಜಾನೆ ಬಿಲ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ಅಂತಹ ಹೂಡಿಕೆಗಳಿಂದ ಪಡೆದ ಲಾಭವನ್ನು '0049–ಬಡ್ಡಿ ಸ್ವೀಕೃತಿಗಳು' ಶೀರ್ಷಿಕೆಯಡಿಯಲ್ಲಿ ಸ್ವೀಕೃತಿಯಾಗಿ ಜಮಾ ಮಾಡಲಾಗುತ್ತದೆ. 2023–24ರ ಅವಧಿಯಲ್ಲಿ ರಾಜ್ಯ ಸರ್ಕಾರವು ಸರಾಸರಿ ಶೇಕಡಾ 1.28 ಬಡ್ಡಿದರದ 14 ದಿನಗಳ ಖಜಾನೆ ಬಿಲ್‌ಗಳಲ್ಲಿ ಮತ್ತು ಶೇಕಡಾ 6.86 ಬಡ್ಡಿದರದೊಂದಿಗೆ 91–ದಿನದ ಖಜಾನೆ ಬಿಲ್‌ಗಳಲ್ಲಿ ಹೂಡಿಕೆಯ ಮುಖಾಂತರ ₹792.78 ಕೋಟಿಗಳ ಬಡ್ಡಿಯನ್ನು ಗಳಿಸಿದೆ. ಪ್ರತಿಯಾಗಿ ಶೇಕಡಾ 5.37 ವಾರ್ಷಿಕ ಸರಾಸರಿ ಬಡ್ಡಿ ದರದಲ್ಲಿ ಸಾಲಗಳನ್ನು ಮಾಡಲಾಗಿದೆ

2019–20 ರಿಂದ 2023–24ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ನಗದು ಶಿಲ್ಕು ಹೂಡಿಕೆಗಳನ್ನು **ಕೋಷ್ಟಕ–2.43**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.43: ನಗದು ಶಿಲ್ಕು ಹೂಡಿಕೆ ಲೆಕ್ಕ (ಪ್ರಧಾನ ಲೆಕ್ಕ ಶೀರ್ಷಿಕೆ –8673)**

(₹ ಕೋಟಿಗಳಲ್ಲಿ)

| ವರ್ಷ | ಆರಂಭಿಕ ಶಿಲ್ಕು | ಅಂತಿಮ ಶಿಲ್ಕು | ಹೆಚ್ಚಳ (+)/ಇಳಿಕೆ (–) | ಗಳಿಸಿದ ಬಡ್ಡಿ |
|---|---|---|---|---|
| 2019–20 | 5,139.28 | 13,634.21 | 8,494.93 | 535.1 |
| 2020–21 | 13,634.21 | 21,744.33 | 8,110.12 | 627.42 |
| 2021–22 | 21,744.33 | 31,973.89 | 10,229.56 | 899.44 |
| 2022–23 | 31,973.89 | 47,919.99 | 15,946.10 | 1,139.09 |
| 2023–24 | 47,919.99 | 67,143.36 | 19,223.37 | 792.78 |

*ಆಕರ: ಹಣಕಾಸು ಲೆಕ್ಕಗಳು*

2019–20 ರಿಂದ 2023–24ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಹೂಡಿಕೆಯ ಪ್ರವೃತ್ತಿಯ ವಿಶ್ಲೇಷಣೆಯು 2020–21ರಲ್ಲಿ ಅಲ್ಪ ಪ್ರಮಾಣದ ಇಳಿಕೆ ಕಂಡುಬಂದರೂ 2019–20 ರಿಂದ 2023–24 ರವರೆಗೆ ಹೂಡಿಕೆಯು ಗಮನಾರ್ಹವಾಗಿ ಹೆಚ್ಚಾಗಿದೆ ಎಂಬುದನ್ನು ಸೂಚಿಸಿದೆ.

**ನಕ್ಷೆ–2.19**ರಲ್ಲಿ ಪ್ರಸಕ್ತ ವರ್ಷದಲ್ಲಿ ಮಾರುಕಟ್ಟೆ ನಗದು ಶಿಲ್ಕುಗಳ ಮತ್ತು ನಿವ್ವಳ ಶಿಲ್ಕು ಹೂಡಿಕೆಗಳ ಚಲನೆಯ ಹೋಲಿಕೆಯನ್ನು ಸೂಚಿಸುತ್ತದೆ

**ನಕ್ಷೆ–2.19: ವರ್ಷದಲ್ಲಿ ನಗದು ಶಿಲ್ಕು ಮತ್ತು ನಿವ್ವಳ ನಗದು ಶಿಲ್ಕು ಹೂಡಿಕೆಗಳ ಮಾಸಿಕವಾರು ಚಲನೆ**

(₹ ಕೋಟಿಗಳಲ್ಲಿ)




*ಆಕರ: ಮಹಾಲೇಖಪಾಲರು (ಲೆ ಮತ್ತು ಹ) ಕಚೇರಿ*

2019–20 ರಿಂದ 2023–24ರ ಅವಧಿಯಲ್ಲಿ ರಾಜ್ಯವು ಸಂಗ್ರಹಿಸಿದ ನಗದು ಶಿಲ್ಕು ಹೂಡಿಕೆ ಖಾತೆ ಮತ್ತು ಮಾರುಕಟ್ಟೆ ಸಾಲಗಳಲ್ಲಿ ಲಭ್ಯವಿರುವ ಶಿಲ್ಕುಗಳನ್ನು **ನಕ್ಷೆ–2.20**ರಲ್ಲಿ ಹೋಲಿಸಲಾಗಿದೆ. ನಗದು ಶಿಲ್ಕು ಹೂಡಿಕೆ ಲೆಕ್ಕವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಎಂದು **ನಕ್ಷ–2.20**ರಿಂದ ಸ್ಪಷ್ಟವಾಗಿದೆ. ಮಾರ್ಚ್ 2024ರ ಅಂತ್ಯದ ವೇಳೆಗೆ, ನಗದು ಶಿಲ್ಕು ಹೂಡಿಕೆಯು ₹67,143 ಕೋಟಿಗಳಾಗಿದ್ದರೆ, ಮಾರುಕಟ್ಟೆ ಸಾಲಗಳು ₹81,000 ಕೋಟಿಗಳಷ್ಟಿದ್ದವು. ಮಾರುಕಟ್ಟೆ ಸಾಲಗಳನ್ನು ಹೆಚ್ಚಿನ ಬಡ್ಡಿದರದಲ್ಲಿ ತೆಗೆದುಕೊಳ್ಳಲಾಗಿದೆ ಆದರೆ ಖಜಾನೆ ಬಿಲ್‌ಗಳಲ್ಲಿನ ಹೂಡಿಕೆಯು ಕಡಿಮೆ ದರಗಳಲ್ಲಿ ಬಡ್ಡಿಯನ್ನು ನೀಡುತ್ತದೆ ಎಂದು ಉಲ್ಲೇಖಿಸಲು ಇದು ಸೂಕ್ತವಾಗಿದೆ.

**ನಕ್ಷೆ–2.20: ನಗದು ಶಿಲ್ಕು ಹೂಡಿಕೆ ಲೆಕ್ಕಕ್ಕೆ ಮಾರುಕಟ್ಟೆ ಸಾಲಗಳು**




*ಆಕರ: ಹಣಕಾಸು ಲೆಕ್ಕಗಳು*

## 2.9 ತೀರ್ಮಾನ

**ರಾಜ್ಯದ ಸ್ವಂತ ಸಂಪನ್ಮೂಲಗಳು**

ಹಿಂದಿನ ವರ್ಷಕ್ಕೆ ಹೋಲಿಸಿದರೆ 2023-24ರಲ್ಲಿ ರಾಜ್ಯ ಸರ್ಕಾರವು ತನ್ನ ರಾಜಸ್ವ ಸ್ವೀಕೃತಿಯಲ್ಲಿ ಶೇಕಡಾ 1.86 ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಕೋವಿಡ್ 19 ಸಾಂಕ್ರಾಮಿಕ ಲಾಕ್‌ಡೌನ್‌ನಿಂದಾಗಿ 2020-21ರಲ್ಲಿ ರಾಜಸ್ವ ಸ್ವೀಕೃತಿಗಳ ಬೆಳವಣಿಗೆಯ ದರವು ಕನಿಷ್ಠವಾಗಿತ್ತು. ರಾಜ್ಯದ ಸ್ವಂತ ತೆರಿಗೆ ಆದಾಯವು ರಾಜಸ್ವ ಸ್ವೀಕೃತಿಯ ಪ್ರಮುಖ ಭಾಗವನ್ನು (70 ಪ್ರತಿಶತ) ಹೊಂದಿದ್ದು 2022-23 ಕ್ಕೆ ಹೋಲಿಸಿದರೆ ಜಿಎಸ್‌ಡಿಪಿ ರಾಜ್ಯದ ತೆರಿಗೆ ಆದಾಯದ ಅನುಪಾತವು ಹೆಚ್ಚಾಗಿದೆ. 2023-24ರಲ್ಲಿ ತೆರಿಗೆಯೇತರ ಆದಾಯದ ಬೆಳವಣಿಗೆ ದರದಲ್ಲಿ ರಾಜ್ಯವು ಕುಸಿತ ಕಂಡಿದೆ (ಶೇಕಡಾ 5.73). ಪ್ರಸಕ್ತ ವರ್ಷದಲ್ಲಿ ರಾಜಸ್ವ ಸ್ವೀಕೃತಿಗಿಂತ ರಾಜಸ್ವ ವೆಚ್ಚದ ಹೆಚ್ಚಿನ ಬೆಳವಣಿಗೆಯ ದರದಿಂದಾಗಿ ರಾಜ್ಯವು ₹9,271 ಕೋಟಿಗಳಷ್ಟು ರಾಜಸ್ವ ಕೊರತೆಯನ್ನು ಕಂಡಿದೆ. 31 ಮಾರ್ಚ್ 2024ರಲ್ಲಿದ್ದಂತೆ, ಆದಾಯದ ಮುಖ್ಯ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯವರ್ಧಿತ ತೆರಿಗೆ (₹13,937.44 ಕೋಟಿ) ಮತ್ತು ಸರಕು ಮತ್ತು ಸೇವಾ ತೆರಿಗೆಗಳ (₹16,082.29 ಕೋಟಿ) ಆದಾಯದ ಬಾಕಿಯು ₹30,019.73 ಕೋಟಿಗಳಷ್ಟಿದೆ.

***ರಾಜಸ್ವ ವೆಚ್ಚ***

2023-24ರ ಅವಧಿಯಲ್ಲಿ, ಹಿಂದಿನ ವರ್ಷಕ್ಕಿಂತ ಸಾಮಾನ್ಯ ಸೇವೆಗಳ ಅಡಿಯಲ್ಲಿ ವೆಚ್ಚವು 5.4 ಪ್ರತಿಶತದಷ್ಟು ಹೆಚ್ಚಾಗಿದೆ, ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಶೇಕಡಾ 17.28 ರಷ್ಟು ಮತ್ತು ಸಾಮಾಜಿಕ ಸೇವೆಗಳ ಅಡಿಯಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡಾ 15.69 ರಷ್ಟು ಹೆಚ್ಚಾಗಿದೆ.

ರಾಜಸ್ವ ವೆಚ್ಚವು ಒಟ್ಟು ವೆಚ್ಚದ 81 ಪ್ರತಿಶತವನ್ನು ಹೊಂದಿದೆ ಮತ್ತು ಏಕನೋಡಲ್ ಏಜೆನ್ಸಿ ಖಾತೆಗಳಿಂದ ಬಳಕೆಯಾಗದೆ ಉಳಿದ ಮೊತ್ತದ ಮರುಪಾವತಿಯ ಕಾರಣದಿಂದಾಗಿ ಅದನ್ನು 0.93 ಶೇಕಡಾ (₹2,256.06 ಕೋಟಿ) ರಷ್ಟು ಕಡಿಮೆ ತೋರಿಸಲಾಗಿದೆ.

ಎಪ್ಪತ್ತೈದು ಪ್ರತಿಶತ ರಾಜಸ್ವ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ, ಸೆಸ್ ಅನ್ನು ಮೀಸಲು ನಿಧಿಗಳಿಗೆ ವರ್ಗಾಯಿಸುವುದು ಇತ್ಯಾದಿ ಅನಮ್ಯ ವೆಚ್ಚಗಳು ಸೇರಿದ ಬದ್ಧವಾದ ವೆಚ್ಚವನ್ನು ಒಳಗೊಂಡಿದೆ. 2023-24ರಲ್ಲಿ, ಸಹಾಯಧನಗಳು ರಾಜಸ್ವ ವೆಚ್ಚದ ಸುಮಾರು 13 ಪ್ರತಿಶತವನ್ನು ಒಳಗೊಂಡಿದ್ದು, ಇದು ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ಸಹಾಯಧನಗಳನ್ನು ಮತ್ತು 12 ಪ್ರತಿಶತದಷ್ಟು ಆರ್ಥಿಕ ಸಹಾಯವನ್ನು ಒಳಗೊಂಡಿಲ್ಲವಾದ್ದರಿಂದ ಕಡಿಮೆ ತೋರಿಸಲಾಗಿದೆ.

***ವೆಚ್ಚದ ಗುಣಮಟ್ಟ***

ಪ್ರಸಕ್ತ ವರ್ಷದಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) 19 ಪ್ರತಿಶತದಷ್ಟಿತ್ತು, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಇದರ ಪಾಲು ಮೂರು ಪ್ರತಿಶತದಷ್ಟು ಕಡಿಮೆಯಾಗಿದೆ. ಇದರ ಪರಿಣಾಮವಾಗಿ, 2023-24ರಲ್ಲಿ ಅಪೂರ್ಣ ಯೋಜನೆಗಳ ಸಂಖ್ಯೆಯು ಹಿಂದಿನ ವರ್ಷಕ್ಕಿಂತ (1,864) 3,140 ಕ್ಕೆ ಏರಿತು. 2023-24ರ ಅಂತ್ಯದಲ್ಲಿ ₹4,482 ಕೋಟಿ ಮೊತ್ತದ ಹಣವು ಅಪೂರ್ಣ ಯೋಜನೆಗಳಲ್ಲಿ ಬಂಧಿತವಾಗಿದೆ.

ಕಂಪನಿಗಳು / ನಿಗಮಗಳಲ್ಲಿ 31 ಮಾರ್ಚ್ 2024 ರಂತೆ ₹73,487 ಕೋಟಿ ಹೂಡಿಕೆಯಿಂದ ಬಂದ ಲಾಭಾಂಶವು ಅತ್ಯಲ್ಪವಾಗಿದೆ (₹290.74 ಕೋಟಿ).

***ಋಣ ಸಹಿಷ್ಣುತೆ***

ಮುಕ್ತ ಮಾರುಕಟ್ಟೆ ಸಾಲಗಳು ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಯಲ್ಲಿ ಪ್ರಮುಖ ಪಾಲನ್ನು (ಶೇ 70) ಹೊಂದಿದ್ದವು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇಕಡಾ ಆರರಷ್ಟು ಹೆಚ್ಚಾಗಿದೆ. 2023-

24ರಲ್ಲಿ, ರಾಜ್ಯ ಸರ್ಕಾರವು ತನ್ನ ಮಾರುಕಟ್ಟೆ ಸಾಲವನ್ನು ಹಿಂದಿನ ವರ್ಷದ ₹36,000 ಕೋಟಿಯಿಂದ ₹81,000 ಕೋಟಿಗೆ ಹೆಚ್ಚಿಸಿದೆ. ರಾಜಸ್ವ ಸ್ವೀಕೃತಿಗಳ ಅನುಪಾತಕ್ಕೆ (ಐಪಿ/ಆರ್‌ಆರ್) ಬಡ್ಡಿ ಪಾವತಿಗಳ ಮೂಲಕ ಅಳೆಯಲಾದ ಬಡ್ಡಿ ಪಾವತಿಗಳ ಹೊರೆಯು 2023–24ರ ಅವಧಿಯಲ್ಲಿ ಹೆಚ್ಚಾಗಿದೆ ಮತ್ತು ಹಿಂದಿನ ವರ್ಷಕ್ಕಿಂತ 12.12 ಪ್ರತಿಶತದಷ್ಟಿದೆ. ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು 2019–20 ರಿಂದ 2022–23ರ ಅವಧಿಯಲ್ಲಿ ಶೇಕಡಾವಾರು ಸಾಲದ ಸ್ವೀಕೃತಿಯಲ್ಲಿ ಇಳಿಕೆಯ ಪ್ರವೃತ್ತಿಯಲ್ಲಿತ್ತು ಮತ್ತು 2023–24ರ ಅವಧಿಯಲ್ಲಿ ಇದು 11.30 ಕ್ಕೆ ಏರಿತು.

***ನಗದು ಶಿಲ್ಕು ಸ್ಥಿತಿ***

ವರ್ಷದ ಅಂತ್ಯದಲ್ಲಿ ರಾಜ್ಯದ ನಗದು ಶಿಲ್ಕು (ಆರ್‌ಬಿಐನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ 27.78 ರಷ್ಟು ಹೆಚ್ಚಾಗಿದೆ.

## 2.10 ಶಿಫಾರಸುಗಳು

- **ರಾಜ್ಯ ಸರ್ಕಾರವು ಬಾಕಿ ಇರುವ ಆದಾಯಗಳ ಅಥವಾ ಸಂಗ್ರಹಣೆಯಲ್ಲಿನ ಕೊರತೆಯನ್ನು ತಡೆಗಟ್ಟಲು ತನ್ನ ಮೇಲ್ವಿಚಾರಣೆಯನ್ನು ಬಲಪಡಿಸಬೇಕು.**
- **ರಾಜಸ್ವ ಹೆಚ್ಚಳವನ್ನು ಸಾಧಿಸುವ ದಿಶೆಯಲ್ಲಿ ರಾಜ್ಯವು ಹೆಚ್ಚುವರಿ ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಪರಿಗಣಿಸಬೇಕು.**
- **ರಾಜ್ಯ ಸರ್ಕಾರವು ಬಂಡವಾಳ ವೆಚ್ಚವನ್ನು ಹೆಚ್ಚಿಸಲು, ಮಿತಿಮೀರಿದ ಸಮಯ ಮತ್ತು ವೆಚ್ಚವನ್ನು ತಡೆಯಲು, ಅಪೂರ್ಣ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಮತ್ತು ಪೂರ್ಣಗೊಳ್ಳುತ್ತಿರುವ ಕಾಮಗಾರಿಗಳಿಗೆ ಆದ್ಯತೆ ನೀಡಲು ಮಾರ್ಗಸೂಚಿಗಳನ್ನು ರೂಪಿಸಬೇಕು.**

# ಅಧ್ಯಾಯ – 3

# ಆಯವ್ಯಯ ನಿರ್ವಹಣೆ

# ಅಧ್ಯಾಯ

# ಆಯವ್ಯಯ ನಿರ್ವಹಣೆ 3

## 3.1 ಪೀಠಿಕೆ

ಪರಿಣಾಮಕಾರಿ ಆರ್ಥಿಕ ನಿರ್ವಹಣೆಯು ಕಾರ್ಯನೀತಿ ಹಂತದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಆಡಳಿತಾತ್ಮಕ ಹಂತದಲ್ಲಿ ಯಾವುದೇ ವ್ಯರ್ಥತೆ ಅಥವಾ ನಿಧಿಗಳ ಮಾರ್ಗಪಲ್ಲಟವಿಲ್ಲದೆ ಸಫಲವಾಗಿ ಅನುಷ್ಠಾನಗೊಳಿಸುವುದನ್ನು ದೃಢಪಡಿಸುತ್ತದೆ. ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದೆ. ಇದು ಸರ್ಕಾರದ ಸಂಪನ್ಮೂಲಗಳ ಹಂಚಿಕೆಗಳ ಆದ್ಯತೆಯನ್ನು ಪರಿಶೀಲಿಸುವುದರ ಜೊತೆಗೆ ಸಂವಿಧಾನದ ವಿಧಿಗಳ ಉಲ್ಲಂಘನೆಯ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಎತ್ತಿ ತೋರಿಸುತ್ತದೆ.

## 3.2 ಆಯವ್ಯಯ ಪ್ರಕ್ರಿಯೆ

ಭಾರತದ ಸಂವಿಧಾನದ 202ನೇ ಪರಿಚ್ಛೇದ ಪ್ರಕಾರ ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, "ವಾರ್ಷಿಕ ಹಣಕಾಸು ತ: ಖ್ತೆ (ಆಯವ್ಯಯ)" ಎಂದು ಕರೆಯಲ್ಪಡುವ ಆ ವರ್ಷದ ರಾಜ್ಯದ ಅಂದಾಜು ಸ್ವೀಕೃತಿ ಮತ್ತು ವೆಚ್ಚಗಳ ಹೇಳಿಕೆಯನ್ನು ರಾಜ್ಯದ ಶಾಸಕಾಂಗದಲ್ಲಿ ಮಂಡಿಸಬೇಕಾಗುತ್ತದೆ. ವೆಚ್ಚದ ಅಂದಾಜುಗಳು 'ಪ್ರಭೃತ' ಮತ್ತು 'ಪುರಸ್ಕೃತ' ವೆಚ್ಚದ[18] ಘಟಕಗಳನ್ನು ಪ್ರತ್ಯೇಕವಾಗಿ ತೋರಿಸುತ್ತವೆ ಮತ್ತು ಇತರ ವೆಚ್ಚಗಳಿಂದ ರಾಜಸ್ವ ವೆಚ್ಚವನ್ನು ಪ್ರತ್ಯೇಕಿಸುತ್ತವೆ. ರಾಜ್ಯ ಸರ್ಕಾರವು ಯಾವುದೇ ವೆಚ್ಚವನ್ನು ಮಾಡುವ ಮೊದಲು ಶಾಸಕಾಂಗದ ಅನುಮತಿ ಪಡೆಯುವುದು ಅಗತ್ಯವಾಗಿದೆ.

ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ಮತ್ತು ವೆಚ್ಚದ ಅಧಿಕರಿಸುವಿಕೆಗೆ ಸಂಬಂಧಿಸಿದ ನಂತರದ ಕ್ರಮವನ್ನು ಸೂಚಿಸುತ್ತದೆ. ಆರ್ಥಿಕ ಇಲಾಖೆಯು ನಿಗದಿಪಡಿಸಿದ ದಿನಾಂಕದಂದು ಇಲಾಖೆಗಳ ಮುಖ್ಯಸ್ಥರಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಆಧಾರದ ಮೇಲೆ ಆರ್ಥಿಕ ಇಲಾಖೆಯು ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ನಿರ್ಧಾರವನ್ನು ಸಾಕಾರಗೊಳಿಸುವ ಅಂದಾಜುಗಳನ್ನು ಕ್ರೋಢೀಕರಿಸಿ ಕೆಳಗಿನವುಗಳನ್ನು ಸಿದ್ಧಪಡಿಸುತ್ತದೆ:

(i) ಆಯವ್ಯಯ ವರ್ಷದ ಹಣಕಾಸು ಸ್ಥಿತಿಯ ಸಾರಾಂಶದ ವಿವರಣಾ ಪಟ್ಟಿ,
(ii) ಸ್ವೀಕೃತಿಗಳ ವಿವರವಾದ ಅಂದಾಜುಗಳು; ಮತ್ತು
(iii) ಅನುದಾನಗಳ ಕೋರಿಕೆಯ ಪಟ್ಟಿ ಮತ್ತು ಅದಕ್ಕನುಗುಣವಾಗಿ ಸವಿಸ್ತಾರ ವೆಚ್ಚಗಳ ಅಂದಾಜುಗಳು.

ಈ ಅಂದಾಜುಗಳು ರಾಜ್ಯದ ಸಂಚಿತ ನಿಧಿಯಿಂದ ಭರಿಸಬೇಕಾದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳನ್ನು ಒಳಗೊಂಡಿರುತ್ತದೆ. ರಾಜ್ಯ ಆಯವ್ಯಯವು, **ನಕ್ಷೆ–3.1**ರಲ್ಲಿ ನೀಡಿರುವ ದಾಖಲೆಗಳನ್ನು ಒಳಗೊಂಡಿರುತ್ತದೆ.

---

[18] '**ಪ್ರಭೃತ ವೆಚ್ಚ:** ಕೆಲವು ವರ್ಗಗಳ ವೆಚ್ಚಗಳು (ಉದಾಹರಣೆ: ಸಂವಿಧಾನಿಕ ಅಧಿಕಾರಿಗಳ ಸಂಬಳ, ಸಾಲ ಮರುಪಾವತಿ, ಇತ್ಯಾದಿ). ರಾಜ್ಯದ ಸಂಚಿತ ನಿಧಿಯ ಮೇಲೆ ಪ್ರಭೃತವನ್ನು ರೂಪಿಸುತ್ತದೆ ಮತ್ತು ಶಾಸಕಾಂಗದ ಅನುಮೋದನೆಗೆ ಒಳಪಡುವುದಿಲ್ಲ. **ಪುರಸ್ಕೃತ ವೆಚ್ಚ:** ಇತರೆ ಎಲ್ಲಾ ವೆಚ್ಚಗಳು ಶಾಸಕಾಂಗವು ಅನುಮೋದಿಸಿದೆ.

**ನಕ್ಷೆ–3.1: ರಾಜ್ಯ ಆಯವ್ಯಯ ದಾಖಲೆಗಳ ವಿವರಗಳು**




*ಆಕರ: ಆಯವ್ಯಯ ದಾಖಲೆಗಳು*

ಪ್ರತಿ ವರ್ಷವೂ ವಾರ್ಷಿಕ ಆಯವ್ಯಯವು ಹಣಕಾಸು ಮಂತ್ರಿಗಳಿಂದ ಉಭಯ ಸದನಗಳಲ್ಲಿ ಮಂಡಿಸಲ್ಪಡುತ್ತದೆ.

2023–24ರ ಅವಧಿಯಲ್ಲಿ ಮೂಲ ಮತ್ತು ಪೂರಕ ಅವಕಾಶಗಳು, ವೆಚ್ಚಗಳು ಮತ್ತು ಉಳಿತಾಯಗಳನ್ನು ಒಳಗೊಂಡಂತೆ ರಾಜ್ಯ ಶಾಸಕಾಂಗವು ಅನುಮೋದಿಸಿದ ಒಟ್ಟು ಮೊತ್ತವನ್ನು **ನಕ್ಷೆ–3.2**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–3.2: 2023–24ರ ಕರ್ನಾಟಕದ ಆಯವ್ಯಯ ಮತ್ತು ವೆಚ್ಚದ ಸಾರಾಂಶ**

**(₹ ಕೋಟಿಗಳಲ್ಲಿ)**



## 3.3 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ

ಮಹಿಳಾ ಉದ್ದೇಶಿತ ಅಯವ್ಯಯವನ್ನು ಜಗತ್ತಿನಾದ್ಯಂತ ಮಹಿಳಾ ಅಭಿವೃದ್ಧಿಗಾಗಿ ಸಂಬಂಧಿತ ಕಾರ್ಯಕ್ರಮಗಳು ಮತ್ತು ಯೋಜನೆಗಳಿಗೆ ಆಯವ್ಯಯ ಸಂಪನ್ಮೂಲಗಳ ಹಂಚಿಕೆಯ ಮೂಲಕ ವಿವಿಧ ಸೂಚಕಗಳು ಮತ್ತು ಸೂಚ್ಯಾಂಕಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹಿಸಲು ಒಂದು ಪ್ರಮುಖ ಕಾರ್ಯನೀತಿ ಸಾಧನವೆಂದು ಪರಿಗಣಿಸಲಾಗಿದೆ. ಲಿಂಗಾಧಾರಿತ ಸೂಚಕಗಳು ವಿಶೇಷವಾಗಿ ಆರೋಗ್ಯ, ಶಿಕ್ಷಣ, ಸಬಲೀಕರಣ, ರಕ್ಷಣೆ, ಭಾಗವಹಿಸುವಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಲಿಂಗ ಅಂತರ ಮತ್ತು ಲಿಂಗ ಅಸಮಾನತೆಗಳನ್ನು ತೊಡೆದುಹಾಕಲು ಅಥವಾ ಕಡಿಮೆ ಮಾಡಲು ಉದ್ದೇಶಿತ ಅಥವಾ ಅಪೇಕ್ಷಿತ ಸಾಧನೆಯ ಹಂತಗಳ ಅಗತ್ಯತೆಯನ್ನು ಸೂಚಿಸುತ್ತವೆ.

2005–06ರಲ್ಲಿ ಕೇಂದ್ರ ಸರ್ಕಾರದ ವೆಚ್ಚ ಆಯವ್ಯಯದ ಭಾಗವಾಗಿ ಮೊದಲ ಬಾರಿಗೆ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪರಿಚಯಿಸಲಾಯಿತು. ಕರ್ನಾಟಕ ಸರ್ಕಾರವು 2007–08ರಿಂದ ವಿಧಾನಮಂಡಲದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಮಂಡಿಸುತ್ತಿದೆ. ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿನ ಮಹಿಳಾ ಉದ್ದೇಶಿತ ಆಯವ್ಯಯ ಕೋಶವು ವಿವಿಧ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ತಜ್ಞರ ಸಮನ್ವಯದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯೋಜನಾ ಇಲಾಖೆಯ ಸಹಯೋಗದೊಂದಿಗೆ ಈ ಆಯವ್ಯಯದ ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನಕ್ಕಾಗಿ ನೋಡಲ್ ಏಜೆನ್ಸಿಯಾಗಿದೆ.

ಮಾರ್ಚ್ 2020ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯಲ್ಲಿ **(ಕಂಡಿಕೆ–3.3)**, ಕರ್ನಾಟಕದ ಮಹಿಳಾ ಉದ್ದೇಶಿತ ಆಯವ್ಯಯದ ಸಮೀಕ್ಷೆಯನ್ನು ಕೈಗೊಳ್ಳಲಾಯಿತು ಮತ್ತು ಯೋಜನೆ ಮತ್ತು ನೀತಿಯ ಸೂತ್ರೀಕರಣ, ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ ವಿಶ್ಲೇಷಣೆ, ಮಹಿಳಾ ಉದ್ದೇಶಿತ ಆಯವ್ಯಯ ಪ್ರಕ್ರಿಯೆಗಳನ್ನು ಮೇಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳನ್ನು ವಿವರವಾಗಿ ಹೊರತರಲಾಗಿತ್ತು. ವರದಿಯಲ್ಲಿ ತಂದಿರುವ ಅಂಶಗಳನ್ನು ಪರಿಶೀಲಿಸಲಾಗುವುದು ಮತ್ತು ಅದರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು.

2019–20 ರಿಂದ 2023–24ರ ಅವಧಿಗೆ ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗಾಗಿ ಮೀಸಲಿಟ್ಟ ಒಟ್ಟು ಹಂಚಿಕೆಯು ವರ್ಗ ಎ (ಮಹಿಳೆಯರಿಗೆ ಶೇಕಡಾ 100ರಷ್ಟು ವಿನಿಯೋಗದೊಂದಿಗೆ ಮಹಿಳಾ ನಿರ್ದಿಷ್ಟ ಯೋಜನೆಗಳು) ಮತ್ತು ವರ್ಗ ಬಿ (ಶೇಕಡಾ 30ಕ್ಕಿಂತ ಹೆಚ್ಚಿನ ಮತ್ತು ಶೇಕಡಾ 100ಕ್ಕಿಂತ ಕಡಿಮೆ ಹಂಚಿಕೆಯ ಮಹಿಳಾ ಪರ ಯೋಜನೆಗಳು) ಜೊತೆಗೆ ಮೂಲ ಆಯವ್ಯಯ ನಿಬಂಧನೆಯ ಹಂಚಿಕೆಯ ಶೇಕಡಾವಾರಿನ ಪಾಲನ್ನು **ಕೋಷ್ಟಕ–3.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.1: 2019–20 ರಿಂದ 2023–24ರ ಅವಧಿಯಲ್ಲಿ ವರ್ಗವಾರು ಹಂಚಿಕೆ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ ಅವಕಾಶ (ಮೂಲ) | ಒಟ್ಟು ವರ್ಗ 'ಎ' | | ಒಟ್ಟು ವರ್ಗ 'ಬಿ' | | ಒಟ್ಟು ಹಂಚಿಕೆಗೆ ವರ್ಗ 'ಎ' ಶೇಕಡಾವಾರು | ಒಟ್ಟು ಹಂಚಿಕೆಗೆ ವರ್ಗ 'ಬಿ' ಶೇಕಡಾವಾರು |
|---|---|---|---|---|---|---|---|
| | | ಯೋಜನೆಗಳ ಸಂಖ್ಯೆ | ಹಂಚಿಕೆ | ಯೋಜನೆಗಳ ಸಂಖ್ಯೆ | ಹಂಚಿಕೆ | | |
| 2019–20 | 2,40,745.86 | 59 | 5,222.46 | 725 | 1,05,790.40 | 2.17 | 43.94 |
| 2020–21 | 2,44,733.57 | 63 | 4,732.34 | 890 | 1,10,170.20 | 1.93 | 45.02 |
| 2021–22 | 2,52,391.98 | 58 | 4,585.66 | 818 | 1,08,674.22 | 1.82 | 43.06 |
| 2022–23 | 2,71,542.22 | 71 | 6,495.24 | 781 | 1,22,311.69 | 2.39 | 45.04 |
| 2023–24 | 3,41,320.51 | 93 | 26,826.90 | 851 | 1,45,333.96 | 7.86 | 42.58 |

*ಆಕರ: ಸಂಬಂಧಿತ ವರ್ಷಗಳ ಅನುದಾನ ವಹಿ ಮತ್ತು ಮಹಿಳಾ ಉದ್ದೇಶಿತ ಆಯವ್ಯಯ*

2019–20 ರಿಂದ ಕಡಿಮೆಯಾಗುತ್ತಿದ್ದ ಮೂಲ ಆಯವ್ಯಯ ನಿಬಂಧನೆಗೆ ವರ್ಗ 'ಎ' ಹಂಚಿಕೆಯ ಶೇಕಡಾವಾರು ಪ್ರಮಾಣವು 2022–23ರಿಂದ ಹೆಚ್ಚಾಗಲು ಪ್ರಾರಂಭಿಸಿತು ಮತ್ತು 2023–24ರಲ್ಲಿ ಇದು ಶೇಕಡಾ 7.86ಕ್ಕೆ ಏರಿತು. ಇದು ಮುಖ್ಯವಾಗಿ ಸರ್ಕಾರವು ಮಹಿಳೆಯರಿಗೆ ಎರಡು ಪ್ರೋತ್ಸಾಹಕ ಯೋಜನೆಗಳಾದ ಶಕ್ತಿ ಯೋಜನೆ ಮತ್ತು ಗೃಹಲಕ್ಷ್ಮಿ ಯೋಜನೆಯ ಜಾರಿಯಿಂದಾಯಿತು. ವರ್ಗ 'ಬಿ' ಗೆ ಸಂಬಂಧಿಸಿದಂತೆ, ಮೂಲ ಆಯವ್ಯಯ ನಿಬಂಧನೆಗೆ ಹಂಚಿಕೆಯ ಶೇಕಡಾವಾರು ಪ್ರಮಾಣವು ಅಂತರ-ವರ್ಷ ವ್ಯತ್ಯಾಸವನ್ನು ಹೊಂದಿದೆ ಮತ್ತು ಹಿಂದಿನ ವರ್ಷಕ್ಕೆ ಹೋಲಿಸಿದರೆ 2023–24ರಲ್ಲಿ ಕಡಿಮೆಯಾಗಿದೆ.

ಒಳಗೊಂಡಿರುವ ಒಟ್ಟು ಯೋಜನೆಗಳ ಸಂಖ್ಯೆಯ ಪ್ರವೃತ್ತಿಗಳ ವಿಶ್ಲೇಷಣೆಯು 2019–20 ರಿಂದ ಅಂತರ-ವರ್ಷದ ವ್ಯತ್ಯಾಸಗಳಿದ್ದವು ಮತ್ತು ವರ್ಗ 'ಎ' ಗೆ ಸಂಬಂಧಿಸಿದಂತೆ 2023–24ರಲ್ಲಿ ಗರಿಷ್ಠವಾಗಿತ್ತು ಎಂದು ಸೂಚಿಸಿದೆ. ವರ್ಗ 'ಬಿ' ಗೆ ಸಂಬಂಧಿಸಿದಂತೆ, ಇದು 2020–21ರಿಂದ ಕಡಿಮೆಯಾಗುವ ಪ್ರವೃತ್ತಿಯನ್ನು ತೋರಿಸಿದೆ ಮತ್ತು 2023–24ರಲ್ಲಿ ಮತ್ತೆ ಹೆಚ್ಚಾಗಿದೆ.

ಮಾರ್ಚ್ 31, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಎಸ್.ಎಫ್.ಎ.ಆರ್‌ನಲ್ಲಿ ತರಲಾದ ಅವಲೋಕನಗಳ ಆಧಾರದ ಮೇಲೆ, ಮಹಿಳಾ ಉದ್ದೇಶಿತ ಆಯವ್ಯಯದ ಸುತ್ತೋಲೆಯಲ್ಲಿ (ನವೆಂಬರ್ 2024) ಮಹಿಳಾ ಉದ್ದೇಶಿತ ಆಯವ್ಯಯದ 2025–26 ಅನ್ನು ಅಂತಿಮಗೊಳಿಸಲು ಭಾರತ ಸರ್ಕಾರದ ಮಹಿಳಾ ಉದ್ದೇಶಿತ ಆಯವ್ಯಯದ ಕೈಪಿಡಿಯಲ್ಲಿ ಕಲ್ಪಿಸಲಾದ ಐದು ಹಂತದ ಚೌಕಟ್ಟನ್ನು ಅನುಸರಿಸಲು ಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರವು (ಜನವರಿ 2025) ಉತ್ತರಿಸಿತು.

## 3.4 ಮಕ್ಕಳ ಆಯವ್ಯಯ

ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯು ಕರ್ನಾಟಕ ಸರ್ಕಾರದ ವಾರ್ಷಿಕ ಆಯವ್ಯಯದಲ್ಲಿ ಮಕ್ಕಳ ಮೇಲಿನ (0–18 ವರ್ಷಗಳು) ಹಂಚಿಕೆಗಳು ಮತ್ತು ವೆಚ್ಚಗಳನ್ನು ಗುರುತಿಸಲು ಮತ್ತು ವರ್ಗೀಕರಿಸಲು ನೀತಿ ಸಾಧನವಾಗಿದೆ. ಈ ಪಟ್ಟಿಯು ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಆಯವ್ಯಯ ಸಂಪನ್ಮೂಲವನ್ನು ನಿಗದಿಪಡಿಸಲಾಗಿದೆ ಮತ್ತು ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡುತ್ತದೆ. ಕರ್ನಾಟಕ ಸರ್ಕಾರವು 2020–21ರ ಹಣಕಾಸು ವರ್ಷದಿಂದ ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯನ್ನು ತಯಾರಿಸಲು ನಿರ್ಧರಿಸಿತು (ಆಗಸ್ಟ್ 2019).

2020–21 ರಿಂದ 2023–24ರವರೆಗೆ ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮ/ಯೋಜನೆಗಳ ವಿವಿಧ ವರ್ಗಗಳಲ್ಲಿ ಹಂಚಿಕೆಗಳು ಮತ್ತು ವೆಚ್ಚಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ. ಕೋಷ್ಟಕವು ಪ್ರತಿ ಹಣಕಾಸು ವರ್ಷದಲ್ಲಿಯೂ ಒಟ್ಟು ಆಯವ್ಯಯ ಹಂಚಿಕೆಗೆ (ಮೂಲ) ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮಗಳ ಹಂಚಿಕೆಯ ಶೇಕಡಾವಾರನ್ನು ಸೂಚಿಸುತ್ತದೆ.

**ಕೋಷ್ಟಕ–3.2: ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮ/ಯೋಜನೆಯಗಳಡಿಯಲ್ಲಿ ಹಂಚಿಕೆಗಳ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಒಟ್ಟು ಆಯವ್ಯಯ (ಒಟ್ಟು ಮಕ್ಕಳ ಆಯವ್ಯಯ) | ವರ್ಗ | ಮಕ್ಕಳ ಕೇಂದ್ರಿತ ಕಾರ್ಯಕ್ರಮ | | | ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ | | |
|---|---|---|---|---|---|---|---|---|
| | | | ಹಂಚಿಕೆ | ವೆಚ್ಚ | ಒಟ್ಟು ಆಯವ್ಯಯಕ್ಕೆ ಹಂಚಿಕೆಯ ಶೇಕಡಾವಾರು | ಹಂಚಿಕೆ | ವೆಚ್ಚ | ಒಟ್ಟು ಆಯವ್ಯಯಕ್ಕೆ ಹಂಚಿಕೆಯ ಶೇಕಡಾವಾರು |
| **2020–21** | 2,65,220.73 (51,084.28) | **100%** | 11,881.94 | 10,321.61 | 4.48 | 15,421.42 | 13,869.29 | 5.81 |
| | | **100%ಕಿಂತ ಕಡಿಮೆ** | 18,892.79 | 16,950.08 | 7.12 | 4,888.13 | 4,418.79 | 1.84 |
| **2021–22** | 2,93,185.31 (59,464.07) | **100%** | 12,402.13 | 12,071.41 | 4.23 | 18,917.05 | 18,757.53 | 6.45 |
| | | **100%ಕಿಂತ ಕಡಿಮೆ** | 18,433.01 | 17,065.39 | 6.29 | 9,711.88 | 9,590.56 | 3.31 |

| ವರ್ಷ | ಒಟ್ಟು ಆಯವ್ಯಯ (ಒಟ್ಟು ಮಕ್ಕಳ ಆಯವ್ಯಯ) | ವರ್ಗ | ಮಕ್ಕಳ ಕೇಂದ್ರಿತ ಕಾರ್ಯಕ್ರಮ | | | ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ | | |
|---|---|---|---|---|---|---|---|---|
| | | | ಹಂಚಿಕೆ | ವೆಚ್ಚ | ಒಟ್ಟು ಆಯವ್ಯಯಕ್ಕೆ ಹಂಚಿಕೆಯ ಶೇಕಡಾವಾರು | ಹಂಚಿಕೆ | ವೆಚ್ಚ | ಒಟ್ಟು ಆಯವ್ಯಯಕ್ಕೆ ಹಂಚಿಕೆಯ ಶೇಕಡಾವಾರು |
| **2022–23** | 3,05,572.67 (61,609.49) | **100%** | 13,930.35 | 16,604.33 | 4.56 | 20,225.19 | 19,944.90 | 6.62 |
| | | **100%ಕಿಂತ ಕಡಿಮೆ** | 16,506.02 | 16,926.91 | 5.40 | 10,947.93 | 9,484.94 | 3.58 |
| **2023–24** | 3,48,941.46 (76,214.58) | **100%** | 15,350.12 | 13,887.50 | 4.40 | 25,083.90 | 24,911.84 | 7.19 |
| | | 100%ಕಿಂತ **ಕಡಿಮೆ** | 23,709.34 | 19,568.81 | 6.79 | 12,131.75 | 10,525.31 | 3.48 |

*ಆಕರ: ಅನುದಾನ ವಹಿ ಮತ್ತು ಮಕ್ಕಳ ಆಯವ್ಯಯ*

ಕೋಷ್ಟಕದಿಂದ ನೋಡಬಹುದಾದಂತೆ, ನಿಜವಾದ ಒಟ್ಟು ಮಕ್ಕಳ ಹಂಚಿಕೆಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿ ಕಂಡುಬಂದಿದೆ, ಜೊತೆಗೆ ಒಟ್ಟು ಆಯವ್ಯಯ ಹಂಚಿಕೆಗೆ ಒಟ್ಟು ಮಕ್ಕಳ ಹಂಚಿಕೆಯ ಶೇಕಡಾವಾರು ಪ್ರಮಾಣವೂ ಹೆಚ್ಚುತ್ತಿದೆ. ಇದಲ್ಲದೆ, ಈ ಕೆಳಗಿನವು ಕೋಷ್ಟಕದಿಂದ ಸ್ಪಷ್ಟವಾಗಿದೆ:

- ಶೇಕಡಾ 100ರಷ್ಟು ಮಕ್ಕಳ ಕೇಂದ್ರಿತ ಕಾರ್ಯಕ್ರಮಕ್ಕೆ ಎಲ್ಲಾ ವರ್ಷಗಳಲ್ಲಿ ಹಂಚಿಕೆಯ ಶೇಕಡಾವಾರು ಸುಮಾರು ನಾಲ್ಕು ಪ್ರತಿಶತದಷ್ಟಿತ್ತು
- ಶೇಕಡಾ 100ರಷ್ಟು ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಸಂಪೂರ್ಣವಾದ ಹಂಚಿಕೆ ಮತ್ತು ಒಟ್ಟು ಆಯವ್ಯಯ ಹಂಚಿಕೆಗೆ ಹಂಚಿಕೆಯ ಶೇಕಡಾವಾರು ಎಲ್ಲಾ ವರ್ಷಗಳಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು.
- ಶೇಕಡಾ 100ಕ್ಕಿಂತ ಕಡಿಮೆ ನಿಯೋಜನೆ ಇರುವ ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು ಮತ್ತು ಶೇಕಡಾ 100ಕ್ಕಿಂತ ಕಡಿಮೆ ನಿಯೋಜನೆ ಇರುವ ಮಕ್ಕಳ ಕೇಂದ್ರಿತ ಕಾರ್ಯಕ್ರಮವಲ್ಲದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಒಟ್ಟು ಆಯವ್ಯಯ ಹಂಚಿಕೆಗೆ ಶೇಕಡಾವಾರು ಹಂಚಿಕೆಯಲ್ಲಿ ಅಂತರ–ವರ್ಷದ ವ್ಯತ್ಯಾಸವಿತ್ತು.

2023–24ನೇ ಸಾಲಿನ ವರ್ಗವಾರು / ಇಲಾಖೆವಾರು ಆಯವ್ಯಯ ಹಂಚಿಕೆ ಮತ್ತು ವೆಚ್ಚವನ್ನು **ಅನುಬಂಧ–3.1**ರಲ್ಲಿ ತೋರಿಸಲಾಗಿದೆ.

ಮಹಿಳಾ ಉದ್ದೇಶಿತ ಮತ್ತು ಮಕ್ಕಳ ಆಯವ್ಯಯಗಳಿಗಾಗಿ ನಿಬಂಧನೆಗಳು ಮತ್ತು ಹಂಚಿಕೆಗಳನ್ನು ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅನುವಾದಿಸಬೇಕು ಮತ್ತು ನಂತರ ಬಲವಾದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಅನುಸರಿಸಬೇಕು, ಇಲ್ಲವಾದಲ್ಲಿ ಲಿಂಗವಾರು ಆಯವ್ಯಯವು ಸಂಪೂರ್ಣ ಉದ್ದೇಶವು ವಿಫಲಗೊಳ್ಳುತ್ತದೆ.

## 3.5 ಆಯವ್ಯಯದಲ್ಲಿನ ಪ್ರಮುಖ ನೀತಿ ಘೋಷಣೆಗಳು ಮತ್ತು ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಅವುಗಳ ನೈಜ ಹಣಕಾಸಿನ ಮೂಲ

ಸರ್ಕಾರವು 2023–24ನೇ ಸಾಲಿನ ಆಯವ್ಯಯದಲ್ಲಿ (ಫೆಬ್ರವರಿ 2023 ಮತ್ತು ಜುಲೈ 2023) ಪ್ರಮುಖ ನೀತಿ ಉಪಕ್ರಮಗಳನ್ನು ಘೋಷಿಸಿತು. 2024–25ನೇ ಸಾಲಿನ ಆಯವ್ಯಯ ದಾಖಲೆಗಳೊಂದಿಗೆ ಕ್ರಮ ಕೈಗೊಂಡ ವರದಿಯನ್ನು ಹೊರತರಲಾಗಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಮತ್ತು ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆಗಳಿಗೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಂಡ ಕ್ರಮಗಳ ಕುರಿತು ಲೆಕ್ಕಪರಿಶೋಧನೆ ಅಧ್ಯಯನವನ್ನು ಕೈಗೊಂಡಿತು. ಒಟ್ಟಾರೆಯಾಗಿ, ರಾಜ್ಯ ಸರ್ಕಾರವು ಮೂರು ಇಲಾಖೆಗಳಲ್ಲಿ 29 ಹೊಸ

ನೀತಿಗಳನ್ನು ಪ್ರಾರಂಭಿಸಿತು. ಪ್ರಮುಖ ನೀತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರಾರಂಭಿಸಿದ ಕ್ರಮವನ್ನು **ಅನುಬಂಧ–3.2**ರಲ್ಲಿ ಸಂಕ್ಷೇಪಿಸಲಾಗಿದೆ.

29 ಉಪಕ್ರಮಗಳಲ್ಲಿ 21 ಉಪಕ್ರಮಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲಾಗಿದೆ. ಒಂದು ಉಪಕ್ರಮವನ್ನು ಕೈಬಿಡಲಾಗಿದ್ದರೂ, ಎಂಟು ಉಪಕ್ರಮಗಳ ವಿವರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಸ್ವೀಕರಿಸಲಾಗಿಲ್ಲ.

## 3.6 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಭಾರತದ ಸಂವಿಧಾನದ ಅನುಚ್ಛೇದ 204 ಮತ್ತು 205ರ ಅಡಿಯಲ್ಲಿ ಅಂಗೀಕರಿಸಲಾದ ಧನವಿನಿಯೋಗ ಕಾಯಿದೆಯ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಪುರಸ್ಕೃತ ಅನುದಾನ *ಪ್ರಭೃತ* ವಿನಿಯೋಗಗಳಡಿ ವಿವಿಧ ಉದ್ದೇಶಗಳಿಗೆ ಅವಕಾಶ ಕಲ್ಪಿಸದ ಮೊತ್ತಕ್ಕೆ ಹೋಲಿಸಿದಂತೆ ಪ್ರತೀ ಹಣಕಾಸು ವರ್ಷಕ್ಕೆ ಸರ್ಕಾರದ ವೆಚ್ಚದ ಲೆಕ್ಕಗಳಾಗಿವೆ. ಧನವಿನಿಯೋಗ ಲೆಕ್ಕಗಳು ಒಟ್ಟಾರೆ ವೆಚ್ಚದ ಆಧಾರದಲ್ಲಿದೆ. ಈ ಲೆಕ್ಕಗಳು ಮೂಲ ಆಯವ್ಯಯ ಅವಕಾಶಗಳು, ಪೂರಕ ಅಂದಾಜುಗಳು, ಅಧ್ಯರ್ಪಣೆಗಳು ಮತ್ತು ಪುನರ್ ವಿನಿಯೋಗಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ ಮತ್ತು ಆಯವ್ಯಯದ ಪುರಸ್ಕೃತ ಮತ್ತು *ಪ್ರಭೃತ*ಗಳಡಿಯ ಎರಡೂ ಅಂಶಗಳಿಗೆ ಸಂಬಂಧಿಸಿದಂತೆ ವಿನಿಯೋಗ ಕಾಯಿದೆಯಿಂದ ಅಧಿಕೃತಗೊಳಿಸಲಾದ ವಿವಿಧ ನಿರ್ದಿಷ್ಟ ಪಡಿಸಿದ ಸೇವೆಗಳ ಮೇಲಿನ ನಿಜವಾದ ಬಂಡವಾಳ ಮತ್ತು ರಾಜಸ್ವದ ವೆಚ್ಚವನ್ನು ಸೂಚಿಸುತ್ತದೆ. ಧನವಿನಿಯೋಗ ಲೆಕ್ಕಗಳು ಹೀಗೆ ನಿಧಿಯ ಬಳಕೆ, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಅವಕಾಶಗಳ ಮೇಲ್ವಿಚಾರಣೆಯನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಮತ್ತು ಆದ್ದರಿಂದ ಹಣಕಾಸು ಲೆಕ್ಕಗಳಿಗೆ[19] ಪೂರಕವಾಗಿವೆ

### *3.6.1 2023–24ರ ಹಣಕಾಸು ವರ್ಷದಲ್ಲಿ ಒಟ್ಟು ಅವಕಾಶಗಳು, ವಾಸ್ತವಿಕ ವಿತರಣೆಗಳು ಮತ್ತು ಉಳಿತಾಯಗಳ ಸಾರಾಂಶ*

2023–24ರಲ್ಲಿ ಪೂರಕ ಅಂದಾಜುಗಳೂ ಸೇರಿದಂತೆ ಆಯವ್ಯಯ ಅವಕಾಶದ ಒಟ್ಟು 28 ಅನುದಾನಗಳು/ ವಿನಿಯೋಗಗಳನ್ನು ರಾಜಸ್ವ/ಬಂಡವಾಳ ಮತ್ತು ಪುರಸ್ಕೃತ/*ಪ್ರಭೃತ*ಗಳಡಿಯ ವಾಸ್ತವಿಕ ವೆಚ್ಚ ಮತ್ತು ಉಳಿತಾಯ/ಹೆಚ್ಚಳಗಳು ಎಂದು ಮತ್ತಷ್ಟು ವಿಭಜಿಸಿ ಸಾರಾಂಶವನ್ನು **ಕೋಷ್ಟಕ–3.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.3: 2023–24ರಲ್ಲಿ ರಾಜ್ಯವು ಕಾರ್ಯಾಚರಣೆಗೊಳಿಸಿದ ಅನುದಾನಗಳು/ವಿನಿಯೋಗಗಳ ಸಂಖ್ಯೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಣೆ | ಅನುದಾನಗಳು/ ವಿನಿಯೋಗಗಳ ಒಟ್ಟು ಸಂಖ್ಯೆ | ವೆಚ್ಚದ ಘಟಕಗಳು ಪುರಸ್ಕೃತ/*ಪ್ರಭೃತ* | ರಾಜಸ್ವ | ಬಂಡವಾಳ | ಆಯವ್ಯಯ ಅವಕಾಶ | ವಿತರಣೆಗಳು |
|---|---|---|---|---|---|---|---|
| ಎ | ಅನುದಾನಗಳು | 27 | ಪುರಸ್ಕೃತ/*ಪ್ರಭೃತ* | 2,31,737.21 | 58,731.78 | 2,90,468.99 | 2,74,399.46 |
| ಬಿ | ವಿನಿಯೋಗಗಳು | 01 | *ಪ್ರಭೃತ* | 36,031.88 | 22,440.59 | 58,472.47 | 55,279.38 |
| ಒಟ್ಟು (ಎ+ಬಿ) | | | | | | **3,48,941.46** | **3,29,678.84** |

*ಆಕರ: ಧನವಿನಿಯೋಗ ಲೆಕ್ಕಗಳು*

### *3.6.2 ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು*

2019–20 ರಿಂದ 2023–24ರವರೆಗಿನ ಪುರಸ್ಕೃತ ಮತ್ತು *ಪ್ರಭೃತ* ವಿತರಣೆಯ ಸ್ಥಿತಿಯ ಸಾರಾಂಶವನ್ನು **ಕೋಷ್ಟಕ–3.4**ರಲ್ಲಿ ನೀಡಲಾಗಿದೆ.

[19] ಹಣಕಾಸು ಲೆಕ್ಕಗಳು ಕರ್ನಾಟಕ ಸರ್ಕಾರದ ಪ್ರಸಕ್ತ ವರ್ಷದ ಹಣಕಾಸು ವ್ಯವಹಾರಗಳ ಸ್ಥೂಲ ನೋಟವನ್ನು ಒದಗಿಸುತ್ತದೆ. ಇದನ್ನು ಈ ವರದಿಯ ಅಧ್ಯಾಯ 1 ಮತ್ತು 2ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ–3.4: 2019–20 ರಿಂದ 2023–24ರ ಅವಧಿಯಲ್ಲಿ ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು**

(₹ ಕೋಟಿಗಳಲ್ಲಿ)

| ವರ್ಷ | ಅವಕಾಶಗಳು | | ವಿತರಣೆಗಳು | | ಉಳಿತಾಯಗಳು (ಅವಕಾಶದ ಶೇಕಡಾವಾರು) | |
|---|---|---|---|---|---|---|
| | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 2019–20 | 2,29,742.85 | *34,061.82* | 2,01,922.89 | *32,055.34* | 27,819.96(12) | *2,006.48(6)* |
| 2020–21 | 2,24,755.56 | *40,465.17* | 2,03,425.05 | *39,269.44* | 21,330.51(9) | *1,195.73(3)* |
| 2021–22 | 2,43,817.37 | *49,367.94* | 2,34,244.94 | *48,090.76* | 9,572.43(4) | *1,277.18(3)* |
| 2022–23 | 2,53,087.25 | *52,485.42* | 2,44,900.49 | *52,424.90* | 8,186.76(3) | *60.52(0.1)* |
| 2023–24 | 2,84,948.39 | *63,993.07* | 2,68,984.89 | *60,693.95* | 15,963.50(6) | *3,299.12(5)* |

*ಆಕರ: ಧನವಿನಿಯೋಗ ಲೆಕ್ಕಗಳು*

2019–20 ರಿಂದ 2022–23ರ ಅವಧಿಯಲ್ಲಿ ಪುರಸ್ಕೃತ ವಿಭಾಗದ ಅಡಿಯಲ್ಲಿ ಖರ್ಚು ಮಾಡದ ನಿಬಂಧನೆ ಕಡಿಮೆಯಾಗುವ ಪ್ರವೃತ್ತಿಯಲ್ಲಿತ್ತು. ಆದಾಗ್ಯೂ, 2023–24ರಲ್ಲಿ ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ದ್ವಿಗುಣಗೊಂಡು ಶೇಕಡಾ ಆರರಷ್ಟಿತ್ತು. ಗಮನಾರ್ಹ ಉಳಿತಾಯವು ಮುಖ್ಯವಾಗಿ ನಗರಾಭಿವೃದ್ಧಿ (₹3,576.87 ಕೋಟಿ), ಆಹಾರ ಮತ್ತು ನಾಗರಿಕ ಸರಬರಾಜು (₹2,958.72 ಕೋಟಿ), ಶಿಕ್ಷಣ (₹2,630.54 ಕೋಟಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ (₹2,268.64 ಕೋಟಿ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (₹1,376.58 ಕೋಟಿ), ಇತ್ಯಾದಿಗಳ ಅಡಿಯಲ್ಲಿತ್ತು.

*ಪ್ರಭೃತ* ವಿಭಾಗದಲ್ಲಿ, 2019–20 ರಿಂದ 2023–24ರ ಅವಧಿಯಲ್ಲಿ ಖರ್ಚು ಮಾಡದ ನಿಬಂಧನೆಯು ಶೇಕಡಾ 0.1 ರಿಂದ ಆರರವರೆಗೆ ಇತ್ತು. ಗಮನಾರ್ಹ ಉಳಿತಾಯವು ಮುಖ್ಯವಾಗಿ ಸಾಲ ಮರುಪಾವತಿ (₹3,205.19 ಕೋಟಿ), ಕಾನೂನು (₹52.78 ಕೋಟಿ), ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (₹31.04 ಕೋಟಿ), ಇತ್ಯಾದಿಗಳ ಅಡಿಯಲ್ಲಿತ್ತು.

### *3.6.3 ಆಯವ್ಯಯ ಗುರಿಗಾರಿಕೆ*

ಆಯವ್ಯಯ ಗುರಿಗಾರಿಕೆಯು ರಾಜಸ್ವ ಮತ್ತು ವೆಚ್ಚದ ಆಯವ್ಯಯ ಪ್ರಕ್ಷೇಪಣ ಮತ್ತು ವಾಸ್ತವ ಸ್ವೀಕೃತಿ ಮತ್ತು ವೆಚ್ಚದ ನಡುವಿನ ಸಂಬಂಧವನ್ನು ಪರಿಶೀಲಿಸುವ ಪ್ರಕ್ರಿಯೆಯಾಗಿದೆ. ವಿಶ್ವ ಬ್ಯಾಂಕ್‌ನ ಸಾರ್ವಜನಿಕ ವೆಚ್ಚ ಮತ್ತು ಹಣಕಾಸು ಹೊಣೆಗಾರಿಕೆಯು (ಪಿಇಎಫ್ಎ) ಒಟ್ಟಾರೆ ವೆಚ್ಚ ಫಲಿತ ಮತ್ತು ವೆಚ್ಚ ಸಂಯೋಜನಾ ಫಲಕಗಳ ಪರಿಭಾಷೆಯಲ್ಲಿ ಆಯವ್ಯಯದ ವಿಶ್ವಾಸಾರ್ಹತೆಯನ್ನು ಅಳೆಯುತ್ತದೆ.

### 3.6.3.1 ಒಟ್ಟಾರೆ ಆಯವ್ಯಯ ಫಲಿತ

ಒಟ್ಟಾರೆ ಆಯವ್ಯಯ ಫಲಿತವು ಮೂಲ ಅನುಮೋದನೆಗೆ ಹೋಲಿಸಿದಂತೆ ಅನುಮೋದನೆಗಿಂತಲೂ ಕಡಿಮೆ ಮತ್ತು ಅನುಮೋದನೆಗಿಂತಲೂ ಹೆಚ್ಚು ಎರಡಕ್ಕೂ ಸಂಬಂಧಿಸಿದಂತೆ ಒಟ್ಟಾರೆ ಆಯವ್ಯಯ ವೆಚ್ಚ ಫಲಿತ/ವಾಸ್ತವ ವೆಚ್ಚವು ಎಷ್ಟರ ಮಟ್ಟಿಗೆ ಪ್ರತಿಬಿಂಬಿಸುತ್ತದೆ ಎಂಬುದನ್ನು ಅಳೆಯುತ್ತದೆ. 2023–24ರಲ್ಲಿ ಮೂಲ ಆಯವ್ಯಯ ಅವಕಾಶ ಮತ್ತು ಅದರ ವಾಸ್ತವ ಫಲಿತದ ವ್ಯತ್ಯಾಸ ಸ್ಥಿತಿಯನ್ನು **ಕೋಷ್ಟಕ–3.5**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.5: ಆಯವ್ಯಯ ಅಂದಾಜುಗಳಿಗೆ ಹೋಲಿಸಿದಂತೆ ಫಲಿತದಲ್ಲಿನ ವ್ಯತ್ಯಾಸ**

(₹ ಕೋಟಿಗಳಲ್ಲಿ)

| ವಿವರಣೆ | ಅನುಮೋದಿತ ಮೂಲ ಆಯವ್ಯಯ | ವಾಸ್ತವ ಫಲಿತ | ವಾಸ್ತವ ಮತ್ತು ಆಯವ್ಯಯ ಅಂದಾಜುಗಳ ನಡುವಿನ ವ್ಯತ್ಯಾಸ* | ವ್ಯತ್ಯಾಸದ ಶತಾಂಶ |
|---|---|---|---|---|
| **ರಾಜಸ್ವ** | 2,61,467.91 | 2,50,374.42 | (–)11,093.49 | (–)4.24 |
| **ಬಂಡವಾಳ** | 79,852.60 | 79,304.42 | (–)548.18 | (–)0.69 |
| **ಒಟ್ಟು** | **3,41,320.51** | **3,29,678.84** | **(–)11,641.67** | **(–)3.41** |

***ಆಕರ:*** *ಧನವಿನಿಯೋಗ ಲೆಕ್ಕಗಳು ಮತ್ತು ಆಯವ್ಯಯ ದಾಖಲೆಗಳು*

**ವಾಸ್ತವವು ಮೂಲ ಅವಕಾಶಕ್ಕಿಂತ ಹೆಚ್ಚಾಗಿರುವುದನ್ನು (+) ಚಿಹ್ನೆಯಿಂದ ಮತ್ತು ಮೂಲ ಅವಕಾಶಕ್ಕಿಂತ ಕಡಿಮೆಯಿರುವುದನ್ನು (–) ಚಿಹ್ನೆಯಿಂದ ಸೂಚಿಸಲಾಗಿದೆ.*

2023–24 ಸಾಲಿನ ಆಯವ್ಯಯ ಅಂದಾಜುಗಳು ಮತ್ತು ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದಂತೆ ಅನುದಾನವಾರು ಆಯವ್ಯಯ ಹಂಚಿಕೆ, ಫಲಿತ ಮತ್ತು ಫಲಿತದ ವಿಚಲನವನ್ನು **ಅನುಬಂಧ–3.3**ರಲ್ಲಿ ತೋರಿಸಲಾಗಿದೆ.

ರಾಜಸ್ವ ವಿಭಾಗದಲ್ಲಿ ಮೂಲ ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ (ಫಲಕದಲ್ಲಿನ ವಿಚಲನವು) ಶೇಕಡಾ (–)4.24ರಷ್ಟಿದೆ. ಇದು 25 ಅನುದಾನಗಳಲ್ಲಿ ಶೇಕಡಾ 0 ಮತ್ತು ± ಶೇಕಡಾ 25ರ ನಡುವಿನ ವಿಚಲನ ಮತ್ತು ಮೂರು ಅನುದಾನಗಳಲ್ಲಿ ± ಶೇಕಡಾ 25 ಮತ್ತು ± ಶೇಕಡಾ 50ರ ನಡುವಿನ ವಿಚಲನದಿಂದ ಉಂಟಾಗಿದೆ.

ಬಂಡವಾಳ ವಿಭಾಗದಲ್ಲಿ ಫಲಕದಲ್ಲಿನ ಈ ವಿಚಲನವು ಆಯವ್ಯಯ ಅಂದಾಜುಗಳಿಗೆ ಹೋಲಿಸಿದಂತೆ ಶೇಕಡಾ (–)0.69ರಷ್ಟಿದೆ. ಇದು 20 ಅನುದಾನಗಳಲ್ಲಿನ ಶೇಕಡಾ 0 ಇಂದ ± 25ರ ನಡುವೆ, ನಾಲ್ಕು ಅನುದಾನಗಳಲ್ಲಿನ ಶೇಕಡಾ ± 25 ಮತ್ತು ± 50ರ ನಡುವೆ ಮತ್ತು ಮೂರು ಅನುದಾನಗಳಲ್ಲಿನ ಶೇಕಡಾ ± 50 ಮತ್ತು ± 100 ನಡುವಿನ ವಿಚಲನದಿಂದ ಉಂಟಾಗಿದೆ.

#### 3.6.3.2 ವೆಚ್ಚ ಸಂಯೋಜನಾ ಫಲಿತ

ವೆಚ್ಚ ಸಂಯೋಜನಾ ಫಲಿತವು ಕಾರ್ಯನಿರ್ವಹಣಾ ಸಂದರ್ಭದಲ್ಲಿ ಮೂಲ ಆಯವ್ಯಯ ವರ್ಗಗಳ ನಡುವಿನ ಮರು ಹಂಚಿಕೆಗಳು ವೆಚ್ಚ ಸಂಯೋಜನೆಯಲ್ಲಿನ ವ್ಯತ್ಯಾಸಕ್ಕೆ ಯಾವ ಪ್ರಮಾಣದಲ್ಲಿ ಕೊಡುಗೆ ನೀಡಿದೆ ಎಂಬುದನ್ನು ಅಳೆಯುತ್ತದೆ. ಮೂಲ ಅವಕಾಶ ಮತ್ತು ವಾಸ್ತವ ಫಲಿತ ಮತ್ತು ಪರಿಷ್ಕೃತ ಅಂದಾಜುಗಳಿಂದ ಅದರ ವಿಚಲನದ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ–3.6**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.6: ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದಂತೆ ಫಲಿತರ ವಿಚಲನ**

**(₹ ಕೋಟಿಗಳಲ್ಲಿ)**

| ವಿವರ | ಮೂಲ ಅನುಮೋದಿತ ಆಯವ್ಯಯ ಅಂದಾಜು | ಪರಿಷ್ಕೃತ ಅಂದಾಜು | ವಾಸ್ತವ ಫಲಿತ | ಆಯವ್ಯಯ ಅಂದಾಜು ಮತ್ತು ಪರಿಷ್ಕೃತ ಅಂದಾಜುಗಳ ನಡುವಿನ ವ್ಯತ್ಯಾಸ | ವಾಸ್ತವ ಮತ್ತು ಪರಿಷ್ಕೃತ ಅಂದಾಜುಗಳ ನಡುವಿನ ವ್ಯತ್ಯಾಸ* |
|---|---|---|---|---|---|
| **ರಾಜಸ್ವ** | 2,61,467.91 | 2,40,734.72 | 2,50,374.42 | (–)20,733.19 | 9,639.70 |
| **ಬಂಡವಾಳ** | 79,852.60 | 78,855.21 | 79,304.42 | (–)997.39 | 449.21 |
| **ಒಟ್ಟು** | **3,41,320.51** | **3,19,589.93** | **3,29,678.84** | **(–)21,730.58** | **10,088.91** |

*ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಆಯವ್ಯಯ ದಾಖಲೆಗಳು*

**ಪರಿಷ್ಕೃತ ಅಂದಾಜುಗಳಿಗಿಂತ ವಾಸ್ತವದ ಹೆಚ್ಚಳವನ್ನು (+) ಚಿಹ್ನೆಯಿಂದ ಮತ್ತು ಪರಿಷ್ಕೃತ ಅಂದಾಜುಗಳಿಗಿಂತ ವಾಸ್ತವ ಕಡಿಮೆಯಿರುವುದನ್ನು (–) ಚಿಹ್ನೆಯಿಂದ ಸೂಚಿಸಲಾಗಿದೆ.*

2023–24ರಲ್ಲಿನ ಅನುದಾನವಾರು ಆಯವ್ಯಯ ಹಂಚಿಕೆ, ಫಲಿತ ಮತ್ತು ಫಲಿತದ ವಿಚಲನವನ್ನು ಆಯವ್ಯಯ ಅಂದಾಜು ಮತ್ತು ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದಂತೆ **ಅನುಬಂಧ–3.3**ರಲ್ಲಿ ನೀಡಲಾಗಿದೆ.

ರಾಜಸ್ವ ವಿಭಾಗದಲ್ಲಿ ಪರಿಷ್ಕೃತ ಅಂದಾಜುಗಳಿಗಿಂತ ವಾಸ್ತವದ ಫಲಿತದ ವಿಚಲನವು ಶೇಕಡಾ (–) ನಾಲ್ಕರಷ್ಟಿತ್ತು. ಇದು 26 ಅನುದಾನಗಳಲ್ಲಿನ ಶೇಕಡಾ 0 ಮತ್ತು ± 25ರನಡುವೆ ಮತ್ತು ಎರಡು ಅನುದಾನಗಳಲ್ಲಿನ ಶೇಕಡಾ ± 25ರಿಂದ ± 50 ನಡುವಿನ ವಿಚಲನದಿಂದ ಉಂಟಾಗಿದೆ.

ಬಂಡವಾಳ ವಿಭಾಗದಲ್ಲಿ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದಂತೆ ಫಲಿತದಲ್ಲಿನ ವಿಚಲನವು ಶೇಕಡಾ 0.57ರಷ್ಟಿತ್ತು. ಇದು 25 ಅನುದಾನಗಳಲ್ಲಿನ ಶೇಕಡಾ 0 ಮತ್ತು ± 25ರ ನಡುವಿನ, ಮತ್ತು ಎರಡು ಅನುದಾನದಲ್ಲಿನ ಶೇಕಡಾ ± 25 ಮತ್ತು ± 50 ನಡುವಿನ ವಿಚಲನದಿಂದ ಉಂಟಾಗಿದೆ.

## 3.7 ಧನವಿನಿಯೋಗದ ಲೆಕ್ಕಪರಿಶೋಧನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಧನವಿನಿಯೋಗದ ಲೆಕ್ಕಪರಿಶೋಧನೆಯು ವಿವಿಧ ಅನುದಾನಗಳ ಅಡಿಯಲ್ಲಿ ವಾಸ್ತವವಾಗಿ ಮಾಡಿದ ವೆಚ್ಚವು ಧನವಿನಿಯೋಗ ಕಾಯಿದೆಯ ಅಡಿಯಲ್ಲಿ ನೀಡಲಾದ ಅಧಿಕಾರಕ್ಕೆ ಅನುಗುಣವಾಗಿದೆಯೇ ಮತ್ತು ಸಂವಿಧಾನದ ನಿಬಂಧನೆಗಳ ಅಡಿಯಲ್ಲಿ *ಪ್ರಭೃತ*ಗೊಳಿಸಬೇಕಾದ ವೆಚ್ಚವನ್ನು (ಅನುಚ್ಛೇದ 202) *ಪ್ರಭೃತ*ಗೊಳಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳುತ್ತದೆ. ಮಾಡಿದ ವೆಚ್ಚವು ಕಾನೂನುಗಳ, ಸಂಬಂಧಿತ ನಿಯಮಗಳ, ನಿಬಂಧನೆಗಳ ಮತ್ತು ಸೂಚನೆಗಳಿಗೆ ಅನುಗುಣವಾಗಿದೆಯೇ ಎಂಬುದನ್ನೂ ಸಹ ಇದು ಖಚಿತಪಡಿಸುತ್ತದೆ.

### *3.7.1 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಸಮಗ್ರತೆ ಕುರಿತು ವ್ಯಾಖ್ಯಾನಗಳು*

#### 3.7.1.1 ಕಾರ್ಯಕಾರಿ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿರುವುದು

ಸಂವಿಧಾನದ ಅನುಚ್ಛೇದ 204 ಮತ್ತು 205ರ ಅಡಿಯಲ್ಲಿ ಧನವಿನಿಯೋಗ ಕಾಯಿದೆಗಳನ್ನು ಶಾಸಕಾಂಗವು ಅಂಗೀಕರಿಸದ ಹೊರತು ಭಾರತದ ಸಂವಿಧಾನದ ಅನುಚ್ಛೇದ 266(3) ನೇ ವಿಧಿಯು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವುದನ್ನು ನಿಷೇಧಿಸುತ್ತದೆ.

2023–24ನೇ ಸಾಲಿನ ಲೆಕ್ಕಪರಿಶೋಧನೆಯ ಸಮಯದಲ್ಲಿ, ಬಂಡವಾಳ/ ರಾಜಸ್ವ ವಿಭಾಗದ ಅಡಿಯಲ್ಲಿ 25 ಅನುದಾನಗಳನ್ನು ಒಳಗೊಂಡ ₹6,337.09 ಕೋಟಿಯನ್ನು (ಇದು ಕೇವಲ ವಿವರಣಾತ್ಮಕವಾಗಿದೆ), **(ಅನುಬಂಧ–3.4)** 142 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಲಾಗಿದೆ ಎಂದು ಗಮನಿಸಲಾಗಿದೆ. ಇದರಲ್ಲಿ ₹4,850.73 ಕೋಟಿ ಮೊತ್ತದ 116 ಆದೇಶಗಳನ್ನು ಪೂರಕ ಬೇಡಿಕೆಗಳ ಮೂಲಕ ಕ್ರಮಬದ್ಧಗೊಳಿಸಲಾಗಿದೆ, ₹1,486.36 ಕೋಟಿ ಮೊತ್ತದ ಒಳಗೊಂಡ ಉಳಿದ 26 ಆದೇಶಗಳನ್ನು ಕ್ರಮಬದ್ಧಗೊಳಿಸಲಾಗಿಲ್ಲ. ಆದಾಗ್ಯೂ, ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ರಾಜ್ಯದಪಾಲನ್ನು ಕಡ್ಡಾಯವಾಗಿ ಬಿಡುಗಡೆ ಮಾಡಬೇಕಾದ್ದರಿಂದ ಎರಡನೇ ಮತ್ತು ಅಂತಿಮ ಪೂರಕ ಬೇಡಿಕೆಗಳ ನಂತರ ಈ ಆದೇಶಗಳನ್ನು ಹೊರಡಿಸಲಾಗಿದೆ.

ಪಿಎಸಿ ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ಸಭೆ) ಕಾರ್ಯಕಾರಿ ಸೂಚನೆಗಳ ಮೂಲಕ ಹೆಚ್ಚುವರಿ ಮಂಜೂರಾತಿಯನ್ನು ತುರ್ತು ಪ್ರಕರಣಗಳಿಗೆ ಸೀಮಿತಗೊಳಿಸಬೇಕೆಂದು ಶಿಫಾರಸು ಮಾಡಿತ್ತು (ಜುಲೈ 2015). ಆದಾಗ್ಯೂ, ಈ ಹೆಚ್ಚುವರಿ ವೆಚ್ಚಗಳು ದಿನನಿತ್ಯದ ವಸ್ತುಗಳಾದ ಹಣಕಾಸಿನ ನೆರವು, ಸಹಾಯಧನಗಳು, ಸಣ್ಣಪುಟ್ಟ ಕೆಲಸಗಳು, ಇತರ ವೆಚ್ಚಗಳು, ಸಾಮಾನ್ಯ ವೆಚ್ಚಗಳು, ಕಟ್ಟಡ ವೆಚ್ಚಗಳು, ಸಾರಿಗೆ ವೆಚ್ಚಗಳು, ನಿರ್ಮಾಣ ಇತ್ಯಾದಿಗಳ ಮೇಲಿನ ವೆಚ್ಚಗಳು ಸೇರಿವೆ ಎಂದು ಗಮನಿಸಲಾಗಿದೆ. ಇದರ ಜೊತೆಗೆ, ಶಾಸಕಾಂಗದ ಅಧಿಕಾರವಿಲ್ಲದೆ ಮೊದಲು ವೆಚ್ಚವನ್ನು ಭರಿಸುವುದು ಮತ್ತು ನಂತರ ಪೂರಕ ಬೇಡಿಕೆಗಳಲ್ಲಿ ಅನುಮೋದನೆ ಪಡೆಯುವುದು ಮುಂದುವರಿಯುತ್ತಿರುವುದು ಮಾತ್ರವಲ್ಲದೆ, ಪಿಎಸಿಯ ಶಿಫಾರಸುಗಳ ಹೊರತಾಗಿಯೂ ಇದು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಎಂದು ಗಮನಿಸಲಾಯಿತು.

2019–20 ರಿಂದ 2023–24ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳ ವಿವರಗಳನ್ನು **ಕೋಷ್ಟಕ–3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.7: 2019–20 ರಿಂದ 2023–24ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳು**

(₹ ಕೋಟಿಗಳಲ್ಲಿ)

| ವರ್ಷ | ವ್ಯಾಪ್ತಿಗೊಳಪಟ್ಟ ಅನುದಾನಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| 2019–20 | 19 | 78 | 3,518.84 |
| 2020–21 | 10 | 36 | 5,281.70 |
| 2021–22 | 21 | 68 | 8,489.40 |
| 2022–23 | 21 | 147 | 10,948.60 |
| 2023–24 | 24 | 116 | 4,850.73 |

*ಆಕರ: ಧನವಿನಿಯೋಗ ಲೆಕ್ಕಗಳು*

2020–21 ವರ್ಷವನ್ನು ಹೊರತುಪಡಿಸಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತ ಬಿಡುಗಡೆಯಾದ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. 2023–24 ವರ್ಷವನ್ನು ಹೊರತುಪಡಿಸಿ ಬಿಡುಗಡೆಯಾದ ಮೊತ್ತವು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ಶಾಸಕಾಂಗದ ಅನುಮೋದನೆಯಿಲ್ಲದೆ ವೆಚ್ಚಕ್ಕಾಗಿ ಕಾರ್ಯನಿರ್ವಾಹಕ ಆದೇಶಗಳನ್ನು ನೀಡುವುದು ಸಾಂವಿಧಾನಿಕ ನಿಬಂಧನೆಗಳು ಮತ್ತು ಪಿಎಸಿಯ ಶಿಫಾರಸುಗಳನ್ನು ಉಲ್ಲಂಘಿಸುತ್ತದೆ.

ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುಷ್ಠಾನಕ್ಕಾಗಿ ಏಕ ನೋಡಲ್ ಏಜೆನ್ಸಿ (ಎಸ್ಎನ್ಎ)ಯ ಮಾದರಿಯಡಿಯಲ್ಲಿ, ಎಸ್ಎನ್ಎ ಅನುಷ್ಠಾನಕ್ಕಾಗಿ ಹೊರಡಿಸಲಾದ ಮಾರ್ಗಸೂಚಿಗಳ **ಕಂಡಿಕೆ–21**ರಲ್ಲಿ ಕಡ್ಡಾಯಗೊಳಿಸಿದಂತೆ ರಾಜ್ಯವು ಆಯವ್ಯಯದಲ್ಲಿ ಯಾವುದೇ ಹಂಚಿಕೆ ಮಾಡದಿದ್ದರೂ ಸಹ, ಅದು ಸ್ವೀಕರಿಸಿದ 21 ದಿನಗಳ ಒಳಗೆ ಎಸ್ಎನ್ಎ ಖಾತೆಗೆ ತನ್ನ ಖಾತೆಯಲ್ಲಿ ಸ್ವೀಕರಿಸಿದ ಕೇಂದ್ರ ಪಾಲನ್ನು ವರ್ಗಾಯಿಸಬೇಕಾಗುತ್ತದೆ, ಆದ್ದರಿಂದ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸುವುದು ಅನಿವಾರ್ಯವಾಗಿದೆ ಎಂದು ರಾಜ್ಯ ಸರ್ಕಾರವು (ಜನವರಿ 2025) ಉತ್ತರಿಸಿತು. ಆದಾಗ್ಯೂ, 2023–24ರಲ್ಲಿ ಹೊರಡಿಸಲಾದ 142 ಕಾರ್ಯನಿರ್ವಾಹಕ ಆದೇಶಗಳಲ್ಲಿ, ಕೇವಲ 48 ಪ್ರತಿಶತ ಆದೇಶಗಳು (₹3,025.28 ಕೋಟಿ) ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಮತ್ತು ಉಳಿದ ಶೇಕಡಾ 52 (₹3,311.81 ಕೋಟಿ) ಇತರ ವೆಚ್ಚಗಳಿಗೆ ಎಂದು ಗಮನಿಸಲಾಗಿದೆ. ಸಿಎಸ್ಎಸ್ ಹೊರತುಪಡಿಸಿ ಇತರ ವೆಚ್ಚಗಳನ್ನು ಭರಿಸುವ ಕಾರ್ಯನಿರ್ವಾಹಕ ಆದೇಶಗಳು ನಿಯಮಿತ ಸ್ವರೂಪದ್ದಾಗಿರುವುದರಿಂದ, ರಾಜ್ಯವು ಪಿಎಸಿಯ ಶಿಫಾರಸನ್ನು ಪಾಲಿಸಬೇಕು ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ವೆಚ್ಚಗಳಿಗೆ ಆದೇಶವನ್ನು ಹೊರಡಿಸಬೇಕು. ನಿರ್ಗಮನ ಸಮ್ಮೇಳನದಲ್ಲಿ ರಾಜ್ಯ ಸರ್ಕಾರವು ಸಿಎಸ್ಎಸ್‌ಗೆ ಹೆಚ್ಚುವರಿ ಆದೇಶಗಳನ್ನು ನೀಡುವುದು ಅನಿವಾರ್ಯ ಎಂದು ಪುನರುಚ್ಚರಿಸುತ್ತಾ ಸಿಎಸ್ಎಸ್‌ಗೆ ಹೊರತುಪಡಿಸಿ ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ಪರಿಶೀಲಿಸುವುದಾಗಿ ಹೇಳಿತು.

### 3.7.1.2. ಬಂಡವಾಳ ವೆಚ್ಚ ಮತ್ತು ರಾಜಸ್ವ ವೆಚ್ಚಗಳ ವಿಪರ್ಯಾಯ ವರ್ಗೀಕರಣ

ವಹಿವಾಟುಗಳನ್ನು ರಾಜಸ್ವ/ಬಂಡವಾಳಗಳ ನಡುವೆ ತಪ್ಪಾಗಿ ವರ್ಗೀಕರಿಸುವುದು ಸಂಬಂಧಿತ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಣ ನಿಯಮಗಳ ಅನ್ವಯದ ಕೊರತೆಯಿಂದ ಉಂಟಾಗುತ್ತದೆ. ರಾಜಸ್ವ ಮತ್ತು ಬಂಡವಾಳ ವೆಚ್ಚಗಳ ನಡುವಿನ ತಪ್ಪು ವರ್ಗೀಕರಣವು ರಾಜಸ್ವ ಲೆಕ್ಕ ಮತ್ತು ಹಣಕಾಸಿನ ಸೂಚಕವಾದ ರಾಜಸ್ವ ಹೆಚ್ಚಳ/ಕೊರತೆಯ ಮೇಲೆ ಪ್ರಭಾವ ಬೀರುತ್ತದೆ.

- 2023–24ರಲ್ಲಿ, ₹374.64 ಕೋಟಿ ಮೊತ್ತದ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚವೆಂದು ತೋರಿಸಲಾಗಿದೆ, ಆದರೆ ಕೆಳಗೆ ವಿವರಿಸಿದಂತೆ ಈ ವೆಚ್ಚವು ರಾಜಸ್ವ ಸ್ವರೂಪದ್ದಾಗಿತ್ತು.

| ಅನುದಾನ | ಲೆಕ್ಕಶೀರ್ಷಿಕೆ | ವೆಚ್ಚದ ಸ್ವರೂಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 07 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 4515–00–103–5–01–140 ಸಣ್ಣ ಕಾಮಗಾರಿಗಳು | ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ ಹೈ ಮಾಸ್ಟ್ ವಿದ್ಯುತ್ ದೀಪಗಳ ಅಳವಡಿಕೆ | 1.96 |
| 08 ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ | 4406–01–101–0–02–139 ಪ್ರಧಾನ ಕಾಮಗಾರಿಗಳು | ವಿಜಯನಗರ ಅರಣ್ಯ ವಿಭಾಗದಲ್ಲಿ ಅರಣ್ಯೀಕರಣ ಕಾರ್ಯಗಳು. | 234.88 |
| 21 ಜಲ ಸಂಪನ್ಮೂಲ | 4711–01–103–1–00–140 ಸಣ್ಣ ಕಾಮಗಾರಿಗಳು | ಹಳಿಯಾಳ ತಾಲ್ಲೂಕಿನ ಹರವಳ್ಳಿ ಕೆರೆಯ ಬಲದಂಡೆ ಕಾಲುವೆಗೆ ರಕ್ಷಣಾ ಗೋಡೆಯ ನಿರ್ಮಾಣ. | 134.80 |
| | 4701–80–800–0–03–182 ದುರಸ್ತಿ ಮತ್ತು ಸಾಗಾಣಿಕೆ | ಟಿಡಿಎಸ್, ಇ–ಫೈಲಿಂಗ್ ಶುಲ್ಕಗಳು, ಬಿಡಿಭಾಗಗಳ ಪೂರೈಕೆ ಮತ್ತು ಕೇಂದ್ರೀಯ ಯಾಂತ್ರಿಕ ಸಂಸ್ಥೆಯಲ್ಲಿ ನಡೆಸುವ ಕೆಲಸಕ್ಕೆ ಕಾರ್ಮಿಕರಿಗೆ ವೇತನ ಇತ್ಯಾದಿ. | 3.00 |
| ಒಟ್ಟು | | | **374.64** |

- ಅದೇ ರೀತಿ, ₹0.01 ಕೋಟಿ ಮೊತ್ತದ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚ ಎಂದು ವರ್ಗೀಕರಿಸಲಾಗಿದೆ.

| ಅನುದಾನ | ಲೆಕ್ಕಶೀರ್ಷಿಕೆ | ವೆಚ್ಚದ ಸ್ವರೂಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 08 ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ | 2406–02–110–0–01–140 ಸಣ್ಣ ಕಾಮಗಾರಿಗಳು | ರಂಗನತಿಟ್ಟು ಪಕ್ಷಿಧಾಮಕ್ಕೆ ವಿದ್ಯುತ್ ಚಾಲಿತ ವಾಹನಗಳ ಖರೀದಿ | 0.01 |

- ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–2ರ (ಐಜಿಎಎಸ್) ಅನ್ವಯ, ಅನುದಾನ ನೀಡುವವರು ಅನುದಾನಿತರಿಗೆ ವಿತರಿಸಿದ ಅನುದಾನವನ್ನು ಯಾವುದೇ ಉದ್ದೇಶಕ್ಕಾಗಿ ವಿತರಿಸಿದ್ದರೂ ಅನುದಾನ ನೀಡಿದವರ ಹಣಕಾಸು ವಿವರಣದಲ್ಲಿ ರಾಜಸ್ವ ವೆಚ್ಚ ಎಂದು ಲೆಕ್ಕ ಹಾಕಬೇಕಾಗುತ್ತದೆ. ಆದಾಗ್ಯೂ, 2023–24ರಲ್ಲಿ ಅನುದಾನ ರೂಪದಲ್ಲಿದ್ದ ₹129.65 ಕೋಟಿಗಳ ರಾಜಸ್ವವನ್ನು ಬಂಡವಾಳ ವೆಚ್ಚ ಎಂದು ಪರಿಗಣಿಸಲಾಯಿತು, ಇದು ಐಜಿಎಎಸ್–2ಕ್ಕೆ ವ್ಯತಿರಿಕ್ತವಾಗಿತ್ತು.

| ಅನುದಾನ ಸಂಖ್ಯೆ | ಲೆಕ್ಕ ಶೀರ್ಷಿಕೆ | ಸಂಸ್ಥೆ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 6 | 5051–80–001–0–01–132 | ಕರ್ನಾಟಕ ಸಮುದ್ರ ಮಂಡಳಿ | 15.00 |
| 7 | 4515–00–101–0–01–132 | ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ | 5.00 |
| 22 | 4210–03–105–1–11–386 | ಜಯದೇವ ಹೃದ್ರೋಗ ಸಂಸ್ಥೆ | 37.15 |
| 26 | 4515–00–103–0–02 | ಬಯಲುಸೀಮೆ ಅಭಿವೃದ್ಧಿ ಮಂಡಳಿ | 39.50 |
| | 4515–00–103–0–03 | ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ | 33.00 |
| ಒಟ್ಟು | | | **129.65** |

2025–26ರ ಹಣಕಾಸು ವರ್ಷದಲ್ಲಿ ತಪ್ಪು ವರ್ಗೀಕರಣವನ್ನು ತಪ್ಪಿಸಲು ರಾಜಸ್ವ ಮತ್ತು ಬಂಡವಾಳ ವೆಚ್ಚದ ಅಡಿಯಲ್ಲಿ ಬರುವ ವಸ್ತು ಶೀರ್ಷಿಕೆಗಳನ್ನು ಸೂಚಿಸುವ ಸೂಚನೆಗಳನ್ನು ಎಲ್ಲಾ ಇಲಾಖೆಗಳಿಗೆ (ಅಕ್ಟೋಬರ್ 2024) ನೀಡಲಾಗಿದೆ ಎಂದು ರಾಜ್ಯ ಸರ್ಕಾರ ಉತ್ತರಿಸಿದೆ (ಜನವರಿ 2025). ಇದಲ್ಲದೆ, ಕರ್ನಾಟಕ ಸಮುದ್ರ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಜಯದೇವ ಹೃದ್ರೋಗ ಸಂಸ್ಥೆ ಮತ್ತು ಕರ್ನಾಟಕ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವು ಸರ್ಕಾರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಮತ್ತು ಆಯಾ ಪ್ರದೇಶಗಳಲ್ಲಿ ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ವಿಸ್ತೃತ ಭಾಗಗಳಾಗಿವೆ ಮತ್ತು ಆದ್ದರಿಂದ, ಅವುಗಳ ಬಂಡವಾಳ ವೆಚ್ಚವನ್ನು ಸಹಾಯಾನುದಾನ ಪರಿಗಣಿಸಲಾಗುವುದಿಲ್ಲ ಎಂದು ಅದು ಉತ್ತರಿಸಿದೆ. ಇದರ ಜೊತೆಗೆ, ಬಂಡವಾಳ ಸ್ವತ್ತುಗಳ ಸೃಷ್ಟಿಗೆ ನೀಡುವ ಅನುದಾನವನ್ನು ಬಂಡವಾಳ ವೆಚ್ಚವೆಂದು ಪರಿಗಣಿಸಬೇಕು ಎಂದು ಅದು ಹೇಳಿದೆ. ಆದಾಗ್ಯೂ, ಐಜಿಎಎಸ್ 2ರ ಪ್ರಕಾರ, ಕೆಲಸದ ಪ್ರಕಾರವನ್ನು ಲೆಕ್ಕಿಸದೆ, ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಏಜೆನ್ಸಿಗಳು, ಸಂಸ್ಥೆಗಳು ಮತ್ತು ವಿಭಿನ್ನ ಕಾನೂನು ಘಟಕವನ್ನು ಹೊಂದಿರುವ ಸಂಸ್ಥೆಗಳಿಗೆ ನೀಡುವ ಸಹಾಯಾನುದಾನವನ್ನು ರಾಜಸ್ವ ವೆಚ್ಚವೆಂದು ಪರಿಗಣಿಸಬೇಕು. ಆದ್ದರಿಂದ, ಉತ್ತರವು ಸ್ವೀಕಾರಾರ್ಹವಲ್ಲ.

ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಸಲಹಾ ಮಂಡಳಿಯು ಪ್ರಸ್ತಾಪಿಸಿದ ಸಂಕಲ್ಪನಾ ಪತ್ರಕ್ಕೆ ಪ್ರತಿಯಾಗಿ, ಬಂಡವಾಳ ಸ್ವತ್ತುಗಳ ಸೃಷ್ಟಿಗೆ ಸಹಾಯಧನವನ್ನು ಬಂಡವಾಳ ವೆಚ್ಚವೆಂದು ಪರಿಗಣಿಸಲು ಸೂಕ್ತ ಸಮರ್ಥನೆಯೊಂದಿಗೆ ಆರ್ಥಿಕ ಇಲಾಖೆಯು ವಿವರವಾದ ಪ್ರಸ್ತಾವನೆಯನ್ನು ಒದಗಿಸಲಿದೆ ಎಂದು ಹೇಳಲಾಯಿತು (ಜನವರಿ 2025).

#### 3.7.1.3 ಅನವಶ್ಯಕ/ಅಧಿಕ/ಅಪರ್ಯಾಪ್ತ ಪೂರಕ ಅನುದಾನಗಳು

ನೀಡಲಾದ ಪುನರ್ವಿನಿಯೋಗ ಆದೇಶಗಳನ್ನು ಪರಿಗಣಿಸದಿರುವ ಪರೀಕ್ಷಾ–ತನಿಖೆ ನಡೆಸಿದ ಪೂರಕ ಅವಕಾಶಗಳ ಪ್ರಕರಣಗಳು **ನಕ್ಷೆ–3.3**ರಲ್ಲಿ ವಿವರಿಸಿದಂತೆ ಅನಗತ್ಯ/ಅತಿಯಾದ/ಅಸಮರ್ಪಕ ಅವಕಾಶಗಳ ನಿದರ್ಶನಗಳನ್ನು (**ಅನುಬಂಧ–3.5, ಅನುಬಂಧ–3.6 ಮತ್ತು ಅನುಬಂಧ–3.7**) ತೋರಿಸಿತು.

**ನಕ್ಷೆ–3.3: ಅನವಶ್ಯಕ/ಅಧಿಕ/ಅಪರ್ಯಾಪ್ತ ಪೂರಕ ಅನುದಾನಗಳು***

(₹ ಕೋಟಿಗಳಲ್ಲಿ)




*ಆಕರ: ಅನುದಾನ ವಹಿ*

** ಅನಗತ್ಯ/ಅಧಿಕ/ಅಪರ್ಯಾಪ್ತ ಪೂರಕ ಅವಕಾಶಗಳನ್ನು ಲೆಕ್ಕ ಹಾಕಲು ಪುನರ್ವಿನಿಯೋಗ ಆದೇಶಗಳನ್ನು ಪರಿಗಣಿಸಿಲ್ಲ*

- ಮೇಲಿನವುಗಳಿಂದ, ಮೂಲ ಅವಕಾಶಗಳು ವೆಚ್ಚವನ್ನು ಭರಿಸಲು ಪರ್ಯಾಪ್ತವಾಗಿದ್ದರಿಂದ, ಪೂರಕ ಅವಕಾಶಗಳು ಅನಗತ್ಯ/ಅತಿಯಾದ ನಿದರ್ಶನಗಳಾಗಿವೆ ಎಂದು ಗಮನಿಸಲಾಗಿದೆ. ಇದಲ್ಲದೆ, ಕೆಲವು ಲೆಕ್ಕಪತ್ರ ಶೀರ್ಷಿಕೆಗಳಡಿಯಲ್ಲಿ, ಪೂರಕ ಅವಕಾಶ ಒಳಗೊಂಡಂತೆ ಒಟ್ಟು ಅವಕಾಶಗಳು ಸಾಕಷ್ಟಿಲ್ಲದ ಕಾರಣ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು ಎಂದು ಕೂಡ ಗಮನಿಸಲಾಯಿತು.

### 3.7.1.4 ನಿಧಿಗಳ ಪುನರ್ವಿನಿಯೋಗ

ಅನುದಾನ ಅಥವಾ ವಿನಿಯೋಗವನ್ನು ಕಾರ್ಯಕಾರಿ/ಪ್ರಧಾನ/ಉಪ–ಪ್ರಧಾನ/ವಿವರವಾದ ಶೀರ್ಷಿಕೆ/ ಉದ್ದೇಶ ಶೀರ್ಷಿಕೆ ಮೂಲಕ ವಿತರಿಸಲಾಗುತ್ತದೆ. ಸಕ್ಷಮ ಕಾರ್ಯನಿರ್ವಾಹಕ ಪ್ರಾಧಿಕಾರವು ಅಂತಹ ಅನುದಾನ ಅಥವಾ ವಿನಿಯೋಗವು ಸಂಬಂಧಿಸಿದ ಆರ್ಥಿಕ ವರ್ಷದ ಮುಕ್ತಾಯದ ಮೊದಲು ಅನುದಾನ ಅಥವಾ ವಿನಿಯೋಗದೊಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ನಿಧಿಯ ಪುನರ್ವಿನಿಯೋಗ ಅನುಮೋದಿಸಬಹುದು. ಪುನರ್ವಿನಿಯೋಗ ಎಂದರೆ, ಒಂದು ಸಕ್ಷಮ ಅಧಿಕಾರಿಯು ಅನುದಾನ/ ವಿನಿಯೋಗದ ಒಂದು ಘಟಕದಲ್ಲಿನ ಉಳಿತಾಯದ ಹೆಚ್ಚುವರಿ ವೆಚ್ಚವನ್ನು ಮತ್ತೊಂದು ಘಟಕದ ಅಡಿಯಲ್ಲಿ ಅದೇ ಅನುದಾನದ ಪುರಸ್ಕೃತ ಅಥವಾ ಪ್ರಭೃತ ಮಾಡಿದ ವಿನಿಯೋಗದೊಳಗೆ ಬಳಸುವುದು. ಹಣದ ಅವಕಾಶವನ್ನು ವರ್ಗಾಯಿಸುವ ಘಟಕದಲ್ಲಿ ವಿನಿಯೋಗವನ್ನು ಪೂರ್ಣವಾಗಿ ಬಳಸಲಾಗುವುದಿಲ್ಲ ಅಥವಾ ವಿನಿಯೋಗದ ಘಟಕದಲ್ಲಿ ಅದು ಮುಂದೆ ಬಳಕೆಯಾಗದೆ ಉಳಿಯುತ್ತದೆ ಎಂದು ತಿಳಿದಾಗ ಅಥವಾ ನಿರೀಕ್ಷಿಸಿದಾಗ ಮಾತ್ರ ನಿಧಿಯ ಪುನರ್ವಿನಿಯೋಗವನ್ನು ಮಾಡಬೇಕು.

2022–23ರ ಅವಧಿಯಲ್ಲಿ ನೀಡಲಾದ ₹40,501.09 ಕೋಟಿಗಳ 941 ಪುನರ್ವಿನಿಯೋಗ ಆದೇಶಗಳಿಗೆ ಪ್ರತಿಯಾಗಿ. 2023–24ರ ಅವಧಿಯಲ್ಲಿ ₹17,326.43 ಕೋಟಿಗಳ 776 ಪುನರ್ವಿನಿಯೋಗ ಆದೇಶಗಳನ್ನು ಅಂಗೀಕರಿಸಲಾಗಿದೆ, ಆದೇಶಗಳು/ಪ್ರಕರಣಗಳ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ.

**(ಎ) ನಿಧಿಗಳ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುನರ್ವಿನಿಯೋಗ**

2023–24ರ ಅವಧಿಯಲ್ಲಿ ನಿಧಿಗಳ ಪುನರ್ವಿನಿಯೋಗದ ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ, ಕೆಳಗೆ ವಿವರಿಸಿದಂತೆ ಹಣದ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುನರ್ವಿನಿಯೋಗ ದ ಪ್ರಕರಣಗಳಿರುವುದನ್ನು (**ಅನುಬಂಧ–3.8**) ಗಮನಿಸಲಾಯಿತು.

- ಆರು ಅನುದಾನಗಳಡಿಯ 09 ಪ್ರಕರಣಗಳಲ್ಲಿ, ಪುನರ್ವಿನಿಯೋಗದ ಮೂಲಕ (₹ಐದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಒದಗಿಸಿದ ₹936.66 ಕೋಟಿಗಳ ಹೆಚ್ಚುವರಿ ನಿಧಿ ಅನಗತ್ಯವೆಂದು ಸಾಬೀತಾಯಿತು, ಏಕೆಂದರೆ ಅದು ₹1,355.73 ಕೋಟಿಗಳಷ್ಟು ಬಳಕೆಯಾಗದ ಅವಕಾಶದಲ್ಲಿ ಪರಿಣಮಿಸಿತು (₹ ಐದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು).
- 09 ಅನುದಾನಗಳಡಿಯ 17 ಪ್ರಕರಣಗಳಲ್ಲಿ, ಪುನರ್ವಿನಿಯೋಗದ ಮೂಲಕ (₹10 ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಒದಗಿಸಿದ ₹4,279.99 ಕೋಟಿಗಳ ಹೆಚ್ಚುವರಿ ನಿಧಿ ಅಧಿಕವೆಂದು ಕಂಡುಬಂದಿತು, ₹1,995.52 ಕೋಟಿಗಳಷ್ಟು ಬಳಕೆಯಾಗದ ಅವಕಾಶದಲ್ಲಿ ಪರಿಣಮಿಸಿತು (₹ 10 ಕೋಟಿಗಿಂತ ಹೆಚ್ಚಿನ ಪ್ರಕರಣಗಳು).
- ಮೂರು ಅನುದಾನಗಳ ಅಡಿಯ 09 ಪ್ರಕರಣಗಳಲ್ಲಿ, ಪುನರ್ವಿನಿಯೋಗ ಮೂಲಕ ಒದಗಿಸಲಾದ ₹87.41 ಕೋಟಿ ಹೆಚ್ಚುವರಿ ನಿಧಿಗಳು (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಕಡಿಮೆಯಾಗಿದ್ದು, ಏಕೆಂದರೆ ಇದು ₹411.76 ಕೋಟಿಗಳ ಹೆಚ್ಚುವರಿ ವೆಚ್ಚದಲ್ಲಿ (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪರಿಣಮಿಸಿತು.
- ಎರಡು ಅನುದಾನಗಳ ಎರಡು ಸಂದರ್ಭಗಳಲ್ಲಿ, ಮೂಲ ಅವಕಾಶವು ಸಾಕಷ್ಟಿಲ್ಲದಿದ್ದರು ಪುನರ್ವಿನಿಯೋಗದ ಮೂಲಕ ₹6.49 ಕೋಟಿಯನ್ನು ವಿವೇಚನಾರಹಿತವಾಗಿ ಹಿಂಪಡೆಯಲಾದರಿಂದ (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು), ₹98.00 ಕೋಟಿಯ ಹೆಚ್ಚುವರಿ ವೆಚ್ಚದಲ್ಲಿ (₹ ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪರಿಣಮಿಸಿತು.

ಅನಗತ್ಯ/ಅತಿಯಾದ ನಿಧಿಯ ಪುನರ್ವಿನಿಯೋಗವನ್ನು ತಪ್ಪಿಸಲು, ಎಲ್ಲಾ ಇಲಾಖೆಗಳ ಮುಖ್ಯಸ್ಥರು, ತಾವು ಹೊರಡಿಸಿದ ಸೂಚನೆಗಳನ್ನು ಪಾಲಿಸುತ್ತಾರೆಯೇ ಎಂದು ಆರ್ಥಿಕ ಇಲಾಖೆ ಮೇಲ್ವಿಚಾರಣೆ ಮಾಡಬೇಕು.

**(ಬಿ) ದೋಷಪೂರಿತ ಪುನರ್ವಿನಿಯೋಗ**

ಕರ್ನಾಟಕ ಹಣಕಾಸು ಸಂಹಿತೆಯ ಅನುಚ್ಛೇದ 309, 312 ಮತ್ತು 315(a) ಅನ್ವಯ ಶಾಸಕಾಂಗವು ಅನುಮೋದನೆ ಮಾಡಿದ ಒಂದು ಅನುದಾನದಿಂದ ಮತ್ತೊಂದು ಅನುದಾನಕ್ಕೆ, ಪುರಸ್ಕೃತ ಬಾಬ್ತುಗಳಿಂದ ಪ್ರಭೃತ ಬಾಬ್ತುಗಳಿಗೆ ಬಂಡವಾಳ ಶೀರ್ಷಿಕೆಯಿಂದ ರಾಜಸ್ವ ಶೀರ್ಷಿಕೆ ಹಾಗೂ ವಿಪರ್ಯಾಯವಾಗಿ, ಪುನರ್ವಿನಿಯೋಗ ಪಟ್ಟಿಯು ಸ್ವಯಂ ಸಮತೋಲಿತವಾಗಿಲ್ಲದಿದ್ದರೆ ಮತ್ತು ನಿಗದಿತ ನಮೂನೆಯಲ್ಲಿಲ್ಲದಿದ್ದರೆ (ನಮೂನೆ–22ಎ) ಪುನರ್ವಿನಿಯೋಗಕ್ಕೆ ಅವಕಾಶವಿರುವುದಿಲ್ಲ. 2023–24ರಲ್ಲಿ ಆಯವ್ಯಯ ಅವಕಾಶಗಳಲ್ಲಿನ ವ್ಯತ್ಯಾಸ, ನಮೂನೆ–22ಎ ಸ್ವಯಂ ಸಮತೋಲಿತವಾಗಿಲ್ಲದುದು ಮತ್ತು ಆಯವ್ಯಯದ ಕೊರತೆಯ ಕಾರಣದಿಂದ ₹8.52 ಕೋಟಿಗಳನ್ನು ಒಳಗೊಂಡ 42 ಪುನರ್ವಿನಿಯೋಗ ಆದೇಶಗಳನ್ನು ಮಹಾಲೇಖಾಪಾಲರು (ಲೆ ಮತ್ತು ಹ) ಒಪ್ಪಿಕೊಂಡಿರಲಿಲ್ಲ (**ಅನುಬಂಧ–3.9**).

ರಾಜ್ಯ ಸರ್ಕಾರವು (ಜನವರಿ 2025) ಆರ್ಥಿಕ ಇಲಾಖೆಯು ಕ್ಷೇತ್ರ ಇಲಾಖೆಗಳಿಗೆ ಪುನರ್ವಿನಿಯೋಗ ಆದೇಶಗಳನ್ನು ನೀಡುವ ಬಗ್ಗೆ ಮಾರ್ಗದರ್ಶನ ಮತ್ತು ತರಬೇತಿ ನೀಡಿದ ಕಾರಣದಿಂದ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ತಾಂತ್ರಿಕ ದೋಷಗಳು ಗಣನೀಯವಾಗಿ ಕಡಿಮೆಯಾಗಿದೆ ಎಂದು ಉತ್ತರಿಸಿತು. ದೋಷಯುಕ್ತ ಪುನರ್ವಿನಿಯೋಗ ಆದೇಶಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದರೂ, ಖಜಾನೆಯಿಂದ ದೋಷಯುಕ್ತ ಪುನರ್ವಿನಿಯೋಗ ಆದೇಶಗಳನ್ನು ಸ್ವೀಕರಿಸುವುದರಿಂದ ಖಜಾನೆ ಮತ್ತು ಲೆಕ್ಕಪತ್ರ ಅಂಕಿಅಂಶಗಳ ನಡುವೆ ವ್ಯತ್ಯಾಸ ಉಂಟಾಗುತ್ತದೆ.

ದೋಶಪೂರಿತ ಪುನರ್ವಿನಿಯೋಗಗಳು ಸಂಭವಿಸುವುದನ್ನು ತಪ್ಪಿಸಲು ಆರ್ಥಿಕ ಇಲಾಖೆಯಿಂದ ನಿರ್ವಹಿಸಲ್ಪಡುವ ಪುನರ್ವಿನಿಯೋಗ ಮಾಡ್ಯೂಲ್ ಅನ್ನು ಇತರ ಎಲ್ಲಾ ಇಲಾಖೆಗಳು ತಮ್ಮ ಪುನರ್ವಿನಿಯೋಗ ಆದೇಶಗಳನ್ನು ನೀಡಲು ಸುಲಭ ಲಭ್ಯ ಮಾಡಲಾಗುವುದು ಎಂದು ನಿರ್ಗಮನ ಸಮ್ಮೇಳನದಲ್ಲಿ ಆರ್ಥಿಕ ಇಲಾಖೆಯು ಹೇಳಿತು (ಜನವರಿ 2025).

### 3.7.1.5 ಹಂಚಿಕೆ/ಭಾರಿ ಉಳಿತಾಯಗಳು/ಅಧ್ಯರ್ಪಣೆಗಳಿಗೆ ಪ್ರತಿಯಾಗಿ ಬಳಕೆ ಮಾಡದ ಅವಕಾಶಗಳು

**(ಎ) 2023–24ರಲ್ಲಿ ಭಾರಿ ಉಳಿತಾಯ (₹500 ಕೋಟಿ ಮತ್ತು ಅದಕ್ಕಿಂತ ಹೆಚ್ಚು) ಹೊಂದಿರುವ ಅನುದಾನಗಳು**

10 ಅನುದಾನಗಳ/ವಿನಿಯೋಗಗಳಡಿಯಲ್ಲಿ 11 ಪ್ರಕರಣಗಳಲ್ಲಿ ಪ್ರತಿಯೊಂದು ₹500 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಒಟ್ಟು ₹18,904.64 ಕೋಟಿಗಳ ಮೊತ್ತದ ಅವಕಾಶವು ಬಳಕೆಯಾಗದೆ ಉಳಿದಿತ್ತು. **ಅನುಬಂಧ–3.10**ರಲ್ಲಿ ಸೂಚಿಸಿದಂತೆ ರಾಜಸ್ವ *ಪ್ರಭೃತ* ಅಡಿಯಲ್ಲಿ ಸಾಲ ಮರುಪಾವತಿ ಮತ್ತು ರಾಜಸ್ವ ಪುರಸ್ಕೃತದ ಅಡಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ನಗರಾಭಿವೃದ್ಧಿ ಮತ್ತು ವಸತಿ ಮತ್ತು ಶಿಕ್ಷಣ ಇಲಾಖೆಗಳಡಿಯಲ್ಲಿ ₹2,000 ಕೋಟಿಗೂ ಹೆಚ್ಚು ಮೊತ್ತದ ಅವಕಾಶ ಬಳಕೆಯಾಗದೆ ಉಳಿದಿತ್ತು.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 264ರ ಪ್ರಕಾರ, ನಿಯಂತ್ರಣಾಧಿಕಾರಿಗಳು ನಿರೀಕ್ಷಿಸಿದ ಎಲ್ಲಾ ಉಳಿಕೆಗಳನ್ನು ಸಂಪೂರ್ಣ ವಿವರ ಮತ್ತು ಕಾರಣಗಳೊಂದಿಗೆ ಉಳಿತಾಯ ನಿರೀಕ್ಷಿಸಿದ ತಕ್ಷಣವೇ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಆದಾಗ್ಯೂ ಇಲಾಖೆಗಳು ಕಾರಣಗಳನ್ನು ಸೂಕ್ತವಾಗಿ ವಿವರಿಸಿಲ್ಲ ಅಥವಾ ಒದಗಿಸಿಲ್ಲ ಎಂಬುದನ್ನು ಗಮನಿಸಲಾಯಿತು.

2023–24ರಲ್ಲಿ ಒಟ್ಟು ಉಳಿತಾಯದ ಜೊತೆಗೆ ಬಳಕೆಯ ಶೇಕಡಾವಾರು ಪ್ರಮಾಣದಲ್ಲಿ ಗುಂಪು ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ–3.11** ಮತ್ತು **ನಕ್ಷೆ–3.4**ರಲ್ಲಿ ತೋರಿಸಲಾಗಿದೆ.

**ನಕ್ಷೆ–3.4: ಒಟ್ಟು ಉಳಿತಾಯಗಳ ಜೊತೆಗೆ ಬಳಕೆಯ ಶೇಕಡಾವಾರು ಪ್ರಮಾಣದಲ್ಲಿ ಗುಂಪು ಮಾಡಲಾದ ಅನುದಾನ/ವಿನಿಯೋಗಗಳ ಸಂಖ್ಯೆಯ ವಿತರಣೆ**




*ಆಕರ: ಧನವಿನಿಯೋಗ ಲೆಕ್ಕಗಳು*

* *28 ಅನುದಾನಗಳಲ್ಲಿ ಹೆಚ್ಚುವರಿಯಿರುವ ಆರು ಅನುದಾನಗಳನ್ನು ನಕ್ಷೆಯಲ್ಲಿ ತೋರಿಸಲಾಗಿಲ್ಲ*

28 ಅನುದಾನಗಳಲ್ಲಿ 22 ಅನುದಾನಗಳ ವಿನಿಯೋಗವು ಅದರ ಹಂಚಿಕೆಯ ಶೇಕಡಾ 70ಕ್ಕಿಂತ ಹೆಚ್ಚು ಬಳಸಿಕೊಂಡಿರುವುದನ್ನು ನಾವು ಮೇಲಿನ **ನಕ್ಷೆ–3.4** ರಿಂದ ಗಮನಿಸಬಹುದು. ಈ 22 ಅನುದಾನಗಳಲ್ಲಿ,

15 ಅನುದಾನಗಳು ಅದರ ಹಂಚಿಕೆಯ ಶೇಕಡಾ 90ಕ್ಕಿಂತ ಹೆಚ್ಚು ಬಳಸಿಕೊಂಡಿವೆ. 2023–24ರಲ್ಲಿ, ಒಟ್ಟಾರೆ ₹22,114.08 ಕೋಟಿ ಉಳಿತಾಯವಾಗಿದೆ. ಸಮಯಕ್ಕೆ ಸರಿಯಾಗಿ ಅಧ್ಯರ್ಪಿಸಬೇಕಾದ ಉಳಿತಾಯವನ್ನು ಉಳಿಸಿಕೊಳ್ಳುವ ಮೂಲಕ ಯಾವುದೇ ಉದ್ದೇಶವನ್ನು ಪೂರೈಸಲಾಗಲಿಲ್ಲ. 2023–24ರ ಅವಧಿಯಲ್ಲಿ ಅಧ್ಯರ್ಪಿಸಬೇಕಾದ ಉಳಿತಾಯದ ವಿಶ್ಲೇಷಣೆಯ ಅವಲೋಕನವನ್ನು ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

**(ಬಿ) ಉಳಿತಾಯಗಳ ಅಧ್ಯರ್ಪಣೆ**

ಸಾಮಾನ್ಯ ಹಣಕಾಸು ನಿಯಮಗಳು 2017ರ ನಿಯಮ 66(1)ರ ಅನ್ವಯ ಇಲಾಖೆಗಳು ತಮ್ಮ ನಿಯಂತ್ರಣದಲ್ಲಿರುವ ಅನುದಾನ/ವಿನಿಯೋಗಗಳಲ್ಲಿ ಗಮನಿಸಲಾದ ಎಲ್ಲಾ ನಿರೀಕ್ಷಿತ ವೆಚ್ಚ ಮಾಡಲಾಗದ ಅವಕಾಶಗಳನ್ನು ನಿಗದಿತ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಅಧ್ಯರ್ಪಿಸಬೇಕಾಗುತ್ತದೆ. 2023–24ರ ಅವಧಿಯಲ್ಲಿ ₹19,262.62 ಕೋಟಿ ಒಟ್ಟು ಬಳಕೆ ಮಾಡದ ಅವಕಾಶವಿದ್ದು, ಅದು ಒಟ್ಟು ಅವಕಾಶದ ಶೇಕಡಾ 5.52ರಷ್ಟಿತ್ತು. ಇದು ₹22,114.08 ಕೋಟಿ ಉಳಿತಾಯವನ್ನು ₹2,851.46 ಕೋಟಿ ಅಧಿಕದ ಜೊತೆ ಸರಿದೂಗಿಸಿದರ ಕಾರಣದಿಂದಾಗಿತ್ತು. 2023–24ರ ಅವಧಿಯಲ್ಲಿ ಅಧ್ಯರ್ಪಣೆ ಮಾಡಿದ ಮೊತ್ತವು ₹19,376.87 ಕೋಟಿಯಾಗಿತ್ತು.

ಅನುದಾನವಾರು ವೆಚ್ಚ ಮಾಡಲಾಗದ ಅವಕಾಶಗಳ ವಿಶ್ಲೇಷಣೆಯನ್ನು ಕೆಳಗೆ ವಿವರಿಸಲಾಗಿದೆ:

- ನಾಲ್ಕು ಅನುದಾನ/ವಿನಿಯೋಗಗಳ 06 ಪ್ರಕರಣಗಳಲ್ಲಿ ಒಟ್ಟು ₹45.58 ಕೋಟಿ ಮೊತ್ತದ ಬಳಕೆ ಮಾಡದ ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ–3.12**). ಈ ಉಳಿತಾಯ/ಬಳಕೆ ಮಾಡದ ಅವಕಾಶವು ಆಯವ್ಯಯ ಅಂದಾಜುಗಳಿಗೆ ಪ್ರತಿಯಾಗಿವೆ ಮತ್ತು ಅವು ವಾಸ್ತವಿಕ ಬಿಡುಗಡೆಗಳಾಗಿರಲಿಲ್ಲ. ಈ ಅನುದಾನಗಳಿಗೆ ಪ್ರತಿಯಾಗಿ ವಾಸ್ತವಿಕ ಬಿಡುಗಡೆಯನ್ನು ಲೆಕ್ಕಪರಿಶೋಧನೆಯಿಂದ ಖಚಿತ ಪಡಿಸಿಕೊಳ್ಳಲು ಸಾಧ್ಯವಾಗದ ಕಾರಣ, ಉಳಿತಾಯ/ಬಳಕೆ ಮಾಡದ ಅವಕಾಶವು ಕಾಲ್ಪನಿಕ ಸ್ವರೂಪದ್ದಾಗಿರಬಹುದು.
- ಒಂಬತ್ತು ಅನುದಾನ/ವಿನಿಯೋಗಗಳ 11 ಪ್ರಕರಣಗಳಲ್ಲಿ, ಸಂಪೂರ್ಣ ಬಳಕೆ ಮಾಡದ ಅವಕಾಶ ₹839.18 ಕೋಟಿ ಯನ್ನು ಅಧ್ಯರ್ಪಣೆ ಮಾಡಲಾಗಿತ್ತು (**ಅನುಬಂಧ–3.13**).
- ಇದಲ್ಲದೆ, 22 ಅನುದಾನಗಳು/ವಿನಿಯೋಗಗಳಲ್ಲಿ, ಭಾಗಶಃ ಅಧ್ಯರ್ಪಣೆಗಳು ಮಾತ್ರ ಇದ್ದವು. ಈ ಅನುದಾನಗಳಲ್ಲಿ ₹19,432.00 ಕೋಟಿ ಬಳಕೆ ಮಾಡದ ಅವಕಾಶಗಳಿಗೆ ಪ್ರತಿಯಾಗಿ ₹15,801.88 ಕೋಟಿ ಅಧ್ಯರ್ಪಣೆ ಮಾಡಲಾಗಿದ್ದು, ₹3,630.12 ಕೋಟಿ ಅಧ್ಯರ್ಪಣೆ ಆಗಿರಲಿಲ್ಲ. ಅಧ್ಯರ್ಪಣೆಯ ಶೇಕಡಾವಾರು ಪ್ರಮಾಣವು ಶೇಕಡಾ 0.90 ರಿಂದ ಶೇಕಡಾ 99.94ರ ನಡುವಿನ ವ್ಯಾಪ್ತಿಯಲ್ಲಿತ್ತು ಇತ್ತು. (**ಅನುಬಂಧ–3.14**).
- ಅಧ್ಯರ್ಪಣೆಗಳನ್ನು ಮಾಡಿರುವ ಅನುದಾನಗಳು/ವಿನಿಯೋಗಗಳ ವಿವರವಾದ ವಿಶ್ಲೇಷಣೆಯು 113 ಪ್ರಕರಣಗಳಲ್ಲಿ (₹8,197.18 ಕೋಟಿ) ಗಣನೀಯವಾದ ಅಧ್ಯರ್ಪಣೆಗಳಿರುವುದನ್ನು (ಶೇಕಡಾ 100ರಷ್ಟು ಸೇರಿದಂತೆ ಶೇಕಡಾ 50ಕ್ಕಿಂತ ಹೆಚ್ಚು) ತಿಳಿಯಪಡಿಸಿತು (**ಅನುಬಂಧ–3.15**).
- ಇದಲ್ಲದೆ, ₹ ಐದು ಕೋಟಿಗಿಂತ ಹೆಚ್ಚಿನ ಹಣದ ಅಧ್ಯರ್ಪಣೆಆಗಿರುವ 25 ಅನುದಾನಗಳಲ್ಲಿ, ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ₹14,089.06 ಕೋಟಿಗಳನ್ನು ಅಧ್ಯರ್ಪಣೆಮಾಡಲಾಗಿದ್ದು, ಇದು ಅಸಮರ್ಪಕ ಹಣಕಾಸಿನ ನಿಯಂತ್ರಣವನ್ನು ಸೂಚಿಸುತ್ತದೆ (**ಅನುಬಂಧ–3.16**).

**3.7.1.6 ಸಕ್ರಮೀಕರಣದ ಅಗತ್ಯವಿರುವ ಹೆಚ್ಚುವರಿ ವೆಚ್ಚ.**

ಭಾರತದ ಸಂವಿಧಾನದ 204ನೇ ಅನುಚ್ಛೇದದ ಪ್ರಕಾರ, ರಾಜ್ಯ ಶಾಸಕಾಂಗವು ಕಾನೂನಿನ ಮೂಲಕ ಮಾಡಿದ ವಿನಿಯೇಗದ ಅಡಿಯಲ್ಲಿ ಹೊರತುಪಡಿಸಿ, ಯಾವುದೇ ಹಣವನ್ನು ಸಂಚಿತ ನಿಧಿಯಿಂದ ಪಡೆಯಲಾಗುವುದಿಲ್ಲ. ಸಂವಿಧಾನದ 205ನೇ ಅನಚ್ಛೇದವು ರಾಜ್ಯ ಶಾಸಕಾಂಗದಿಂದ ಕ್ರಮಬದ್ಧಗೊಳಿಸಿದ

ಅನುದಾನ/ವಿನಿಯೋಗದ ಅವಕಾಶವನ್ನು ಮೀರಿದ ವೆಚ್ಚವನ್ನು ಸರ್ಕಾರವು ರಾಜ್ಯ ಶಾಸಕಾಂಗದಿಂದ ಸಕ್ರಮೀಕರಣಗೊಳಿಸಿಕೊಳ್ಳಬೇಕು ಎಂದು ವಿಧಿಸುತ್ತದೆ. ಈ ಅನುಚ್ಛೇದದ ಅಡಿಯಲ್ಲಿ ಹೆಚ್ಚುವರಿ ವೆಚ್ಚವನ್ನು ಸಕ್ರಮೀಕರಣಗೊಳಿಸಲು ಯಾವುದೇ ಕಾಲಮಿತಿಯನ್ನು ಸೂಚಿಸಿಲ್ಲವಾದರೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಧನವಿನಿಯೋಗ ಲೆಕ್ಕಗಳ ಮೇಲಿನ ಚರ್ಚೆಯನ್ನು ಪೂರ್ಣಗೊಳಿಸಿದ ನಂತರ ಹೆಚ್ಚುವರಿ ವೆಚ್ಚದ ಸಕ್ರಮೀಕರಣವನ್ನು ಮಾಡಲಾಗುತ್ತದೆ.

**(ಎ) 2023–24ನೇ ಸಾಲಿನಲ್ಲಿ ಅವಕಾಶದ ಮೇಲೆ ಹೆಚ್ಚುವರಿ ವೆಚ್ಚ**

2023–24ನೇ ಸಾಲಿನಲ್ಲಿ ಎಂಟು ಅನುದಾನಗಳಿಗೆ ಪ್ರತಿಯಾಗಿ ₹2,851.48 ಕೋಟಿ ಹೆಚ್ಚುವರಿ ವೆಚ್ಚವನ್ನು ಸಕ್ರಮೀಕರಣಗೊಳಿಸಬೇಕಿತ್ತು, ಅನುದಾನವಾರು ವಿವರಗಳನ್ನು **ಕೋಷ್ಟಕ–3.8** ನೀಡಲಾಗಿದೆ.

**ಕೋಷ್ಟಕ–3.8: 2023–24ರ ಅವಧಿಯಲ್ಲಿ ಸಕ್ರಮೀಕರಣದ ಅಗತ್ಯವಿರುವ ಅವಕಾಶದ ಮೇಲಿನ ಹೆಚ್ಚುವರಿ ವೆಚ್ಚಗಳು**

(₹ ಕೋಟಿಗಳಲ್ಲಿ)

| ಕ್ರಮ. ಸಂಖ್ಯೆ | ಅನುದಾನ | ಅವಕಾಶ | ವೆಚ್ಚ | ಅಧಿಕ |
|---|---|---|---|---|
| 1 | 01 – ಕೃಷಿ ಮತ್ತು ತೋಟಗಾರಿಕೆ ರಾಜಸ್ವ ಪುರಸ್ಕೃತ | 6,505.73 | 6,653.64 | 147.91 |
| 2 | 03 – ಆರ್ಥಿಕ ರಾಜಸ್ವ ಪುರಸ್ಕೃತ | 30,037.10 | 30,612.99 | 575.89 |
| 3 | 06 – ಮೂಲಭೂತ ಸೌಕರ್ಯ ಅಭಿವೃದ್ಧಿ ರಾಜಸ್ವ ಪುರಸ್ಕೃತ | 108.02 | 120.76 | 12.74 |
| 4 | 06 – ಮೂಲಭೂತ ಸೌಕರ್ಯ ಅಭಿವೃದ್ಧಿ ಬಂಡವಾಳ ಪುರಸ್ಕೃತ | 1,013.51 | 1,046.10 | 32.59 |
| 5 | 18 – ವಾಣಿಜ್ಯ ಮತ್ತು ಕೈಗಾರಿಕೆಗಳು ಬಂಡವಾಳ ಪುರಸ್ಕೃತ | 1,046.54 | 1,134.20 | 87.66 |
| 6 | 20 – ಲೋಕೋಪಯೋಗಿ ಕಾಮಗಾರಿಗಳು ರಾಜಸ್ವ ಪುರಸ್ಕೃತ | 2,464.68 | 2,592.81 | 128.13 |
| 7 | 21 – ಜಲ ಸಂಪನ್ಮೂಲ ರಾಜಸ್ವ ಪುರಸ್ಕೃತ | 13,745.64 | 13,972.16 | 226.52 |
| 8 | 24 – ಇಂಧನ ರಾಜಸ್ವ ಪುರಸ್ಕೃತ | 22,197.52 | 23,825.45 | 1,627.93 |
| 9 | 29 – ಋಣ ಮೇಲುಸ್ತುವಾರಿ ಬಂಡವಾಳ ಪ್ರಭೃತ | 22,440.59 | 22,452.70 | 12.11 |
| | **ಒಟ್ಟು** | **99,559.33** | **1,02,410.81** | **2,851.48** |

*ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಅನುದಾನ ವಹಿ*

ಹೆಚ್ಚಿನ ವೆಚ್ಚಕ್ಕೆ ಕೆಳಗಿನ ಕಾರಣಗಳಿಗೆ ಅಧ್ಯಾರೋಪಿಸಲಾಗಿತ್ತು:

| ಅನುದಾನ | ಮೊತ್ತ (₹ ಕೋಟಿಗಳಲ್ಲಿ) | ಹೆಚ್ಚವರಿಗೆ ಕಾರಣಗಳು |
|---|---|---|
| 1 – ಕೃಷಿ ಮತ್ತು ತೋಟಗಾರಿಕೆ (ರಾಜಸ್ವ ಪುರಸ್ಕೃತ) | 159.63 | 2401–00–102–0–30 ಮತ್ತು 2401–00–102–0–31<br>ಕೇಂದ್ರ ಮತ್ತು ರಾಜ್ಯದ ಪಾಲು – ಪರಂಪರಾಗತ ಕೃಷಿ ವಿಕಾಸ ಯೋಜನೆ (ಆರ್,ಕೆ,ವಿ,ವೈ).<br>2401–00–102–0–08 ಮತ್ತು 2401–00–102–0–09<br>ಕೇಂದ್ರ ಮತ್ತು ರಾಜ್ಯದ ಪಾಲು – ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ – ಇತರ ಬೆಳೆಗಳು.<br>2402–00–102–0–30 ಮತ್ತು 2402–00–102–0–33<br>ಕೇಂದ್ರ ಮತ್ತು ರಾಜ್ಯದ ಪಾಲು – ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ – ಜಲಾನಯನ ಅಭಿವೃದ್ಧಿ ಘಟಕ 2.0 (ಪಿಎಂಕೆಎಸ್‌ವೈ–ಡಬ್ಲ್ಯೂಡಿಸಿ 2.0). 2023– |

| ಅನುದಾನ | ಮೊತ್ತ (₹ ಕೋಟಿಗಳಲ್ಲಿ) | ಹೆಚ್ಚುವರಿಗೆ ಕಾರಣಗಳು |
|---|---|---|
| | | 24ನೇ ಸಾಲಿಗೆ ಪೂರಕ ಅವಕಾಶ ಎರಡನೇ ಮತ್ತು ಅಂತಿಮ ಕಂತನ್ನು ಒದಗಿಸಿದ ನಂತರ ಯೋಜನೆಯ ಕೇಂದ್ರ ಪಾಲನ್ನು ಬಿಡುಗಡೆ ಮಾಡಿದ್ದರಿಂದ ಹೆಚ್ಚುವರಿ ಉಂಟಾಗಿದೆ. |
| 3 – ಆರ್ಥಿಕ (ರಾಜಸ್ವ ಪುರಸ್ಕೃತ) | 674.13 | 3475–00–797–0–01 ಮೂಲಭೂತ ಸೌಕರ್ಯ ಉಪಕ್ರಮ ನಿಧಿಗೆ ಸೆಸ್ ವರ್ಗಾವಣೆ.<br>ಅಂತರ ಖಾತೆ ವರ್ಗಾವಣೆ ಅಡಿಯಲ್ಲಿನ ವೆಚ್ಚವು ನಿಜವಾದ ಸೆಸ್ ಸಂಗ್ರಹವನ್ನು ಅವಲಂಬಿಸಿರುತ್ತದೆ. ಅಂತರ ಖಾತೆ ವರ್ಗಾವಣೆಯ ಅಡಿಯಲ್ಲಿನ ಅಂದಾಜುಗಳನ್ನು ಮೀರಿದ ಸೆಸ್ ಸಂಗ್ರಹವು ಶೀರ್ಷಿಕೆಯ ಅಡಿಯಲ್ಲಿ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು. |
| 6 – ಮೂಲಭೂತ ಸೌಕರ್ಯ ಅಭಿವೃದ್ಧಿ (ರಾಜಸ್ವ ಪುರಸ್ಕೃತ) | 13.88 | 3051–02–797–0–02<br>ಪೋರ್ಟ್‌ಗಳು, ಲೈಟ್‌ಹೌಸ್‌ಗಳು ಮತ್ತು ಶಿಪ್ಪಿಂಗ್ ಅಡಿಯಲ್ಲಿ ರಶೀದಿಗಳ ವರ್ಗಾವಣೆ.<br>ಅಂತರ್ ಖಾತೆ ವರ್ಗಾವಣೆಯ ಅಡಿಯಲ್ಲಿನ ವೆಚ್ಚವು ಪೋರ್ಟ್‌ಗಳು, ಲೈಟ್‌ಹೌಸ್‌ಗಳು ಮತ್ತು ಶಿಪ್ಪಿಂಗ್ ಅಡಿಯಲ್ಲಿನ ರಶೀದಿಗಳ ನಿಜವಾದ ಸಂಗ್ರಹವನ್ನು ಅವಲಂಬಿಸಿರುತ್ತದೆ. ಅಂತರ ಖಾತೆ ವರ್ಗಾವಣೆಯ ಅಡಿಯಲ್ಲಿನ ಅಂದಾಜುಗಳನ್ನು ಮೀರಿದ ರಶೀದಿಗಳ ನಿಜವಾದ ಸಂಗ್ರಹವು ಶೀರ್ಷಿಕೆಯ ಅಡಿಯಲ್ಲಿ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು. |
| 6 – ಮೂಲಭೂತ ಸೌಕರ್ಯ ಅಭಿವೃದ್ಧಿ (ಬಂಡವಾಳ ಪುರಸ್ಕೃತ) | 57.00 | 5465–01–190–1–05<br>ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ.<br>ಬಂಡವಾಳ ಸಹಾಯ ಮತ್ತು ಭೂಸ್ವಾಧೀನಕ್ಕಾಗಿ ಪೂರಕ ಅವಕಾಶದ ಮೂಲಕ ಒದಗಿಸಲಾದ ಹೆಚ್ಚುವರಿ ಹಣವು ಕಡಿಮೆಯಾದವು. |
| 18 – ವಾಣಿಜ್ಯ ಮತ್ತು ಕೈಗಾರಿಕೆಗಳು (ಬಂಡವಾಳ ಪುರಸ್ಕೃತ) | 91.51 | 4851–00–190–0–20<br>ಎಂ.ಎಸ್.ಎಂ.ಇ ಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯ ಅಭಿವೃದ್ಧಿ / ಪೀಣ್ಯ ಕೈಗಾರಿಕಾ ಎಸ್ಟೇಟ್‌ಗೆ ಕೈಗಾರಿಕಾ ಮೂಲಭೂತ ಸೌಕರ್ಯ.<br>ನಿರ್ದಿಷ್ಟ ಕಾರಣವನ್ನು ನೀಡಲಾಗಿಲ್ಲ. |
| 20 – ಲೋಕೋಪಯೋಗಿ ಕಾಮಗಾರಿಗಳು (ರಾಜಸ್ವ ಪುರಸ್ಕೃತ) | 160.91 | 3054–80–797–0–02<br>ಕೇಂದ್ರ ರಸ್ತೆ ಮತ್ತು ಮೂಲಭೂತ ಸೌಕರ್ಯ ನಿಧಿಯಿಂದ ಠೇವಣಿ ಹೆಡ್ ಸಬ್‌ವೆನ್ಷನ್‌ಗಳಿಗೆ ಅನುದಾನ ವರ್ಗಾವಣೆ.<br>ಅಂತರ್ ಖಾತೆ ವರ್ಗಾವಣೆಯ ಅಡಿಯಲ್ಲಿನ ವೆಚ್ಚವು ಮೋಟಾರ್ ಸ್ಪಿರಿಟ್‌ಗಳ ಮೇಲಿನ ಹೆಚ್ಚುವರಿ ಆಮದು ಸುಂಕದ ವಾಸ್ತವಿಕ ಸಂಗ್ರಹವನ್ನು ಅವಲಂಬಿಸಿರುತ್ತದೆ. ಅಂತರ ಖಾತೆ ವರ್ಗಾವಣೆಯ ಅಡಿಯಲ್ಲಿನ ಅಂದಾಜುಗಳನ್ನು ಮೀರಿದ ರಶೀದಿಗಳ ವಾಸ್ತವಿಕ ಸಂಗ್ರಹವು ಶೀರ್ಷಿಕೆಯ ಅಡಿಯಲ್ಲಿ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು. |
| 21 – ಜಲ ಸಂಪನ್ಮೂಲ (ಬಂಡವಾಳ ಪುರಸ್ಕೃತ) | 262.44 | 4700–03–001–0–03<br>ತುಂಗಭದ್ರಾ ಯೋಜನೆ (ಅಂತರ ರಾಜ್ಯ ಖಾತೆ ಆಂಧ್ರಪ್ರದೇಶ ಸರ್ಕಾರ – ಕರ್ನಾಟಕ ಸರ್ಕಾರ).<br>ನಿರ್ದಿಷ್ಟ ಕಾರಣವನ್ನು ನೀಡಲಾಗಿಲ್ಲ.. |
| 24 – ಇಂಧನ (ರಾಜಸ್ವ ಪುರಸ್ಕೃತ) | 1,737.00 | 2801–80–101–1–04–106<br>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ – ಐಪಿ ಸೆಟ್‌ಗಳು, ಬಿಜೆ/ಕೆಜೆ ಗ್ರಾಹಕರಿಗೆ ಪೂರೈಕೆಗಾಗಿ ಸಹಾಯಧನ.<br>ಈ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿಗೆ ಕಾರಣಗಳನ್ನು ತಿಳಿಸಲಾಗಿಲ್ಲ. |
| 29 – ಋಣ ಮೇಲುಸ್ತುವಾರಿ (*ಬಂಡವಾಳ ಪ್ರಭೃತ*) | 13.17 | 6004–02–101–0–03<br>ಹೆಚ್ಚುವರಿ ಯೋಜನಾ ಸಹಾಯ (ಪಥೆ-ಪಥೆ ಪಡೆದ ಬಾಹ್ಯ ಸಾಲಗಳು).<br>ಈ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿಗೆ ಕಾರಣಗಳನ್ನು ತಿಳಿಸಲಾಗಿಲ್ಲ. |

*ಆಕರ: ಧನವಿನಿಯೋಗ ಲೆಕ್ಕಗಳು ಮತ್ತು ಅನುದಾನ ವಹಿ*

**(ಬಿ) ಹಿಂದಿನ ವರ್ಷಗಳ ಹೆಚ್ಚುವರಿ ವೆಚ್ಚ ಮತ್ತು ಅದರ ಸಕ್ರಮೀಕರಣ**

2020–21 ಮತ್ತು 2022–23 ವರ್ಷಗಳಿಗೆ ಒಟ್ಟು ₹2,323.74 ಕೋಟಿಗಳಷ್ಟು ಹೆಚ್ಚುವರಿ ವೆಚ್ಚವನ್ನು **ಅನುಬಂಧ–3.17**ರಲ್ಲಿ ವಿವರಿಸಿದಂತೆ ಇನ್ನೂ ಸಕ್ರಮೀಕರಣವಾಗಿಲ್ಲ. 2021–22 ನೇ ಸಾಲಿನಲ್ಲಿ ಅನುದಾನ/ವಿನಿಯೋಗದ ಅಡಿಯಲ್ಲಿ ಯಾವುದೇ ಹೆಚ್ಚುವರಿ ವೆಚ್ಚವಿರಲಿಲ್ಲ.

### *3.7.2 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಪರಿಣಾಮಕಾರಿತ್ವದ ಕುರಿತು ವರದಿ*

#### 3.7.2.1 ಆಯವ್ಯಯ ಮುನ್ಸೂಚನೆ ಮತ್ತು ನಿರೀಕ್ಷೆ ಮತ್ತು ವಾಸ್ತವದ ನಡುವಿನ ಅಂತರ

ತೆರಿಗೆ ಆಡಳಿತ/ಇತರ ರಶೀದಿಗಳು ಮತ್ತು ಸಾರ್ವಜನಿಕ ವೆಚ್ಚಗಳ ಪರಿಣಾಮಕಾರಿ ನಿರ್ವಹಣೆಯು ವಿವಿಧ ಹಣಕಾಸು ಸೂಚಕಗಳನ್ನು ಸಾಧಿಸಲು ಸಮತೋಲನವನ್ನು ಕಾಯ್ದುಕೊಳ್ಳುತ್ತದೆ. ಅವಾಸ್ತವಿಕ ಪ್ರಸ್ತಾವನೆಗಳ ಆಧಾರದ ಮೇಲೆ ಆಯವ್ಯಯ ಹಂಚಿಕೆಗಳು, ದುರ್ಬಲ ವೆಚ್ಚ ಮೇಲ್ವಿಚಾರಣಾ ಕಾರ್ಯವಿಧಾನ, ದುರ್ಬಲ ಯೋಜನೆ ಅನುಷ್ಠಾನ ಸಾಮರ್ಥ್ಯಗಳು ಮತ್ತು ದುರ್ಬಲ ಆಂತರಿಕ ನಿಯಂತ್ರಣಗಳು ವಿವಿಧ ಅಭಿವೃದ್ಧಿ ಅಗತ್ಯಗಳಲ್ಲಿ ಸೂಕ್ತವಲ್ಲದ ಹಂಚಿಕೆಗೆ ಕಾರಣವಾಗುತ್ತವೆ. ಕೆಲವು ಇಲಾಖೆಗಳಲ್ಲಿ ಅತಿಯಾದ ಉಳಿತಾಯವು ಇತರ ಇಲಾಖೆಗಳು ಬಳಸಬಹುದಾದ ಹಣವನ್ನು ವಂಚಿತಗೊಳಿಸುತ್ತದೆ.

2023–24 ನೇ ಸಾಲಿನಲ್ಲಿ ₹ 3,48,941.46 ಕೋಟಿಗಳ ಅವಕಾಶಕ್ಕೆ ಪ್ರತಿಯಾಗಿ, ₹ 3,29,678.84 ಕೋಟಿ ವೆಚ್ಚ ಮಾಡಲಾಗಿದ್ದುರ ಪರಿಣಾಮವಾಗಿ 28 ಅನುದಾನ/ವಿನಿಯೋಗಗಳ ಅಡಿಯಲ್ಲಿ ₹ 19,262.62 ಕೋಟಿ (ಸುಮಾರು ಶೇಕಡಾ ಆರು) ಬಳಕೆ ಮಾಡಿರಲಿಲ್ಲ. ವಿವರಗಳನ್ನು **ಕೋಷ್ಟಕ–3.9**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.9: 2023–24ರ ಹಣಕಾಸು ವರ್ಷದಲ್ಲಿ ಆಯವ್ಯಯ ಅವಕಾಶಕ್ಕೆ ಪ್ರತಿಯಾಗಿ ವಾಸ್ತವಿಕ ವೆಚ್ಚ**

(₹ ಕೋಟಿಗಳಲ್ಲಿ)

| ವೆಚ್ಚದ ಸ್ವರೂಪ | | ಮೂಲ ಅನುಧಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವಿಕ ವೆಚ್ಚ | ಬಳಕೆ ಮಾಡದ ಅವಕಾಶ (–) / ಅವಕಾಶದ ಮೇಲಿನ ಹೆಚ್ಚುವರಿ (+) | ಅಧ್ಯರ್ಪಣೆ ಮಾಡಿದ ಮೊತ್ತ |
|---|---|---|---|---|---|---|---|
| **ಪುರಸ್ಕೃತ** | I ರಾಜಸ್ವ | 2,23,772.12 | 6,283.99 | 2,30,056.11 | 2,15,968.58 | (–)14,087.53 | 14,023.71 |
| | II ಬಂಡವಾಳ | 49,188.49 | 985.76 | 50,174.25 | 48,543.46 | (–)1,630.79 | 1,894.20 |
| | III ಸಾಲಗಳು ಮತ್ತು ಮುಂಗಡಗಳು | 4,384.69 | 333.34 | 4,718.03 | 4,472.85 | (–)245.18 | 198.65 |
| **ಒಟ್ಟು ಪುರಸ್ಕೃತ** | | **2,77,345.30** | **7,603.09** | **2,84,948.39** | **2,68,984.89** | **(–)15,963.50** | **16,117.56** |
| ***ಪ್ರಭೃತ*** | *IV ರಾಜಸ್ವ* | *37,695.79* | *17.19* | *37,712.98* | *34,405.85* | *(–)3,307.13* | *3,258.09* |
| | *V ಸಾರ್ವಜನಿಕ ಸಾಲ ಮರುಪಾವತಿ* | *22,440.59* | *0.00* | *22,440.59* | *22,452.70* | *(+)12.11* | *0.00* |
| | *VI ಬಂಡವಾಳ* | *3,838.83* | *0.67* | *3,839.50* | *3,835.40* | *(–)4.10* | *2.22* |
| **ಒಟ್ಟು ಪ್ರಭೃತ** | | ***63,975.21*** | ***17.86*** | ***63,993.07*** | ***60,693.95*** | ***(–)3,299.12*** | ***3,260.31*** |
| **ಒಟ್ಟು ಮೊತ್ತ** | | **3,41,320.51** | **7,620.95** | **3,48,941.46** | **3,29,678.84** | **(–)19,262.62** | **19,376.87** |

*ಆಕರ: ಧನವಿನಿಯೋಗ ಲೆಕ್ಕಗಳು*

ಹಿಂದಿನ ಐದು ವರ್ಷಗಳಲ್ಲಿ ಆಯವ್ಯಯ ಬಳಕೆಯ ಸ್ಥಿತಿಯನ್ನು **ನಕ್ಷೆ–3.5**ರಲ್ಲಿ ನೀಡಲಾಗಿದೆ.

**ನಕ್ಷೆ–3.5: 2019–20 ರಿಂದ 2023–24ರ ಅವಧಿಯಲ್ಲಿ ಆಯವ್ಯಯ ಬಳಕೆಯಸ್ಥಿತಿ**




*ಆಕರ: ಧನವಿನಿಯೋಗ ಲೆಕ್ಕಗಳು*

2019–20 ರಿಂದ 2023–24ರ ಅವಧಿಯ ಮೂಲ ಆಯವ್ಯಯ, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕ ವೆಚ್ಚದ ಪ್ರವೃತ್ತಿಗಳು **ಕೋಷ್ಟಕ–3.10**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.10: 2019–20 ರಿಂದ 2023–24ರ ಅವಧಿಯಲ್ಲಿ ಮೂಲ ಆಯವ್ಯಯ, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕ ವೆಚ್ಚ**

(₹ ಕೋಟಿಗಳಲ್ಲಿ)

| | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಮೂಲ ಆಯವ್ಯಯ | 2,40,745.86 | 2,44,733.57 | 2,52,391.98 | 2,71,542.22 | 3,41,320.51 |
| ಪೂರಕ ಆಯವ್ಯಯ | 23,058.81 | 20,487.16 | 40,793.33 | 34,030.45 | 7,620.95 |
| ಒಟ್ಟು ಆಯವ್ಯಯ | 2,63,804.67 | 2,65,220.73 | 2,93,185.31 | 3,05,572.67 | 3,48,941.46 |
| ಪರಿಷ್ಕೃತ ಅಂದಾಜು | 2,33,217.90 | 2,36,764.97 | 2,59,350.00 | 2,95,475.34 | 3,19,589.93 |
| ವಾಸ್ತವಿಕ ವೆಚ್ಚ | 2,33,978.23 | 2,42,694.49 | 2,82,335.70 | 2,97,325.39 | 3,29,678.84 |
| ಉಳಿತಾಯಗಳು | 29,826.44 | 22,526.24 | 10,849.61 | 8,247.28 | 19,262.62 |
| ಮೂಲ ಅವಕಾಶಕ್ಕೆ ಪೂರಕ ಅವಕಾಶದ ಶೇಕಡಾವಾರು | 9.58 | 8.37 | 16.16 | 12.53 | 2.23 |
| ಒಟ್ಟಾರೆ ಅವಕಾಶಕ್ಕೆ ಒಟ್ಟು ಉಳಿತಾಯಗಳು / ಹೆಚ್ಚುವರಿಗಳ ಶೇಕಡಾವಾರು | 11.31 | 8.49 | 3.70 | 2.70 | 5.52 |
| ಒಟ್ಟು ಆಯವ್ಯಯ – ಪರಿಷ್ಕೃತ ಅಂದಾಜು | 30,586.77 | 28,455.76 | 33,835.31 | 10,097.33 | 29,351.53 |
| ಪರಿಷ್ಕೃತ ಅಂದಾಜು – ವಾಸ್ತವಿಕ ವೆಚ್ಚ | (–)760.33 | (–)5,929.52 | (–)22,985.70 | (–)1,850.05 | (–)10,088.91 |
| (ಒಟ್ಟು ಆಯವ್ಯಯ – ಪರಿಷ್ಕೃತ ಅಂದಾಜು) ಒಟ್ಟು ಆಯವ್ಯಯದ ಶೇಕಡಾವಾರಾಗಿ | 11.59 | 10.73 | 11.54 | 3.30 | 8.41 |
| (ಪರಿಷ್ಕೃತ ಅಂದಾಜು – ವಾಸ್ತವಿಕ ಅಂದಾಜು) ಒಟ್ಟು ಆಯವ್ಯದ ಶೇಕಡಾವಾರಾಗಿ | (–)0.29 | (–)2.24 | (–)7.84 | (–)0.61 | (–)2.89 |

*ಆಕರ: ಅನುದಾನ ಮತ್ತು ಪ್ರಭೃತ ವಿನಿಯೋಗಗಳು ಹಾಗೂ ಧನವಿನಿಯೋಗ ಲೆಕ್ಕಗಳ ಬೇಡಿಕೆಗಳ ಸಾರಾಂಶ*

2023–24ರ ಅವಧಿಯಲ್ಲಿ ₹ 7,620.95 ಕೋಟಿಗಳ ಪೂರಕ ಅವಕಾಶವು ಹಿಂದಿನ ವರ್ಷದಲ್ಲಿನ 12.53ಕ್ಕೆ ಪ್ರತಿಯಾಗಿ ಮೂಲ ಅವಕಾಶದ ಶೇಕಡಾ 2.23 ರಷ್ಟಿತ್ತು ಎಂಬುದನ್ನು **ಕೋಷ್ಟಕ–3.10** ತೋರಿಸುತ್ತದೆ. ಆದಾಗ್ಯೂ ಅವಕಾಶಗಳಿಗೆ ಉಳಿತಾಯದ ಶೇಕಡಾವಾರು ಹಿಂದಿನ ವರ್ಷಕ್ಕಿಂತ 2.82ರಷ್ಟು ಹೆಚ್ಚಾಗಿದೆ.

**ನಕ್ಷೆ–3.6: ಆಯವ್ಯಯ ಅಂದಾಜು, ಪರಿಷ್ಕೃತ ಅಂದಾಜು ಮತ್ತು ವಾಸ್ತವಿಕಗಳ ಪ್ರವೃತ್ತಿ**

(₹ ಕೋಟಿಗಳಲ್ಲಿ)




*ಆಕರ: ಧನವಿನಿಯೋಗ ಲೆಕ್ಕಗಳು*

**ನಕ್ಷೆ–3.6**ರಿಂದ, 2019–20 ರಿಂದ 2023–24ರವರೆಗಿನ ಅವಧಿಯಲ್ಲಿ, ಪರಿಷ್ಕೃತ ಅಂದಾಜು ರಾಜ್ಯದ ಒಟ್ಟು ಆಯವ್ಯಯಕಿಂತ ಕಡಿಮೆಯಾಗಿರುವುದು ಕಂಡುಬರುತ್ತದೆ. ಪರಿಷ್ಕೃತ ಅಂದಾಜು ಮತ್ತು ಒಟ್ಟು ಆಯವ್ಯಯ ನಡುವಿನ ಅಂತರವು ಅಂತರ–ವರ್ಷ ವ್ಯತ್ಯಾಸವನ್ನು ತೋರಿಸುತ್ತದೆ ಮತ್ತು 2022–23ರಲ್ಲಿ ಶೇಕಡಾ ನಾಲ್ಕಕ್ಕಿಂತ ಕಡಿಮೆ ಅಂತರದೊಂದಿಗೆ ಕನಿಷ್ಠವಾಗಿತ್ತು. 2023–24ರ ಅವಧಿಯಲ್ಲಿ, ಅಂತರವು ದುಪ್ಪಟ್ಟುಗೊಂಡು ಸುಮಾರು ಶೇಕಡಾ ಎಂಟರಷ್ಟಿತ್ತು.

ಎಲ್ಲಾ ವರ್ಷಗಳಲ್ಲಿ ವಾಸ್ತವಿಕ ವೆಚ್ಚವು ಪರಿಷ್ಕೃತ ಅಂದಾಜುಗಳಿಗಿಂತ ಹೆಚ್ಚಾಗಿದ್ದಿತು. 2019–20 ರಿಂದ 2021–22ರವರೆಗೆ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದ ವಿಚಲನವು, 2022–23ರಲ್ಲಿ ಇಳಿಕೆಯನ್ನು ಕಂಡಿತು ಮತ್ತು 2023–24ರಲ್ಲಿ ಮತ್ತೊಮ್ಮೆ ಹೆಚ್ಚಾಗಿದೆ.

### 3.7.2.2 ಆಯವ್ಯಯದಲ್ಲಿನ ವ್ಯತ್ಯಾಸದಲ್ಲಿ ಕಾಣೆಯಾಗಿರುವ / ಅಲಭ್ಯ ವಿವರಣೆ

ಅನುಮೋದಿತ ಆಯವ್ಯಯಕ್ಕೆ ಪ್ರತಿಯಾಗಿ ವೆಚ್ಚವನ್ನು ತೋರಿಸುವುದರ ಹೊರತಾಗಿ, ಪೂರಕ ಅವಕಾಶವನ್ನು ಒಳಗೊಂಡಂತೆ ಆಯವ್ಯಯ ಅವಕಾಶಕಿಂತ ವೆಚ್ಚವು ಗಮನಾರ್ಹವಾಗಿ ವ್ಯತ್ಯಾಸಗೊಳ್ಳುವ ಪ್ರಕರಣಗಳಿಗೆ ಧನವಿನಿಯೋಗ ಲೆಕ್ಕಗಳು ವಿವರಣೆಯನ್ನು ನೀಡುತ್ತವೆ.

ಧನವಿನಿಯೋಗ ಲೆಕ್ಕಗಳಲ್ಲಿ ವಿವರವಾದ ಟಿಪ್ಪಣಿಗಳನ್ನು ಸೇರಿಸಲು ಮಿತಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಅನುಮೋದಿಸಿದ ಮಿತಿಗಳ ಪ್ರಕಾರವಾಗಿರುತ್ತವೆ. ಈ ನಿಯಮಗಳು 1983–84ರ ಆರ್ಥಿಕ ವರ್ಷದಿಂದ ಜಾರಿಗೆ ಬಂದಿವೆ.

ಟಿಪ್ಪಣಿಗಾಗಿ ಉಪ–ಶೀರ್ಷಿಕೆಗಳ ಆಯ್ಕೆ ಮತ್ತು ಧನವಿನಿಯೋಗ ಲೆಕ್ಕಗಳಲ್ಲಿನ ವಿವರವಾದ ಟಿಪ್ಪಣಿಗಳಿಗಾಗಿ ಮಾನದಂಡಗಳನ್ನು ಕೆಳಗೆ ನೀಡಲಾಗಿದೆ:

| | |
|---|---|
| **ಉಳಿತಾಯಗಳು** | ಒಟ್ಟಾರೆ ಉಳಿತಾಯವು ಅನುದಾನ/ವಿನಿಯೋಗದ ಶೇಕಡಾ ಎರಡಕ್ಕಿಂತ ಹೆಚ್ಚಿದ್ದರೆ ಮತ್ತು ಯಾವುದೇ ಉಪಶೀರ್ಷಿಕೆಯಡಿಯಲ್ಲಿ ಉಳಿತಾಯವು ಶೇಕಡಾ 10ಕ್ಕಿಂತ ಹೆಚ್ಚಿದ್ದರೆ ಟಿಪ್ಪಣಿಗಳನ್ನು ಮಾಡಬೇಕು. |
| **ಹೆಚ್ಚುವರಿ** | ಒಟ್ಟಾರೆ ಹೆಚ್ಚುವರಿ ಅನುದಾನ/ವಿನಿಯೋಗದ ಶೇಕಡಾ 10ಕ್ಕಿಂತ ಹೆಚ್ಚಾಗಿದ್ದರೆ ಮತ್ತು ಯಾವುದೇ ಉಪಶೀರ್ಷಿಕೆಯಡಿಯಲ್ಲಿ ಹೆಚ್ಚುವರಿಯು ₹ ಎರಡು ಲಕ್ಷಕ್ಕಿಂತ ಹೆಚ್ಚಿದ್ದರೆ ಟಿಪ್ಪಣಿ ಮಾಡಬೇಕು. |

*ಆಕರ: ಧನವಿನಿಯೋಗ ಲೆಕ್ಕಗಳು*

2023–24ರ ಅವಧಿಯ ಧನವಿನಿಯೋಗ ಲೆಕ್ಕಗಳ ಲೆಕ್ಕಪರಿಶೋಧನೆಯಲ್ಲಿ, ಸುಮಾರು ಶೇಕಡಾ 14ರಷ್ಟು ಉಳಿತಾಯಗಳಲ್ಲಿ ಆಯವ್ಯಯ ಹಂಚಿಕೆಗೆ ಹೋಲಿಸಿದರೆ ವೆಚ್ಚದಲ್ಲಿನ ವ್ಯತ್ಯಾಸಗಳಿಗೆ ನಿಯಂತ್ರಣ ಅಧಿಕಾರಿಗಳು ವಿವರಣೆ/ನಿರ್ದಿಷ್ಟ ಕಾರಣಗಳನ್ನು ಒದಗಿಸದಿರುವುದನ್ನು ಗಮನಿಸಲಾಯಿತು. 28 ಅನುದಾನ/ವಿನಿಯೋಗಗಳಲ್ಲಿ 23 ಅನುದಾನ/ವಿನಿಯೋಗಗಳ ₹3,179.08 ಕೋಟಿ ಮೊತ್ತದ ವ್ಯತ್ಯಾಸಕ್ಕೆ ನಿರ್ದಿಷ್ಟ ಕಾರಣಗಳನ್ನು ಸರ್ಕಾರಿ ಇಲಾಖೆಗಳ ನಿಯಂತ್ರಣಾಧಿಕಾರಿಗಳು ಒದಗಿಸಲಿಲ್ಲ. ಅನುದಾನವಾರು ವಿವರಗಳನ್ನು **ಅನುಬಂಧ–3.18**ರಲ್ಲಿ ನೀಡಲಾಗಿದೆ.

ಧನವಿನಿಯೋಗ ಲೆಕ್ಕಗಳಲ್ಲಿನ ವ್ಯತ್ಯಾಸದ ಸಂದರ್ಭದಲ್ಲಿ ಸ್ವೀಕರಿಸಿದ ವಿವರಣೆಗಳ ಸಾರಾಂಶವನ್ನು **ನಕ್ಷೆ–**3.7ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–3.7: ಧನವಿನಿಯೋಗ ಲೆಕ್ಕಗಳಲ್ಲಿನ ವ್ಯತ್ಯಯಗಳ ವಿವರಣೆಯ ಸಾರಾಂಶ**




*ಆಕರ: ಧನವಿನಿಯೋಗ ಲೆಕ್ಕಗಳು*

### 3.7.2.3 2023–24ರ ಅವಧಿಯಲ್ಲಿ ವೆಚ್ಚದ ಒತ್ತಡ

2023–24ರ ಅವಧಿಯಲ್ಲಿ ರಾಜ್ಯ ಬೊಕ್ಕಸಕ್ಕೆ ಮಾಸಿಕ ಸ್ವೀಕೃತಿಯ ಹರಿವು ಮತ್ತು ವಿತರಣೆಗಳನ್ನು **ನಕ್ಷೆ–3.8**ರಲ್ಲಿ ನೀಡಲಾಗಿದೆ.

**ನಕ್ಷೆ–3.8: 2023–24ರಲ್ಲಿ ಮಾಸಿಕ ಸ್ವೀಕೃತಿಗಳು ಮತ್ತು ವಿತರಣೆಗಳು**

(₹ ಕೋಟಿಗಳಲ್ಲಿ)




*ಆಕರ: ಮಾಸಿಕ ಸಿವಿಲ್ ಲೆಕ್ಕಗಳು*

ರಾಜ್ಯ ಸರ್ಕಾರವು ₹3,29,678.84 ಕೋಟಿ (ಸಾರ್ವಜನಿಕ ಋಣ ವೆಚ್ಚ ಸೇರಿದಂತೆ) ಒಟ್ಟು ವೆಚ್ಚದ ಶೇಕಡಾ ಎರಡರಷ್ಟನ್ನು ಒಳಗೊಂಡಿರುವ ₹7,344.41 ಕೋಟಿ ವೆಚ್ಚವನ್ನು ಮಾರ್ಚ್ 2024ರ ಅವಧಿಯಲ್ಲಿಯೇ ಮಾಡಿತ್ತು ಎಂಬುದನ್ನು ಗಮನಿಸಲಾಯಿತು.

ಮಾರ್ಚ್ 2024ರಲ್ಲಿ ಮಾತ್ರ ಒಟ್ಟು ವೆಚ್ಚದ ಶೇಕಡಾ 50ಕ್ಕಿಂತ ಹೆಚ್ಚು ವೆಚ್ಚ ಮಾಡಿದ ಪ್ರಮುಖ ಪ್ರಕರಣಗಳನ್ನು **ಕೋಷ್ಟಕ–3.11**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.11: ಮಾರ್ಚ್ 2024ರಲ್ಲಿ ವೆಚ್ಚದ ಪ್ರಮಾಣ**

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ / ವಿವರಣೆ | ಮೊದಲನೇ ತ್ರೈಮಾಸಿಕ | ಎರಡನೇ ತ್ರೈಮಾಸಿಕ | ಮೂರನೇ ತ್ರೈಮಾಸಿಕ | ನಾಲ್ಕನೇ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್ 2024 ರಲ್ಲಿನ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ವೆಚ್ಚದ ಶೇಕಡಾವಾರು |
|---|---|---|---|---|---|---|---|
| 2030 – ಮುದ್ರಾಂಕ ಮತ್ತು ನೋಂದಣಿ | 12.87 | 22.69 | 19.28 | 109.16 | 164.00 | 85.56 | 52.17 |
| 2401 – ಬೆಳೆ ಸಂಗೋಪನೆ | 190.32 | (–)174.04 | 1,158.08 | 2,585.65 | 3,760.01 | 1,915.29 | 50.94 |
| 4059 – ಲೋಕೋಪಯೋಗಿ ಕಾಮಗಾರಿಗಳ ಮೇಲಿನ ಬಂಡವಾಳದ ವೆಚ್ಚ | 12.54 | 79.46 | 218.59 | 2,028.35 | 2,338.95 | 1,880.80 | 80.41 |

| ಲೆಕ್ಕ ಶೀರ್ಷಿಕೆ / ವಿವರಣೆ | ಮೊದಲನೇ ತ್ರೈಮಾಸಿಕ | ಎರಡನೇ ತ್ರೈಮಾಸಿಕ | ಮೂರನೇ ತ್ರೈಮಾಸಿಕ | ನಾಲ್ಕನೇ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್ 2024 ರಲ್ಲಿನ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ವೆಚ್ಚದ ಶೇಕಡಾವಾರು |
|---|---|---|---|---|---|---|---|
| 4202 – ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿಯ ಮೇಲಿನ ಬಂಡವಾಳ ವೆಚ್ಚ | (–)1.97 | 21.53 | 263.10 | 918.42 | 1,201.09 | 639.65 | 53.26 |
| 4215 – ನೀರು ಸರಬರಾಜು ಮತ್ತು ನೈರ್ಮಲ್ಯದ ಮೇಲಿನ ಬಂಡವಾಳದ ವೆಚ್ಚ | 200.00 | 240.58 | 611.32 | 4,929.32 | 5,981.22 | 3,712.96 | 62.08 |
| 4217 – ನಗರಾಭಿವೃದ್ಧಿ ಮೇಲಿನ ಬಂಡವಾಳದ ವೆಚ್ಚ | 0.09 | 119.27 | 132.63 | 99.27 | 351.26 | 206.65 | 58.66 |
| 4235 – ಸಾಮಾಜಿಕ ಭದ್ರತೆ ಮತ್ತು ಕಲ್ಯಾಣದ ಮೇಲಿನ ಬಂಡವಾಳದ ವೆಚ್ಚ | 0.00 | 16.00 | 0.00 | 58.10 | 74.09 | 37.75 | 50.95 |
| 4401 – ಬೆಳೆ ಸಂಗೋಪನೆ ಮೇಲಿನ ಬಂಡವಾಳದ ವೆಚ್ಚ | 0.00 | 0.00 | 6.23 | 56.90 | 63.12 | 33.62 | 53.25 |
| 4405 – ಮೀನುಗಾರಿಕೆಯ ಮೇಲಿನ ಬಂಡವಾಳದ ವೆಚ್ಚ | 7.50 | 12.50 | 0.00 | 48.42 | 68.42 | 48.42 | 70.77 |
| 4702 – ಸಣ್ಣ ನೀರಾವರಿ ಮೇಲಿನ ಬಂಡವಾಳದ ವೆಚ್ಚ | 196.79 | 428.79 | 433.52 | 1,240.97 | 2,300.07 | 1,189.81 | 51.73 |
| 4705 – ಜಲಾನಯನ ಪ್ರದೇಶ ಅಭಿವೃದ್ಧಿ ಮೇಲಿನ ಬಂಡವಾಳದ ವೆಚ್ಚ | (–)0.03 | (–)1.91 | 8.80 | 56.46 | 63.32 | 39.07 | 61.70 |
| 4711 – ಪ್ರವಾಹ ನಿಯಂತ್ರಣ ಯೋಜನೆಗಳ ಮೇಲಿನ ಬಂಡವಾಳದ ವೆಚ್ಚ | 9.37 | 23.16 | 30.24 | 92.03 | 154.80 | 84.16 | 54.37 |
| 4851 – ಗ್ರಾಮೀಣ ಮತ್ತು ಸಣ್ಣ ಉದ್ಯಮಗಳ ಮೇಲಿನ ಬಂಡವಾಳದ ವೆಚ್ಚ | 0.00 | 3.84 | 44.52 | 185.81 | 234.17 | 160.47 | 68.53 |
| 5452 – ಪ್ರವಾಸೋದ್ಯಮದ ಮೇಲಿನ ಬಂಡವಾಳದ ವೆಚ್ಚ | 0.00 | 0.00 | 39.37 | 127.62 | 166.98 | 117.01 | 70.07 |

*ಆಕರ: ಮಹಾಲೇಖಪಾಲರ (ಲೆ ಮತ್ತು ಹ) ಕಛೇರಿ*

ವರ್ಷದ ಕೊನೆಯಲ್ಲಿ ಕೆಲವು ಪ್ರಮುಖ ಲೆಕ್ಕ ಶೀರ್ಷಿಕೆಯಲ್ಲಿ ಗಣನೀಯ ಪ್ರಮಾಣದ ವೆಚ್ಚವನ್ನು ಸರ್ಕಾರವು ಮಾಡಿರುವುದನ್ನು ಕೋಷ್ಟಕದಿಂದ ಗಮನಿಸಬಹುದು. ಇದು ವೆಚ್ಚದ ಮೇಲೆ ಅಸಮರ್ಪಕ ನಿಯಂತ್ರಣವನ್ನು ಸೂಚಿಸುತ್ತದೆ.

## 3.8 ಆಯ್ದ ಅನುದಾನಗಳ ಪರಿಶೀಲನೆಯ ಫಲಿತಾಂಶ

ಸಂಚಿತ ನಿಧಿಯಿಂದ ಹಣ ಸೆಳೆಯಲು ಶಾಸಕಾಂಗ ಸಭೆಯಿಂದ ಪುರಸ್ಕೃತವಾದ ಮೊತ್ತವನ್ನು ಅನುದಾನ[20] ಎಂದು ಉಲ್ಲೇಖಿಸಲಾಗುತ್ತದೆ. ಅನುದಾನಕ್ಕಾಗಿ ಬೇಡಿಕೆಯು ವಾರ್ಷಿಕ ಆಯವ್ಯಯ ಪ್ರಕ್ರಿಯೆಯ ಭಾಗವಾಗಿ ಸರ್ಕಾರಿ ಇಲಾಖೆಗಳು ಹಣದ ಬಿಡುಗಡೆ ಮಾಡುವ ಔಪಚಾರಿಕ ವಿನಂತಿಯಾಗಿದೆ. ಕೆಳಗಿನ ಎರಡು ಅನುದಾನಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು

[20] 'ಅನುದಾನಕ್ಕಾಗಿ ಬೇಡಿಕೆ' ಎಂದರೆ, ಪ್ರಭೃತ ವೆಚ್ಚವನ್ನು ಹೊರತುಪಡಿಸಿ, ಪುರಸ್ಕೃತ ಸಂಬಂಧಿಸಿದ ಸೇವೆಗಳ ಮೇಲೆ ರಾಜ್ಯದ ಸಂಚಿತ ನಿಧಿಯಿಂದ ರಾಜ್ಯಪಾಲರ ಶಿಫಾರಸಿನ ಮೇರೆಗೆ ಶಾಸಕಾಂಗ ಸಭೆಗೆ ಮಾಡಲಾದ ಪ್ರಸ್ತಾವನೆ.

ಆಯವ್ಯಯ ಕಾರ್ಯವಿಧಾನಗಳು ಮತ್ತು ಹಂಚಿಕೆ ಹಾಗೂ ವೆಚ್ಚದ ಮೇಲೆ ನಿಯಂತ್ರಣವನ್ನು ಚಲಾಯಿಸಲು ಬಳಸಲಾದ ವಿಧಾನವನ್ನು ಪರಿಶೀಲಿಸಿದೆ.

1. ಅನುದಾನ ಸಂಖ್ಯೆ. 17 – ಶಿಕ್ಷಣ
2. ಅನುದಾನ ಸಂಖ್ಯೆ. 08 – ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ

ಹಿಂದಿನ ಐದು ವರ್ಷಗಳಲ್ಲಿ ಪರಿಶೀಲಿಸದ, 2021–22 ರಿಂದ 2023–24ರ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ ರಾಜಸ್ವ ಮತ್ತು ಬಂಡವಾಳ ಶೀರ್ಷಿಕೆಗಳೆರಡರಲ್ಲೂ ಹೆಚ್ಚಿನ ಶೇಕಡಾವಾರು ಉಳಿತಾಯದ ಆಧಾರದ ಮೇಲೆ ಎರಡು ಅನುದಾನಗಳನ್ನು ಆಯ್ಕೆ ಮಾಡಲಾಯಿತು, ಲೆಕ್ಕಪರಿಶೋಧನಾ ಅವಿಷ್ಕಾರಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

### *3.8.1 ಅನುದಾನ ಸಂಖ್ಯೆ 17 – ಶಿಕ್ಷಣ*

#### 3.8.1.1 ಪೀಠಿಕೆ

ಅನುದಾನ ಸಂಖ್ಯೆ 17 – ಶಿಕ್ಷಣವು ಈ ಕೆಳಗಿನ ಕ್ರಿಯಾತ್ಮಕ ಪ್ರಮುಖ ಲೆಕ್ಕಶೀರ್ಷಿಕೆಗಳನ್ನು ಒಳಗೊಂಡಿದೆ:

2202 – ಸಾಮಾನ್ಯ ಶಿಕ್ಷಣ
2203 – ತಾಂತ್ರಿಕ ಶಿಕ್ಷಣ
2204 – ಕ್ರೀಡೆ ಮತ್ತು ಯುವಜನ ಸೇವೆಗಳು
2205 – ಕಲೆ ಮತ್ತು ಸಂಸ್ಕೃತಿ
2058 – ಲೇಖನ ಸಾಮಗ್ರಿ ಮತ್ತು ಮುದ್ರಣ
4202 – ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿಯ ಮೇಲಿನ ಬಂಡವಾಳ ವೆಚ್ಚ

ಅನುದಾನ ಸಂಖ್ಯೆ 17ರ ಅಡಿಯಲ್ಲಿ ಪಡೆದ ಆಯವ್ಯಯ ಹಂಚಿಕೆಯನ್ನು ಪ್ರಾಥಮಿಕವಾಗಿ ಶಿಕ್ಷಣ ವಲಯದಲ್ಲಿ ಎರಡು ಇಲಾಖೆಗಳಿಗೆ ವಿತರಿಸಲಾಗುತ್ತದೆ – ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ.

#### 3.8.1.2 ಇಲಾಖೆಗಳ ಅವಲೋಕನ

- **ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ**

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಒಂದನೇ ತರಗತಿಯಿಂದ ಎಂಟನೇ ತರಗತಿವರೆಗಿನ ಸರ್ಕಾರಿ ಅನುದಾನಿತ[21] ಮತ್ತು ಅನುದಾನ ರಹಿತ ಶಾಲೆಗಳನ್ನು ಪ್ರಾಥಮಿಕ, ಒಂಬತ್ತನೇ ತರಗತಿಯಿಂದ 12ನೇ ತರಗತಿವರೆಗೆ ಪ್ರೌಢ ಶಿಕ್ಷಣ ಎಂದು ವರ್ಗೀಕರಿಸಲಾಗಿದೆ. ಸಾರ್ವಜನಿಕ ಶಿಕ್ಷಣ ಆಯುಕ್ತರು ವಿವಿಧ ನಿರ್ದೇಶಕರ ನೆರವಿನೊಂದಿಗೆ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ನಿರ್ವಹಿಸುತ್ತಾರೆ. ರಾಜ್ಯದ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು (I ರಿಂದ VII ತರಗತಿಯ ವರೆಗೆ) ನಿರ್ದೇಶಕರು, ಪ್ರಾಥಮಿಕ ಶಿಕ್ಷಣದ ವ್ಯಾಪ್ತಿಗೆ ಬರುತ್ತವೆ. ರಾಜ್ಯದ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳು (VIII ರಿಂದ X ತರಗತಿಯ ವರೆಗೆ) ನಿರ್ದೇಶಕರು, ಪ್ರೌಢ ಶಿಕ್ಷಣದ ವ್ಯಾಪ್ತಿಗೆ ಬರುತ್ತವೆ. XI ರಿಂದ XII ತರಗತಿಗಳು ನಿರ್ದೇಶಕ ಪದವಿಪೂರ್ವ– ಮಂಡಳಿಯ ಅಡಿಯಲ್ಲಿ ಬರುತ್ತದೆ.

[21] ಈ ವರ್ಗೀಕರಣಗಳಲ್ಲಿ ಕೆಲವು ಅತಿಕ್ರಮಣಗಳಿವೆ. ರಾಜ್ಯದ ಕೆಲವು ಪ್ರಾಥಮಿಕ ಶಾಲೆಗಳು 7 ನೇ ತರಗತಿಯವರೆಗೆ ಮಾತ್ರ ತರಗತಿಗಳನ್ನು ಹೊಂದಿವೆ ಮತ್ತು ರಾಜ್ಯದ ಕೆಲವು ಮಾಧ್ಯಮಿಕ ಶಾಲೆಗಳು 8 ನೇ ತರಗತಿಯನ್ನು ಹೊಂದಿವೆ ಮತ್ತು ಕೆಲವು ಮಾಧ್ಯಮಿಕ ಶಾಲೆಗಳು XI ಮತ್ತು XIIರ ಉನ್ನತ ಮಾಧ್ಯಮಿಕ ತರಗತಿಗಳನ್ನು ಹೊಂದಿವೆ ಏಕೆಂದರೆ ಶಾಲೆಗಳಲ್ಲಿನ ತರಗತಿಗಳ ಮಾದರಿಯು ಶಾಲೆಗಳಲ್ಲಿ ಏಕರೂಪವಾಗಿಲ್ಲ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಕರ್ನಾಟಕ ಪಠ್ಯಪುಸ್ತಕ ಸೊಸೈಟಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ, ಶಾಲಾ ಶಿಕ್ಷಣ ಮತ್ತು ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ರಾಜ್ಯ ಸಂಸ್ಥೆ, ಕೇಂದ್ರೀಕೃತ ಪ್ರವೇಶ ಕೋಶವು ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇಲಾಖೆಯು ಕೇಂದ್ರ ಪ್ರಾಯೋಜಿತ ಯೋಜನೆಗಳಾದ ಸಮಗ್ರ ಶಿಕ್ಷಣ ಯೋಜನೆ, ಪ್ರಧಾನಮಂತ್ರಿ ಪೋಷಣ ಯೋಜನೆ ಮತ್ತು ನವ ಭಾರತ ಸಾಕ್ಷರತಾ ಕಾರ್ಯಕ್ರಮ, ಪಿಎಂ ಶ್ರೀ ಇತ್ಯಾದಿಗಳನ್ನು ನಿರ್ವಹಿಸುತ್ತದೆ.

- **ಉನ್ನತ ಶಿಕ್ಷಣ ಇಲಾಖೆ**

ಉನ್ನತ ಶಿಕ್ಷಣ ಇಲಾಖೆಯು ರಾಜ್ಯದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯಗಳು ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ. ಸ್ವಾಯತ್ತ ಸಂಸ್ಥೆಗಳಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಶ್ರೀ ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್, ಭಾಗವದ್ ರಾಮಾನುಜ ಸಂಶೋಧನಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್ತು, ಎನ್‌ಸಿಸಿ ಇಲಾಖೆ ಇತ್ಯಾದಿಗಳು ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುತ್ತವೆ. ಇಲಾಖೆಯು ಕೇಂದ್ರ ಪ್ರಾಯೋಜಿತ ಯೋಜನೆ ರಾಷ್ಟ್ರೀಯ ಉನ್ನತ ಶಿಕ್ಷಾಣ ಅಭಿಯಾನವನ್ನು[22] ನಿರ್ವಹಿಸುತ್ತದೆ.

### 3.8.1.3 ಆಯವ್ಯಯ ಮತ್ತು ವೆಚ್ಚ

ಅನುದಾನ ಸಂಖ್ಯೆ 17 – ಶಿಕ್ಷಣ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಳೆದ ಮೂರು ವರ್ಷಗಳ (2021–22 ರಿಂದ 2023–24) ಆಯವ್ಯಯ ಅವಕಾಶ, ವೆಚ್ಚ ಮತ್ತು ಬಳಕೆಯಾಗದ ಅವಕಾಶವನ್ನು **ಕೋಷ್ಟಕ–3.12**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.12: ಆಯವ್ಯಯ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ವೆಚ್ಚ | ಬಳಕೆ ಮಾಡದ ಅವಕಾಶ | ಬಳಕೆ ಮಾಡದ ಅವಕಾಶ (ಶೇಕಡಾವಾರು) |
|---|---|---|---|---|---|
| 2021–22 | ರಾಜಸ್ವ | 29,095.38 | 28,556.45 | 538.93 | 1.85 |
| | ಬಂಡವಾಳ | 1,565.66 | 1,521.42 | 44.25 | 2.83 |
| 2022–23 | ರಾಜಸ್ವ | 31,928.27 | 30,831.84 | 1,096.44 | 3.43 |
| | ಬಂಡವಾಳ | 1,628.48 | 1,397.46 | 231.02 | 14.19 |
| 2023–24 | ರಾಜಸ್ವ | 36,381.35 | 33,948.33 | 2,433.02 | 6.69 |
| | ಬಂಡವಾಳ | 1,323.23 | 1,125.72 | 197.51 | 14.93 |

*ಆಕರ: ಧನವಿನಿಯೋಗ ಲೆಕ್ಕಗಳು*

ಆದಾಯದ ಅಡಿಯಲ್ಲಿ ಬಳಕೆಯಾಗದ ಅವಕಾಶದ ಶೇಕಡಾವಾರು ಪ್ರಮಾಣವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಲಾಗಿದೆ. ಆದರೆ ಬಂಡವಾಳದ ಅಡಿಯಲ್ಲಿ 2021–22ರ ಅವಧಿಯಲ್ಲಿ ಕಡಿಮೆಯಿದ್ದ ಬಳಕೆಯಾಗದ ಅವಕಾಶವು 2022–23 ಮತ್ತು 2023–24ರಲ್ಲಿ ಹೆಚ್ಚಾಗಿದ್ದವು. 2023–24ರ ಅವಧಿಯಲ್ಲಿ, ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣವನ್ನು ಪೂರ್ಣಗೊಳಿಸದ ಕಾರಣ ಉಳಿತಾಯಕ್ಕೆ ಕಾರಣವಾಯಿತು.

[22] ರಾಷ್ಟ್ರೀಯ ಶಿಕ್ಷಣ ನೀತಿಯ ಬೆಳಕಿನಲ್ಲಿ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ (ಆರ್‌ಯುಎಸ್‌ಎ) ಯೋಜನೆಯನ್ನು ಜೂನ್ 2023 ರಲ್ಲಿ ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ (ಪಿಎಮ್–ಯುಎಸ್‌ಹೆಚ್‌ಎ) ಎಂದು ಮರುಪ್ರಾರಂಭಿಸಲಾಗಿದೆ.

**3.8.1.4 ಆಯವ್ಯಯದ ಸಿದ್ಧತೆ**

ಆಯವ್ಯಯ ಕೈಪಿಡಿಯ ಕಂಡಿಕೆ 83ರ ಅನ್ವಯ, ಇಲಾಖಾ ಅಂದಾಜುಗಳ ತಯಾರಿಕೆಯು ಹಣಕಾಸು ಇಲಾಖೆಗೆ ಸಲ್ಲಿಸುವ ಅಧಿಕಾರಿಗಳ ವೈಯಕ್ತಿಕ ಗಮನವನ್ನು ಪಡೆಯಬೇಕು. ವೆಚ್ಚದ ಎಲ್ಲಾ ಅಂಶಗಳನ್ನು ಮತ್ತು ಆದಾಯದ ಎಲ್ಲಾ ಮೂಲಗಳನ್ನು ಎಚ್ಚರಿಕೆಯಿಂದ ಮತ್ತು ಕೂಲಂಕಷವಾಗಿ ಪರಿಗಣಿಸಿದ ನಂತರ ಅಂದಾಜುಗಳನ್ನು ರೂಪಿಸಬೇಕು, ಇದರಿಂದ ಅಂದಾಜುವು ಹೆಚ್ಚಾಗಿರದೆ ಅಥವಾ ಕಡಿಮೆ ಆಗಿರದೆ ಸಾಧ್ಯವಾದಷ್ಟು ನಿಖರವಾಗಿರುತ್ತದೆ.

**(ಎ) ಆಯವ್ಯಯದ ಹೆಚ್ಚುವರಿ ನಿಯೋಜನೆ**

2021-22 ರಿಂದ 2023-24ರ ಅವಧಿಯಲ್ಲಿನ ಆಯವ್ಯಯದ ವಿವರಗಳು ಮತ್ತು ಕೆಲವು ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದಂತೆ ವೆಚ್ಚವನ್ನು ಕೆಳಗಿನ **ಕೋಷ್ಟಕ-3.13**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ-3.13: ಆಯವ್ಯಯದ ಹೆಚ್ಚುವರಿ ಅವಕಾಶ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | ಅಧ್ಯರ್ಪಣೆ ಮಾಡದ ಉಳಿತಾಯ |
|---|---|---|---|---|---|---|
| **ಸರ್ಕಾರೇತರ ಕಾಲೇಜುಗಳಿಗೆ ಅನುದಾನ** | | | | | | |
| 2021-22 | 911.99 | 0 | 0 | 0 | 909.96 | 2.03 |
| 2022-23 | 1,108.67 | 0 | 0 | 285.10 | 823.57 | 0 |
| 2023-24 | 1,149.09 | 0 | (-)65.00 | 336.23 | 747.86 | 0 |
| **ಸರ್ಕಾರಿ ಕಾಲೇಜುಗಳಿಗೆ ಅನುದಾನ** | | | | | | |
| 2021-22 | 1,327.75 | 0.01 | (-)2.02 | 0.35 | 1,283.92 | 41.48 |
| 2022-23 | 1,627.45 | 1.51 | (-)1.46 | 127.81 | 1,499.68 | 0 |
| 2023-24 | 1,648.58 | 18.25 | 114.23 | 217.14 | 1,563.65 | 0.27 |
| **ಪದವಿ ಪೂರ್ವ ಮಂಡಳಿಯ ನಿರ್ದೇಶನಾಲಯ** | | | | | | |
| 2021-22 | 75.05 | 0 | (-)5.10 | 41.62 | 28.33 | 0 |
| 2022-23 | 102.86 | 11.00 | 20.00 | 4.90 | 118.54 | 10.41 |
| 2023-24 | 29.20 | 0 | 3.39 | 5.04 | 27.39 | 0.17 |
| **ಮಾಧ್ಯಮಿಕ ಶಿಕ್ಷಣ** | | | | | | |
| 2021-22 | 99.74 | 0.01 | 6.20 | 4.92 | 95.58 | 5.45 |
| 2022-23 | 184.21 | 20.10 | 21.68 | 8.95 | 217.12 | 0.07 (Excess) |
| 2023-24 | 1,384.65 | 21.83 | (-)699.55 | 495.45 | 205.40 | 6.08 |
| **ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ** | | | | | | |
| 2021-22 | 22.15 | 30.05 | 0.35 | 0 | 52.55 | 0 |
| 2022-23 | 33.57 | 44.69 | 0 | 10.14 | 68.11 | 0 |
| 2023-24 | 35.94 | 2.00 | 3.26 | 8.69 | 32.51 | 0 |
| **ಖಾಲಿ ಹುದ್ದೆಗಳಿಗೆ ಅವಕಾಶ** | | | | | | |
| 2021-22 | 101.91 | 0 | (-)48.38 | 53.54 | 0 | 0 |
| 2022-23 | 68.39 | 0 | (-)65.78 | 0.11 | 0 | 2.50 |
| **ಭಾಷಾ ಅಭಿವೃದ್ಧಿ** | | | | | | |
| 2023-24 (1) | 246.58 | 0 | (-)140.43 | 106.15 | 0 | 0 |
| **ಮಾಧ್ಯಮಿಕ ಶಿಕ್ಷಣ** | | | | | | |
| 2023-24 (2) | 1,213.31 | 0 | (-)731.36 | 481.95 | 0 | 0 |

*ಆಕರ: ಅನುದಾನ ವಹಿ*

ಕೋಷ್ಟಕದಿಂದ ಈ ಕೆಳಗಿನವುಗಳನ್ನು ಗಮನಿಸಲಾಗಿದೆ:

- ಸರ್ಕಾರೇತರ ಕಾಲೇಜುಗಳಿಗೆ ಅನುದಾನಕ್ಕೆ ಸಂಬಂಧಿಸಿದಂತೆ, ಲೆಕ್ಕಪತ್ರದ ಅಡಿಯಲ್ಲಿರುವ ವೆಚ್ಚವು ವರ್ಷಗಳಲ್ಲಿ ಇಳಿಮುಖವಾಗುತ್ತಿರುವುದನ್ನು ಗಮನಿಸಿದರೆ, ಇಲಾಖೆಯು ವರ್ಷದಿಂದ ವರ್ಷಕ್ಕೆ ಅನುದಾನವನ್ನು ಹೆಚ್ಚಳದ ಆಧಾರದ ಮೇಲೆ ಪ್ರಸ್ತಾಪಿಸುತ್ತಿದೆ. ತಪ್ಪಿಸಬಹುದಾದ ಪುನರ್ವಿನಿಯೋಗವು ಮತ್ತು ₹686.33 ಕೋಟಿ[23] ಅಧ್ಯರ್ಪಣೆಯು ಈ ಕಾರಣದಿಂದ ಉಂಟಾಗಿದೆ.
- ಇತರರಿಗೆ ಸಂಬಂಧಿಸಿದಂತೆ, 2023–24ರಲ್ಲಿ ಪುನರ್ವಿನಿಯೋಗಿಸಿದ ಮೊತ್ತವನ್ನು ಕೆಲವು ಲೆಕ್ಕ ಶೀರ್ಷಿಕೆಯಲ್ಲಿ ಬಳಸಲಾಗಿಲ್ಲ.
- ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್‌ಗೆ ಸಂಬಂಧಿಸಿದಂತೆ, 2023–24 ನೇ ಸಾಲಿನಲ್ಲಿ ಪಡೆದ ಪೂರಕ ಅನುದಾನಗಳು ಮತ್ತು ಪುನರ್ವಿನಿಯೋಗಗಳನ್ನು ಬಳಸದೆ ಸಂಪೂರ್ಣವಾಗಿ ಅಧ್ಯರ್ಪಿಸಲಾಗಿತ್ತು, ಇದು ಪೂರಕ ಮತ್ತು ಪುನರ್ವಿನಿಯೋಗಗಳ ವೆಚ್ಚದ ಪ್ರಗತಿಯ ವಿಶ್ಲೇಷಣೆಯನ್ನು ಆಧರಿಸಿಲ್ಲ ಎಂದು ಸೂಚಿಸುತ್ತದೆ.
- ಪ್ರತಿ ವರ್ಷ ಖಾಲಿ ಹುದ್ದೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಮತ್ತು ಖಾಲಿ ಹುದ್ದೆಗಳ ಯಾವುದೇ ಮೊತ್ತವನ್ನು ಬಳಸಲಾಗಿಲ್ಲ.

**(ಬಿ) ಆಯವ್ಯಯ ಪ್ರಸ್ತಾವನೆಗಳು ಇಲಾಖೆಯಲ್ಲಿ ಹಣದ ಪರ್ಯಾಯ ಮೂಲಗಳ ಲಭ್ಯತೆಯನ್ನು ಪರಿಗಣಿಸಲಿಲ್ಲ.**

ಗ್ರಂಥಾಲಯಗಳ ಇಲಾಖೆಯಿಂದ ಹಣದ ಕೋರಿಕೆಯು ಅನುದಾನ ಸಂಖ್ಯೆ 17ರ ಭಾಗವಾಗಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ 2021–22 ರಿಂದ 2023–24ರವರೆಗೆ ನಿಗದಿಪಡಿಸಿದ ಮೊತ್ತದ ವಿವರಗಳನ್ನು **ಕೋಷ್ಟಕ–3.14**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–3.14: ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಗೆ ಆಯವ್ಯಯ ಹಂಚಿಕೆ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | ಅಧ್ಯರ್ಪಣೆ ಮಾಡದ ಉಳಿತಾಯ |
|---|---|---|---|---|---|---|
| 2021–22 | 60.86 | 0.00 | 19.60 | 8.72 | 71.20 | 0.53 |
| 2022–23 | 68.26 | 0.00 | 12.51 | 3.80 | 76.89 | 0.08 |
| 2023–24 | 79.34 | 0.00 | 2.51 | 0.00 | 77.06 | 4.79 |

*ಆಕರ: ಇಲಾಖಾ ದಾಖಲೆಗಳು*

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾಯಿದೆ 1965ರ ಅನುಚ್ಛೇದ 30ರ ಅನ್ವಯ, ಗ್ರಂಥಾಲಯ ಸೆಸ್ ಅನ್ನು 26.03.1994ರಿಂದ. ಜಮೀನು ಮತ್ತು ಕಟ್ಟಡಗಳ ಮೇಲಿನ ತೆರಿಗೆ, ಸ್ಥಳೀಯ ಪ್ರದೇಶಕ್ಕೆ ಸರಕುಗಳನ್ನು ಸೇವಿಸಲು, ಬಳಸಲು ಅಥವಾ ಮಾರಾಟಕ್ಕಾಗಿ ಪ್ರವೇಶದ ಮೇಲಿನ ತೆರಿಗೆ, ವಾಹನಗಳ ಮೇಲಿನ ತೆರಿಗೆ ಮತ್ತು ವೃತ್ತಿಗಳು, ವ್ಯಾಪಾರಗಳು, ಕರೆಗಳು ಮತ್ತು ಉದ್ಯೋಗಗಳ ಮೇಲೆ ಪ್ರತಿ ರೂಪಾಯಿಗೆ ಆರು ಪೈಸೆಯಂತೆ ತೆರಿಗೆಯನ್ನು ವಿಧಿಸಲಾಗುತ್ತದೆ. ಸ್ಥಳೀಯ ಸಂಸ್ಥೆಗಳು ಸೆಸ್ ಅನ್ನು ಸಂಗ್ರಹಿಸುತ್ತವೆ ಮತ್ತು ಸಂಗ್ರಹಿಸಿದ ಸೆಸ್‌ನ 10 ಪ್ರತಿಶತವನ್ನು ಉಳಿಸಿಕೊಂಡ ನಂತರ, ಬಾಕಿಯನ್ನು ಸಂಗ್ರಹಣೆ ಶುಲ್ಕವಾಗಿ, ಸಂಬಂಧಪಟ್ಟ ಗ್ರಂಥಾಲಯ ಅಧಿಕಾರಿಗಳಿಗೆ ರವಾನಿಸಲಾಗುತ್ತದೆ. ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯ ವ್ಯಯಕ್ತಿಕ ಠೇವಣಿ ಖಾತೆಗಳಲ್ಲಿ ಲಭ್ಯವಿರುವ ಮೊತ್ತ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ

[23] ಒಟ್ಟು ಅಧ್ಯರ್ಪಣೆ ಮಾಡಿದ ಮೊತ್ತ ₹621.33 ಕೋಟಿ, ಪುನರ್ವಿನಿಯೋಗದ ಮೊತ್ತ ₹65 ಕೋಟಿ ಮತ್ತು ಅಧ್ಯರ್ಪಣೆ ಮಾಡದ ಉಳಿತಾಯದ ಮೊತ್ತ ₹2.03 ಕೋಟಿಗಳಾಗಿವೆ.

ಬಾಕಿಯನ್ನು ಕೆಳಗಿನ **ಕೋಷ್ಟಕ–3.15**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.15: ಗ್ರಂಥಾಲಯದ ಸೆಸ್‌ನ ಸಂಗ್ರಹ ಮತ್ತು ಬಾಕಿಯ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಸೆಸ್ ಸ್ವೀಕರಿಸಿರುವುದು | ವೆಚ್ಚ | ಇಲಾಖೆಯಲ್ಲಿ ಬಾಕಿ ಉಳಿದಿದೆ | ಇಲಾಖೆಗೆ ಸೆಸ್ ರವಾನೆಯಾಗದಿರುವುದು |
|---|---|---|---|---|
| 2021–22 | 119.53 | 140.31 | 41.29 | 637.83 |
| 2022–23 | 155.31 | 141.75 | 54.85 | 700.26 |
| 2023–24 | 202.56 | 131.95 | 125.83 | 733.96 |

*ಆಕರ: ಇಲಾಖಾ ದಾಖಲೆಗಳು*

2023–24ರ ಆಯವ್ಯಯ ಭಾಷಣದಲ್ಲಿ ರಾಜ್ಯದ ಸಾಹಿತಿಗಳು ಮತ್ತು ಪ್ರಕಾಶಕರ ಬೇಡಿಕೆಗಳಿಗೆ ಸ್ಪಂದಿಸಿ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ₹10 ಕೋಟಿ ನೀಡಲಾಗುವುದು ಎಂದು ಉಲ್ಲೇಖಿಸಲಾಗಿದೆ. ಸಾರ್ವಜನಿಕ ಗ್ರಂಥಾಲಯಗಳ ಇತರ ವೆಚ್ಚಗಳ ಅಡಿಯಲ್ಲಿ ಮೊತ್ತವನ್ನು ನಿಗದಿಪಡಿಸಲಾಗಿದೆ. ಮಂಜೂರಾದ ₹10 ಕೋಟಿಯಲ್ಲಿ ₹8.55 ಕೋಟಿ ಬಿಡುಗಡೆ ಮಾಡಿದ್ದು, ಪುಸ್ತಕ ಖರೀದಿಗೆ ಸಂಪೂರ್ಣ ಹಣ ವೆಚ್ಚ ಮಾಡಿರುವುದು ಗಮನಕ್ಕೆ ಬಂದಿದೆ.

ಇಲಾಖೆಯು ಸೆಸ್ ಮೊತ್ತವನ್ನು ಕ್ರೋಢೀಕರಿಸಿದ್ದರೆ ಪುಸ್ತಕಗಳ ಖರೀದಿ ಬೇಡಿಕೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬಹುದಿತ್ತು. ಇಲಾಖೆಯು ₹90 ಕೋಟಿ ಸೆಸ್ ಮೊತ್ತವನ್ನು ಹೊಂದಿದ್ದು, ₹733.96 ಕೋಟಿ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾಗಿದೆ. ಆಯವ್ಯಯ ಮೂಲಗಳ ಜೊತೆಗೆ ಲಭ್ಯವಿರುವ ನಿಧಿಯ ಮೂಲಗಳ ಸಂವಹನವು ಪರಿಣಾಮಕಾರಿ ಆಯವ್ಯಯ ಮತ್ತು ಸೆಸ್ ನಿಧಿಯ ಬಳಕೆಯನ್ನು ಸುಗಮಗೊಳಿಸುತ್ತದೆ.

ಕೇಂದ್ರ ಆಯವ್ಯಯ ತಯಾರಿಕೆಯ ಸಮಯದಲ್ಲಿ, ಭಾರತ ಸರ್ಕಾರವು ಸಾರ್ವಜನಿಕ ಖಾತೆಯಲ್ಲಿ ಲಭ್ಯವಿರುವ ನಿಧಿಗಳ ಮಾಹಿತಿಯನ್ನು (ಸೆಸ್‌ಗಳಿಂದ ಹಣವನ್ನು) ಪಡೆಯುತ್ತದೆ ಎಂದು ಆಡಿಟ್ ಗಮನಿಸಿದೆ. ಇದೇ ರೀತಿಯ ಕಾರ್ಯವಿಧಾನದ ಅನುಪಸ್ಥಿತಿಯಲ್ಲಿ, ಆರ್ಥಿಕ ಇಲಾಖೆ/ರಾಜ್ಯ ಶಾಸಕಾಂಗವು ಸಂಚಿತ ನಿಧಿಯಿಂದ ಅನುದಾನವನ್ನು ಪಡೆಯುವ ಇಲಾಖೆಗಳಲ್ಲಿ ಲಭ್ಯವಿರುವ ಇತರ ನಿಧಿಯ ಮೂಲಗಳನ್ನು ಖಚಿತಪಡಿಸಿಕೊಳ್ಳಲು ಯಾವುದೇ ವಿಧಾನಗಳನ್ನು ಹೊಂದಿಲ್ಲ.

**(ಸಿ) ಓಮ್ನಿಬಸ್ ಉದ್ದೇಶ ಶೀರ್ಷಿಕೆ 059 ಕಾರ್ಯಾಚರಣೆ – ಇತರೆ ವೆಚ್ಚಗಳು**

ವೆಚ್ಚದ ಮೇಲೆ ಇಲಾಖಾ ನಿಯಂತ್ರಣದ ಉದ್ದೇಶಕ್ಕಾಗಿ, ವೇತನಗಳು, ಸಹಾಯಾನುದಾನ, ಹೂಡಿಕೆಗಳು, ಇತ್ಯಾದಿಗಳಂತಹ ಒಳಹರಿವಿನ ವಿಷಯದಲ್ಲಿ ಒಂದು ವಸ್ತುವಿನ ಮೇಲಿನ ವೆಚ್ಚವನ್ನು ವಿಶ್ಲೇಷಿಸುವುದು ಅವಶ್ಯಕವಾಗಿದೆ ಮತ್ತು ಉದ್ದೇಶ ಶೀರ್ಷಿಕೆ "ಇತರ ವೆಚ್ಚಗಳು" ಒಂದು ಉಳಿಕೆ ಲೆಕ್ಕ ಶೀರ್ಷಿಕೆಯಾಗಿದ್ದು ಅದು ಯಾವುದೇ ವಿವರವಾದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತವಾಗಿ ಖಾತೆಗೆ ತರಲಾಗದ ಎಲ್ಲಾ ಶುಲ್ಕಗಳನ್ನು ಸ್ವೀಕರಿಸುತ್ತದೆ. ಉದ್ದೇಶ ಶೀರ್ಷಿಕೆ, ವರ್ಗೀಕರಣದ ಕೊನೆಯ ಹಂತವಾಗಿರುವುದರಿಂದ, ಹೆಚ್ಚಿನ ಮಟ್ಟದ ನಿಖರತೆಯನ್ನು ಅಭ್ಯಾಸ ಮಾಡುವ ಮೂಲಕ ಸಿದ್ಧಪಡಿಸಬೇಕಾದ ವೆಚ್ಚದ ವಸ್ತು/ಸ್ವಭಾವವನ್ನು ಪ್ರದರ್ಶಿಸುತ್ತದೆ.

ಆದಾಗ್ಯೂ, ವರ್ಗೀಕರಣವು ಉತ್ತಮ ನಿಖರತೆಯೊಂದಿಗೆ ಸಾಧ್ಯವಾದರೂ, ವಸ್ತುವಿನ ಲೆಕ್ಕ ಶೀರ್ಷಿಕೆ 059–ಇತರೆ ವೆಚ್ಚಗಳನ್ನು ವಾಡಿಕೆಯಂತೆ ಬಳಸಲಾಗುತ್ತಿದೆ ಎಂದು ಗಮನಿಸಲಾಗಿದೆ. ಉದಾಹರಣೆಗೆ, ಹಿಂದಿನ ಕಂಡಿಕೆಯಲ್ಲಿ ಉಲ್ಲೇಖಿಸಿದಂತೆ, 2023–24ರ ಆಯವ್ಯಯ ಭಾಷಣದಲ್ಲಿ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಗೆ ಪುಸ್ತಕಗಳ ಖರೀದಿಗೆ ₹10 ಕೋಟಿಯನ್ನು ನಿಗದಿಪಡಿಸುವುದಾಗಿ ಸರ್ಕಾರ ಘೋಷಿಸಿತು. ಆಯವ್ಯಯ ದಾಖಲೆ ಮತ್ತು ಲೆಕ್ಕಪತ್ರದಲ್ಲಿ ಕಾಯ್ದಿರಿಸಿದ ವೆಚ್ಚದ ಪರಿಶೀಲನೆ, ಗ್ರಂಥಾಲಯಗಳಿಗೆ ಸಂಬಂಧಿಸಿದ ಇಲಾಖೆಯ ಪ್ರಮುಖ ಚಟುವಟಿಕೆಗಳಲ್ಲಿ ಪುಸ್ತಕಗಳ ಸಂಗ್ರಹಣೆಯು ಒಂದಾಗಿದ್ದರೂ

ಗ್ರಂಥಾಲಯ ಇಲಾಖೆಯ ಲೆಕ್ಕಪತ್ರಗಳಲ್ಲಿ ಪುಸ್ತಕಗಳ ಸಂಗ್ರಹಣೆಯನ್ನು ಪ್ರತಿಬಿಂಬಿಸುವ ಯಾವುದೇ ಉದ್ದೇಶ ಶೀರ್ಷಿಕೆ ಇರಲಿಲ್ಲ. ಉದ್ದೇಶ ಶೀರ್ಷಿಕೆ 059–ಇತರೆ ವೆಚ್ಚಗಳನ್ನು ನಿರ್ವಹಿಸುವ ಮೂಲಕ ಪುಸ್ತಕಗಳ ಸಂಗ್ರಹಣೆಯನ್ನು ಕೈಗೊಳ್ಳಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಇದು ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಬಹಿರಂಗಪಡಿಸದ ಕಾರಣ ಆಯವ್ಯಯ ಮಾಹಿತಿಯ ಗುಣಮಟ್ಟವನ್ನು ದುರ್ಬಲಗೊಳಿಸುವಲ್ಲಿ ಪರಿಣಮಿಸಿತು.

ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯ ಆಯವ್ಯಯದಲ್ಲಿ ವೇತನೇತರ ಉದ್ದೇಶದ ಅಡಿಯಲ್ಲಿ ನಿಗದಿಪಡಿಸಲಾದ ಮೊತ್ತ ಮತ್ತು 2023–24ನೇ ಸಾಲಿನಲ್ಲಿ ಪುಸ್ತಕಗಳ ಖರೀದಿಯ ವೆಚ್ಚವನ್ನು **ಕೋಷ್ಟಕ–3.16**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.16: ಗ್ರಂಥಾಲಯಗಳ ಇಲಾಖೆಯ ವೇತನೇತರ ವೆಚ್ಚಗಳ ವಿರುದ್ಧ ಇತರ ವೆಚ್ಚಗಳ ಮೊತ್ತವನ್ನು ತೋರಿಸುವ ಹೇಳಿಕೆ**

**(₹ ಕೋಟಿಗಳಲ್ಲಿ)**

| ವರ್ಷ | ಉದೇಶ | ಆಯವ್ಯಯ | ವೆಚ್ಚ |
|---|---|---|---|
| **2023–24** | ಸಂಬಳೇತರ ವೆಚ್ಚಗಳು | 22.38 | 21.97 |
| | ಇತರೆ–ವೆಚ್ಚಗಳು (ಸಂಬಳೇತರ ವೆಚ್ಚಗಳ ಅಡಿಯಲ್ಲಿ) | 8.55 | 8.55 |
| | ಇತರೆ ವೆಚ್ಚಗಳ ಶೇಕಡಾ | 38.21 | 38.94 |

*ಆಕರ: ಅನುದಾನ ವಹಿ*

ಪುಸ್ತಕಗಳ ಸಂಗ್ರಹಣೆಯ ವೆಚ್ಚವನ್ನು "059–ಇತರೆ ವೆಚ್ಚಗಳು" ಎಂಬ ಉದ್ದೇಶ ಶೀರ್ಷಿಕೆಗಳ ಅಡಿಯಲ್ಲಿ ಲೆಕ್ಕಹಾಕಲಾಗಿದೆ. ಪುಸ್ತಕಗಳ ಸಂಗ್ರಹಣೆಯ ವೆಚ್ಚವು ಸಂಬಳೇತರ ವೆಚ್ಚದ ಶೇಕಡಾ 38 ಕ್ಕಿಂತ ಹೆಚ್ಚಿದ್ದರೂ ಪುಸ್ತಕಗಳ ಖರೀದಿಗೆ ಬಳಸಲಾದ ಮೊತ್ತವನ್ನು ಗುರುತಿಸಲು ಯಾವುದೇ ವಿಧಾನವಿಲ್ಲ. ಹೀಗಾಗಿ, ಪುಸ್ತಕಗಳ ಸಂಗ್ರಹಣೆಯ ವೆಚ್ಚವನ್ನು "059–ಇತರೆ ಖರ್ಚು" ಎಂಬ ಓಮ್ನಿಬಸ್ ಶೀರ್ಷಿಕೆ ಅಡಿಯಲ್ಲಿ ವರ್ಗೀಕರಿಸುವುದು ಪಾರದರ್ಶಕತೆಯನ್ನು ದುರ್ಬಲಗೊಳಿಸಿತು.

**(ಡಿ) ಆಯವ್ಯಯ ತಯಾರಿಕೆಯಲ್ಲಿ ಡಿ.ಡಿ.ಒಗಳ ಭಾಗವಹಿಸುವಿಕೆ**

ಆಯವ್ಯಯನ್ನು ಆರ್ಥಿಕ ಇಲಾಖೆಯು ಸಿದ್ಧಪಡಿಸುತ್ತದೆ ಮತ್ತು ಈ ಉದ್ದೇಶಕ್ಕಾಗಿ ಇದು ಅಂದಾಜುಗಳನ್ನು ಅಂತಿಮಗೊಳಿಸಿದ ಆಧಾರದ ಮೇಲೆ ವಸ್ತುಗಳನ್ನು ಒದಗಿಸುವಂತೆ ಸಚಿವಾಲಯದ ಇಲಾಖೆಗಳು, ಇಲಾಖೆಗಳ ಮುಖ್ಯಸ್ಥರು ಮತ್ತು ಇತರ ಅಂದಾಜು ಅಧಿಕಾರಿಗಳನ್ನು ವಿನಂತಿಸುತ್ತದೆ. ಇಲಾಖೆಗಳ ಮುಖ್ಯಸ್ಥರು ಪ್ರತಿಯಾಗಿ ಖರ್ಚು ವೆಚ್ಚಗಳಿಗೆ ಆದಾಯವನ್ನು ಸಂಗ್ರಹಿಸುವ ಜಿಲ್ಲಾ ಮತ್ತು ಇತರ ಅಧಿಕಾರಿಗಳು ಒದಗಿಸಿದ ವಸ್ತುಗಳ ಮೇಲೆ ಅವಲಂಬಿತರಾಗಿದ್ದಾರೆ. ಹೀಗಾಗಿ, ಇಲಾಖೆಗಳ ಮುಖ್ಯಸ್ಥರು ತಮಗೆ ಸಂಬಂಧಿಸಿದ ಖಾತೆಗಳ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದಂತೆ ತಮ್ಮ ಅಧೀನ ಅಧಿಕಾರಿಗಳು ಒದಗಿಸಿದ ವಸ್ತುಗಳ ಆಧಾರದ ಮೇಲೆ ಅಂದಾಜುಗಳನ್ನು ಸಿದ್ಧಪಡಿಸುತ್ತಾರೆ ಮತ್ತು ಆ ಇಲಾಖೆಯು ಈ ಹಿಂದೆ ಒದಗಿಸಿದ ನಮೂನೆಗಳಲ್ಲಿ ನಿಗದಿತ ದಿನಾಂಕಗಳ ಮೂಲಕ ಆರ್ಥಿಕ ಇಲಾಖೆಗೆ ಕಳುಹಿಸುತ್ತಾರೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಅಧೀನದಲ್ಲಿರುವ ಡ್ರಾಯಿಂಗ್ ಮತ್ತು ವಿತರಣಾ ಅಧಿಕಾರಿಗಳಿಂದ ಆಯವ್ಯಯ ಅಗತ್ಯತೆಗಳನ್ನು ಕೇಳದೆ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸಿರುವುದು ಕಂಡುಬಂದಿದೆ. ಆಯುಕ್ತರ ಮಟ್ಟದಲ್ಲಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಮತ್ತು ಅಂತಹ ಪ್ರಸ್ತಾವನೆಗಳನ್ನು ಅಧೀನ ಡ್ರಾಯಿಂಗ್ ಮತ್ತು ವಿತರಣಾ ಅಧಿಕಾರಿಗಳಿಂದ ಕೇಳಲಾಗುವುದಿಲ್ಲ ಎಂದು ಆಯುಕ್ತರು ಹೇಳಿದರು. ಆಯವ್ಯಯ ಪ್ರಸ್ತಾವನೆಗಳನ್ನು ಆಡಳಿತ ಇಲಾಖೆಗೆ ಸಲ್ಲಿಸುವ ಮುನ್ನ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಅಂದಾಜುಗಳನ್ನು ಪಡೆದಿಲ್ಲ ಎಂಬುದು ಉತ್ತರದಲ್ಲಿ ದೃಢಪಟ್ಟಿದೆ.

#### 3.8.1.5 ಆಯವ್ಯಯ ನಿಯಂತ್ರಣ

ಆಯವ್ಯಯ ಕೈಪಿಡಿಯ ಕಂಡಿಕೆ 229ರ ಅನ್ವಯ, ಅನುದಾನವನ್ನು ನಿರ್ವಹಿಸುವ ಪ್ರಾಧಿಕಾರವು ತನ್ನ ನಿಯಂತ್ರಣದಲ್ಲಿ ವೆಚ್ಚದ ಪ್ರಗತಿಯನ್ನು ವೀಕ್ಷಿಸಲು ಮತ್ತು ಮಂಜೂರಾದ ಅನುದಾನ ಅಥವಾ ವಿನಿಯೋಗದ ಪರಿಮಿತಿಯೊಳಗೆ ಇಟ್ಟುಕೊಳ್ಳಲು ಜವಾಬ್ದಾರನಾಗಿರುತ್ತಾನೆ. ಇಲಾಖೆಗಳ ಮುಖ್ಯಸ್ಥರು ಕಾಲಕಾಲಕ್ಕೆ ತಮ್ಮ ವಿಲೇವಾರಿಯಲ್ಲಿರುವ ಅನುದಾನಗಳಿಂದ ವೆಚ್ಚವನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆಯವ್ಯಯ ಕೈಪಿಡಿಯ ಕಂಡಿಕೆ 232ರ ಅನ್ವಯ, ಉಳಿತಾಯವನ್ನು ವರ್ಷದಲ್ಲಿ ಅಗತ್ಯವಿಲ್ಲದಿರುವ ವಿನಿಯೋಗಗಳನ್ನು ಅಧ್ಯರ್ಪಣೆ ಮಾಡಲು ನಿರೀಕ್ಷಿಸಿದ ತಕ್ಷಣ ಹಣವನ್ನು ಸಕಾಲಿಕವಾಗಿ ಪುನರ್ವಿನಿಯೋಗಿಸಲು ಕ್ರಮಗಳನ್ನು ತೆಗೆದುಕೊಳ್ಳಲು ನಿಯಂತ್ರಣ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

#### 3.8.1.6 ವೆಚ್ಚದ ನಿಯಂತ್ರಣ

**(ಎ) ವೆಚ್ಚದ ವಿಶ್ಲೇಷಣೆ**

ಅನುದಾನ–17 ಅಡಿಯಲ್ಲಿ 2021–22 ರಿಂದ 2023–24ರವರೆಗಿನ ಒಟ್ಟು ವೆಚ್ಚವು ₹97,381.21 ಕೋಟಿಗಳಾಗಿದ್ದು, ಈ ಪೈಕಿ ₹4,044.60 ಕೋಟಿ (ಶೇಕಡಾ 4.15) ಬಂಡವಾಳದ ಖಾತೆಯ ಅಡಿಯಲ್ಲಿದೆ. ವೆಚ್ಚವನ್ನು ನೇರವಾಗಿ ಇಲಾಖಾ ಅಧಿಕಾರಿಗಳ ಮೂಲಕ ಅಥವಾ ಗೊತ್ತುಪಡಿಸಿದ ಅನುಷ್ಠಾನ ಏಜೆನ್ಸಿಗಳ ಮೂಲಕ ಮಾಡಲಾಗುತ್ತದೆ. ವಿವಿಧ ಅನುಷ್ಠಾನ ಏಜೆನ್ಸಿಗಳಿಗೆ ವರ್ಗಾಯಿಸಲಾದ ಮೊತ್ತವನ್ನು ಸರ್ಕಾರದ ಖಾತೆಯಲ್ಲಿ ವೆಚ್ಚವೆಂದು ಲೆಕ್ಕಹಾಕಲಾಗಿದೆ, ಆದರೂ ಅವುಗಳು ಅನುಷ್ಠಾನಗೊಳಿಸುವ ಏಜೆನ್ಸಿ ಮಟ್ಟದಲ್ಲಿ ಬಳಕೆಗೆ ಬಾಕಿ ಉಳಿದಿವೆ. ಆದ್ದರಿಂದ ಸರ್ಕಾರಿ ಖಾತೆಗಳಲ್ಲಿ ಕಾಯ್ದಿರಿಸಲಾದ ವೆಚ್ಚದ ಮೊತ್ತವು ನಿಜವಾದ ವೆಚ್ಚವನ್ನು ಪ್ರತಿನಿಧಿಸುವುದಿಲ್ಲ. ಏಕ ನೋಡಲ್ ಏಜೆನ್ಸೀಸ್ (ಎಸ್.ಎನ್.ಎ) ಮತ್ತು ಇತರ ಅನುಷ್ಠಾನ ಏಜೆನ್ಸಿಗಳಲ್ಲಿ ಸರ್ಕಾರಿ ಖಾತೆಯ ಹೊರಗೆ ಇರುವ ಬಳಕೆಯಾಗದ ಮೊತ್ತದ ವಿವರಗಳನ್ನು ನಂತರದ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

**(ಬಿ) ಏಕ ನೋಡಲ್ ಏಜೆನ್ಸಿಗಳ (ಎಸ್.ಎನ್.ಎ) ಅಡಿಯಲ್ಲಿ ಬಳಕೆಯಾಗದ ಮೊತ್ತಗಳು.**

ಭಾರತ ಸರ್ಕಾರವು (ಮಾರ್ಚ್ 2021) ಕೇಂದ್ರ ಪ್ರಾಯೋಜಿತ ಯೋಜನೆಯಡಿ (ಸಿ.ಎಸ್.ಎಸ್ ) ಹಣ ಬಿಡುಗಡೆಗಾಗಿ ಪರಿಷ್ಕೃತ ಮಾರ್ಗಸೂಚಿಗಳನ್ನು ಪರಿಚಯಿಸಿತು. ಮಾರ್ಗಸೂಚಿಗಳ ಅನ್ವಯ, ಪ್ರತಿ ರಾಜ್ಯ ಸರ್ಕಾರವು ನಿಧಿಯ ಲಭ್ಯತೆ ಮತ್ತು ಬಳಕೆಯ ಉತ್ತಮ ಮೇಲ್ವಿಚಾರಣೆಗಾಗಿ ಪ್ರತಿ ಸಿ.ಎಸ್.ಎಸ್ ಅನ್ನು ಕಾರ್ಯಗತಗೊಳಿಸಲು ಎಸ್.ಎನ್.ಎ ಗೊತ್ತುಪಡಿಸುತ್ತದೆ. ಅದರಂತೆ, ಸಮಗ್ರ ಶಿಕ್ಷಣ ಅಭಿಯಾನವನ್ನು ಅನುಷ್ಠಾನಗೊಳಿಸುವ ಶಾಲಾ ಶಿಕ್ಷಣ ಇಲಾಖೆ, ಪ್ರಧಾನಮಂತ್ರಿ ಪೋಷಣ ಯೋಜನೆ, ಪಿಎಂಶ್ರೀ ಶಾಲೆಗಳು ಮತ್ತು ರಾಷ್ಟ್ರೀಯ ಉಚ್ಚತಮ್ ಶಿಕ್ಷಣ ಅಭಿಯಾನವನ್ನು ಅನುಷ್ಠಾನಗೊಳಿಸುವ ಉನ್ನತ ಶಿಕ್ಷಣ ಇಲಾಖೆಯನ್ನು ಏಕ ನೋಡಲ್ ಏಜೆನ್ಸಿಗಳಾಗಿ ಗೊತ್ತುಪಡಿಸಲಾಗಿದೆ. ಈ ಯೋಜನೆಗಳಿಗೆ ಅನುದಾನದ ಅಡಿಯಲ್ಲಿ ವರದಿ ಮಾಡಲಾದ ವೆಚ್ಚವು ನಿಜವಾದ ವೆಚ್ಚವನ್ನು ಪ್ರತಿನಿಧಿಸುವುದಿಲ್ಲ. ಇದು **ಕೋಷ್ಟಕ–3.17**ರಲ್ಲಿ ಸೂಚಿಸಿದಂತೆ ಸರ್ಕಾರಿ ಖಾತೆಗಳಿಂದ ಏಕ ನೋಡಲ್ ಏಜೆನ್ಸಿಗಳ ಖಾತೆಗಳಿಗೆ ಹಣ ವರ್ಗಾವಣೆಯನ್ನು ಪ್ರತಿನಿಧಿಸುತ್ತದೆ.

**ಕೋಷ್ಟಕ–3.17: ಲೆಕ್ಕಗಳ ಅನ್ವಯ ವೆಚ್ಚದ ವಿವರಗಳು ಮತ್ತು ಎಸ್.ಎನ್.ಎ ಅಡಿಯಲ್ಲಿ ಬಳಕೆಯಾಗದೆ ಉಳಿದಿರುವ ಬಾಕಿ**

(₹ ಕೋಟಿಗಳಲ್ಲಿ)

| ಯೋಜನೆ | ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | 31.03.2024 ರಂತೆ ಎಸ್.ಎನ್.ಎ ಅಡಿಯಲ್ಲಿ ಬಳಕೆಯಾಗದ ಬಾಕಿ |
|---|---|---|---|---|---|---|---|
| ಪಿ.ಎಂ.ಶ್ರೀ | 2023–24 | 0.02 | 25.15 | 0.00 | 0.00 | 44.00 | 21.05 |
| ಎನ್.ಐ.ಎಲ್.ಪಿ | 2022–23 | 0.00 | 9.87 | 0.00 | 2.47 | 7.40 | 7.40 |
| | 2023–24 | 9.87 | 0.00 | 0.00 | 9.87 | 0.00 | 0.00 |

| ಯೋಜನೆ | ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | 31.03.2024 ರಂತೆ ಎಸ್.ಎನ್.ಎ ಅಡಿಯಲ್ಲಿ ಬಳಕೆಯಾಗದ ಬಾಕಿ |
|---|---|---|---|---|---|---|---|
| **ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ** | 2023–24 | 900.00 | 0.00 | 70.73 | 0.00 | 970.73 | 151.56 |
| **ಸಮಗ್ರ ಶಿಕ್ಷಣ** | 2021–22 | 346.58 | 4.85 | (–)51.70 | 0.00 | 291.09 | 305.24 |
| | 2022–23 | 394.13 | 990.07 | 173.47 | 6.29 | 1,612.28 | |
| | 2023–24 | 1,677.62 | 0.00 | 5.38 | 297.58 | 1,518.55 | |
| **ರಾಷ್ಟ್ರೀಯ ಉಚ್ಚತಮ್ ಶಿಕ್ಷಾ ಅಭಿಯಾನ** | 2021–22 | 98.70 | 0.00 | 0.00 | 0.00 | 39.00 | 42.69 |
| | 2022–23 | 98.70 | 0.00 | 0.00 | 98.70 | 0.00 | |
| | 2023–24 | 0.04 | 18.24 | 0.00 | 18.28 | 0.00 | |

*ಆಕರ: ಅನುದಾನ ವಹಿ ಮತ್ತು ಇಲಾಖಾ ದಾಖಲೆಗಳು*

ಪಿಎಂ ಶ್ರೀ ಯೋಜನೆಗೆ ಸಂಬಂಧಿಸಿದಂತೆ, ಬ್ಯಾಂಕ್ ಖಾತೆಗಳಲ್ಲಿನ ಬಳಕೆಯಾಗದ ಬಾಕಿಯು ಮಾರ್ಚ್ 2024ರ ಅಂತ್ಯದ ವರೆಗೆ ₹11.68 ಲಕ್ಷ ಬಡ್ಡಿಯನ್ನು ಗಳಿಸಿದೆ. ಈ ಪೈಕಿ ₹7.01 ಲಕ್ಷವನ್ನು ಕೇಂದ್ರ ಸರ್ಕಾರದ ಖಾತೆಗೆ ರವಾನೆ ಮಾಡಲಾಗಿದೆ. ಇತರ ಯೋಜನೆಗಳಿಗೆ ಸಂಬಂಧಿಸಿದಂತೆ, ಬಡ್ಡಿ ಮೊತ್ತವನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

**(ಸಿ) ಕೇಂದ್ರ ನೆರವಿನಲ್ಲಿ ನಷ್ಟ**

2021–22ನೇ ವರ್ಷಕ್ಕೆ ಮುನ್ನ ಭಾರತ ಸರ್ಕಾರವು ರಾಷ್ಟ್ರೀಯ ಉಚ್ಚತಮ್ ಶಿಕ್ಷಾ ಅಭಿಯಾನ (ರೂಸ) ಯೋಜನೆಯಡಿ ₹151.10 ಕೋಟಿಯನ್ನು ಒದಗಿಸಿದೆ. ರಾಜ್ಯ ಸರ್ಕಾರವು ಲಭ್ಯವಿರುವ ಹಣವನ್ನು ಸಂಪೂರ್ಣವಾಗಿ ಬಳಸಿಕೊಂಡಿಲ್ಲ ಎಂದು ಗಮನಿಸಲಾಯಿತು. ಬಳಸಿದ ನಿಧಿಗಳಿಗೆ ಇಲಾಖೆಯು ಬಳಕೆ ಪ್ರಮಾಣಪತ್ರಗಳನ್ನು ಸಹ ನೀಡಲಿಲ್ಲ. ಬಿಡುಗಡೆಯಾದ ಮೊತ್ತವನ್ನು ಬಳಸದ ಕಾರಣ, ಭಾರತ ಸರ್ಕಾರವು 2021–24ರ ಅವಧಿಯಲ್ಲಿ ಹಣವನ್ನು ಬಿಡುಗಡೆ ಮಾಡಲಿಲ್ಲ.

ಖಾತೆಯಲ್ಲಿ ಬಳಕೆಯಾಗದ ಕೇಂದ್ರ ಪಾಲು ಮೊತ್ತ ₹25.41 ಕೋಟಿಯನ್ನು ಹಿಂದಿರುಗಿಸಲು ಭಾರತ ಸರ್ಕಾರವು (ಜನವರಿ 2024) ನಿರ್ದೇಶಿಸಿದೆ ಎಂದು ಗಮನಿಸಲಾಯಿತು. ಹೀಗಾಗಿ, ನಿಧಿಯ ಬಳಕೆಯಲ್ಲಿ ವಿಫಲವಾದ ಕಾರಣ, 2021–24ರ ಅವಧಿಯಲ್ಲಿ ರಾಜ್ಯವು ಕೇಂದ್ರ ಅನುದಾನವನ್ನು ಕಳೆದುಕೊಂಡಿತು ಮತ್ತು ಬಳಸದ ಬಾಕಿಯಿಂದ ₹25.41 ಕೋಟಿಯನ್ನು ಹಿಂದಿರುಗಿಸುವ ಹೊಣೆಗಾರಿಕೆಯನ್ನು ಸೃಷ್ಟಿಸಿತು.

**(ಡಿ) ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಮುಂಗಡ ಮೊತ್ತ**

ಇಲಾಖೆಗಳು ಬಂಡವಾಳ ಸ್ವರೂಪದ ವಿವಿಧ ಕಾಮಗಾರಿಗಳನ್ನು ಕರ್ನಾಟಕ ವಸತಿ ಮಂಡಳಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ರೈಲ್ ಇಂಡಿಯಾ ತಾಂತ್ರಿಕ ಮತ್ತು ಆರ್ಥಿಕ ಸೇವೆ (ಆರ್‌ಐಟಿಇಎಸ್) ನಂತಹ ನಿರ್ಮಾಣ ಸಂಸ್ಥೆಗಳಿಗೆ ವಹಿಸುತ್ತವೆ. ಹಣವನ್ನು ಪಾವತಿದಾರರ ರಶೀದಿ ಬಿಲ್‌ಗಳಲ್ಲಿ ಪಡೆಯಲಾಗುತ್ತದೆ ಮತ್ತು ಈ ಕಾರ್ಯನಿರ್ವಾಹಕ ಸಂಸ್ಥೆಗಳಿಗೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ವರ್ಗಾಯಿಸಲಾಗುತ್ತದೆ. ಹೀಗಾಗಿ, ಆಯವ್ಯಯದಲ್ಲಿ ವೆಚ್ಚವಾಗಿ ವರದಿ ಮಾಡಲಾದ ವೆಚ್ಚವು ಕೆಳಗೆ ವಿವರಿಸಿದಂತೆ ಏಜೆನ್ಸಿಗಳಿಗೆ ಮುಂಗಡಗಳನ್ನು ಪ್ರತಿನಿಧಿಸುತ್ತದೆ:

ಪಾಲಿಟೆಕ್ನಿಕ್‌ಗಳ ನಿರ್ಮಾಣ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ನಿರ್ಮಾಣಕ್ಕಾಗಿ ಅನುದಾನ–17ರ 4202–02–104–1–01 ಮತ್ತು 4202–02–104–1–03ರ ಬಂಡವಾಳ ಖಾತೆ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸಲಾಗಿದೆ. 2021–22 ರಿಂದ 2023–24ರ ಅವಧಿಯಲ್ಲಿ ಈ ಶೀರ್ಷಿಕೆಗಳ ಅಡಿಯಲ್ಲಿ ಒದಗಿಸಲಾದ ಮೊತ್ತವನ್ನು **ಕೋಷ್ಟಕ–3.18**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.18: ಪಾಲಿಟೆಕ್ನಿಕ್‌ಗಳು ಮತ್ತು ಎಂಜಿನಿಯರಿಂಗ್ ಕಾಲೇಜುಗಳ ನಿರ್ಮಾಣಕ್ಕೆ ಒದಗಿಸಲಾದ ಮೊತ್ತ**

(₹ ಕೋಟಿಗಳಲ್ಲಿ)

| ವರ್ಷ | ನಿರ್ಮಾಣ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | ಉಳಿತಾಯ |
|---|---|---|---|---|---|---|---|
| **2021–22** | ಪಾಲಿಟೆಕ್ನಿಕ್‌ಗಳು | 70.00 | 0.00 | 0.00 | 0.00 | 70.00 | 0.00 |
| | ಎಂಜಿನಿಯರಿಂಗ್ ಕಾಲೇಜುಗಳು | 50.00 | 0.00 | 0.00 | 0.00 | 50.00 | 0.00 |
| **2022–23** | ಪಾಲಿಟೆಕ್ನಿಕ್‌ಗಳು | 76.49 | 0.00 | (–)5.88 | 0.04 | 70.57 | 0.00 |
| | ಎಂಜಿನಿಯರಿಂಗ್ ಕಾಲೇಜುಗಳು | 71.00 | 79.21 | 0.00 | 0.00 | 150.21 | 0.00 |
| **2023–24** | ಪಾಲಿಟೆಕ್ನಿಕ್‌ಗಳು | 90.00 | 10.00 | 0.00 | 30.00 | 60.40 | 9.60 |
| | ಎಂಜಿನಿಯರಿಂಗ್ ಕಾಲೇಜುಗಳು | 40.00 | 4.73 | 0.00 | 0.00 | 44.73 | 0.00 |
| ಒಟ್ಟು | | | | | | **445.90** | |

*ಆಕರ: ಅನುದಾನ ವಹಿ*

ಆಯವ್ಯಯ ಶೀರ್ಷಿಕೆಗಳ ಅಡಿಯಲ್ಲಿ ಲೆಕ್ಕಹಾಕಲಾದ ವೆಚ್ಚದ ಮೊತ್ತವು ಆರ್‌ಐಟಿಇಎಸ್, ಕೆಹೆಚ್.ಬಿ, ಪಿ.ಡಬ್ಲ್ಯೂ.ಡಿ ಮುಂತಾದ ನಿರ್ಮಾಣ ಸಂಸ್ಥೆಗಳಿಗೆ ನೀಡಲಾದ ಮುಂಗಡ ಮೊತ್ತವನ್ನು ಪ್ರತಿನಿಧಿಸುತ್ತದೆ. ಸಂಪೂರ್ಣ ಮೊತ್ತವನ್ನು ಡ್ರಾ ಮಾಡಿ ಏಜೆನ್ಸಿಗಳಿಗೆ ವರ್ಗಾಯಿಸಲಾಗಿದ್ದರೂ, ಈ ಏಜೆನ್ಸಿಗಳು ಮಾಡಿದ ನಿಜವಾದ ವೆಚ್ಚವನ್ನು ಮಾಡಿದ ಮುಂಗಡಗಳ ವಿರುದ್ಧ ಖಚಿತಪಡಿಸಿಕೊಳ್ಳಲು ಆವರ್ತಕ ಆಧಾರದ ಮೇಲೆ ಖರ್ಚಿನ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯವಿಧಾನ ಇರಲಿಲ್ಲ. ಹೀಗಾಗಿ, ಬಜೆಟ್‌ನಲ್ಲಿನ ವೆಚ್ಚದ ಮೊತ್ತವು ಅನುಷ್ಠಾನ ಸಂಸ್ಥೆಗಳಿಗೆ ನಿಧಿಯ ವರ್ಗಾವಣೆಯನ್ನು ಮಾತ್ರ ಸೂಚಿಸುತ್ತದೆ ಮತ್ತು ನಿಜವಾದ ವೆಚ್ಚವಲ್ಲ.

**(ಇ) ವಿನಿಯೋಗಿಸುವ ಅಧಿಕಾರಿಗಳಿಂದ ಮಾಸಿಕ ವೆಚ್ಚದ ಹೇಳಿಕೆಯನ್ನು ನಿಯಂತ್ರಣ ಅಧಿಕಾರಿಗಳಿಗೆ ಸಲ್ಲಿಸುವುದು.**

ಆಯವ್ಯಯ ಕೈಪಿಡಿಯ ಅನ್ವಯ, ಪ್ರತಿ ತಿಂಗಳ ಮುಕ್ತಾಯದ ನಂತರ, ಪ್ರತಿಯೊಬ್ಬ ವಿತರಣಾ ಅಧಿಕಾರಿಯು, ಮುಖ್ಯ ನಿಯಂತ್ರಣಾಧಿಕಾರಿಯು ಖಜಾನೆ ಅಧಿಕಾರಿಯೊಂದಿಗೆ ಸಮಾಲೋಚಿಸಿ ಸೂಚಿಸಬಹುದಾದ ಖಜಾನೆ ಅಂಕಿಅಂಶಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡ ನಂತರ, ಹಿಂದಿನ ತಿಂಗಳಿನ ವೆಚ್ಚ ಮತ್ತು ಹೊಣೆಗಾರಿಕೆಗಳ ಹೇಳಿಕೆಗಳನ್ನು ನಮೂನೆ ಬಿ.ಎಂ ಸಂಖ್ಯೆ 15ಎ ಮತ್ತು 15ಬಿ ಯಲ್ಲಿ ತನಗಿಂತ ಮೇಲಿರುವ ನಿಯಂತ್ರಣಾಧಿಕಾರಿಗೆ ಕಳುಹಿಸಬೇಕು.

ಈ ಕೆಳಗಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ಕಾರ್ಯವಿಧಾನವನ್ನು ಸ್ಥಾಪಿಸುವ ಮೂಲಕ ಖರ್ಚಿನ ಪ್ರಗತಿಯನ್ನು ಗಮನಿಸಲಾಗಿಲ್ಲ ಎಂದು ಗಮನಿಸಲಾಗಿದೆ.

**ಕೋಷ್ಟಕ–3.19: ಶಿಕ್ಷಣ ಇಲಾಖೆಯಿಂದ ಶಾಲಾ ಸೌಲಭ್ಯಗಳ ನಿರ್ವಹಣೆಗೆ ಒದಗಿಸಲಾದ ಮೊತ್ತ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | ಉಳಿತಾಯ |
|---|---|---|---|---|---|---|
| **2021–22** | 41.03 | 0.00 | 0.00 | 0.00 | 40.90 | 0.13 |
| **2022–23** | 51.00 | 0.00 | 0.00 | 0.11 | 50.89 | 0.22 |
| **2023–24** | 97.40 | 20.00 | 0.00 | 18.14 | 99.26 | 0.00 |

*ಆಕರ: ಅನುದಾನ ವಹಿ*

ಬಿಡುಗಡೆಯ ಷರತ್ತುಗಳ ಪ್ರಕಾರ, ಶಾಲೆಗಳು ಮೊತ್ತವನ್ನು ವೆಚ್ಚ ಮಾಡಿದ ನಂತರ ಬಳಕೆಯ ಪ್ರಮಾಣಪತ್ರಗಳನ್ನು ಸಲ್ಲಿಸಬೇಕಾಗಿತ್ತು. ಆದಾಗ್ಯೂ, ನಿಧಿಯ ನೈಜ ಬಳಕೆಯ ಬಗ್ಗೆ ಇಲಾಖೆಯು ಯಾವುದೇ ವಿವರಗಳನ್ನು ನಿರ್ವಹಿಸಿಲ್ಲ.

**(ಎಫ್) ಒಟ್ಟು ಮೊತ್ತದ ನಿಧಿ ಪೂರೈಕೆ – ಆರ್‌ಟಿಇ**

ಶಿಕ್ಷಣ ಹಕ್ಕು ಕಾಯ್ದೆಯಡಿ ಖಾಸಗಿ ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಯನ್ನು ಇಲಾಖೆ ಒದಗಿಸುತ್ತದೆ. ಶಾಲೆಗಳಿಗೆ ವಿತರಿಸಲು ಜಿಲ್ಲಾ ಅಧಿಕಾರಿಗಳಿಗೆ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಎಂದು ಗಮನಿಸಲಾಯಿತು. ಸಾರ್ವಜನಿಕ ಶಿಕ್ಷಣ ಆಯುಕ್ತರು ನಿಧಿಯ ಬಳಕೆಯನ್ನು ಮೇಲ್ವಿಚಾರಣೆ ಮಾಡಬೇಕಾಗಿತ್ತು. ಆದಾಗ್ಯೂ, ನಿಧಿಯ ನಿಜವಾದ ಬಳಕೆಯ ಬಗ್ಗೆ ಇಲಾಖೆಯು ಯಾವುದೇ ವಿವರಗಳನ್ನು ನಿರ್ವಹಿಸಲಿಲ್ಲ.

**ಕೋಷ್ಟಕ–3.20: ಆರ್‌ಟಿಇಗಾಗಿ ಹಂಚಿಕೆಯಾದ ಹಣ ಮತ್ತು ಮಾಡಿದ ವೆಚ್ಚ**

**(₹ ಕೋಟಿಗಳಲ್ಲಿ)**

| ವರ್ಷ | ಆಯವ್ಯಯ | ಪೂರಕ | ಪುನರ್ವಿನಿಯೋಗ | ಅಧ್ಯರ್ಪಣೆ | ವೆಚ್ಚ | ಉಳಿತಾಯ |
|---|---|---|---|---|---|---|
| **2021–22** | 700.00 | 0.00 | 0.00 | 0.00 | 699.99 | 0.01 |
| **2022–23** | 500.00 | 0.00 | (–)142.85 | 0.00 | 357.15 | 0.01 |
| **2023–24** | 296.00 | 0.00 | 0.00 | 0.00 | 294.79 | 1.21 |

*ಆಕರ: ಅನುದಾನ ವಹಿ*

ಖರ್ಚಿನ ವಿವರಗಳು ಇಲ್ಲದ ಕಾರಣ, ಆರ್‌ಟಿಇ ಅಡಿಯಲ್ಲಿ ಜಿಲ್ಲಾ ಅಧಿಕಾರಿಗಳು ಅಂತಿಮವಾಗಿ ಎಷ್ಟು ಹಣವನ್ನು ಬಳಸಿದ್ದಾರೆಂದು ಖಚಿತವಾಗಿ ಹೇಳಲಾಗುತ್ತಿರಲಿಲ್ಲ.

**(ಜಿ) ಕಾರ್ಯಕ್ರಮದ ಅನುದಾನಗಳ ಮರುಪಾವತಿ**

ವೀಕ್ಷಣೆಯಿಂದ ಸಮಗ್ರ ಶಿಕ್ಷಣದ ಬಗ್ಗೆ ಪಡೆದ ಮಾಹಿತಿಯ ಪ್ರಕಾರ[24], ವೇತನ ಅನುದಾನಗಳ ಮರುಪಾವತಿಯನ್ನು **ಕೋಷ್ಟಕ–3.21**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.21: ಅವಲೋಕನದಿಂದ ಸಮಗ್ರ ಶಿಕ್ಷಣ ಅಭಿಯಾನಕ್ಕೆ ಸಂಬಂಧಿಸಿದಂತೆ ಮರುಪಾವತಿ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ವಿವರ | ಲೆಕ್ಕ ಶೀರ್ಷಿಕೆ | ಮರುಪಾವತಿ |
|---|---|---|---|
| 2021–22 | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಕಾರ್ಯಕ್ರಮದ ಅನುದಾನಗಳ ಮರುಪಾವತಿ | 2202–01–911–0–10 | (–)21.33 |
| | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಸಂಬಳ ಅನುದಾನಗಳ ಮರುಪಾವತಿ | 2202–01–911–0–09 | (–)735.09 |
| 2022–23 | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಕಾರ್ಯಕ್ರಮದ ಅನುದಾನಗಳ ಮರುಪಾವತಿ | 2202–01–911–0–10 | (–)95.90 |
| | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಸಂಬಳ ಅನುದಾನಗಳ ಮರುಪಾವತಿ | 2202–01–911–0–09 | (–)562.29 |
| 2023–24 | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಕಾರ್ಯಕ್ರಮದ ಅನುದಾನಗಳ ಮರುಪಾವತಿ | 2202–01–911–0–10 | (–)21.33 |
| | ಎಸ್. ಎನ್. ಎ ಬ್ಯಾಂಕ್ ಖಾತೆ–ಸಮಗ್ರ ಶಿಕ್ಷಣದಿಂದ ಸಂಬಳ ಅನುದಾನಗಳ ಮರುಪಾವತಿ | 2202–01–911–0–09 | (–)735.09 |
| **ಒಟ್ಟು** | | | **(–)2,171.03** |

ಅವಲೋಕನದ ಅನ್ವಯ, ಸಮಗ್ರ ಶಿಕ್ಷಣ ಅಭಿಯಾನದ ಅಡಿಯಲ್ಲಿ ₹2,171.03 ಕೋಟಿ ಮೊತ್ತವನ್ನು ಮರುಪಾವತಿಸಲಾಗಿದೆ. ಹೀಗಾಗಿ, ಹಿಂದಿನ ವರ್ಷಗಳಲ್ಲಿ ವರದಿಯಾದ ವೆಚ್ಚವನ್ನು ತೋರಿಸುವ ಮೂಲಕ

[24] ಅವಲೋಕನ ಸಾಫ್ಟ್‌ವೇರ್ ಕರ್ನಾಟಕ ಸರ್ಕಾರವು ಪ್ರಾರಂಭಿಸಿದ ನಿರ್ಧಾರ ಬೆಂಬಲ ವ್ಯವಸ್ಥೆಯಾಗಿದೆ. ಇದು 1,800 ಕಾರ್ಯಕ್ರಮಗಳಿಗೆ ಸಂಬಂಧಿಸಿದ ವೆಚ್ಚಗಳು ಮತ್ತು ನಿರ್ಬಂಧಗಳ ಮಾಹಿತಿಯನ್ನು ಪ್ರವೇಶಿಸಲು ಸರ್ಕಾರಕ್ಕೆ ಅವಕಾಶ ನೀಡುತ್ತದೆ. ಈ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಹಣಕಾಸಿನ ಅಂಶಗಳನ್ನು ನಿರ್ವಹಿಸಲು ಈ ಡೇಟಾ ಸರ್ಕಾರಕ್ಕೆ ಸಹಾಯ ಮಾಡುತ್ತದೆ.

ಹಿಂದಿನ ವರ್ಷದ ಸ್ಟ್ಯಾಂಡ್‌ಗಳಲ್ಲಿ ಕಡಿತಗೊಳಿಸಲಾದ ಖರ್ಚು ಕೇವಲ ಸರ್ಕಾರಿ ಖಾತೆಯಿಂದ ಎಸ್. ಎನ್. ಎ ಖಾತೆಗೆ ಹಣದ ವರ್ಗಾವಣೆಯಾಗಿದೆ ಮತ್ತು ಯೋಜನೆಯಡಿಯಲ್ಲಿ ನಿಜವಾದ ವೆಚ್ಚವಲ್ಲ. ಆದಾಗ್ಯೂ, ಲೆಕ್ಕಗಳ ಅನ್ವಯ, ಸಮಗ್ರ ಶಿಕ್ಷಣ ಅಭಿಯಾನದ ಅಡಿಯಲ್ಲಿ ಮರುಪಾವತಿಸಲಾದ ಮೊತ್ತ ₹1,393.28 ಕೋಟಿ. ಅಂಕಿಅಂಶಗಳ ನಡುವೆ ವ್ಯತ್ಯಾಸವಿರುವುದರಿಂದ, ಇದಕ್ಕೆ ಸಮನ್ವಯದ ಅಗತ್ಯವಿದೆ.

### *3.8.2 ಅನುದಾನ ಸಂಖ್ಯೆ. 8ರ ವಿಮರ್ಶೆ – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ*

#### 3.8.2.1 ಪೀಠಿಕೆ

ಕರ್ನಾಟಕ ಅರಣ್ಯ ಇಲಾಖೆಯು ಅರಣ್ಯಗಳು ಮತ್ತು ವನ್ಯಜೀವಿಗಳನ್ನು ರಕ್ಷಿಸುವುದು, ರಾಜ್ಯದ ಶ್ರೀಮಂತ ಜೀವವೈವಿಧ್ಯವನ್ನು ಸಂರಕ್ಷಿಸುವುದು ಮತ್ತು ಅರಣ್ಯ ಪರಿಸರ ವ್ಯವಸ್ಥೆಗಳ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ಪ್ರಾಥಮಿಕ ಕರ್ತವ್ಯವಾಗಿದೆ. ಅನುದಾನವು ಈ ಕೆಳಗಿನ ಪ್ರಮುಖ ಶೀರ್ಷಿಕೆಗಳನ್ನು ಒಳಗೊಂಡಿದೆ:

2406 – ಅರಣ್ಯ
3435 – ಪರಿಸರ ವಿಜ್ಞಾನ ಮತ್ತು ಪರಿಸರ
4406 – ಅರಣ್ಯ ಮತ್ತು ವನ್ಯಜೀವಿಗಳ ಮೇಲಿನ ಬಂಡವಾಳ ವಿನಿಯೋಗ

#### 3.8.2.2 ಆಯವ್ಯಯ ಮತ್ತು ವೆಚ್ಚ

ಮೂರು ವರ್ಷಗಳ (2021–22, 2022–23 ಮತ್ತು 2023–24) ಅನುದಾನ ಸಂಖ್ಯೆ 08ರ ಕ್ರಿಯಾತ್ಮಕ ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಆಯವ್ಯಯ ಅವಕಾಶ, ಖರ್ಚು ಮತ್ತು ಬಳಕೆಯಾಗದ ಅವಕಾಶಗಳ ಒಟ್ಟಾರೆ ಸ್ಥಾನವನ್ನು **ಕೋಷ್ಟಕ–3.22**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.22: 2021–22 ರಿಂದ 2023–24ರ ಅವಧಿಯ ಆಯವ್ಯಯ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗ | ಒಟ್ಟು ಆಯವ್ಯಯ | ವೆಚ್ಚ | ಉಳಿತಾಯ | ಉಳಿತಾಯದ ಶೇಕಡಾವಾರು |
|---|---|---|---|---|---|
| **2021–22** | ರಾಜಸ್ವ – (ಪುರಸ್ಕೃತ) | 1,744.61 | 1,594.40 | 150.21 | 8.61 |
| | ರಾಜಸ್ವ – *(ಪ್ರಭೃತ)* | *19.31* | *18.03* | *1.28* | *6.63* |
| | ಬಂಡವಾಳ– (ಪುರಸ್ಕೃತ) | 535.50 | 535.17 | 0.33 | 0.06 |
| **2022–23** | ರಾಜಸ್ವ – (ಪುರಸ್ಕೃತ) | 1,848.63 | 1,739.02 | 109.61 | 5.93 |
| | ರಾಜಸ್ವ – *(ಪ್ರಭೃತ)* | *20.15* | *15.60* | *4.55* | *22.58* |
| | ಬಂಡವಾಳ – (ಪುರಸ್ಕೃತ) | 607.00 | 606.77 | 0.23 | 0.04 |
| **2023–24** | ರಾಜಸ್ವ – (ಪುರಸ್ಕೃತ) | 1,838.23 | 1,718.37 | 119.86 | 6.52 |
| | ರಾಜಸ್ವ – *(ಪ್ರಭೃತ)* | *20.15* | *14.39* | *5.76* | *28.59* |
| | ಬಂಡವಾಳ – (ಪುರಸ್ಕೃತ) | 672.00 | 671.60 | 0.40 | 0.06 |

*ಆಕರ: ಅನುದಾನ ವಹಿ*

2021–22 ರಿಂದ 2023–24ರ ಅವಧಿಯಲ್ಲಿ, ಒಟ್ಟು ಅವಕಾಶದ ಶೇಕಡಾವಾರು ಪ್ರಮಾಣದಲ್ಲಿ, ಬಳಕೆಯಾಗದ ಅವಕಾಶವು ರಾಜಸ್ವದ ಪುರಸ್ಕೃತದ ಅಡಿಯಲ್ಲಿ ಆರು ಮತ್ತು ಒಂಬತ್ತು ಪ್ರತಿಶತದ ನಡುವೆ, ರಾಜಸ್ವ *ಪ್ರಭೃತದ* ಅಡಿಯಲ್ಲಿ ಆರು ಮತ್ತು 29 ಪ್ರತಿಶತದ ನಡುವೆ ಮತ್ತು ಬಂಡವಾಳ ಪುರಸ್ಕೃತದ ಅಡಿಯಲ್ಲಿ ಶೂನ್ಯ ಮತ್ತು ಒಂದು ಪ್ರತಿಶತದ ನಡುವೆ ಇತ್ತು.

#### 3.8.2.3 ನಿರೀಕ್ಷಿತ ಉಳಿತಾಯವನ್ನು ಅಧ್ಯರ್ಪಿಸಲಾಗಲಿಲ್ಲ / ಭಾಗಶಃ ಅಧ್ಯರ್ಪಿಸಲಾಗದ / ಹೆಚ್ಚುವರಿ ಅಧ್ಯರ್ಪಣೆ

1975ರ ಕೆಬಿಎಂನ 264ರ ಅನ್ವಯ, ಖರ್ಚು ಮಾಡಲಾದ ಇಲಾಖೆಗಳು ಉಳಿತಾಯವನ್ನು ನಿರೀಕ್ಷಿಸಿದಾಗ ಆರ್ಥಿಕ ಇಲಾಖೆಗೆ ಅನುದಾನ/ವಿನಿಯೋಗ ಅಥವಾ ಅದರ ಭಾಗವನ್ನು ಅಧ್ಯರ್ಪಿಸಬೇಕು. ಇದಲ್ಲದೆ, ಆರ್ಥಿಕ ಇಲಾಖೆಯು ಇತರ ಅಗತ್ಯವಿರುವ ಯೋಜನೆಗಳಲ್ಲಿ ನಿರೀಕ್ಷಿತ ಉಳಿತಾಯವನ್ನು

ಪರಿಣಾಮಕಾರಿಯಾಗಿ ಮರು ನಿಯೋಜಿಸಲು ಅನುವು ಮಾಡಿಕೊಡಲು, ಹಣಕಾಸು ವರ್ಷದ ಅಂತ್ಯದವರೆಗೆ ಕಾಯದೆ ಉಳಿತಾಯವನ್ನು ನಿರೀಕ್ಷಿಸಿದಾಗ ಹಣವನ್ನು ಅಧ್ಯರ್ಪಿಸಬೇಕು.

2021-22 ರಿಂದ 2023-24ರ ಅವಧಿಯಲ್ಲಿ ಅನುದಾನದ ಆದಾಯ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ ಉಳಿತಾಯ, ಅಧ್ಯರ್ಪಣೆ ಮೊತ್ತ ಮತ್ತು ಅಧ್ಯರ್ಪಣೆಯಾಗದ ಮೊತ್ತದ ವಿವರಗಳನ್ನು **ಕೋಷ್ಟಕ-3.23**ರಲ್ಲಿ ನೀಡಲಾಗಿದೆ.

**ಕೋಷ್ಟಕ-3.23: ಹೆಚ್ಚುವರಿ ಅಧ್ಯರ್ಪಣೆಯ / ಭಾಗಶಃ ಅಧ್ಯರ್ಪಣೆಯ / ನಿರೀಕ್ಷಿತ ಉಳಿತಾಯದ ಅಧ್ಯರ್ಪಣೆಯ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಉಳಿತಾಯ | | ಅಧ್ಯರ್ಪಣೆ | | ಅಧ್ಯರ್ಪಣೆ ಮಾಡದಿರುವುದು | |
|---|---|---|---|---|---|---|
| | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ |
| 2021-22 | 151.48 | 0.33 | 137.66 | 0.33 | 13.82 | 0.00 |
| 2022-23 | 114.16 | 0.23 | 129.97 | 0.23 | (-)15.82 | 0.00 |
| 2023-24 | 125.63 | 0.40 | 135.80 | 0.40 | (-)10.18 | 0.00 |

*ಆಕರ: ಧನವಿನಿಯೋಗ ಲೆಕ್ಕಗಳು*

2021-22ರಲ್ಲಿ, ರಾಜಸ್ವದ ಅಡಿಯಲ್ಲಿ ಅಧ್ಯರ್ಪಣೆಯಾದ ಮೊತ್ತವು ಉಳಿತಾಯದ ಸುಮಾರು 91 ಪ್ರತಿಶತದಷ್ಟಿದೆ. ಆದಾಗ್ಯೂ, ಮೂರು ವರ್ಷಗಳಲ್ಲಿ ಬಂಡವಾಳದ ಅಡಿಯಲ್ಲಿ ಅಧ್ಯರ್ಪಣೆಯಾದ ಮೊತ್ತವು ಶೇಕಡಾ 100 ರಷ್ಟಿತ್ತು. 2022-23 ಮತ್ತು 2023-24ರಲ್ಲಿ ರಾಜಸ್ವದ ಅಡಿಯಲ್ಲಿ ಅಧ್ಯರ್ಪಣೆಯಾದ ಮೊತ್ತವು ಉಳಿತಾಯವನ್ನು ಮೀರಿದೆ. ಉಳಿತಾಯವನ್ನು ಮೀರಿದ ಅಧ್ಯರ್ಪಣೆಗೆ ಕಾರಣವನ್ನು ವಿಶ್ಲೇಷಿಸಲಾಯಿತು ಮತ್ತು ಅದು ಹೆಚ್ಚುವರಿ ವೆಚ್ಚವನ್ನು ಪೂರೈಸಲು ಪುನರ್ವಿನಿಯೋಗದ ಮೂಲಕ ಹೆಚ್ಚುವರಿ ಹಣವನ್ನು ಒದಗಿಸಲಾದ ಅನೇಕ ಘಟಕಗಳಲ್ಲಿ ಉದ್ದೇಶಿತ ಉದ್ದೇಶವನ್ನು ಕಾರ್ಯಗತಗೊಳಿಸದ ಕಾರಣ ಹಣವನ್ನು ಅಧ್ಯರ್ಪಣೆಮಾಡಲಾಗಿದೆ ಎಂದು ತಿಳಿದುಬಂದಿತು. ಅಂತಹ ಪುನರ್ವಿನಿಯೋಗದ ಅಧ್ಯರ್ಪಣೆಯು ಅನುದಾನದಲ್ಲಿನ ನಿಜವಾದ ಒಟ್ಟು ಉಳಿತಾಯಕ್ಕಿಂತ ಹೆಚ್ಚುವರಿ ಅಧ್ಯರ್ಪಣೆಗೆ ಕಾರಣವಾಯಿತು.

### 3.8.2.4 ಸತತ ಉಳಿತಾಯಗಳು

ಕೆಬಿಎಂನ ಕಂಡಿಕೆ 110, ಮುಂದಿನ ವರ್ಷದ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವಾಗ ಹಿಂದಿನ ಮೂರು ಹಣಕಾಸು ವರ್ಷಗಳ ಹಿಂದಿನ ಕಾರ್ಯಕ್ಷಮತೆಯ ಸೂಕ್ತ ಟಿಪ್ಪಣಿಯನ್ನು ತೆಗೆದುಕೊಳ್ಳಬಹುದು ಎಂದು ಷರತ್ತು ವಿಧಿಸುತ್ತದೆ.

ಆದಾಗ್ಯೂ, 2021-22 ರಿಂದ 2022-23ರವರೆಗೆ **ಕೋಷ್ಟಕ-3.24**ರಲ್ಲಿ ವಿವರಿಸಲಾದ ಲೆಕ್ಕಪತ್ರ ಶೀರ್ಷಿಕೆಗಳಲ್ಲಿ ನಿರಂತರ ಉಳಿತಾಯವನ್ನು ಗಮನಿಸಲಾಗಿದೆ, ಇದು ಕೆಬಿಎಂನ ಕಂಡಿಕೆ 110ರ ನಿಬಂಧನೆಗಳ ವಿರುದ್ಧವಾಗಿದೆ.

**ಕೋಷ್ಟಕ-3.24: 2021-22 ರಿಂದ 2023-24 ರವರೆಗಿನ ನಿರಂತರ ಉಳಿತಾಯ**

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ | ಯೋಜನೆ | 2021-22 | 2022-23 | 2023-24 |
|---|---|---|---|---|
| **2406-01-101-2-32** | ಕೇ.ಪ್ರ.ಯೋ-ರಾಜ್ಯದಪಾಲು ಕಾಂಡ್ಲಾವನ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆ | 0.01 | 0.53 | 1.02 |
| **2406-01-102-2-17** | ಕೇ.ಪ್ರ.ಯೋ-ಕೇಂದ್ರದ ಪಾಲು ಕಾಡ್ಗಿಚ್ಚು ನಿಯಂತ್ರಣ ಮತ್ತು ನಿರ್ವಹಣೆ ಯೋಜನೆ | 3.43 | 1.13 | 1.47 |
| **2406-02-110-0-23** | ಕೇ.ಪ್ರ.ಯೋ-ಕೇಂದ್ರದ ಪಾಲು ಆನೆ ಯೋಜನೆ | 3.43 | 4.00 | 2.64 |
| **2406-02-110-0-53** | ಕೇ.ಪ್ರ.ಯೋ - ಕೇಂದ್ರದ ಪಾಲು -ಹಸಿರು ಭಾರತ ಅಭಿಯಾನ | 8.96 | 10.07 | 8.18 |
| **2406-04-103-1-01** | ಪರಿಹಾರ ಅರಣ್ಯೀಕರಣ | 5.44 | 1.21 | 7.47 |

*ಆಕರ: ಅನುದಾನ ವಹಿ*

#### 3.8.2.5 ಆರ್ಥಿಕ ಇಲಾಖೆಯ ನಿರ್ದೇಶನಗಳಿಗೆ ವಿರುದ್ಧವಾಗಿ ನಿರ್ವಹಿಸಲಾದ ಬ್ಯಾಂಕ್ ಖಾತೆಗಳು

ಬ್ಯಾಂಕ್ ಖಾತೆಗಳ ನಿರ್ವಹಣೆಗೆ ಆರ್ಥಿಕ ಇಲಾಖೆಯು (ಜನವರಿ 2017) ಹೊರಡಿಸಿದ ನಿರ್ದೇಶನಗಳಲ್ಲಿ, ಬ್ಯಾಂಕ್‌ಗಳಲ್ಲಿ ಹಣದ ಕಾರ್ಯಾಚರಣೆಗೆ ಸ್ವೀಪ್–ಇನ್–ಸ್ವೀಪ್–ಔಟ್ ಠೇವಣಿ ಖಾತೆಗಳನ್ನು ಮಾತ್ರ ಪರಿಗಣಿಸಬೇಕೆಂದು ಹೇಳಿತ್ತು.

ಆದಾಗ್ಯೂ, ಸಾಮಾಜಿಕ ಅರಣ್ಯ ವಿಭಾಗವು ನಿರ್ವಹಿಸುವ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ, ಸ್ವೀಪ್–ಇನ್–ಸ್ವೀಪ್–ಔಟ್ ಸೌಲಭ್ಯವಿಲ್ಲದೆ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗುತ್ತಿರುವುದು ಕಂಡುಬಂದಿದೆ. ಇದರ ಪರಿಣಾಮವಾಗಿ, ಏಳು ಬ್ಯಾಂಕ್ ಖಾತೆಗಳಲ್ಲಿ ₹6.54 ಕೋಟಿ ಮೊತ್ತವು ಬಡ್ಡಿಯಿಲ್ಲದೆ ಖರ್ಚಾಗದೆ ಉಳಿದಿದೆ.

**ಕೋಷ್ಟಕ–3.25: ವೆಚ್ಚ ಮಾಡದ ಬಾಕಿ ಇರುವ ಬ್ಯಾಂಕ್ ಖಾತೆಗಳು**

**(ಮೊತ್ತ ರೂಪಾಯಿಗಳಲ್ಲಿ)**

| ಕ್ರಮ. ಸಂ | ವಿಭಾಗ | ಉದ್ದೇಶ | ಬ್ಯಾಂಕ್ ಹೆಸರು | ಖಾತೆ ಸಂಖ್ಯೆ | 31.03.2023 ರಂತೆ ಬಾಕಿ | ವಿವರ |
|---|---|---|---|---|---|---|
| 1 | ಮಂಗಳೂರು ಎಸ್‌ಎಫ್ ವಿಭಾಗ | ಮರ ಕಡಿಯುವಿಕೆ | ಬ್ಯಾಂಕ್ ಆಫ್ ಬರೋಡಾ, ಮಂಗಳೂರು | 73600100007117 | 23,49,223.00 | ಉಳಿತಾಯ ಖಾತೆ |
| 2 | ಮಂಗಳೂರು ಎಸ್‌ಎಫ್ ವಿಭಾಗ | ಗ್ರಾಮಭಿವೃದ್ಧಿ | ಬ್ಯಾಂಕ್ ಆಫ್ ಬರೋಡಾ, ಮಂಗಳೂರು | 73600100007888 | 28,84,424.00 | ಉಳಿತಾಯ ಖಾತೆ |
| 3 | ಮಂಗಳೂರು ಎಸ್‌ಎಫ್ ವಿಭಾಗ | ಜೀವವೈವಿಧ್ಯ | ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಮಂಗಳೂರು | 17204002071 | 22,164.00 | ಉಳಿತಾಯ ಖಾತೆ |
| 4 | ಮಂಗಳೂರು ಎಸ್‌ಎಫ್ ವಿಭಾಗ | ವನ ಸಂವರ್ಧನ (ಬೀಜ ಸಂಗ್ರಹಣೆ) | ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಮಂಗಳೂರು | 17204001317 | 1,13,497.00 | ಉಳಿತಾಯ ಖಾತೆಯಲ್ಲಿನ ಬಾಕಿಯು ವನಸಂವರ್ಧನ (ಬೀಜ ಸಂಗ್ರಹಣೆ) ಯೋಜನೆಗೆ ಸಂಬಂಧಿಸಿದೆ, ಅದನ್ನು ಮುಚ್ಚಲಾಗಿದೆ |
| 5 | ಡಿಸಿಎಫ್ ಧಾರವಾಡ | ಮರದ ಹರಾಜು, ಜಿಎಸ್‌ಟಿ | ಆಕ್ಸಿಸ್ ಬ್ಯಾಂಕ್ | 913020000175998 | 5,35,40,815.70 | ಚಾಲ್ತಿ ಖಾತೆಯಲ್ಲಿ ಬಾಕಿ ಇಡುವುದರಿಂದ ಸರ್ಕಾರಕ್ಕೆ ಬಡ್ಡಿ ನಷ್ಟವಾಗುತ್ತದೆ |
| 6 | ಆರ್‌ಎಫ್‌ಒ ಹುಬ್ಬಳ್ಳಿ ವ್ಯಾಪ್ತಿ | ಮರದ ಹರಾಜು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 30761602847 | 6,78,418.00 | ಉಳಿತಾಯ ಖಾತೆ |
| 7 | ಆರ್‌ಎಫ್‌ಒ ಧಾರವಾಡ | ಮರದ ಹರಾಜು | ಬ್ಯಾಂಕ್ ಆಫ್ ಬರೋಡಾ | 19090100016170 | 58,41,286.44 | – |
| | | | ಒಟ್ಟು | | **6,54,29,828.14** | |

#### 3.8.2.6 ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ಮುಚ್ಚದಿರುವುದು

ಆರ್ಥಿಕ ಇಲಾಖೆಯು ಬ್ಯಾಂಕ್ ಖಾತೆಗಳ ನಿರ್ವಹಣೆಗಾಗಿ ಹೊರಡಿಸಿದ ನಿರ್ದೇಶನಗಳಲ್ಲಿ (ಜನವರಿ 2017) ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ಮುಚ್ಚಬೇಕು ಮತ್ತು ಬಾಕಿ ಹಣವನ್ನು ಸರ್ಕಾರಿ ಖಾತೆಗೆ ಜಮಾ ಮಾಡಬೇಕು ಎಂದು ಹೇಳಿತ್ತು. ಆದಾಗ್ಯೂ, ಅರಣ್ಯ ವಿಭಾಗಗಳ ದಾಖಲೆಗಳಿಂದ, ₹59.95 ಕೋಟಿ ಬಾಕಿ ಹೊಂದಿರುವ 22 ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ಮುಚ್ಚಲಾಗಿಲ್ಲ ಎಂದು ಗಮನಿಸಲಾಗಿದೆ. (**ಅನುಬಂಧ–3.19**)

#### 3.8.2.7 ಏಕ ನೋಡಲ್ ಏಜೆನ್ಸಿಯಿಂದ ಬಡ್ಡಿಯ ರವಾನೆಯಲ್ಲಿ ವಿಳಂಬ

ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳಲ್ಲಿ, ರಾಜ್ಯ ಸರ್ಕಾರವು ಹಿಂದಿನ ವರ್ಷದ ಬಡ್ಡಿಯನ್ನು ಏಪ್ರಿಲ್ ಮೊದಲ ವಾರದೊಳಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬೇಕಾಗಿತ್ತು ಎಂದು ನಿರ್ದಿಷ್ಟಪಡಿಸಲಾಗಿದೆ.

ಮೇಲಿನ ಷರತ್ತಿಗೆ ವಿರುದ್ಧವಾಗಿ, 2021–22 ರಿಂದ 2023–24ರ ಅವಧಿಯಲ್ಲಿ ಬಡ್ಡಿ ರವಾನೆಯಲ್ಲಿ ವಿಳಂಬವಾಗಿದ್ದು, ಇದು 14 ದಿನಗಳಿಂದ 536 ದಿನಗಳವರೆಗೆ ಇತ್ತು (**ಅನುಬಂಧ–3.20**).

## 3.9 ನಿರ್ಣಯ

- 2023–24ರಲ್ಲಿ, 28 ಅನುದಾನಗಳು/ವಿನಿಯೋಗಗಳ ಅಡಿಯಲ್ಲಿ ₹19,262.62 ಕೋಟಿಗಳಷ್ಟು ಖರ್ಚು ಮಾಡದ ಅವಕಾಶವು ಹಿಂದಿನ ವರ್ಷಕ್ಕಿಂತ (₹8,247.28 ಕೋಟಿ) ಹೆಚ್ಚಾಗಿದೆ. ಖರ್ಚು ಮಾಡದ ಅವಕಾಶವು ವರ್ಷಕ್ಕೆ ಒದಗಿಸಲಾದ ಒಟ್ಟು ಅನುದಾನಗಳು/ವಿನಿಯೋಗಗಳ (₹3,48,941.46 ಕೋಟಿ) ಸುಮಾರು ಶೇಕಡಾ 5.5 ರಷ್ಟಿದ್ದು, ಹಿಂದಿನ ವರ್ಷದಲ್ಲಿ ಇದು ಶೇಕಡಾ 2.7 ರಷ್ಟಿತ್ತು.
- ಪೂರಕ ಅವಕಾಶವು ಮೂಲ ಆಯವ್ಯಯದ ಶೇಕಡಾ 2.23 ರಷ್ಟಿತ್ತು. ಉಳಿತಾಯ/ಹೆಚ್ಚುವರಿ ವೆಚ್ಚಕ್ಕೆ ಕಾರಣವಾದ ಅನಗತ್ಯ, ಅತಿಯಾದ ಮತ್ತು ಅಸಮರ್ಪಕ ಪೂರಕ ಅವಕಾಶದ ಪ್ರಕರಣಗಳಿವೆ.
- ಶಾಸಕಾಂಗದ ಅನುಮೋದನೆಗೆ ಮುಂಚಿತವಾಗಿ ₹6,337.09 ಕೋಟಿ ವೆಚ್ಚಗಳಿಗೆ ಕಾರ್ಯಕಾರಿ ಆದೇಶಗಳನ್ನು ಹೊರಡಿಸಲಾಗಿತ್ತು, ಅದರಲ್ಲಿ ₹4,850.73 ಕೋಟಿಗಳನ್ನು ಪೂರಕ ಅಂದಾಜುಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು. ಇದು ಒಟ್ಟು ಪೂರಕ ಅಂದಾಜಿನ ಶೇಕಡಾ 63.65 ರಷ್ಟಿತ್ತು.
- ಸಂವಿಧಾನದ 205ನೇ ವಿಧಿಯ ಅಡಿಯಲ್ಲಿ 2023–24ನೇ ಸಾಲಿಗೆ ಒಂಬತ್ತು ಅನುದಾನಗಳ ಅಡಿಯಲ್ಲಿ ಮಾಡಿದ ₹2,851.48 ಕೋಟಿ ಹೆಚ್ಚುವರಿ ವೆಚ್ಚವನ್ನು ಕ್ರಮಬದ್ಧಗೊಳಿಸಬೇಕಾಗಿದೆ. 2020–21 ಮತ್ತು 2022–23ನೇ ಸಾಲಿಗೆ ₹2,323.74 ಕೋಟಿ ಮೊತ್ತವನ್ನು ಇನ್ನೂ ಕ್ರಮಬದ್ಧಗೊಳಿಸಲಾಗಿಲ್ಲ.
- ಸಾಕಷ್ಟು ಸಮರ್ಥನೆ ಇಲ್ಲದೆ ಪುನರ್ವಿನಿಯೋಗಗಳನ್ನು ಪಡೆಯಲಾಗಿದ್ದು, ಇದರಿಂದಾಗಿ ಉಳಿತಾಯ/ಹೆಚ್ಚುವರಿ ಉಂಟಾಗಿದೆ. 42 ಪ್ರಕರಣಗಳಲ್ಲಿ, ನೀಡಲಾದ ಪುನರ್ವಿನಿಯೋಗ ಆದೇಶಗಳು ದೋಷಪೂರಿತವಾಗಿದ್ದವು ಮತ್ತು ಆದ್ದರಿಂದ ಅವುಗಳನ್ನು ತಿರಸ್ಕರಿಸಲಾಗಿದೆ; ಮತ್ತು
- ₹504.29 ಕೋಟಿ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚವಾಗಿ ಮತ್ತು ₹0.01 ಕೋಟಿ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚವಾಗಿ ತಪ್ಪಾಗಿ ವರ್ಗೀಕರಿಸಿದ ಪರಿಣಾಮವಾಗಿ ₹504.28 ಕೋಟಿಗಳಷ್ಟು ರಾಜಸ್ವ ವೆಚ್ಚವನ್ನು ಕಡಿಮೆ ಅಂದಾಜು ಮಾಡಲಾಗಿದೆ ಮತ್ತು ಆ ಮಟ್ಟಿಗೆ ಆದಾಯ ಕೊರತೆಯನ್ನು ಕಡಿಮೆ ಅಂದಾಜು ಮಾಡಲಾಗಿದೆ.

## 3.10 ಶಿಫಾರಸುಗಳು

- ***ಶಾಸಕಾಂಗದ ಅನುಮೋದನೆಯ ಮೊದಲು ವೆಚ್ಚವನ್ನು ಭರಿಸಲು ಕಾರ್ಯಕಾರಿ ಮಾರ್ಗವನ್ನು ಆಶ್ರಯಿಸುವುದು ಕನಿಷ್ಠ ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಇರಬೇಕು.***
- ***ಕರ್ನಾಟಕ ಹಣಕಾಸು ಸಂಹಿತೆಯ ನಿಬಂಧನೆಗಳಿಗೆ ಅನುಗುಣವಾಗಿ ಪುನರ್ವಿನಿಯೋಗ ಆದೇಶಗಳನ್ನು ಹೊರಡಿಸಲಾಗಿದೆಯೆ ಎಂದು ಸರ್ಕಾರ ಖಚಿತಪಡಿಸಿಕೊಳ್ಳಬೇಕು.***
- ***ಹೆಚ್ಚುವರಿ ವೆಚ್ಚಗಳಿಗೆ ಕಾರಣಗಳನ್ನು ಕರ್ನಾಟಕ ಸರ್ಕಾರ ವಿಶ್ಲೇಷಿಸಬೇಕು ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಪ್ಪಿಸಲು ಅದರ ಆಯವ್ಯಯ ತಯಾರಿಕೆಯಲ್ಲಿ ತರಲು ಪ್ರಯತ್ನಿಸಬೇಕು.***

# ಅಧ್ಯಾಯ – 4

# ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

ಅಧ್ಯಾಯ

# ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

# 4

ಹಣಕಾಸಿನ ನಿಯಮಗಳು ಮತ್ತು ನಿಖರವಾದ ಲೆಕ್ಕಗಳ ಅನುಸರಣೆಯ ಆಧಾರದ ಮೇಲೆ ಉತ್ತಮ ಆಂತರಿಕ ಹಣಕಾಸು ವರದಿ ವ್ಯವಸ್ಥೆಯು ಉತ್ತಮ ಆಡಳಿತದ ಗುಣಲಕ್ಷಣಗಳಲ್ಲೊಂದಾಗಿದೆ. ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

## ಎ. ಲೆಕ್ಕಪತ್ರಗಳ ಸಂಪೂರ್ಣತೆಗೆ ಸಂಬಂಧಿಸಿದ ಅವಲೋಕನಗಳು

### 4.1 ರಾಜ್ಯ ಸರ್ಕಾರದ ಸಾಲಗಳನ್ನು ಸಂಚಿತ ನಿಧಿಗೆ ಜಮೆ ಮಾಡದಿರುವುದು

ರಾಜ್ಯ ಸರ್ಕಾರದ ಸಾಲಗಳನ್ನು ಭಾರತದ ಸಂವಿಧಾನದ 293(1)ನೇ ವಿಧಿಯ ಮೂಲಕ ನಿಯಂತ್ರಿಸಲಾಗುತ್ತದೆ. ಸರ್ಕಾರಿ ಕಂಪನಿಗಳು / ನಿಗಮಗಳು / ಮಂಡಳಿಗಳಿಂದ ಪಡೆದ ಸಾಲಗಳಿಗೆ ರಾಜ್ಯವು ಖಾತರಿಯಾಗಿ ನಿಲ್ಲುತ್ತದೆ. ಈ ಕಂಪನಿಗಳು / ನಿಗಮಗಳು / ಮಂಡಳಿಗಳು ರಾಜ್ಯ ಆಯವ್ಯಯದ ಹೊರಗೆ ಯೋಜಿಸಲಾದ ವಿವಿಧ ರಾಜ್ಯ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರುಕಟ್ಟೆ/ಹಣಕಾಸು ಸಂಸ್ಥೆಗಳಿಂದ ಹಣವನ್ನು ಸಾಲ ಪಡೆದಿವೆ. ಈ ಸಂಸ್ಥೆಗಳ ಸಾಲಗಳು ಅಂತಿಮವಾಗಿ 'ಆಯವ್ಯಯೇತರ ಸಾಲಗಳು' (ಒಬಿಬಿ) ಎಂದು ಕರೆಯಲ್ಪಡುವ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗುತ್ತವೆ. ರಾಜ್ಯದಲ್ಲಿ ಇವುಗಳನ್ನು ಆಯವ್ಯಯ ಅವಲೋಕನದಲ್ಲಿ ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆಗಳಲ್ಲಿ ಬಹಿರಂಗಪಡಿಸಲಾಗುತ್ತದೆ.

2019–20 ರಿಂದ 2023–24ರ ಅವಧಿಯಲ್ಲಿನ ವರ್ಷವಾರು ಆಯವ್ಯಯೇತರ ಸಾಲಗಳ ಪ್ರವೃತ್ತಿಯನ್ನು **ಕೋಷ್ಟಕ–4.1**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–4.1: ಆಯವ್ಯಯೇತರ ಸಾಲಗಳ ವರ್ಷವಾರು ಸ್ಥಿತಿ**

(₹ ಕೋಟಿಗಳಲ್ಲಿ)

| ವರ್ಷ | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಆಯವ್ಯಯೇತರ ಸಾಲ | 4,435.49 | 3,045.10 | 2,350.00 | 4,029.00 | ಶೂನ್ಯ |

ಮೇಲಿನ ಸಾಲಗಳು ಸರ್ಕಾರದ ಸಾಲಗಳ ಭಾಗವಾಗದಿರುವುದರಿಂದ ಮತ್ತು ಆಂತರಿಕ ಸಾಲದಲ್ಲಿ (6003) ಲೆಕ್ಕ ಹಾಕುವುದಿಲ್ಲವಾದ್ದರಿಂದ, ರಾಜ್ಯ ಸರ್ಕಾರದ ಲೆಕ್ಕಗಳು ಆ ಮಟ್ಟಿಗೆ ಪೂರ್ಣವಾಗಿಲ್ಲ.

## 4.2 ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು

ಸರ್ಕಾರವು ಕಂಪನಿಗಳು, ನಿಗಮಗಳು, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ ಶಾಸನಬದ್ಧ ಮಂಡಳಿಗಳು ಮತ್ತು ಪ್ರಾದೇಶಿಕ ಸೊಸೈಟಿಗಳಿಗೆ ಸಂಬಂಧಿಸಿದ ಸಂಸ್ಥೆಯ ಸಂದಾಯಿತ ಷೇರು ಬಂಡವಾಳ ರೂಪದಲ್ಲಿ, ಅನುದಾನಗಳು, ಸಹಾಯಧನಗಳು, ವೆಚ್ಚಗಳ ಮರುಪಾವತಿ, ಸಾಲಗಳು ಮತ್ತು ಯೋಜನೆಗಳಿಗೆ ಬಿಡುಗಡೆಯಾದ ಹಣ ಇತ್ಯಾದಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ.

ಎಲ್ಲಾ ನಿಗಮಗಳು/ಕಂಪನಿಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳು ಪಡೆದ ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು "0049 ಬಡ್ಡಿ ಸ್ವೀಕೃತಿಗಳು" ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವ ಮೂಲಕ ಸರ್ಕಾರಿ ಖಾತೆಗೆ ಪಾವತಿಸಲು ಆರ್ಥಿಕ ಇಲಾಖೆಯು ಸರ್ಕಾರ ಆದೇಶದ ಮೂಲಕ ನಿರ್ದೇಶಿಸಿತ್ತು (ಜುಲೈ 2003). ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗಳು ಇತರ ಯಾವುದೇ ವೆಚ್ಚಕ್ಕೆ ಬಳಸಲು ಅವಕಾಶವಿರುವುದಿಲ್ಲ ಎಂದೂ ಅದು ಒತ್ತಿ ಹೇಳಿತ್ತು. ಇದನ್ನು ಆಗಸ್ಟ್ 2019ರ ಸುತ್ತೋಲೆಯಲ್ಲಿ ಪುನರುಚ್ಚರಿಸಲಾಗಿತ್ತು.

ಕಂಪನಿಗಳು / ನಿಗಮಗಳು ಈ ಮೇಲಿನ ಸೂಚನೆಗಳಿಗೆ ವ್ಯತಿರಿಕ್ತವಾಗಿ ಗಳಿಸಿದ ಬಡ್ಡಿಯ ಮೊತ್ತವಾದ ₹14,549.91 ಕೋಟಿಗಳನ್ನು ಸರ್ಕಾರಕ್ಕೆ ಜಮೆ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇದರಲ್ಲಿ, ಶೇಕಡಾ 97.60ರಷ್ಟು ಐದು ಕಂಪನಿಗಳು / ಕಾರ್ಪೊರೇಷನ್‌ಗಳಿಗೆ ಸಂಬಂಧಿಸಿದೆ. ಅವುಗಳೆಂದರೆ ಕರ್ನಾಟಕ ಜೀವವೈವಿಧ್ಯ ಮಂಡಳಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ. 2023–24ರವರೆಗಿನ ಅವಧಿಯಲ್ಲಿ ಗಳಿಸಿದ ಬಡ್ಡಿಯ ವಿವರಗಳನ್ನು **ಅನುಬಂಧ–4.1**ರಲ್ಲಿ ನೀಡಲಾಗಿದೆ.

31 ಮಾರ್ಚ್ 2022 ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಉತ್ತರವಾಗಿ ರಾಜ್ಯ ಸರ್ಕಾರವು (ಅಕ್ಟೋಬರ್ 2024) ಸಂಬಂಧಪಟ್ಟ ಇಲಾಖೆಗಳಿಗೆ (ಅಕ್ಟೋಬರ್ 2023) ಗಳಿಸಿದ ಬಡ್ಡಿಯನ್ನು ಸರ್ಕಾರಿ ಖಾತೆಗೆ ಪಾವತಿಸಲು ವಿನಂತಿಸಲಾಗಿದೆ ಎಂದು ಹೇಳಿದೆ. ಆದಾಗ್ಯೂ, ಸರ್ಕಾರವು ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅನುದಾನದ ಮೇಲೆ ಗಳಿಸಿದ ಬಡ್ಡಿಯನ್ನು ಸರ್ಕಾರದ ಖಾತೆಗಳಿಗೆ ಪಾವತಿಸಲು ಕ್ರಮವನ್ನು ಪ್ರಾರಂಭಿಸಬೇಕು, ಇದು ರಾಜ್ಯದ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

## 4.3 ಬಡ್ಡಿ ಹೊಂದಿರುವ ಠೇವಣಿಗಳು/ಮೀಸಲು ನಿಧಿಗಳ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ ಹೊಣೆಗಾರಿಕೆಯನ್ನು ವಿಲೇವಾರಿ ಮಾಡದಿರುವುದು

ಬಡ್ಡಿ ಹೊಂದಿರುವ ಠೇವಣಿಗಳು/ಮೀಸಲು ನಿಧಿಗಳಿಗೆ ಬಡ್ಡಿಯನ್ನು ಒದಗಿಸುವ ಮತ್ತು ಪಾವತಿಸುವ ಹೊಣೆಗಾರಿಕೆಯನ್ನು ಸರ್ಕಾರ ಹೊಂದಿದೆ.

**ಕೋಷ್ಟಕ–4.2**ರಲ್ಲಿ ತೋರಿಸಿರುವಂತೆ ನಿಧಿಗಳು/ಠೇವಣಿಗಳ ಮೇಲಿನ ಬಡ್ಡಿಯಾಗಿ ₹27.73 ಕೋಟಿಯನ್ನು ಪಾವತಿಸುವ ಅಗತ್ಯವಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಡ್ಡಿ ಹೊಣೆಗಾರಿಕೆಯನ್ನು ಪಾವತಿಸದಿರುವುದು, ರಾಜಸ್ವ ಕೊರತೆಯನ್ನು ಕಡಿಮೆ ಹೇಳುವಲ್ಲಿ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆ ಹೇಳುವಲ್ಲಿ ಪರಿಣಮಿಸಿತು.

**ಕೋಷ್ಟಕ–4.2: ಪಾವತಿಸದಿರುವ ಬಡ್ಡಿಯ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ನಿಧಿಗಳು/ಠೇವಣಿಗಳು | 1 ಏಪ್ರಿಲ್ 2023ರಲ್ಲಿದ್ದಂತೆ ಶಿಲ್ಕು | ಬಾಕಿ ಇರುವ ಬಡ್ಡಿ |
|---|---|---|---|
| 1 | ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ | 89.20 | 7.58 |
| 2 | ರಾಜ್ಯ ವಿಪತ್ತು ಪರಿಹಾರ ನಿಧಿ | 237.10 | 20.15 |
| ಒಟ್ಟು | | | **27.73** |

## 4.4 ರಾಜ್ಯ ಅನುಷ್ಠಾನ ಏಜೆನ್ಸಿಗಳಿಗೆ ನೇರವಾಗಿ ಹಣದ ವರ್ಗಾವಣೆ

ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಭಾರತ ಸರ್ಕಾರವು ಗಣನೀಯ ಪ್ರಮಾಣದ ಹಣವನ್ನು ನೇರವಾಗಿ ರಾಜ್ಯ ಅನುಷ್ಠಾನ ಸಂಸ್ಥೆಗಳಿಗೆ ವರ್ಗಾಯಿಸುತ್ತಿದೆ. ಭಾರತ ಸರ್ಕಾರವು 2014–15ರಿಂದ ರಾಜ್ಯ ಆಯವ್ಯಯದ ಮೂಲಕ ಈ ಹಣವನ್ನು ವರ್ಗಾವಣೆ ಮಾಡಲು ನಿರ್ಧರಿಸಿತು. ಆದಾಗ್ಯೂ, 2023–24ರ ಅವಧಿಯಲ್ಲಿ, ಭಾರತ ಸರ್ಕಾರವು ₹22,308.76 ಕೋಟಿಗಳನ್ನು ಅನುಷ್ಠಾನ ಸಂಸ್ಥೆಗಳಿಗೆ ನೇರವಾಗಿ ವರ್ಗಾಯಿಸಿತು. ಈ ಪೈಕಿ ರಾಜ್ಯದ ಸಂಚಿತ ನಿಧಿಯನ್ನು ಕಡೆಗಣಿಸಿ ₹8,873.10 ಕೋಟಿಯನ್ನು ನೇರವಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ **ಅನುಬಂಧ–4.2**ರಲ್ಲಿ ವಿವರಿಸಿದಂತೆ ವರ್ಗಾಯಿಸಿತು. ಇದು ಅನುಕ್ರಮವಾಗಿ ಒಟ್ಟು ರಾಜಸ್ವ ಸ್ವೀಕೃತಿಗಳ (₹2,33,342.88 ಕೋಟಿ) ಶೇಕಡಾ 3.80 ಮತ್ತು ಸಹಾಯಾನುದಾನಗಳ (₹15,527.85 ಕೋಟಿ) ಶೇಕಡಾ 57.14ರಷ್ಟಿತ್ತು. ಹೀಗೆ, 2023–24ರ ಅವಧಿಯಲ್ಲಿ ರಾಜ್ಯದ ಆದಾಯವನ್ನು ಆ ಮಟ್ಟಿಗೆ ಕಡಿಮೆ ಹೇಳಲಾಗಿತ್ತು. ಈ ಎಂಟು ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸುವ ಸಂಸ್ಥೆಗಳಿಗೆ ನೇರ ವರ್ಗಾವಣೆಯ ಮೊತ್ತವು ಒಟ್ಟು ವರ್ಗಾವಣೆಗಳ ಶೇಕಡಾ 0.7 ರಿಂದ 100ರಷ್ಟು ಇದ್ದಿತು.

## ಬಿ. ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನ

## 4.5 ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ವಿಳಂಬ

ಕರ್ನಾಟಕದ ಆರ್ಥಿಕ ಸಂಹಿತೆ 1958ರ ನಿಯಮ 161(5)ರ ಅನ್ವಯ ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಅನುದಾನಗಳಿಗೆ ಸಂಬಂಧಿಸಿದಂತೆ ಅನುದಾನಿತರಿಂದ, ಮಂಜೂರಾತಿ ದಿನಾಂಕದಿಂದ 18 ತಿಂಗಳೊಳಗೆ, ನಿರ್ದಿಷ್ಟಪಡಿಸದ ಹೊರತು, ಇಲಾಖಾ ಅಧಿಕಾರಿಗಳು ಬಳಕೆ ಪ್ರಮಾಣ ಪತ್ರಗಳನ್ನು ಪಡೆಯಬೇಕು ಮತ್ತು ಪರಿಶೀಲನೆಯ ನಂತರ ಅವುಗಳನ್ನು ಮಹಾಲೇಖಾಪಾಲರಿಗೆ (ಲೆ ಮತ್ತು ಹ) ರವಾನಿಸಬೇಕು.

ನಿಗದಿತ ಅವಧಿಗಳನ್ನು ಮೀರಿದ ಬಳಕೆ ಪ್ರಮಾಣ ಪತ್ರಗಳು ಉದ್ದೇಶಿತ ಕಾರ್ಯಕ್ಕಾಗಿ ಅನುದಾನದ ಬಳಕೆಯ ಮೇಲೆ ಭರವಸೆಯ ಅನುಪಸ್ಥಿತಿಯನ್ನು ಸೂಚಿಸುತ್ತದೆ ಮತ್ತು ಲೆಕ್ಕಪತ್ರಗಳಲ್ಲಿ ತೋರಿಸಿರುವ ವೆಚ್ಚವನ್ನು ಆ ಮಟ್ಟಿಗೆ ಅಂತಿಮವೆಂದು ಪರಿಗಣಿಸಲಾಗುವುದಿಲ್ಲ. 31 ಮಾರ್ಚ್ 2024ರಲ್ಲಿದ್ದಂತೆ ಬಾಕಿ ಉಳಿದಿರುವ ಬಳಕೆ ಪ್ರಮಾಣ ಪತ್ರಗಳ ಸ್ಥಿತಿಯನ್ನು **ಕೋಷ್ಟಕ–4.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.3: ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವರ್ಷಾವಾರು ವಿವರ**

**(₹ ಕೋಟಿಗಳಲ್ಲಿ)**

| ವರ್ಷ* | ಬಳಕೆ ಪ್ರಮಾಣ ಪತ್ರಗಳ ಸಂಖ್ಯೆ | ಮೊತ್ತ |
|---|---|---|
| **2017–18** | 1 | 0.76 |
| **2020–21** | 7 | 9.22 |
| **2021–22** | 9 | 8.12 |
| **2022–23** | 6 | 5.25 |
| **2023–24** | 69 | 95.29 |
| ಒಟ್ಟು | **92** | **118.64** |

*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ.*

** ಮೇಲೆ ತಿಳಿಸಲಾದ ವರ್ಷವು "ಬಾಕಿ ಇರುವ ವರ್ಷ" ಕ್ಕೆ ಸಂಬಂಧಿಸಿದೆ, ಅಂದರೆ, ವಾಸ್ತವವಾಗಿ ಸೆಳೆದ 18 ತಿಂಗಳ ನಂತರದ ಅವಧಿ*

ಇದಲ್ಲದೆ, ನಿಯಮ 161(5)ರ ಅನ್ವಯ ನಿಗದಿತ ಬಳಕೆ ಪ್ರಮಾಣ ಪತ್ರದ ನಮೂನೆಯು ವರ್ಷದಲ್ಲಿ ಬಳಕೆಯಾಗದ ಅನುದಾನವನ್ನು ಅಧ್ಯರ್ಪಣೆ ಮಾಡಬೇಕು ಅಥವಾ ನಂತರದ ವರ್ಷದಲ್ಲಿ ಪಡೆಯಬೇಕಾದ ಅನುದಾನಕ್ಕೆ ಸರಿಹೊಂದಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. 2022–23ರ ಅವಧಿಯಲ್ಲಿ ಬಾಕಿ ಇದ್ದ ₹41.67 ಕೋಟಿಗಳ ಮೊತ್ತದ 48 ಬಳಕೆ ಪ್ರಮಾಣ ಪತ್ರಗಳು ₹118.64

ಕೋಟಿಗಳ ಮೊತ್ತದ 92 ಬಳಕೆ ಪ್ರಮಾಣ ಪತ್ರಗಳಿಗೆ ಏರಿಕೆಯಾಯಿತು. ಅನುದಾನ ಬಳಕೆಯ ಮೇಲೆ ಇಲಾಖೆಗಳು ತಮ್ಮ ಮೇಲ್ವಿಚಾರಣೆಯನ್ನು ಹೆಚ್ಚಿಸಬೇಕೆಂದು ಇದು ಸೂಚಿಸುತ್ತದೆ.

ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳನ್ನು **ನಕ್ಷೆ–4.1**ರಲ್ಲಿ ನೀಡಲಾಗಿದೆ.

**ನಕ್ಷೆ–4.1: ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳು**

(₹ ಕೋಟಿಗಳಲ್ಲಿ)




*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಅವರ ಕಛೇರಿ*

ಹಿಂದಿನ ವರ್ಷಗಳಂತೆ 2023–24ರ ಅವಧಿಯಲ್ಲಿ ಒಟ್ಟು ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳಲ್ಲಿ (₹118.64 ಕೋಟಿ) ಎರಡು ಇಲಾಖೆಗಳಿಗೆ ಸಂಬಂಧಿಸಿದ್ದವು. ₹102.64 ಕೋಟಿ ಅಂದರೆ ಶೇಕಡಾ 86.51 ಮತ್ತು ₹16.00 ಕೋಟಿ ಅಂದರೆ ಶೇಕಡಾ 13.49ರಷ್ಟು, ಅಂದರೆ ಕ್ರಮವಾಗಿ ಕ್ರೀಡೆ ಮತ್ತು ಯುವಜನ ಸೇವೆಗಳು ಮತ್ತು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕಇಲಾಖೆಯ ಪ್ರಕರಣದಲ್ಲಿ, 2021–22ರ ಅವಧಿಯಲ್ಲಿ ಮಾತ್ರ ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳು ಅಸ್ತಿತ್ವದಲ್ಲಿದ್ದವು. ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಯಲ್ಲಿ ಅಂತರ–ವರ್ಷದ ವ್ಯತ್ಯಾಸವಿದೆ ಮತ್ತು ಕ್ರೀಡೆ ಮತ್ತು ಯುವಜನ ಸೇವೆಗಳ ಇಲಾಖೆಯಲ್ಲಿ ಇಳಿಮುಖ ಪ್ರವೃತ್ತಿಯಲ್ಲಿದೆ. ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳ ಪ್ರಮುಖ ಲೆಕ್ಕಶೀರ್ಷಿಕೆವಾರು ಮತ್ತು ಇಲಾಖಾವಾರು ವಿವರಗಳನ್ನು **ಅನುಬಂಧ–4.3**ರಲ್ಲಿ ನೀಡಲಾಗಿದೆ.

ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದು ಹಣ ದುರುಪಯೋಗದ ಅಪಾಯದಿಂದ ಕೂಡಿರುವುದರಿಂದ, ರಾಜ್ಯ ಸರ್ಕಾರವು ಈ ಅಂಶವನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಲು ತನ್ನ ಪ್ರಯತ್ನವನ್ನು ಮುಂದುವರೆಸಬೇಕು ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಸಕಾಲಿಕವಾಗಿ ಸಲ್ಲಿಸಲು ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು.

ಜೊತೆಗೆ, ನಿಯಮ 161(5) ಹೇಳುವಂತೆ, ನಿರ್ದಿಷ್ಟ ವೆಚ್ಚದ ವಸ್ತುಗಳ ನಿರ್ದಿಷ್ಟ ರೂಪದಲ್ಲಿ ಅನುದಾನದ ಬಳಕೆಗೆ ಷರತ್ತುಗಳನ್ನು ಲಗತ್ತಿಸಲಾಗಿದೆ ಅಥವಾ ಹಣವನ್ನು ಖರ್ಚು ಮಾಡಬೇಕಾದ ಸಮಯದ ನಂತರ, ಯಾರ ಸಹಿಯ ಮೇಲೆ ಸಹಾಯಾನುದಾನವನ್ನು ಪಡೆದ ಇಲಾಖೆಯ ಅಧಿಕಾರಿಯು ಪ್ರಾಥಮಿಕವಾಗಿ ಮಹಾಲೇಖಾಪಾಲರಿಗೆ ಪ್ರಮಾಣೀಕರಿಸುವ, ಷರತ್ತುಗಳನ್ನು ನೆರವೇರಿಸುವ ಜವಾಬ್ದಾರಿಯನ್ನು ಹೊಂದಿರಬೇಕು. ಪ್ರತಿ ವರ್ಷ ರಾಜ್ಯವು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು, ಪಿಎಸ್‌ಯುಗಳು, ಎನ್‌ಜಿಒಗಳು, ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳಿಗೆ ಸಹಾಯಾನುದಾನವನ್ನು ಬಿಡುಗಡೆ ಮಾಡುತ್ತಿದೆ. ಇದರ ಪ್ರತಿಯಾಗಿ, ಬಾಲಕಾರ್ಮಿಕರು, ಕೆಲವು ಮಂಡಳಿಗಳು, ಕಾಲೇಜುಗಳು ಇತ್ಯಾದಿ

ಅನುದಾನ ಪಡೆದವರು ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಗೆ ಬಳಕೆ ಪ್ರಮಾಣ ಪತ್ರಗಳನ್ನು ಒದಗಿಸುತ್ತಿದ್ದಾರೆ. ಇದು 2023-24ರ ಅವಧಿಯಲ್ಲಿ ರಾಜ್ಯವು ನೀಡಿದ ಒಟ್ಟು ಅನುದಾನದ ಶೇಕಡಾ 8.9ರಷ್ಟಾಗಿದೆ. ಆದ್ದರಿಂದ, ಸುಮಾರು ಶೇಕಡಾ 90ರಷ್ಟು ಸಹಾಯಾನುದಾನ ಸಂಸ್ಥೆಗಳು ಮೇಲ್ವಿಚಾರಣೆಯ ವ್ಯಾಪ್ತಿಯಿಂದ ಹೊರಗಿವೆ.

ರಾಜ್ಯ ಸರ್ಕಾರವು, ಇಲಾಖೆಗಳು ಸ್ವೀಕರಿಸಿದ ಅನುದಾನಗಳಿಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಎಲ್ಲಾ ಆಡಳಿತ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ (ಜುಲೈ 2023) ಎಂದು ಉತ್ತರಿಸಿತು (ಜನವರಿ 2025). ಆದಾಗ್ಯೂ, ಆರ್ಥಿಕ ಇಲಾಖೆಯಿಂದ ಸೂಚನೆಗಳನ್ನು ನೀಡಲಾಗಿದ್ದರೂ, ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ಸಂಖ್ಯೆಯು ಸುಮಾರು ಶೇಕಡಾ 92ರಷ್ಟು ಹೆಚ್ಚಾಗಿದೆ ಎಂದು ಗಮನಿಸಲಾಗಿದೆ.

## 4.6 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಸಾದಿಲ್ವಾರು ವೆಚ್ಚಗಳ ಕೈಪಿಡಿ 1958ರ ನಿಯಮ 37(ಬಿ)(3)ರ ಅಡಿಯಲ್ಲಿ, ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳು ಸೇವಾ ಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಪಡೆಯಲು ಅಧಿಕಾರ ಹೊಂದಿದ್ದಾರೆ ಮತ್ತು ಈ ಬಿಲ್ಲುಗಳಿಗೆ ಪಾವತಿಗಲ್ಲದ ಸವಿವರ ಸಾದಿಲ್ವಾರು (ಎನ್‌ಡಿಸಿ) ಬಿಲ್ಲುಗಳನ್ನು (ಅಂತಿಮ ವೆಚ್ಚವನ್ನು ಬೆಂಬಲಿಸುವ ವೋಚರುಗಳು) ಬಿಲ್‌ಗೆ ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ರ ಒಳಗೆ ಖಜಾನೆಗಳ ಮೂಲಕ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಪ್ರಸ್ತುತ ಪಡಿಸುವ ಅಗತ್ಯವಿದೆ. ನಿಯಂತ್ರಣ ಅಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿಲ್ಲದ ಹೊರತು ಬಿಲ್‌ಗಳ ಮೂಲಕ ಖಜಾನೆಯಿಂದ ಯಾವುದೇ ಮೊತ್ತವನ್ನು ಪಡೆದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

ಮಾರ್ಚ್ 2024ರ ಅಂತ್ಯಕ್ಕೆ 934 ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಪಡೆದ ₹45.58 ಕೋಟಿಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳು ಸಲ್ಲಿಕೆಯಾಗದೆ **ಕೋಷ್ಟಕ-4.4**ರಲ್ಲಿ ತೋರಿಸಿದಂತೆ ಬಾಕಿ ಉಳಿದಿದ್ದವು.

**ಕೋಷ್ಟಕ-4.4: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯಲ್ಲಿನ ವರ್ಷಾವಾರು ಪ್ರಗತಿ**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಅಂತಿಮ ಶಿಲ್ಕು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2019-20ರವರೆಗೆ | 2,095 | 93.27 | 2,109 | 182.90 | 2,245 | 179.49 | 1,959 | 96.68 |
| 2020-21 | 1,959 | 96.68 | 2,247 | 153.46 | 1,985 | 123.80 | 2,221 | 126.34 |
| 2021-22 | 2,221 | 126.34 | 2,577 | 154.00 | 3,422 | 216.45 | 1,376 | 63.89 |
| 2022-23 | 1,376 | 63.89 | 2,217 | 158.65 | 2,131 | 149.78 | 1,462 | 72.76 |
| 2023-24 | 1,462 | 72.76 | 2,798 | 233.61 | 3,326 | 260.79 | 934 | 45.58 |

*ಆಕರ: ಹಣಕಾಸು ಲೆಕ್ಕಗಳು* ** ಮಾರ್ಚ್ 2024ರ ಬಿಲ್ಲುಗಳನ್ನು ಹೊರತುಪಡಿಸಿ*

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವರ್ಷಾವಾರು ಬಾಕಿ ಇರುವಿಕೆಯನ್ನು **ಕೋಷ್ಟಕ-4.5**ರಲ್ಲಿ ನೀಡಲಾಗಿದೆ.

**ಕೋಷ್ಟಕ-4.5: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವರ್ಷಾವಾರು ಬಾಕಿ ಇರುವಿಕೆ**

(₹ ಕೋಟಿಗಳಲ್ಲಿ)

| ಅನುದಾನದ ವರ್ಷ | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ಮೊತ್ತ |
|---|---|---|
| 2021-22ರವರೆಗೆ | 803 | 40.13 |
| 2022-23 | 52 | 2.89 |
| 2023-24 | 79 | 2.56 |
| **ಒಟ್ಟು** | **934** | **45.58** |

2023–24ರ ಅವಧಿಯಲ್ಲಿ 2,798 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ₹233.61 ಕೋಟಿ ಮೊತ್ತವನ್ನು ಪಡೆಯಲಾಗಿತ್ತು ಮತ್ತು ಈ ಪೈಕಿ 209 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೊತ್ತ ₹17.20 ಕೋಟಿಯಾಗಿತ್ತು (ಶೇಕಡಾ 7.36) ಮತ್ತು ಮಾರ್ಚ್ 2024ರಲ್ಲಿ ಸೆಳೆಯಲಾಗಿತ್ತು.

**ನಕ್ಷೆ–4.2 ಸವಿವರ ಸಾದಿಲ್ವಾರು ಬಿಲ್ಲುಗಳು ಸಲ್ಲಿಕೆಯಾಗದೇ ಉಳಿದಿರುವ ಪ್ರಮುಖ ಇಲಾಖೆಗಳು**

**(₹ ಕೋಟಿಗಳಲ್ಲಿ)**




*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ*

₹45.58 ಕೋಟಿ ಮೊತ್ತದ ಒಟ್ಟು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ₹41.07 ಕೋಟಿ ಅಂದರೆ ಸುಮಾರು ಶೇಕಡಾ 90.11ರಷ್ಟು ನಾಲ್ಕು ಇಲಾಖೆಗಳಿಗೆ, ಅಂದರೆ – ಚುನಾವಣೆಗಳು (₹25.40ಕೋಟಿ)– ಶೇಕಡಾ 55.73, ಪೊಲೀಸ್ (₹9.79 ಕೋಟಿ)– ಶೇಕಡಾ 21.48, ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ (₹4.30 ಕೋಟಿ)– ಶೇಕಡಾ 9.43 ಮತ್ತು ನಗರಾಭಿವೃದ್ಧಿ (₹1.58 ಕೋಟಿ)– ಶೇಕಡಾ 3.47 ಸಂಬಂಧಿಸಿತ್ತು ಎಂಬುದನ್ನು **ನಕ್ಷೆ–4.2**ರಿಂದ ಗಮನಿಸಬಹುದು. ಕಳೆದ ಮೂರು ವರ್ಷಗಳ ಹೋಲಿಕೆಯಲ್ಲಿ, ಅಂದರೆ, 2021–22, 2022–23 ಮತ್ತು 2023–24ರಲ್ಲಿ ನಗರಾಭಿವೃದ್ಧಿ ಇಲಾಖೆಯು ಕನಿಷ್ಠ ಬಾಕಿ ಇರುವ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ತೋರಿಸಿದೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆಗಳು) ಅತ್ಯಧಿಕ ಮೊತ್ತವನ್ನು ತೋರಿಸಿದೆ. ಕಡಿಮೆಯಾಗುತ್ತಿರುವ ಪ್ರವೃತ್ತಿಯನ್ನು ತೋರಿಸುತ್ತಿರುವ ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದ ಇಲಾಖೆಯನ್ನು ಹೊರತುಪಡಿಸಿ, ಇತರ ಮೂರು ಇಲಾಖೆಗಳು ಅಂತರ–ವರ್ಷದ ವ್ಯತ್ಯಾಸವನ್ನು ತೋರಿಸಿವೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದ ಹಣವನ್ನು ಸಂಚಿತ ನಿಧಿಯ ಸೇವಾ ಪ್ರಧಾನ ಶೀರ್ಷಿಕೆಯಡಿ ಲೆಕ್ಕ ಹಾಕಲಾಗುತ್ತದೆ. ನಿಗದಿಪಡಿಸಿದ ಸಮಯದೊಳಗೆ ಲೆಕ್ಕಗಳನ್ನು ಇತ್ಯರ್ಥ ಪಡಿಸದಿದ್ದರೆ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಇದಲ್ಲದೆ, ದೀರ್ಘಾವಧಿಯವರೆಗೆ ಮುಂಗಡಗಳನ್ನು ಹೊಂದಾಣಿಕೆ ಮಾಡದಿರುವುದು ದುರುಪಯೋಗದ ಅಪಾಯದಿಂದ ಕೂಡಿರುತ್ತದೆ ಮತ್ತು ಹಾಗಾಗಿ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯನ್ನು ಖಚಿತಪಡಿಸಿಕೊಳ್ಳಲು ಆಯಾ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಂದ ನಿಕಟ ಮೇಲ್ವಿಚಾರಣೆಯ ಅಗತ್ಯವಿದೆ.

ರಾಜ್ಯ ಸರ್ಕಾರವು, ಇಲಾಖೆಗಳು ಸೆಳೆದು ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸಲು ಎಲ್ಲಾ ಆಡಳಿತ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಉತ್ತರಿಸಿತು (ಜನವರಿ 2025), ಹೆಚ್ಚಿನ ಶೇಕಡಾವಾರು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಬಾಕಿ

ಉಳಿಸಿಕೊಂಡಿರುವ ಮೇಲಿನ ನಾಲ್ಕು ಇಲಾಖೆಗಳಿಗೆ ಮತ್ತಷ್ಟು ಸೂಚನೆಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದುಕೂಡ ತಿಳಿಸಿತು.

## 4.7 ವೈಯಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಆರ್ಥಿಕ ಸಂಹಿತೆ 1958ರ 286ನೇ ನಿಯಮವು ಹಣಕಾಸು ವ್ಯವಹಾರಗಳಿಗೆ ಸಾಮಾನ್ಯ ಲೆಕ್ಕಪತ್ರ ವ್ಯವಸ್ಥೆಯು ಸೂಕ್ತವಲ್ಲದ ಸಂದರ್ಭಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲು ಅವಕಾಶ ಒದಗಿಸುತ್ತದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ರಚಿಸಲಾದ ವೈಯಕ್ತಿಕ ಠೇವಣಿ ಖಾತೆಗಳನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಮುಕ್ತಾಯಗೊಳಿಸಬೇಕು. ಆದಾಗ್ಯೂ, ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿರುವಂತೆ, ನಂತರದ ವರ್ಷಕ್ಕೆ ಗಮನಾರ್ಹ ಶಿಲ್ಕುಗಳನ್ನು ಮುಂದುವರೆಸಿದ್ದು ಸಂಹಿತೆಯ ನಿಯಮಗಳನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಿರುವುದಿಲ್ಲ. ವೈಯಕ್ತಿಕ ಠೇವಣಿ ಖಾತೆಗಳ ಆಡಳಿತಾಧಿಕಾರಿಗಳು ಸಂಚಿತ ನಿಧಿಗೆ ವರ್ಗಾಯಿಸಬೇಕಾದ ಶಿಲ್ಕಿನ ಬಗ್ಗೆ ಖಜಾನೆ ಅಧಿಕಾರಿಗೆ ತಿಳಿಸಬೇಕು. ತಮ್ಮ ವೈಯಕ್ತಿಕ ಠೇವಣಿ ಖಾತೆಗಳನ್ನು ನಿಗದಿತ ಅವಧಿಯನ್ನು ಮೀರಿ ಮುಂದುವರೆಸಲು ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಖಜಾನೆಯ ಲೆಕ್ಕಗಳೊಂದಿಗೆ ತಮ್ಮ ವೈಯಕ್ತಿಕ ಠೇವಣಿ ಖಾತೆಗಳ ಲೆಕ್ಕಗಳೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡುವುದು ಸಂಬಂಧಪಟ್ಟ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

### *4.7.1 ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿ*

ಮಹಾಲೇಖಾಪಾಲರ (ಲೆ ಮತ್ತು ಹ) ದಾಖಲೆಗಳ ಪ್ರಕಾರ 2023–24ರ ಅವಧಿಯಲ್ಲಿ ನಿರ್ವಹಿಸಲಾದ ವೈಯಕ್ತಿಕ ಠೇವಣಿ ಖಾತೆಗಳ ವಿವರಗಳನ್ನು **ಕೋಷ್ಟಕ–4.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.6: 2023–24ರ ಅವಧಿಯಲ್ಲಿನ ವೈಯಕ್ತಿಕ ಠೇವಣಿ ಖಾತೆಗಳ ವಿವರಗಳು**

(₹ ಕೋಟಿಗಳಲ್ಲಿ)

| ಪ್ರಾರಂಭಿಕ ಶಿಲ್ಕು | | ತೆರೆದ ವೈಯಕ್ತಿಕ ಠೇವಣಿ ಖಾತೆಗಳು | ವೈಯಕ್ತಿಕ ಠೇವಣಿ ಖಾತೆಗಳಿಗೆ ವರ್ಗಾವಣೆಗಳು | ಮುಕ್ತಾಯ ಮಾಡಿದ ವೈಯಕ್ತಿಕ ಠೇವಣಿ ಖಾತೆಗಳು | ವೈಯಕ್ತಿಕ ಠೇವಣಿ ಖಾತೆಗಳಿಂದ ಹಿಂಪಡೆತ | ಅಂತಿಮ ಶಿಲ್ಕು | |
|---|---|---|---|---|---|---|---|
| ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 85 | 29,509.54 | 06 | 11,055.28 | – | 7,730.13 | 91 | 32,834.69 |

### *4.7.2 ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳ ಪ್ರವೃತ್ತಿಗಳು*

2019–20 ರಿಂದ 2023–24ರ ಅವಧಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳನ್ನು **ಕೋಷ್ಟಕ–4.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.7: ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾದ ನಿಧಿಗಳು**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ನಿವ್ವಳ ಅಂತಿಮ ಶಿಲ್ಕು |
|---|---|---|---|---|
| 2019–20 | 4,085.14 | 6,557.67 | 6,221.25 | 4,421.56 |
| 2020–21 | 4,421.56 | 4,711.16 | 5,143.49 | 3,989.23 |
| 2021–22 | 3,989.23 | 4,787.13 | 4,670.75 | 4,105.61 |
| 2022–23 | 4,105.61 | 32,201.44 | 6,797.51 | 29,509.54 |
| 2023–24 | 29,509.54 | 11,055.28 | 7,730.13 | 32,834.69 |

*ಆಕರ: ಹಣಕಾಸು ಲೆಕ್ಕಗಳು*

ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು 2022–23ಕ್ಕಿಂತ 2023–24ರ ಅವಧಿಯಲ್ಲಿ ₹3,325.15 ಕೋಟಿಗಳಷ್ಟು ಏರಿಕೆಯನ್ನು ತೋರಿಸಿತು.

ಮಾರ್ಚ್ 2024ರ ಅಂತ್ಯಕ್ಕೆ ದೊಡ್ಡ (ಒಂದು ನೂರು ಕೋಟಿಗೂ ಅಧಿಕ) ಮೊತ್ತವನ್ನು ಹೊಂದಿರುವ ಆಡಳಿತಾಧಿಕಾರಿಗಳ ಕೆಲವು ವೈಯಕ್ತಿಕ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ ನಿವ್ವಳ ಅಂತಿಮ ಶಿಲ್ಕನ್ನು **ಕೋಷ್ಟಕ–4.8**ರಲ್ಲಿ ನೀಡಲಾಗಿದೆ. ನಕಾರಾತ್ಮಕ ಶಿಲ್ಕುಗಳನ್ನು ಹೊಂದಿರುವ ಕೆಲವು ಠೇವಣಿ ಖಾತೆಗಳು ಇದನ್ನು ಸರಿದೂಗಿಸಿದೆ.

**ಕೋಷ್ಟಕ–4.8: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಆಡಳಿತಾಧಿಕಾರಿ | ಮೊತ್ತ |
|---|---|---|
| 1 | ಸಾಮಾನ್ಯ | 390.66 |
| 2 | ಜಿಲ್ಲಾಧಿಕಾರಿಗಳು | 8,242.08 |
| 3 | ವಿಶೇಷ ಭೂಸ್ವಾಧೀನ ಅಧಿಕಾರಿ, ಎಸ್‌ಸಿಆರ್ ಯೋಜನೆ ಕರ್ನಾಟಕ | 846.84 |
| 4 | ಅಧೀನ ಕಾರ್ಯದರ್ಶಿ 1 ಮತ್ತು 3 ಕರ್ನಾಟಕ ವಿಧಾನಸಭೆ (ಕರ್ನಾಟಕ ಶಾಸಕಾಂಗ ಗೃಹ), ಬೆಂಗಳೂರು | 146.53 |
| 5 | ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿ | 323.77 |
| 6 | ವಿಶೇಷ ಭೂಸ್ವಾಧೀನ ಅಧಿಕಾರಿ, ಮಂಡ್ಯ | 179.75 |
| 7 | ತಹಶೀಲ್ದಾರ್, ವಿಪತ್ತು ಪರಿಹಾರ ನಿಧಿ | 106.28 |
| 8 | ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ | 26,192.09 |
| 9 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | 197.41 |
| 10 | ವಿಶೇಷ ಭೂಸ್ವಾಧೀನ ಅಧಿಕಾರಿ, ಕಬಿನಿ ಜಲಾಶಯ ಯೋಜನೆ, ಮೈಸೂರು | 602.37 |
| 11 | ನಿರ್ದೇಶಕರು, ಪರಿಶಿಷ್ಟ ಪಂಗಡ ಇಲಾಖೆ | 351.46 |

*ಆಕರ: ಋಣ, ಠೇವಣಿ ಇರಸಾಲು ಲೆಡ್ಜರ್‌ಗಳು*

2023–24ರ ಅವಧಿಯಲ್ಲಿ ವೈಯಕ್ತಿಕ ಠೇವಣಿ ಖಾತೆಗಳ ಅಂತಿಮ ಶಿಲ್ಕಿನಲ್ಲಿನ ಬಾಕಿ ಹೆಚ್ಚಳವು ಮುಖ್ಯವಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ಅಡಿಯಲ್ಲಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ದಿನಾಂಕ 21 ಏಪ್ರಿಲ್ 2022ರ ಆದೇಶದ ಪ್ರಕಾರ ರಾಜ್ಯದ ಸಾರ್ವಜನಿಕ ಖಾತೆಗಳಲ್ಲಿ ವೈಯಕ್ತಿಕ ಠೇವಣಿ ಖಾತೆಯನ್ನು ತೆರೆಯುವ ಮೂಲಕ ಗಣಿಗಾರಿಕೆ ಪರಿಣಾಮ ವಲಯದ ಸಮಗ್ರ ಪರಿಸರ ಯೋಜನೆಯನ್ನು ಕಾರ್ಯಗತಗೊಳಿಸಲು ವಿಶೇಷ ಉದ್ದೇಶದ ವಾಹನದ ಸ್ವೀಕೃತಿಗಳನ್ನು ಮತ್ತು ವೆಚ್ಚವನ್ನು ವೈಯಕ್ತಿಕ ಠೇವಣಿ ಖಾತೆಗೆ ವರ್ಗಾವಣೆ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು.

### (ಎ) ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 286ಎ ಪ್ರಕಾರ, ವೈಯಕ್ತಿಕ ಠೇವಣಿ ಖಾತೆಯು ಗಣನೀಯ ಅವಧಿಯವರೆಗೆ ಕಾರ್ಯನಿರ್ವಹಿಸದಿದ್ದರೆ ಮತ್ತು ಠೇವಣಿ ಖಾತೆಯ ಅಗತ್ಯವು ಸ್ಥಗಿತಗೊಂಡರೆ, ಠೇವಣಿ ಖಾತೆಯು ಯಾರ ಪರವಾಗಿ ತೆರೆಯಲಾಯಿತೋ ಆ ಅಧಿಕಾರಿಯೊಂದಿಗೆ ಸಮಾಲೋಚಿಸಿ ಅದನ್ನು ಮುಕ್ತಾಯಗೊಳಿಸಬೇಕು.

2023–24ರ ಅವಧಿಯಲ್ಲಿ, 91 ವೈಯಕ್ತಿಕ ಠೇವಣಿ ಖಾತೆಗಳಲ್ಲಿ, 28 ವೈಯಕ್ತಿಕ ಠೇವಣಿ ಖಾತೆಗಳು, **ಅನುಬಂಧ–4.4**ರಲ್ಲಿ ವಿವರಿಸಿದಂತೆ ಮೂರು ವರ್ಷಗಳಿಗಿಂತ ಹೆಚ್ಚು ಕಾಲ ನಿಷ್ಕ್ರಿಯವಾಗಿದ್ದವು. ಇವುಗಳಲ್ಲಿ, ನಾಲ್ಕು ವೈಯಕ್ತಿಕ ಠೇವಣಿ ಖಾತೆಗಳು ಶೂನ್ಯ ಶಿಲ್ಕನ್ನು ಹೊಂದಿದ್ದವು ಮತ್ತು ಈ ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಚ್ಚಲು ಸರ್ಕಾರ ಕ್ರಮ ಕೈಗೊಳ್ಳಬಹುದು.

**(ಬಿ) ಋಣಾತ್ಮಕ ಶಿಲ್ಕು ಹೊಂದಿರುವ ವೈಯಕ್ತಿಕ ಠೇವಣಿ ಖಾತೆಗಳು**

ವೈಯಕ್ತಿಕ ಠೇವಣಿ ಖಾತೆಗಳ ಅಡಿಯಲ್ಲಿ ಸ್ವೀಕೃತಿಗಳನ್ನು ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ವೈಯಕ್ತಿಕ ಠೇವಣಿ ಖಾತೆಗಳಿಗೆ ಜಮೆ ಮಾಡಲಾಗುತ್ತದೆ ಅಥವಾ ಇತರ ಆಕರಗಳಿಂದ ಜಮೆ ಮಾಡಲಾಗುತ್ತದೆ. ವೈಯಕ್ತಿಕ ಠೇವಣಿ ಖಾತೆಗಳಡಿಯಲ್ಲಿ ಲಭ್ಯವಿರುವ ಶಿಲ್ಕುಗಳಿಂದ ವೆಚ್ಚವನ್ನು ಭರಿಸಲಾಗುತ್ತದೆ. ಆದ್ದರಿಂದ, ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಯಾವುದೇ ಋಣಾತ್ಮಕ ಶಿಲ್ಕು ಇರಬಾರದು. ಆದಾಗ್ಯೂ, ಮಹಾಲೇಖಾಪಾಲರ (ಲೆ ಮತ್ತು ಹ) ದಾಖಲೆಗಳ ಪ್ರಕಾರ 20 ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹1,860.47 ಕೋಟಿ ಮೊತ್ತದ ಋಣಾತ್ಮಕ ಶಿಲ್ಕುಗಳಿದ್ದವು (**ಅನುಬಂಧ–4.5**).

## 4.8 ಕಿರು ಶೀರ್ಷಿಕೆ–800 ವಿವೇಚನಾರಹಿತ ಬಳಕೆ

ಇತರೆ ಸ್ವೀಕೃತಿಗಳು ಮತ್ತು ಇತರ ವೆಚ್ಚಗಳಿಗೆ ಸಂಬಂಧಿಸಿದ ಕಿರು ಶೀರ್ಷಿಕೆ–800 ಅನ್ನು ಲೆಕ್ಕಗಳಲ್ಲಿ ಸೂಕ್ತ ಕಿರು ಶೀರ್ಷಿಕೆಯನ್ನು ಒದಗಿಸದಿದ್ದಾಗ ಮಾತ್ರ ಕಾರ್ಯನಿರ್ವಹಿಸಲು ಉದ್ದೇಶಿಸಲಾಗಿದೆ. ಕಿರು ಶೀರ್ಷಿಕೆ–800ನ್ನು ವಾಡಿಕೆಯಂತೆ ಕಾರ್ಯಾಚರಣೆ ಮಾಡುವುದನ್ನು ಉತ್ತೇಜಿಸಬಾರದು ಏಕೆಂದರೆ ಅದು ಲೆಕ್ಕಗಳನ್ನು ಅಪಾರದರ್ಶಕಗೊಳಿಸುತ್ತದೆ. ಬಹು ಉದ್ದೇಶಿತ ಕಿರು ಶೀರ್ಷಿಕೆ–800ರ ಅಡಿಯಲ್ಲಿ ದೊಡ್ಡ ಮೊತ್ತಗಳ ವರ್ಗೀಕರಣವು ಹಣಕಾಸಿನ ವರದಿಯಲ್ಲಿ ಪಾರದರ್ಶಕತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಹಂಚಿಕೆ ಆದ್ಯತೆಗಳು ಮತ್ತು ವೆಚ್ಚದ ಗುಣಮಟ್ಟದ ಸರಿಯಾದ ವಿಶ್ಲೇಷಣೆಯನ್ನು ವಿರೂಪಗೊಳಿಸುತ್ತದೆ.

2023–24ರ ಅವಧಿಯಲ್ಲಿ, 32 ಪ್ರಮುಖ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಒಟ್ಟು ರಾಜಸ್ವ ಮತ್ತು ಬಂಡವಾಳ ವೆಚ್ಚದ (₹2,94,734.52 ಕೋಟಿ) ಶೇಕಡಾ 3.68ರಷ್ಟಾದ ₹10,836.47 ಕೋಟಿಗಳನ್ನು ಕಿರು ಶೀರ್ಷಿಕೆ–800–ಇತರ ವೆಚ್ಚಗಳ ಅಡಿಯಲ್ಲಿ ವರ್ಗೀಕರಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು. ಕಿರು ಶೀರ್ಷಿಕೆ–800–ಇತರ ವೆಚ್ಚದ ಅಡಿಯಲ್ಲಿ ವರ್ಗೀಕರಿಸಿದ ಗಣನೀಯ ವೆಚ್ಚದ (ಶೇಕಡಾ 20 ಮತ್ತು ಅದಕ್ಕಿಂತ ಹೆಚ್ಚು) ವಿವರಗಳನ್ನು **ಅನುಬಂಧ–4.6**ರಲ್ಲಿ ನೀಡಲಾಗಿದೆ.

ಕೆಲವು ವೋಚರ್‌ಗಳ ವಿಶ್ಲೇಷಣೆಯು ಈ ಕೆಳಗಿನ ನಿದರ್ಶನಗಳಿಗೆ ಸಂಬಂಧಿಸಿದಂತೆ, ನಿರ್ದಿಷ್ಟ ಕಿರು ಶೀರ್ಷಿಕೆಗಳು ಲಭ್ಯವಿದ್ದರೂ, ಕಿರು ಶೀರ್ಷಿಕೆ 800–ಇತರೆ ವೆಚ್ಚಗಳನ್ನು ನಿರ್ವಹಿಸಲಾಗಿದೆ ಎಂದು ತಿಳಿದುಬಂದಿದೆ.

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಕಾರಣ / ಟಿಪ್ಪಣಿಗಳು |
|---|---|---|
| 1 | 4217–60–800–6–01–159 | ಇದು ನಿರ್ಮಾಣ ಕಾರ್ಯವಾಗಿರುವುದರಿಂದ, ಕಿರು ಶೀರ್ಷಿಕೆ 059 ಅನ್ನು ನಿರ್ವಹಿಸಬಹುದು. |
| 2 | 2401–800–1–57 | ಕಿರು ಶೀರ್ಷಿಕೆ 800 ಇತರೆ ಖರ್ಚುಗಳು ಪ್ರಧಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಅಸ್ತಿತ್ವದಲ್ಲಿದ್ದರೆ, ಕಿರು ಶೀರ್ಷಿಕೆ ಇತರೆ ಅನುದಾನಗಳು / ಇತರೆ ಯೋಜನೆಗಳು ಇತ್ಯಾದಿಗಳಿಗೆ ಕಿರು ಶೀರ್ಷಿಕೆ 600 ಅನ್ನು ಉಪಯೋಗಿಸಬೇಕು. |
| 3 | 4701–76–800–0–01 | |
| 4 | 2216–02–800–0–04 | |

ಅದೇ ರೀತಿ, 49 ಪ್ರಧಾನ ಲೆಕ್ಕ ಶೀರ್ಷಿಕೆ ಖಾತೆಗಳ ಅಡಿಯಲ್ಲಿ ₹2,000 ಕೋಟಿ, ಒಟ್ಟು ಆದಾಯದ ಸ್ವೀಕೃತಿಗಳ (₹2,33,342.93 ಕೋಟಿ) ಶೇಕಡಾ 0.86 ರಷ್ಟನ್ನು 800– ಇತರ ರಸೀದಿಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ.

## (ಸಿ) ಮಾಪನಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು

## 4.9 ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು

### *4.9.1 ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು*

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ಇರಿಸಲಾಗುತ್ತದೆ. ಸ್ವೀಕೃತಿಗಳು ಮತ್ತು ಪಾವತಿಗಳ ವಹಿವಾಟುಗಳನ್ನು ಅವುಗಳ ಸ್ವರೂಪದ ಮಾಹಿತಿಯ ಕೊರತೆಯಿಂದಾಗಿ ಅಥವಾ ಇತರೆ ಕಾರಣಗಳಿಗಾಗಿ ಲೆಕ್ಕದ ಅಂತಿಮ ಶೀರ್ಷಿಕೆಗೆ ಜಮೆ/ಖರ್ಚು ಹಾಕಲಾಗಲು ಸಾಧ್ಯವಿಲ್ಲದ ಕಾರಣ. ಅಂತಹ ವಹಿವಾಟುಗಳನ್ನು ಪ್ರತಿಬಿಂಬಿಸಲು 'ಅಮಾನತ್ತು ಶೀರ್ಷಿಕೆಗಳು' ಎಂದು ಕರೆಯಲ್ಪಡುವ ಕೆಲವು ಮಧ್ಯವರ್ತಿ/ಹೊಂದಾಣಿಕೆ ಖಾತೆಗಳನ್ನು ಸರ್ಕಾರಿ ಖಾತೆಗಳಲ್ಲಿ ನಿರ್ವಹಿಸಲಾಗುತ್ತದೆ. ಈ ಅಮಾನತ್ತು ಲೆಕ್ಕ ಶೀರ್ಷಿಕೆಗಳನ್ನು ಅಂತಿಮವಾಗಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿ ಖರ್ಚಿನ ಕಳೆಯುವಿಕೆ ಅಥವಾ ಜಮೆಯ ಕಳೆಯುವಿಕೆಯ ಮೂಲಕ ಲೆಕ್ಕ ಹಾಕಿ ತೀರಿಕೆ ಮಾಡಲಾಗುತ್ತದೆ. ಈ ಮೊತ್ತಗಳು ತೀರಿಕೆಯಾಗದೆ ಉಳಿದಿದ್ದರೆ ಅಮಾನತ್ತು ಶೀರ್ಷಿಕೆಯಲ್ಲಿ ಶಿಲ್ಕುಗಳು ಸಂಗ್ರಹವಾಗುತ್ತವೆ ಮತ್ತು ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳು ನಿಖರವಾಗಿ ಪ್ರತಿಬಿಂಬಿತವಾಗುವುದಿಲ್ಲ. ಮಹಾಲೇಖಪಾಲರು (ಲೆ ಮತ್ತು ಹ) ನಿರ್ವಹಿಸಿರುವ ಲೆಡ್ಜರಿನಲ್ಲಿ ಕಳೆದ ಮೂರು ವರ್ಷಗಳಿಗೆ ದಾಖಲಿಸಲಾದ ಕೆಲವು ಪ್ರಮುಖ ಅಮಾನತ್ತು ಲೆಕ್ಕ ಶೀರ್ಷಿಕೆಗಳನ್ನು **ಕೋಷ್ಟಕ–4.9**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.9: ಅಮಾನತ್ತು ಮತ್ತು ಇರಸಾಲು ಶೀರ್ಷಿಕೆಗಳಡಿಯ ಶಿಲ್ಕುಗಳು**

(₹ ಕೋಟಿಗಳಲ್ಲಿ)

| ಕಿರು ಲೆಕ್ಕಶೀರ್ಷಿಕೆ | 2021–22 | | 2022–23 | | 2023–24 | |
|---|---|---|---|---|---|---|
| | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| **ಪ್ರಧಾನ ಲೆಕ್ಕಶೀರ್ಷಿಕೆ 8658–ಅಮಾನತ್ತು** | | | | | | |
| **102–ಅಮಾನತ್ತು ಲೆಕ್ಕ–ಸಿವಿಲ್** | 16.94 | 372.49 | ಶೂನ್ಯ | 411.74 | 0.05 | ಶೂನ್ಯ |
| **ನಿವ್ವಳ** | **ಜಮೆ 355.55** | | **ಜಮೆ 411.74** | | **ಖರ್ಚು 0.05** | |
| **110– ರಿಸರ್ವ್ ಬ್ಯಾಂಕ್ ಅಮಾನತ್ತು–ಕೇಂದ್ರ ಲೆಕ್ಕಪತ್ರ ಕಛೇರಿ** | 172.52 | 35.49 | 273.45 | ಶೂನ್ಯ | 134.73 | 114.27 |
| **ನಿವ್ವಳ** | **ಖರ್ಚು 137.03** | | **ಖರ್ಚು 273.45** | | **ಖರ್ಚು 20.46** | |
| **ಪ್ರಧಾನ ಲೆಕ್ಕಶೀರ್ಷಿಕೆ 8782–ಜಮೆಗಳು** | | | | | | |
| **102–1 ಲೋಕೋಪಯೋಗಿ ಕಾಮಗಾರಿಗಳು–ಖಜಾನೆಗೆ ಜಮೆ** | 82.61 | ಶೂನ್ಯ | 82.61 | ಶೂನ್ಯ | 82.61 | ಶೂನ್ಯ |
| **ನಿವ್ವಳ** | **ಖರ್ಚು 82.61** | | **ಖರ್ಚು 82.61** | | **ಖರ್ಚು 82.61** | |
| **103–1 ಅರಣ್ಯ ಜಮೆಗಳು** | 12.13 | ಶೂನ್ಯ | 12.13 | ಶೂನ್ಯ | 12.13 | ಶೂನ್ಯ |
| **ನಿವ್ವಳ** | **ಖರ್ಚು 12.13** | | **ಖರ್ಚು 12.13** | | **ಖರ್ಚು 12.13** | |
| **8793–ಅಂತರ್ ರಾಜ್ಯ ಅಮಾನತ್ತು ಖಾತೆ** | 214.49 | ಶೂನ್ಯ | 55.72 | ಶೂನ್ಯ | 0.02 | ಶೂನ್ಯ |
| **ನಿವ್ವಳ** | **ಖರ್ಚು 214.49** | | **ಖರ್ಚು 55.72** | | **ಖರ್ಚು 0.02** | |

*ಆಕರ: ಹಣಕಾಸು ಲೆಕ್ಕಗಳು*

ಸರ್ಕಾರವು, ಸಾರ್ವಜನಿಕ ಹಣದ ಪಾಲಕನಾಗಿ ಅವುಗಳನ್ನು ಸ್ವೀಕರಿಸಿ ನಂಬಿಕೆಯಲ್ಲಿ ಇರಿಸುವ ವ್ಯವಹಾರಗಳನ್ನು ಸಾಲ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಕ್ಕಶೀರ್ಷಿಕೆಯಲ್ಲಿ ನಿರ್ವಹಿಸುತ್ತದೆ.

2023–24ರ ರಾಜ್ಯ ಹಣಕಾಸು ಖಾತೆಗಳ ನಿಖರತೆಯು ಈ ಕೆಳಗೆ ಕಾಣಿಸಿರುವಂತಹ ಅಂಶಗಳಿಂದ ಪ್ರತಿಕೂಲವಾಗಿ ಬಾಧಿತವಾಗಿದೆ:

(i) ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವ ಹೆಚ್ಚಿನ ಸಂಖ್ಯೆಯ ಅಮಾನತ್ತು ವಹಿವಾಟುಗಳು; ಮತ್ತು
(ii) ಸಾಲ ಠೇವಣಿ ಇರಸಾಲುಗಳ ಲೆಕ್ಕ ಶೀರ್ಷಿಕೆಯಲ್ಲಿ ಹೆಚ್ಚಿದ ವ್ಯತಿರಿಕ್ತ ಶಿಲ್ಕುಗಳ ಪ್ರಮಾಣ ಮತ್ತು ಮೊತ್ತ.

ಹಣಕಾಸು ಲೆಕ್ಕಗಳು ಈ ಶೀರ್ಷಿಕೆಗಳಡಿಯಲ್ಲಿ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿ ಇರುವ ಖರ್ಚು ಮತ್ತು ಜಮೆ ಶಿಲ್ಕುಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸುವ ಮೂಲಕ ಬಾಕಿ ಉಳಿದಿರುವ ಶಿಲ್ಕುಗಳನ್ನು ಲೆಕ್ಕ ಮಾಡಲಾಗುತ್ತದೆ. ಈ ಶೀರ್ಷಿಕೆಗಳ ಅಡಿಯಲ್ಲಿರುವ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

- **ಅಮಾನತ್ತು ಲೆಕ್ಕ (ಸಿವಿಲ್)**

ವರ್ಗೀಕರಣದ ಸಂಪೂರ್ಣ ವಿವರಗಳು ಲಭ್ಯವಿಲ್ಲದ ವಹಿವಾಟುಗಳು ಅಥವಾ ಅದಕ್ಕೆ ಪೂರಕವಾದ ಸಂಬಂಧಿತ ವೋಚರುಗಳು/ಅನುಸೂಚಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಪಾವತಿ/ನಗದು ಲೆಕ್ಕಗಳ ಖಜಾನೆ ಅನುಸೂಚಿಗಳಲ್ಲಿ ವರದಿ ಮಾಡಲಾದ ಅಂಕಿ ಅಂಶಗಳು ಮತ್ತು ಪೂರಕ ವೋಚರುಗಳ ಅಂಕಿಗಳ ನಡುವೆ ವ್ಯತ್ಯಾಸಗಳಿದ್ದರೆ ಇತ್ಯಾದಿಗಳು ಈ ಶೀರ್ಷಿಕೆಯಲ್ಲಿ ಬಾಕಿ ಇರುವ ಅಂಕಿಗಳ ಪ್ರಮುಖ ಭಾಗವಾಗಿರುತ್ತದೆ. ರೈಲ್ವೇ, ರಕ್ಷಣಾ ಮತ್ತು ಅಂಚೆ ಮತ್ತು ದೂರಸಂಪರ್ಕ ಇಲಾಖೆಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ನಡೆಯುವ ವಹಿವಾಟುಗಳನ್ನು ಸಂಬಂಧಿಸಿದ ಅಧಿಕಾರಿಗಳು ಬಾಕಿಗಳನ್ನು ಇತ್ಯರ್ಥಗೊಳಿಸುವವರೆಗೆ ಆರಂಭದಲ್ಲಿ ಈ ಶೀರ್ಷಿಕೆಯಡಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆಯಡಿಯಲ್ಲಿ 2023-24ನೇ ಸಾಲಿನಲ್ಲಿ ನಿವ್ವಳ ಖರ್ಚು ಶುಲ್ಕ (ಹೊಂದಾಣಿಕೆಯಾಗದ ಮೊತ್ತ) ₹0.05 ಕೋಟಿ ಯಷ್ಟಿತ್ತು. ರೈಲ್ವೇ (₹3.14 ಕೋಟಿ) ಮತ್ತು ರಕ್ಷಣಾ ಇಲಾಖೆಗೆ (₹0.39 ಕೋಟಿ) ಸಂಬಂಧಿಸಿದಂತೆ, ಅಮಾನತ್ತು ಇತ್ಯರ್ಥದ ನಂತರ ನಗದು ಶಿಲ್ಕು ಹೆಚ್ಚಾಗುತ್ತದೆ. ಉಳಿದವುಗಳಿಗೆ ಸಂಬಂಧಿಸಿದಂತೆ ನಗದು ಶಿಲ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕ ಕಛೇರಿ**

ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಛೇರಿ ವಿಭಾಗಕ್ಕೆ ಸೂಚನೆಯನ್ನು ಕಳುಹಿಸುವ ಮೂಲಕ ಎರಡು ಸರ್ಕಾರಗಳ ನಗದು ಶಿಲ್ಕುಗಳ ನಡುವೆ ಹಣ ಇತ್ಯರ್ಥವನ್ನು ಮಾಡುವ ಅಂತರ-ಸರ್ಕಾರಿ ವಹಿವಾಟುಗಳನ್ನು ದಾಖಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಮಾಡಿದ ಹಣ ಇತ್ಯರ್ಥ ಸೂಚನೆಯ ಸ್ವೀಕೃತಿಯ ಮೇಲೆ ಮೊತ್ತವನ್ನು ಅಂತಿಮ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಈ ಅಮಾನತ್ತು ಶೀರ್ಷಿಕೆಯನ್ನು ಚುಕ್ತಗೊಳಿಸಲಾಗುತ್ತದೆ. ಭಾರತ ಸರ್ಕಾರದಿಂದ ಪಡೆದ ಅನುದಾನ, ಸಾಲಗಳು ಮತ್ತು ಸಾಲಗಳ ಮರುಪಾವತಿಗಳು, ಭದ್ರತೆಗಳ ವಿಮುಕ್ತತೆ ಮತ್ತು ಬ್ಯಾಂಕಿನ ಸಾರ್ವಜನಿಕ ಋಣ ಕಛೇರಿಗಳು ಪಾವತಿಸಿದ ಅದರ ಮೇಲಿನ ಬಡ್ಡಿ ಪಾವತಿ ಮತ್ತು ಪೂರೈಕೆ ಮತ್ತು ವಿಲೇವಾರಿಗಳ ಮಹಾನಿರ್ದೇಶಕರು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿದ ಸಾಮಗ್ರಿಗಳ ಪಾವತಿಗಳು ಈ ಅಮಾನತ್ತು ಶೀರ್ಷಿಕೆಯ ಮೂಲಕ ಇತ್ಯರ್ಥಗೊಳ್ಳುವ ಪ್ರಮುಖ ವಹಿವಾಟುಗಳಾಗಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2023-24ರ ಅವಧಿಯಲ್ಲಿ ಈ ಶೀರ್ಷಿಕೆಯಡಿ ಖರ್ಚು ಶುಲ್ಕ ₹252.99 ಕೋಟಿಗಳಷ್ಟು ಇಳಿಕೆಯಾಗಿದ್ದು ₹20.46 ಕೋಟಿಗಳಾಗಿದ್ದಿತು. ಇದರ ತೀರುವಳಿ/ಇತ್ಯರ್ಥದ ನಂತರ ರಾಜ್ಯ ಸರ್ಕಾರದ ನಗದು ಬಾಕಿ ಹೆಚ್ಚಾಗುತ್ತದೆ.

- **ಖಜಾನೆಗೆ ಲೋಕೋಪಯೋಗಿ ಕಾಮಗಾರಿಗಳ ಇರಸಾಲುಗಳು**

ಲೋಕೋಪಯೋಗಿ ಕಾಮಗಾರಿಗಳ ವಿಭಾಗೀಯ ಅಧಿಕಾರಿಗಳು ಇರಸಾಲು ಮಾಡಿದ ಮೊತ್ತವನ್ನು ಖಜಾನೆಯಲ್ಲಿ ಅಂಗೀಕರಿಸಲಾಗಿದೆಯೇ ಎಂಬುದನ್ನು ಗಮನಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. 2023-24ರಲ್ಲಿ ಈ ಶೀರ್ಷಿಕೆಯಡಿಯಲ್ಲಿದ್ದ ₹82.61 ಕೋಟಗಳಷ್ಟು ಖರ್ಚು ಶುಲ್ಕವು ವಿಭಾಗೀಯ ಕಛೇರಿಗಳು ಖಜಾನೆಯೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ ಕಾರಣದಿಂದ

ಉಂಟಾಗಿದ್ದು, ಈ ವ್ಯತ್ಯಾಸಗಳು ಸೋರಿಕೆಯನ್ನು ಪತ್ತೆ ಹಚ್ಚದಿರಲು ಕಾರಣವಾಗಬಹುದು ಮತ್ತು ಸರ್ಕಾರಕ್ಕೆ ನಷ್ಟವನ್ನು ಉಂಟು ಮಾಡಬಹುದು.

- **ಖಜಾನೆಗೆ ಅರಣ್ಯ ಇರಸಾಲುಗಳು**

ಅರಣ್ಯ ವಿಭಾಗಗಳ ಮೂಲಕ ಅರಣ್ಯ ಆದಾಯ ಸಂಗ್ರಹಣೆ ಮತ್ತು ಖಜಾನೆಯಲ್ಲಿ ಸರ್ಕಾರಿ ಲೆಕ್ಕಗಳಿಗೆ ಅವುಗಳ ಜಮೆಯು ಆರಂಭದಲ್ಲಿ ಈ ಶೀರ್ಷಿಕೆಯಡಿ ನಡೆಯುತ್ತದೆ. ಹಣ ಇರಸಾಲುಗಳನ್ನು ಖಜಾನೆ ಅಧಿಕಾರಿಗಳು ಒಪ್ಪಿಕೊಂಡು ಲೆಕ್ಕ ಹಾಕಿದ ನಂತರ ಖಜಾನೆ ಲೆಕ್ಕದಲ್ಲಿ ಕಾಣಿಸಿಕೊಳ್ಳುವ ಈ ಶೀರ್ಷಿಕೆಯಲ್ಲಿನ ಖರ್ಚುಗಳು ಜಮೆಗಳಿಂದ ತೀರುವಳಿಗೊಳ್ಳುತ್ತವೆ. ಆದಾಯದ ನಿಜವಾದ ವಸೂಲಿ ಮತ್ತು ಖಜಾನೆಗೆ ಅದರ ಜಮೆಯ ನಡುವಿನ ಸಮಯದ ವಿಳಂಬದಿಂದಾಗಿ, ಈ ಶೀರ್ಷಿಕೆಯಡಿಯಲ್ಲಿ ವಿಭಾಗದ ಲೆಕ್ಕಗಳಲ್ಲಿ ಕಾಣಿಸಿಕೊಳ್ಳುವ ಖರ್ಚುಗಳು ಜಮೆ ಮಾಡಿದ ಹಣವು ಅಂತಿಮವಾಗಿ ಖಜಾನೆ ಲೆಕ್ಕಗಳಲ್ಲಿ ಲೆಕ್ಕ ಹಾಕುವವರೆಗೂ ಕಾಣಿಸಿಕೊಳ್ಳುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ 2023–24ರ ಅಂತ್ಯದಲ್ಲಿ ₹12.13 ಕೋಟಿಗಳ ಖರ್ಚು ಶಿಲ್ಕು ಇತ್ತು.

- **ಅಂತರ್ ರಾಜ್ಯ ಅಮಾನತ್ತು ಖಾತೆ**

ರಾಜ್ಯಗಳ ನಡುವಿನ ವಹಿವಾಟುಗಳನ್ನು ತಾತ್ಕಾಲಿಕವಾಗಿ ದಾಖಲಿಸಲು ಅಂತರ್ ರಾಜ್ಯ ಅಮಾನತ್ತು ಖಾತೆಯನ್ನು ಬಳಸಲಾಗುತ್ತದೆ, ಅದು ಸರಿಯಾದ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಖಾತೆಗೆ ಅಗತ್ಯವಾದ ಮಾಹಿತಿಯನ್ನು ಹೊಂದಿರುವುದಿಲ್ಲ. ವಹಿವಾಟುಗಳ ಬಗ್ಗೆ ಅಗತ್ಯವಾದ ಮಾಹಿತಿಯ ಸ್ವೀಕೃತಿಯ ಮೇಲೆ, ಆಯಾ ರಾಜ್ಯದ ಸರಿಯಾದ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಅದನ್ನು ಲೆಕ್ಕಹಾಕಲಾಗುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ ಶಿಲ್ಕು ಕಡಿಮೆಯಾಗುವ ಪ್ರವೃತ್ತಿಯಲ್ಲಿದೆ ಮತ್ತು 2023–24ರ ಅವಧಿಯಲ್ಲಿ ಖಾತೆಯು ₹0.02 ಕೋಟಿ ಖರ್ಚು ಶಿಲ್ಕನ್ನು ಹೊಂದಿದೆ ಮತ್ತು ಇದನ್ನು ತೆರವು/ಪಾವತಿ ಮಾಡಿದ ನಂತರ, ರಾಜ್ಯ ಸರ್ಕಾರದ ನಗದು ಶಿಲ್ಕು ಹೆಚ್ಚಾಗುತ್ತದೆ.

### *4.9.2 ಋಣ ಠೇವಣಿ ಇರಸಾಲು ಶೀರ್ಷಿಕೆಯ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು*

ಋಣಾತ್ಮಕ ಶಿಲ್ಕುಗಳು ಇರಬಾರದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಋಣಾತ್ಮಕ ಶಿಲ್ಕುಗಳು ಇದ್ದರೆ ಅವುಗಳನ್ನು ವ್ಯತಿರಿಕ್ತ ಶಿಲ್ಕುಗಳು ಎಂದು ಕರೆಯಬಹುದು. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡದ ಅಥವಾ ಸಾರ್ವಜನಿಕ ಖಾತೆ, ಲೆಕ್ಕ ಶೀರ್ಷಿಕೆಯಡಿ ಋಣಾತ್ಮಕ ಶಿಲ್ಕು ಮುಂಗಡದ ಮೂಲ ಮೊತ್ತಕ್ಕಿಂತ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. **ಕೋಷ್ಟಕ–4.10** ಸಾರ್ವಜನಿಕ ಋಣ, ಸಾಲಗಳು ಮತ್ತು ಮುಂಗಡಗಳು ಮತ್ತು ಸಾರ್ವಜನಿಕ ಖಾತೆ. ಅಡಿಯಲ್ಲಿ ವ್ಯತಿರಿಕ್ತ ಶಿಲ್ಕನ್ನು ತೋರಿಸುತ್ತದೆ. ಸಾರ್ವಜನಿಕ ಋಣ ಸರ್ಕಾರದ ಸಾಲ ಅಡಿಯಲ್ಲಿನ ಶಿಲ್ಕು 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ₹33.38 ಕೋಟಿಗಳಷ್ಟು ಹೆಚ್ಚಾಯಿತು ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ಶಿಲ್ಕು ₹7.23 ಕೋಟಿಗಳಷ್ಟು ಹೆಚ್ಚಳವಾಗಿದೆ. ಆದಾಗ್ಯೂ, ಸಾರ್ವಜನಿಕ ಖಾತೆಯ ಅಡಿಯಲ್ಲಿ, 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ₹0.69 ಕೋಟಿಗಳಷ್ಟು ಶಿಲ್ಕು ಕಡಿಮೆಯಾಗಿದೆ. ಆದ್ದರಿಂದ, ಸಾರ್ವಜನಿಕ ಋಣ, ಸಾಲಗಳು ಮತ್ತು ಮುಂಗಡಗಳು ಮತ್ತು ಸಾರ್ವಜನಿಕ ಖಾತೆಗಳಿಗೆ ಸಂಬಂಧಿಸಿದಂತೆ ವ್ಯತಿರಿಕ್ತ ಶಿಲ್ಕುಗಳನ್ನು ತೆರವುಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ.

**ಕೋಷ್ಟಕ–4.10: ಋಣ, ಠೇವಣಿ, ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ವಿವರ | 2022–23 | 2023–24 |
|---|---|---|---|---|
| **ಸಾರ್ವಜನಿಕ ಋಣ** | | | | |
| 1 | 6003–00–103, 104, 108 | ಭಾರತೀಯ ಜೀವ ವಿಮಾ ನಿಗಮ, ಭಾರತೀಯ ಸಾಮಾನ್ಯ ವಿಮಾ ನಿಗಮ, ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತ, ರಾಜ್ಯಯೋಜನೆ ಕಾರ್ಯಕ್ರಮಗಳಿಂದ ಸಾಲ | ಖರ್ಚು 165.96 | ಖರ್ಚು 199.34 |
| 2 | 6004–04 | ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಾಲಗಳು | ಖರ್ಚು 18.25 | ಖರ್ಚು 18.25 |
| **ಒಟ್ಟು** | | | **ಖರ್ಚು 184.21** | **ಖರ್ಚು 217.59** |
| **ಸಾಲಗಳು ಮತ್ತು ಮುಂಗಡಗಳು** | | | | |
| 3 | 6401, 6402, 6405 ಮತ್ತು 7475 | ರಾಜ್ಯ ಸಂಸ್ಥೆಗಳಿಗೆ, ಇತ್ಯಾದಿಗಳಿಗೆ ಸಾಲ | ಜಮೆ 0.75 | ಜಮೆ 0.75 |
| 4 | 7610 | ಸರ್ಕಾರಿ ನೌಕರರಿಗೆ ಸಾಲ ಮತ್ತು ಮುಂಗಡಗಳು | ಜಮೆ 10.29 | ಜಮೆ 11.05 |
| 5 | 7615 | ಇತರೆ ಸಾಲಗಳು | ಜಮೆ 88.74 | ಜಮೆ 95.21 |
| **ಒಟ್ಟು** | | | **ಜಮೆ 99.78** | **ಜಮೆ 107.01** |
| **ಸಾರ್ವಜನಿಕ ಲೆಕ್ಕ** | | | | |
| 6 | 8009, 8031, 8338, 8443 ಮತ್ತು ಇತರೆ. | ರಾಜ್ಯ ಭವಿಷ್ಯ ನಿಧಿ, ನಾಗರಿಕ ಠೇವಣಿಗಳು ಮತ್ತು ಇತರೆ | ಖರ್ಚು 12.22 | ಖರ್ಚು 11.53 |
| **ಒಟ್ಟು** | | | **ಖರ್ಚು 12.22** | **ಖರ್ಚು 11.53** |

*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ*

ತಪ್ಪಾದ ವರ್ಗೀಕರಣ, ನಿಧಿಯ ಲಭ್ಯತೆಗಿಂತ ಹೆಚ್ಚಿನ ವಿತರಣೆ, ಸ್ವೀಕರಿಸಿದ ಕೊಡುಗೆಗಿಂತ ಹೆಚ್ಚಿನ ವಿತರಣೆ, ಒಂದು ಲೆಕ್ಕಪತ್ರ ಘಟಕದಿಂದ ಇನ್ನೊಂದಕ್ಕೆ ಬಾಕಿಗಳನ್ನು ಮುಂದಕ್ಕೆ ಸಾಗಿಸದಿರುವುದು, ಆಡಳಿತಾತ್ಮಕ ಮರುಸಂಘಟನೆ, ರಾಜ್ಯಗಳ ರಚನೆ / ಹೆಚ್ಚಿನ ಲೆಕ್ಕಪತ್ರ ಘಟಕಗಳ ರಚನೆ ಇತ್ಯಾದಿ ಕಾರಣಗಳಿಂದ ಲೆಕ್ಕಶೀರ್ಷಿಕೆಯಲ್ಲಿ ಋಣಾತ್ಮಕ ಶಿಲ್ಕುಗಳು ಉಂಟಾಗುತ್ತವೆ. ಋಣಾತ್ಮಕ ಶಿಲ್ಕುಗಳ ವಿವರಗಳನ್ನು **ಅನುಬಂಧ–4.7**ರಲ್ಲಿ ತೋರಿಸಲಾಗಿದೆ.

ಈ ಪ್ರತಿಕೂಲ ಬಾಕಿಗಳನ್ನು ಸಮನ್ವಯಗೊಳಿಸದಿರುವುದು ರಾಜ್ಯ ಸರ್ಕಾರವು ನೀಡಿದ ಮತ್ತು ಪಡೆದ ಸಾಲಗಳನ್ನು ಕಡಿಮೆ ಹೇಳುವಲ್ಲಿ ಪರಿಣಮಿಸಿತು.

## 4.10 ಇಲಾಖೆಗಳ ಅಂಕಿ ಅಂಶಗಳನ್ನು ಸಮನ್ವಯ ಮಾಡದಿರುವುದು

ಆದಾಯ/ವೆಚ್ಚಗಳ ಮೇಲೆ ಪರಿಣಾಮ ಬೀರುವ ಆಯವ್ಯಯ ನಿಯಂತ್ರಣವನ್ನು ಹೊಂದಲು ಮತ್ತು ಲೆಕ್ಕಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ನಿಯಂತ್ರಣ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಪುಸ್ತಕಗಳಲ್ಲಿ ದಾಖಲಾದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಮಹಾಲೇಖಾಪಾಲರ (ಲೆ ಮತ್ತು ಹ) ಲೆಕ್ಕ ಪುಸ್ತಕದಲ್ಲಿ ಲೆಕ್ಕ ಹಾಕಿದ ಅಂಕಿಗಳೊಂದಿಗೆ ಸಮನ್ವಯಗೊಳಿಸಬೇಕಾಗುತ್ತದೆ. 2021–22ರಿಂದ ಕಳೆದ ಮೂರು ವರ್ಷಗಳ ಸ್ವೀಕೃತಿಗಳು ಮತ್ತು ವೆಚ್ಚದ ಸಮನ್ವಯದ ವಿವರಗಳನ್ನು **ನಕ್ಷೆ–4.3**ರಲ್ಲಿ ನೀಡಲಾಗಿದೆ.

**ನಕ್ಷೆ–4.3: ಸಮನ್ವಯದ ಸ್ಥಿತಿ**

(₹ ಕೋಟಿಗಳಲ್ಲಿ)




*ಆಕರ: ಹಣಕಾಸು ಲೆಕ್ಕಗಳು* **ಸಾಲಗಳು ಮತ್ತು ಮುಂಗಡಗಳನ್ನು ಹೊರತುಪಡಿಸಿ*

ನಿಯಂತ್ರಣಾಧಿಕಾರಿಗಳ ಸಂಖ್ಯೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ಸಮನ್ವಯದ ಪ್ರಮಾಣಕ್ಕೆ ಸಂಬಂಧಿಸಿದಂತೆ ವಿವರಗಳನ್ನು **ಕೋಷ್ಟಕ–4.11**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.11: ಸ್ವೀಕೃತಿಗಳು ಮತ್ತು ವೆಚ್ಚದ ಅಂಕಿಗಳ ಸಮನ್ವಯದ ಸ್ಥಿತಿ**

(₹ ಕೋಟಿಗಳಲ್ಲಿ)

| ವರ್ಷ | ನಿಯಂತ್ರಣ ಅಧಿಕಾರಿಗಳ ಸಂಖ್ಯೆ | ಸಂಪೂರ್ಣವಾಗಿ ಲೆಕ್ಕ ಹೊಂದಾಣಿಕೆ ಮಾಡಿರುವುದು | ಭಾಗಶ: ಲೆಕ್ಕ ಹೊಂದಾಣಿಕೆ ಮಾಡಿರುವುದು | ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು | ಯಾವುದೇ ತಿಂಗಳಲ್ಲಿ ವಹಿವಾಟು ನಡೆಸದ ನಿಯಂತ್ರಣ ಅಧಿಕಾರಿಗಳು | ಒಟ್ಟು ಮೊತ್ತ | ಲೆಕ್ಕ ಹೊಂದಾಣಿಕೆಯಾದ ಮೊತ್ತ | ಶೇಕಡಾ |
|---|---|---|---|---|---|---|---|---|
| ಸ್ವೀಕೃತಿಗಳು | | | | | | | | |
| 2021–22 | 103 | 71 | 20 | 12 | 0 | 1,95,767.92 | 1,93,763.21 | 98.98 |
| 2022–23 | 96 | 72 | 14 | 7 | 3 | 2,29,081.96 | 2,27,451.09 | 99.29 |
| 2023–24 | 103 | 51 | 32 | 15 | 5 | 2,33,378.92 | 2,33,139.02 | 99.90 |
| ವೆಚ್ಚ | | | | | | | | |
| 2021–22 | 333 | 260 | 42 | 31 | 0 | 2,57,302.40 | 2,49,650.66 | 97.03 |
| 2022–23 | 346 | 280 | 23 | 7 | 36 | 2,72,932.13 | 2,71,307.91 | 99.40 |
| 2023–24 | 346 | 156 | 114 | 32 | 44 | 2,94,734.52 | 2,81,239.88 | 95.42 |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳ ಮೇಲಿನ ವರದಿ ಮತ್ತು ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ಸೂಚಿಸಿದಂತೆ, 2023–24ರಲ್ಲಿ, ಸ್ವೀಕೃತಿಗಳ ಸಮನ್ವಯದಲ್ಲಿ ಏರಿಕೆ ಮತ್ತು ವೆಚ್ಚಗಳ ಸಮನ್ವಯದಲ್ಲಿ ಇಳಿಕೆ ಕಂಡುಬಂದಿತ್ತು. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿ ಮತ್ತು ವಿತರಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಲೆಕ್ಕ ಸಮನ್ವಯವನ್ನು ಮಾಡಿರಲಿಲ್ಲ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಸಮನ್ವಯಕ್ಕಾಗಿ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

## 4.11 ನಗದು ಶಿಲ್ಕಿನ ಸಮನ್ವಯ

ರಾಜ್ಯ ಸರ್ಕಾರದ ವಹಿವಾಟುಗಳ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೆಕ್ಕಹಾಕುವಿಕೆ ಮತ್ತು ಸಮನ್ವಯಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನಗಳ ಬಗ್ಗೆ ಕಾರ್ಯಕಾರಿ ಸಮೂಹದ ವರದಿಯ ಕಂಡಿಕೆ–3.65ರ ನಿಬಂಧನೆಗಳ ಪ್ರಕಾರ ಆರ್ಥಿಕ ವರ್ಷ ನಂತರದ 30 ಜೂನ್‌ರಂದು ಮಹಾಲೇಖಾಪಾಲರ (ಲೆ ಮತ್ತು ಹ) ಲೆಕ್ಕಪುಸ್ತಕಗಳ ಪ್ರಕಾರ ರಾಜ್ಯ ನಗದು ಶಿಲ್ಕು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ವರದಿ ಮಾಡಿದ ನಗದು ಶಿಲ್ಕುಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು.

ಮಾರ್ಚ್ 2024ರಲ್ಲಿದ್ದಂತೆ, ಲೆಕ್ಕಗಳಲ್ಲಿ ಬಿಂಬಿತವಾದ ಅಂಕಿಗಳು {₹4,699.34 ಕೋಟಿ (ಖರ್ಚು)} ಮತ್ತು ರಿಸರ್ವ್ ಬ್ಯಾಂಕ್ ವರದಿ ಮಾಡಿದ ಅಂಕಿಗಳ {₹62.53 ಕೋಟಿ (ಜಮೆ)} ನಡುವೆ {₹4,636.81 ಕೋಟಿ (ಖರ್ಚು)} ವ್ಯತ್ಯಾಸವಿತ್ತು. ಏಜೆನ್ಸಿ ಬ್ಯಾಂಕುಗಳಿಂದ ಅಂಕಿಗಳ ವರದಿ ಮಾಡದಿರುವುದು ಮತ್ತು ಗೌಪ್ಯ ಸೇವೆಗಳ ಲೆಕ್ಕ ಹೊಂದಾಣಿಕೆ ಮಾಡದಿರುವುದು ವ್ಯತ್ಯಾಸಕ್ಕೆ ಮುಖ್ಯ ಕಾರಣವಾಗಿದ್ದು ಇದು ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಯಲ್ಲಿ ಸಮನ್ವಯದಲ್ಲಿದೆ.

## 4.12 2023–24ರ ಅವಧಿಯಲ್ಲಿ ಪ್ರಮುಖ ಹಣಕಾಸಿನ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪ್ರಭಾವ

ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯು ಕೆಲವು ಲೆಕ್ಕಪರಿಶೋಧಕ ಹೊಂದಾಣಿಕೆಗಳಿಂದ (ಅವುಗಳಲ್ಲಿ ಕೆಲವನ್ನು ಹಣಕಾಸು ಖಾತೆಗಳ ಟಿಪ್ಪಣಿಗಳಲ್ಲಿ ಹೊರತರಲಾಗಿದೆ) ಮತ್ತು **ಕೋಷ್ಟಕ–4.12**ರಲ್ಲಿ ವಿವರಿಸಲಾದ ಲೆಕ್ಕಪರಿಶೋಧನಾ ನಂತರದ ವಿಶ್ಲೇಷಣೆಯ ಮೂಲಕ ಪರಿಣಾಮ ಬೀರಿದೆ ಎಂದು 2023–24ರ ಅವಧಿಯಲ್ಲಿನ ಕೆಲವು ಪ್ರಮುಖ ವಹಿವಾಟುಗಳ ಪರಿಶೀಲನೆಯಿಂದ ತಿಳಿದುಬಂದಿತು.

**ಕೋಷ್ಟಕ–4.12: 2023–24ರ ಅವಧಿಯಲ್ಲಿ ಕೆಲವು ವಹಿವಾಟುಗಳ ಪ್ರಭಾವ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಹಿವಾಟಿನ ಸ್ವರೂಪ | ರಾಜಸ್ವ ಕೊರತೆ | | ವಿತ್ತೀಯ ಕೊರತೆ | |
|---|---|---|---|---|---|
| | | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು |
| 1 | ರಾಜಸ್ವ ವೆಚ್ಚದ ಬದಲಿಗೆ ಬಂಡವಾಳ ವೆಚ್ಚವನ್ನು ಲೆಕ್ಕ ಹಾಕಿರುವುದು | – | 374.64 | – | – |
| 1ಎ | ರಾಜಸ್ವ ವೆಚ್ಚದ ಬದಲಿಗೆ ಬಂಡವಾಳ ವೆಚ್ಚವನ್ನು ಲೆಕ್ಕ ಹಾಕಿರುವುದು (ಸಹಾಯಾನುದಾನ) | – | 129.65 | – | – |
| 2 | ಬಂಡವಾಳ ವೆಚ್ಚದ ಬದಲಿಗೆ ರಾಜಸ್ವ ವೆಚ್ಚವನ್ನು ಲೆಕ್ಕ ಹಾಕಿರುವುದು | 0.01 | – | – | – |
| 3 | ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ/ರಾಜ್ಯ ವಿಪತ್ತು ಪರಿಹಾರ ನಿಧಿಗೆ ಸಂಬಂಧಿಸಿದಂತೆ ಬಡ್ಡಿಯನ್ನು ಪಾವತಿಸದಿರುವುದು | – | 27.73 | – | 27.73 |

| ಕ್ರಮ ಸಂಖ್ಯೆ | ವಹಿವಾಟಿನ ಸ್ವರೂಪ | ರಾಜಸ್ವ ಕೊರತೆ | | ವಿತ್ತೀಯ ಕೊರತೆ | |
|---|---|---|---|---|---|
| | | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು |
| 4 | ಸಿಆರ್‌ಐಎಫ್‌ನ ಬಂಡವಾಳ ವೆಚ್ಚವನ್ನು ಸಿಆರ್‌ಐಎಫ್ ನಿಧಿಗೆ ವರ್ಗಾವಣೆ ಮಾಡದಿರುವುದು | | | 492.12 | |
| **ಒಟ್ಟು** | | **0.01** | **532.02** | **492.12** | **27.73** |

*ಆಕರ: 2023-24ರ ಲೆಕ್ಕಪತ್ರಗಳ ಟಿಪ್ಪಣಿ ಮತ್ತು ಲೆಕ್ಕಪರಿಶೋಧನಾ ನಂತರದ ವಿಶ್ಲೇಷಣೆ*

## 4.13 ಲೆಕ್ಕಪತ್ರ ಮಾನದಂಡಗಳ ಅನುಸರಣೆ

ಭಾರತ ಸರ್ಕಾರದ ಬೆಂಬಲದೊಂದಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಛೇರಿಯಲ್ಲಿ ಸ್ಥಾಪಿಸಲಾಗಿರುವ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಸಲಹಾ ಮಂಡಳಿಗೆ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಲೆಕ್ಕಪತ್ರ ಮತ್ತು ಹಣಕಾಸು ವರದಿ ಮಾನದಂಡಗಳನ್ನು ರೂಪಿಸುವ ಮತ್ತು ಪ್ರಸ್ತಾಪಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಲಹೆಯ ಮೇರೆಗೆ, ಭಾರತದ ರಾಷ್ಟ್ರಪತಿಗಳು ಇಲ್ಲಿಯವರೆಗೆ ನಾಲ್ಕು ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳನ್ನು (ಐಜಿಎಎಸ್) ಸೂಚಿಸಿದ್ದಾರೆ.

ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳ ವಿವರಗಳು ಮತ್ತು 2023-24ಕ್ಕೆ ಕರ್ನಾಟಕ ಸರ್ಕಾರದ ಅವುಗಳ ಅನುಸರಣೆಯನ್ನು **ಕೋಷ್ಟಕ-4.13**ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ-4.13: ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸರಣೆ**

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡಗಳು | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡದ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 1 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-1 ಸರ್ಕಾರ ನೀಡಿದ ಖಾತರಿಗಳು – ಅಗತ್ಯವಿರುವ ಕಾಣಿಸುವಿಕೆಗಳು | ವರ್ಷದಲ್ಲಿ ನೀಡಲಾದ ಗರಿಷ್ಠ ಪ್ರಮಾಣದ ಗ್ಯಾರಂಟಿಗಳೊಂದಿಗೆ ತಮ್ಮ ಹಣಕಾಸಿನ ಹೇಳಿಕೆಗಳಲ್ಲಿ ಸರ್ಕಾರವು ನೀಡಿದ ಗ್ಯಾರಂಟಿಗಳಿಗೆ ಸಂಬಂಧಿಸಿದಂತೆ ಮಾನದಂಡಗಳನ್ನು ಬಹಿರಂಗಪಡಿಸಲು ಸೇರ್ಪಡೆಗಳು, ಅಳಿಸುವಿಕೆಗಳು (ವರ್ಷದ ಕೋರಿಕೆಗಳನ್ನು ಹೊರತುಪಡಿಸಿ), ವರ್ಷದ ಆರಂಭ ಮತ್ತು ಅಂತ್ಯದಲ್ಲಿನ ಶಿಲ್ಕು ಮತ್ತು ಖಾತರಿ ಶುಲ್ಕ ಮಾನದಂಡವನ್ನು ಹೊಂದಿಸಲಾಗಿದೆ. | ಅನುಪಾಲನೆಯಾಗಿದೆ | ಖಾತರಿಗಳ ಕಾಣಿಸುವಿಕೆಯನ್ನು ಮಾನದಂಡದೊಂದಿಗೆ ಅನುಸರಿಸಲಾಗಿದೆ |
| 2 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-2 ಸಹಾಯಾನುದಾನಗಳ ಲೆಕ್ಕ ಹಾಕುವಿಕೆ ಮತ್ತು ವರ್ಗೀಕರಣ | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನಿರ್ದಿಷ್ಟವಾಗಿ ಅನುಮೋದಿಸಿದ ಪ್ರಕರಣಗಳ ಹೊರತಾಗಿ ಅನುದಾನವು ಆಸ್ತಿಗಳ ನಿರ್ಮಾಣವನ್ನು ಒಳಗೊಂಡಿದ್ದರೂ ಅನುದಾನ ನೀಡುವವರ ಲೆಕ್ಕದಲ್ಲಿ ಅದನ್ನು ರಾಜಸ್ವ ವೆಚ್ಚವೆಂದು, ಅನುದಾನಿತರ ಲೆಕ್ಕದಲ್ಲಿ ರಾಜಸ್ವ ಸ್ವೀಕೃತಿಗಳೆಂದು ಪರಿಗಣಿಸಬೇಕು ಎಂದು ತಿಳಿಸುತ್ತದೆ. | ಭಾಗಶ: ಅನುಪಾಲನೆಯಾಗಿದೆ | ಬಂಡವಾಳದ ಆಸ್ತಿಗಳ ಸೃಷ್ಟಿಗೆ ಸಹಾಯಾನುದಾನವನ್ನು ಅನುದಾನಿತ ಸಂಸ್ಥೆಗಳಾದ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಜಲಸಾರಿಗೆ ಮಂಡಳಿಗಳಿಗೆ ಬಂಡವಾಳ ವೆಚ್ಚವಾಗಿ ನೀಡಲಾಗಿದೆ. |

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡಗಳು | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡದ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 3 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-3 ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು | ಈ ಮಾನದಂಡವು ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಗುರುತಿಸುವಿಕೆ, ಪ್ರಮಾಣ, ಮೌಲ್ಯ ನಿರ್ಣಯ ಮತ್ತು ವರದಿಗಳು ಮತ್ತು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪೂರ್ಣತೆ, ನಿಖರತೆ ಮತ್ತು ಏಕರೀತಿಯ ಲೆಕ್ಕರೂಢಿಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ. | ಭಾಗಶ: ಅನುಪಾಲನೆಯಾಗಿದೆ | ರಾಜ್ಯ ಸರ್ಕಾರವು ಮಾನದಂಡದಲ್ಲಿ ನಿಗದಿಪಡಿಸಿದ ನಮೂನೆಯನ್ನು ಅಳವಡಿಸಿಕೊಂಡಿದೆ. ಆದರೆ, ರಾಜ್ಯ ಸರ್ಕಾರದ ಇಲಾಖೆಗಳು ನಿರ್ವಹಿಸುವ ಸಾಲಗಳ ಖಾತೆಗಳಿಗೆ ಸಂಬಂಧಿಸಿದಂತೆ ಅಸಲು ಮತ್ತು ಬಡ್ಡಿಗಳ ಎಲ್ಲಾ ವಿವರಗಳನ್ನೂ ಮಹಾಲೇಖಪಾಲರಿಗೆ (ಲೆ ಮತ್ತು ಹ) ಒದಗಿಸುತ್ತಿಲ್ಲವಾದ್ದರಿಂದ ಮಾಹಿತಿ ಅಪೂರ್ಣವಾಗಿದೆ. |
| 4 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-4 ಹಿಂದಿನ ಅವಧಿಯ ಹೊಂದಾಣಿಕೆ | ಈ ಮಾನದಂಡವು ನಗದು ಆಧಾರದ ಮೇಲೆ ಒಂದು ಅಥವಾ ಹೆಚ್ಚಿನ ಅವಧಿಗಳಿಗೆ ದೋಶಗಳನ್ನು ಸರಿಪಡಿಸಲು ಹಿಂದಿನ ಅವಧಿಯ ಹೊಂದಾಣಿಕೆಗಳನ್ನು ಗುರುತಿಸುತ್ತದೆ. | ಅನುಪಾಲನೆಯಾಗಿದೆ | ಹೊಂದಾಣಿಕೆಯ ಕಾಣಿಸುವಿಕೆಯನ್ನು ಮಾನದಂಡದೊಂದಿಗೆ ಅನುಸರಿಸಲಾಗಿದೆ |

**(ಡಿ) ಲೆಕ್ಕಗಳ ವಿಷಯಗಳ ಕಾಣಿಸುವಿಕೆಗೆ ಸಂಬಂಧಿಸಿದ ಅವಲೋಕನ**

## 4.14 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಮಂಡಿಸುವುದು

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ, ಇತ್ಯಾದಿ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರವು ಹಲವಾರು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ರಾಜ್ಯದ 14 ಸ್ವಾಯತ್ತ ಸಂಸ್ಥೆಗಳ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರೀಶೋಧಕರ (ಕರ್ತವ್ಯ, ಅಧಿಕಾರ, ಸೇವೆಗಳು) ಕಾಯಿದೆ, 1971 ಪರಿಚ್ಛೇದ 19 ಮತ್ತು 20ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ.

ಲೆಕ್ಕಪರಿಶೋಧನೆಯ ವಹಿಸುವಿಕೆ, ಲೆಕ್ಕಗಳ ಸಲ್ಲಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ನೀಡುವುದು ಮತ್ತು ರಾಜ್ಯ ಶಾಸಕಾಂಗದ ಮುಂದೆ ಅವುಗಳ ಮಂಡಿಕೆಗಳ ಸ್ಥಿತಿಯನ್ನು **ಅನುಬಂಧ-4.8**ರಲ್ಲಿ ನೀಡಲಾಗಿದೆ. ಅನುಬಂಧದಿಂದ ಗಮನಿಸಿದಂತೆ ಏಳು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಪರಿಶೋಧನಾ ವರದಿ, ಎರಡು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪರಿಶೋಧನಾ ವರದಿಗಳು, ಒಂದು ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ ಹದಿಮೂರು ಪ್ರತ್ಯೇಕ ಪರಿಶೋಧನಾ ವರದಿಗಳು ಶಾಸಕಾಂಗದಲ್ಲಿ ಮಂಡಿಸಲು ಬಾಕಿ ಉಳಿದಿದ್ದವು.

## 4.15 ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು

ವಾಣಿಜ್ಯ ಮತ್ತು ಅರೆ-ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಿರ್ವಹಿಸುವ ಕೆಲವು ಸರ್ಕಾರಿ ಇಲಾಖಾ ಸಂಸ್ಥೆಗಳು ವಾರ್ಷಿಕವಾಗಿ ನಿಗದಿತ ಸ್ವರೂಪದಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಫಲಿತಾಂಶವನ್ನು

ತೋರಿಸುವ ಪ್ರಪತ್ರ ಲೆಕ್ಕಗಳನ್ನು ಸಿದ್ಧಪಡಿಸುವ ಅಗತ್ಯವಿದ್ದು, ಇದರಿಂದ ಸರ್ಕಾರವು ಈ ಸಂಸ್ಥೆಗಳ ಕಾರ್ಯಾಫಲವನ್ನು ನಿರ್ಧರಿಸಬಹುದು. ಇಲಾಖೆಗಳು ನಿರ್ವಹಿಸಿದ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ಯಮಗಳ ಅಂತಿಮಗೊಳಿಸಿದ ಲೆಕ್ಕಗಳು ಅವುಗಳ ಒಟ್ಟಾರೆ ಆರ್ಥಿಕ ಸ್ವಾಸ್ಥ್ಯ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತವೆ.

ಸರ್ಕಾರದಲ್ಲಿನ ಇಲಾಖೆಗಳ ಮುಖ್ಯಸ್ಥರು ಈ ಉದ್ಯಮಗಳು ನಿಗದಿತ ಸಮಯದ ಚೌಕಟ್ಟಿನೊಳಗೆ ಲೆಕ್ಕಗಳನ್ನು ಲೆಕ್ಕಪರಿಶೋಧನೆಗಾಗಿ ಮಹಾಲೇಖಾಪಾಲರಿಗೆ ಸಲ್ಲಿಸುತ್ತವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿದ/ವರ್ಗಾಯಿಸಲ್ಪಟ್ಟ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿಸಲಾದ ಒಂಬತ್ತು ಉದ್ಯಮಗಳಲ್ಲಿ, ಎರಡು ಉದ್ಯಮಗಳಿಗೆ ಸಂಬಂಧಿಸಿದಂತೆ ಪ್ರಪತ್ರಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ಯಮಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿ ಇರುವ ಸ್ಥಿತಿಯನ್ನು **ಅನುಬಂಧ–4.9**ರಲ್ಲಿ ನೀಡಲಾಗಿದೆ.

2008–09 (₹0.07 ಕೋಟಿ)ರವರೆಗೆ ಲೆಕ್ಕಗಳನ್ನು ಅಂತಿಮಗೊಳಿಸಿರುವ ಒಂದು ಉದ್ದಿಮೆ, 2015–16 (₹7.56 ಕೋಟಿ)ರವರೆಗಿನ ನಾಲ್ಕು ಉದ್ದಿಮೆಗಳು, 2016–17(₹1.24 ಕೋಟಿ)ರ ವರೆಗಿನ ಒಂದು ಉದ್ದಿಮೆ, ಒಟ್ಟು ಆರು ಉದ್ದಿಮೆಗಳಲ್ಲಿ ₹8.87 ಕೋಟಿಗಳ ಹೂಡಿಕೆ ಮಾಡಲಾಗಿರುವುದನ್ನು ಅನುಬಂಧದಿಂದ ಗಮನಿಸಬಹುದು.

## 4.16 ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ ವಿವರಗಳನ್ನು ಸಲ್ಲಿಸದಿರುವುದು

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ, ಸೇವೆಗಳು) ಕಾಯಿದೆ, 1971ರ ಪರಿಚ್ಛೇದ 14ರ ಅಡಿಯಲ್ಲಿ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ರಾಜ್ಯದ ಸಂಚಿತ ನಿಧಿಯ ಅನುದಾನಗಳಿಂದ ಗಣನೀಯವಾಗಿ ಹಣಕಾಸು ಒದಗಿಸಿದಾಗ, ಆ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ, ಆ ಸಮಯಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಆ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚದ ಪರಿಶೋಧನೆ ಮಾಡಿ ಪರಿಶೋಧಿತ ಸ್ವೀಕೃತಿಗಳು ಮತ್ತು ವೆಚ್ಚಗಳ ವರದಿಯನ್ನು ಸಲ್ಲಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ, ಸೇವೆಗಳು) ಕಾಯಿದೆ, 1971ರ ಪರಿಚ್ಛೇದ 15ರ ಅಡಿಯಲ್ಲಿ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ಅನುದಾನವನ್ನು ನೀಡಿದರೆ, ಅದಕ್ಕೆ ಸಂಬಂಧಿಸಿದ ಷರತ್ತುಗಳ ಪಾಲನೆಗೆ ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಮಂಜೂರಾತಿ ಪ್ರಾಧಿಕಾರವು ತೃಪ್ತಿಕರವಾಗಿ ನಿರ್ವಹಿಸಿದೆಯೇ ಎಂಬುದನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪರಿಶೀಲಿಸುತ್ತಾರೆ.

ಮೇಲಿನ ವಿಧಿಗಳ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡುವ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳು/ ಪ್ರಾಧಿಕಾರಗಳನ್ನು ಗುರುತಿಸುವ ಅಗತ್ಯವಿದೆ ಮತ್ತು ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಪ್ರತೀವರ್ಷ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸು ನೆರವು ನೀಡಿದ ಸಂಸ್ಥೆಗಳ ಮತ್ತು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಮತ್ತು ಸಂಸ್ಥೆಗಳ ಒಟ್ಟು ವೆಚ್ಚದ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ.

**ಅನುಬಂಧ–4.10**ರಲ್ಲಿ ವಿವರಿಸಿದಂತೆ 13 ಇಲಾಖೆಗಳು ಎರಡು ವರ್ಷದಿಂದ ಎಂಟು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ₹25ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಸ್ವೀಕರಿಸಿದ 1,065 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿರಲಿಲ್ಲ. ಅನುಬಂಧದಿಂದ ಗಮನಿಸುವಂತೆ, ಪ್ರಮುಖವಾಗಿ ತಪ್ಪಿತಸ್ಥ ಇಲಾಖೆಯು ಶಿಕ್ಷಣ ಇಲಾಖೆಯಾಗಿತ್ತು.

## 4.17 ಹಣ ದುರ್ಬಳಕೆ, ನಷ್ಟಗಳು, ಕಳ್ಳತನ ಇತ್ಯಾದಿ

2023–24ರ ಅಂತ್ಯಕ್ಕೆ ₹43.19 ಕೋಟಿಗಳ ಮೊತ್ತದ ಸರ್ಕಾರಿ ಹಣದ ದುರುಪಯೋಗ, ನಷ್ಟ ಇತ್ಯಾದಿಗಳ 47 ಪ್ರಕರಣಗಳಿದ್ದು, ಅಂತಿಮ ಕ್ರಮ ಬಾಕಿ ಇದ್ದಿತು. ಇಲಾಖಾವಾರು ಬಾಕಿ ಇರುವ ಪ್ರಕರಣಗಳ ವಿಭಜನೆಯನ್ನು **ಕೋಷ್ಟಕ–4.14**ರಲ್ಲಿ ನೀಡಲಾಗಿದೆ ಮತ್ತು ಕಾಲವಾರು ವಿಭಜನೆಯನ್ನು **ಅನುಬಂಧ–4.11**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–4.14 ದುರುಪಯೋಗ, ನಷ್ಟ ಮತ್ತು ಕಳ್ಳತನ ಇತ್ಯಾದಿಗಳ ಬಾಕಿ ಉಳಿದಿರುವ ಪ್ರಕರಣಗಳು**

(₹ ಲಕ್ಷಗಳಲ್ಲಿ)

| ಇಲಾಖೆಯ ಹೆಸರು | ಸರ್ಕಾರದ ಸ್ವತ್ತುಗಳ ದುರ್ಬಳಕೆ/ನಷ್ಟಗಳು/ಕಳ್ಳತನ | | ಬಾಕಿ ಇರುವ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ ಪ್ರಕರಣಗಳ ಅಂತಿಮ ವಿಲೇವಾರಿಯ ವಿಳಂಬಕ್ಕೆ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನಿರೀಕ್ಷೆಯಲ್ಲಿರುವುದು | | ಇಲಾಖಾ ಕ್ರಮ ಪ್ರಾರಂಭವಾಗಿದ್ದು, ಅಂತಿಮಗೊಳ್ಳದಿರುವುದು | | ದಂಡ ಪ್ರಕ್ರಿಯೆ ಅಂತಿಮಗೊಂಡಿದ್ದು ಹಣ ವಸೂಲಿ ಬಾಕಿ ಇರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಗೃಹ | 5 | 125.28 | - | - | 5 | 125.28 | - | - |
| ಕಾನೂನು | 1 | 227.00 | 1 | 227.00 | - | - | - | - |
| ಲೋಕೋಪಯೋಗಿ ಕಾಮಗಾರಿಗಳು | 2 | 1,180.18 | - | - | 2 | 1,180.18 | - | - |
| ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 1 | 499.21 | - | - | 1 | 499.21 | - | - |
| ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ | 4 | 23.33 | 1 | 12.57 | - | - | 3 | 10.76 |
| ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ | 11 | 32.86 | 7 | 27.17 | 4 | 5.69 | - | - |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 4 | 142.98 | 4 | 142.98 | - | - | - | - |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 2 | 99.30 | 2 | 99.30 | - | - | - | - |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 3 | 227.34 | 3 | 227.34 | - | - | - | - |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 3 | 111.97 | 1 | 79.88 | 1 | 31.58 | 1 | 0.51 |
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | 3 | 468.72 | 3 | 468.72 | - | - | - | - |
| ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 1 | 3.38 | 1 | 3.38 | - | - | - | - |
| ನಗರಾಭಿವೃದ್ಧಿ | 1 | 2.02 | - | - | 1 | 2.02 | - | - |
| ಮೀನುಗಾರಿಕೆ | 1 | 6.25 | - | | 1 | 6.25 | - | - |
| ಆಹಾರ ಮತ್ತು ನಾಗರೀಕ | 1 | 525.00 | 1 | 525.00 | - | - | - | - |

| ಇಲಾಖೆಯ ಹೆಸರು | ಸರ್ಕಾರದ ಸ್ವತ್ತುಗಳ ದುರ್ಬಳಕೆ/ನಷ್ಟಗಳು/ಕಳ್ಳತನ | | ಬಾಕಿ ಇರುವ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ ಪ್ರಕರಣಗಳ ಅಂತಿಮ ವಿಲೇವಾರಿಯ ವಿಳಂಬಕ್ಕೆ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನಿರೀಕ್ಷೆಯಲ್ಲಿರುವುದು | | ಇಲಾಖಾ ಕ್ರಮ ಪ್ರಾರಂಭವಾಗಿದ್ದು, ಅಂತಿಮಗೊಳ್ಳದಿರುವುದು | | ದಂಡ ಪ್ರಕ್ರಿಯೆ ಅಂತಿಮಗೊಂಡಿದ್ದು ಹಣ ವಸೂಲಿ ಬಾಕಿ ಇರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಸರಬರಾಜು | | | | | | | | |
| ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು | 4 | 643.70 | 4 | 643.70 | - | - | - | - |
| **ಒಟ್ಟು** | **47** | **4,318.52** | **28** | **2,457.04** | **15** | **1,850.21** | **4** | **11.27** |

*ಆಕರ: ಪ್ರಧಾನ ಮಹಾಲೇಖಾಪಾಲರುಗಳು (ಲೆಕ್ಕಪರಿಶೋದನೆ–I) ಮತ್ತು (ಲೆಕ್ಕ ಪರಿಶೋಧನೆ–II)*

## 4.18 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ

2019–20ನೇ ಸಾಲಿನ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಜುಲೈ 2022ರಲ್ಲಿ ಚರ್ಚಿಸಲ್ಪಟ್ಟಿತು. 2012–13 ರಿಂದ 2018–19ನೇ ಸಾಲಿನ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳ ತತ್ಸಮಾನ ಮತ್ತು ಪ್ರಮುಖ ಅಂಶಗಳನ್ನೂ ಸಹ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಿಂದ ಕೈಗೆತ್ತಿಕೊಳ್ಳಲಾಯಿತು. ಅದು 2012–13 ರಿಂದ 2017–18ರ ವರೆಗಿನ ಅವಧಿಯ ₹2,409.53 ಕೋಟಿಗಳ ಅಧಿಕ ವೆಚ್ಚವನ್ನು ಸಕ್ರಿಮೀಕರಣಗೊಳಿಸುವ ಬಗ್ಗೆ ಚರ್ಚಿಸಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಲಾಗಿದೆ (ಫೆಬ್ರವರಿ 2023).

## 4.19 ತೀರ್ಮಾನ

ಇಲಾಖೆಗಳು / ಸರ್ಕಾರಿ ಕಂಪನಿಗಳು / ನಿಗಮಗಳಲ್ಲಿ ಸರ್ಕಾರವು ಅನುದಾನದ ಮೇಲೆ ಗಳಿಸಿದ ₹14,54,991.25 ಲಕ್ಷ (2023–24 ರವರೆಗೆ) ಬಡ್ಡಿಯನ್ನು ಆರ್ಥಿಕ ಇಲಾಖೆಯು ನೀಡಿದ ಸೂಚನೆಗಳ ಹೊರತಾಗಿಯೂ ಸರ್ಕಾರಿ ಖಾತೆಗೆ ಜಮೆ ಮಾಡಲಾಗಿಲ್ಲ. ಆ ಮಟ್ಟಿಗೆ ತೆರಿಗೆಯೇತರ ಆದಾಯವು ಕಡಿಮೆ ತೋರಿಸುವಲ್ಲಿ ಪರಿಣಮಿಸಿತು.

2022–23ರಲ್ಲಿ ಇಳಿಕೆಯಾಗಿದ್ದ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವ ₹41.67 ಕೋಟಿ ಮೊತ್ತದ 48 ಪ್ರಕರಣಗಳು 2023–24ರಲ್ಲಿ ₹118.64 ಕೋಟಿ ಮೊತ್ತದ 92 ಪ್ರಕರಣಗಳಿಗೆ ಏರಿಕೆಯಾಗಿತ್ತು. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿಯು ಉದ್ದೇಶಿತ ಉದ್ದೇಶಕ್ಕಾಗಿ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಭರವಸೆ ಇಲ್ಲದಿರುವುದು ಮಾತ್ರವಲ್ಲದೆ ಅನುದಾನದ ಬಳಕೆಯ ಮೇಲ್ವಿಚಾರಣೆಯ ಕೊರತೆಯನ್ನು ಉಂಟುಮಾಡುತ್ತದೆ.

ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಬಾಕಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 37.36ರಷ್ಟು ಇಳಿಕೆಯಾಗಿದ್ದವು.

2020–21ರಿಂದ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿತ್ತು ಮತ್ತು 2022–23 ಮತ್ತು 2023–24ರ ಅವಧಿಯಲ್ಲಿ ಅಗಾಧವಾಗಿ ಹೆಚ್ಚಾಗಿದ್ದಿತು. ಅಂತಹ ಬೃಹತ್ ಮೊತ್ತದ ಹಣವನ್ನು ಉಳಿಸಿಕೊಳ್ಳುವುದು ಶಾಸಕಾಂಗ ಹಣಕಾಸು ನಿಯಂತ್ರಣದ ತತ್ವಕ್ಕೆ ವಿರುದ್ಧವಾಗಿತ್ತು.

ಸರ್ಕಾರದಿಂದ ಗಣನೀಯವಾಗಿ ಅನುದಾನ ಪಡೆದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡುವಂತೆ ಆರ್ಥಿಕ ಇಲಾಖೆಯು ಆಡಳಿತಾತ್ಮಕ ಇಲಾಖೆಗಳಿಗೆ ಸೂಚನೆಗಳನ್ನು ನೀಡಿದ್ದರೂ ಸಹ ಅಗತ್ಯ ಮಾಹಿತಿಗಳನ್ನು ಒದಗಿಸದ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಇದು ರಾಜ್ಯ

ಸರ್ಕಾರದಲ್ಲಿ ಅಸಮರ್ಪಕ ಆಂತರಿಕ ನಿಯಂತ್ರಣ ಮತ್ತು ರಾಜ್ಯ ಸರ್ಕಾರದ ಮೇಲ್ವಿಚಾರಣಾ ಕಾರ್ಯ ವಿಧಾನದಲ್ಲಿನ ಕೊರತೆಯನ್ನು ಸೂಚಿಸುತ್ತದೆ.

## 4.20 ಶಿಫಾರಸುಗಳು

- ***ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸರ್ಕಾರವು ಪಬ್ಲಿಕ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನಲ್ಲಿರುವ ಎಕ್ಸಪೆಂಡಿಚರ್ ಅಡ್ವಾನ್ಸ್ ಟ್ರಾನ್ಸ್ಫರ್‌ನಂತೆಯೇ ಮಾಡ್ಯೂಲ್‌ಅನ್ನು ಅಳವಡಿಸಲು ಪರಿಗಣಿಸಬಹುದಾಗಿದೆ.***
- ***ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಉಳಿತಾಯಗಳನ್ನು ಅದರ ಉಪಯುಕ್ತತೆಯ ಅವಧಿಯನ್ನು ಮೀರಿದ ಉಳಿತಾಯಗಳನ್ನು ಸ್ವಚ್ಛಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ಉಳಿತಾಯಗಳ ಹೊಂದಾಣಿಕೆಯ ನಂತರ ನಿರ್ವಾಹಕರು ಮತ್ತು ಖಜಾನೆಯೊಂದಿಗೆ ಸಮಾಲೋಚಿಸಿ ಅಂತಹ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಚ್ಚಲು ಕ್ರಮಗಳನ್ನು ತೆಗೆದುಕೊಳ್ಳಬೇಕು.***

ಬೆಂಗಳೂರು

(ವಿಮಲೇಂದ್ರ ಆನಂದ್ ಪಟವರ್ಧನ್)
ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ-I)
ಕರ್ನಾಟಕ

ಮೇಲುರುಜು ಮಾಡಲಾಗಿದೆ

ನವದೆಹಲಿ

(ಕೆ. ಸಂಜಯ್ ಮೂರ್ತಿ)
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

# ಅನುಬಂಧಗಳು

# ಅನುಬಂಧ 1.1

## ರಾಜ್ಯ ಚಿತ್ರಣ

(ಉಲ್ಲೇಖ: **ಕಂಡಿಕೆ 1.2; ಪುಟ 1**)

| ಎ | ಸಾಮಾನ್ಯ ದತ್ತಾಂಶ | | |
|---|---|---|---|
| **ಕ್ರಮ ಸಂಖ್ಯೆ** | **ವಿವರಗಳು** | | **ಅಂಕಿ ಅಂಶಗಳು** |
| **1** | ವಿಸ್ತೀರ್ಣ | | 1,91,791 ಚ.ಕಿ.ಮೀ |
| **2** | ಜನಸಂಖ್ಯೆ | | |
| | ಎ | 2001ರ ಜನಗಣತಿ ಪ್ರಕಾರ | 5.29 ಕೋಟಿ |
| | ಬಿ | 2011ರ ಜನಗಣತಿ ಪ್ರಕಾರ | 6.11 ಕೋಟಿ |
| **3** | [1]ಜನಸಂಖ್ಯೆಯ ಸಾಂದ್ರತೆ (2011ರ ಜನಗಣತಿ) (ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 382 ಜನ**) | | 319 ಜನ ಪ್ರತಿ ಚ.ಕಿ.ಮೀ |
| **4** | [2]ಬಡತನ ರೇಖೆಯ ಕೆಳಗಿನ ಜನಸಂಖ್ಯೆ (2011ರ ಜನಗಣತಿ) (ರಾಷ್ಟ್ರೀಯ ಸರಾಸರಿ = **ಶೇಕಡಾ 21.92**) | | **ಶೇಕಡಾ** 20.91 |
| **5** | [3]ಸಾಕ್ಷರತೆ (2011ರ ಜನಗಣತಿ) (ರಾಷ್ಟ್ರೀಯ ಸರಾಸರಿ : **ಶೇಕಡಾ 73.00**) | | **ಶೇಕಡಾ** 75.36 |
| **6** | [4]ಶಿಶು ಮರಣದರ (ಪ್ರತಿ 1000 ಜೀವಂತ ಜನನಗಳಿಗೆ) (ರಾಷ್ಟ್ರೀಯ ಸರಾಸರಿ = **33 ಪ್ರತಿ 1,000 ಜೀವಂತ ಜನನಗಳಿಗೆ**) | | ಪ್ರತಿ 1000 ಜೀವಂತ ಜನನಗಳಿಗೆ 19 |
| **7** | [5]ಜನನ ಸಮಯದ ಆಯು: ಪ್ರಮಾಣ (ರಾಷ್ಟ್ರೀಯ ಸರಾಸರಿ : **67.9 ವರ್ಷಗಳು**) | | 68.8 ವರ್ಷಗಳು |
| **8** | [6]ಮಾನವ ಅಭಿವೃದ್ಧಿ ಸೂಚ್ಯಂಕವು# (2022) (**ರಾಷ್ಟ್ರೀಯ = 0.629**) | | 0.644 |
| **9** | [7]ರಾಜ್ಯದ ಒಟ್ಟು ಆಂತರಿಕ ಉತ್ಪನ್ನ(ರಾಒಆಂಉ) 2023–24ರ ಪ್ರಸಕ್ತ ಬೆಲೆಗಳಲ್ಲಿ (ಕೋಟಿಗಳಲ್ಲಿ) | | 25,67,340 |
| **10** | ತಲಾ ರಾಒಆಂಉ 2023–24 (ರೂಪಾಯಿಗಳಲ್ಲಿ) | ಕರ್ನಾಟಕ @ | 3,76,996 |
| | | ರಾಷ್ಟ್ರೀಯ ಸರಾಸರಿ | 2,11,725 |
| **11** | ತಲಾ ರಾಒಆಂಉ / ರಾಆಂಉ/ ಸಿಎಜಿಆರ್ (2014–15 ರಿಂದ 2023–24) | ಕರ್ನಾಟಕ | 11.29 |
| | | ರಾಷ್ಟ್ರೀಯ | 8.89 |
| **12** | ರಾಒಆಂಉ / ರಾಆಂಉ/ ಸಿಎಜಿಆರ್ (2014–15 ರಿಂದ 2023–24) | ಕರ್ನಾಟಕ | 11.83 |
| | | ರಾಷ್ಟ್ರೀಯ | 10.06 |
| **13** | ಜನಸಂಖ್ಯಾ ವೃದ್ಧಿ (2014–24) | ಕರ್ನಾಟಕ | 8.16 |
| | | ರಾಷ್ಟ್ರೀಯ | 11.26 |

| ಬಿ | ಆರ್ಥಿಕ ದತ್ತಾಂಶ | | | | | | |
|---|---|---|---|---|---|---|---|
| **ವಿವರಗಳು** | | **ಅಂಕಗಳು** (ಶೇಕಡಾ) | | | | | |
| **ಸಂಯೋಜಿತ ವಾರ್ಷಿಕ ಬೆಳವಣಿಗೆ ದರ (ಸಿಎಜಿಆರ್)ನ** | | **ಸಾಮಾನ್ಯ ವರ್ಗ ರಾಜ್ಯಗಳು** * | | | **ಕರ್ನಾಟಕ** ^ | | |
| | | **2018–19 ರಿಂದ 2021–22** | **2021–22 ರಿಂದ 2022–23** | **2022–23 ರಿಂದ 2023–24** | **2018–19 ರಿಂದ 2021–22** | **2021–22 ರಿಂದ 2022–23** | **2022–23 ರಿಂದ 2023–24** |
| **1** | ರಾಜಸ್ವ ಸ್ವೀಕೃತಿಗಳು | 7.12 | 13.41 | 8.19 | 5.87 | 17.02 | 1.86 |
| **2** | ಸ್ವಂತ ತೆರಿಗೆ ಆದಾಯ | 7.17 | 19.80 | 10.58 | 7.63 | 19.02 | 13.78 |
| **3** | ತೆರಿಗೆಯೇತರ ಆದಾಯ | 5.44 | 12.94 | 14.64 | 20.26 | 18.15 | (–)5.73 |
| **4** | ಒಟ್ಟು ವೆಚ್ಚ | 7.57 | 12.53 | 10.56 | 8.73 | 5.61 | 8.34 |
| **5** | ಬಂಡವಾಳ ವೆಚ್ಚ | 4.80 | 18.92 | 19.85 | 11.37 | 19.79 | (–)9.12 |

| ಬಿ | ಆರ್ಥಿಕ ದತ್ತಾಂಶ | | | | | | |
|---|---|---|---|---|---|---|---|
| ವಿವರಗಳು | | ಅಂಕಗಳು (ಶೇಕಡಾ) | | | | | |
| ಸಂಯೋಜಿತ ವಾರ್ಷಿಕ ಬೆಳವಣಿಗೆ ದರ (ಸಿಎಜಿಆರ್)ನ | | ಸಾಮಾನ್ಯ ವರ್ಗ ರಾಜ್ಯಗಳು * | | | ಕರ್ನಾಟಕ ^ | | |
| | | 2018-19 ರಿಂದ 2021-22 | 2021-22 ರಿಂದ 2022-23 | 2022-23 ರಿಂದ 2023-24 | 2018-19 ರಿಂದ 2021-22 | 2021-22 ರಿಂದ 2022-23 | 2022-23 ರಿಂದ 2023-24 |
| **6** | ಶಿಕ್ಷಣದ ಮೇಲಿನ ರಾಜಸ್ವ ವೆಚ್ಚ | 7.34 | 13.21 | 5.11 | 7.78 | 6.63 | 5.27 |
| **7** | ಆರೋಗ್ಯದ ಮೇಲಿನ ರಾಜಸ್ವ ವೆಚ್ಚ | 14.96 | 0.88 | 10.34 | 15.13 | (–)11.44 | 8.21 |
| **8** | ಸಂಬಳ ಮತ್ತು ಮಜೂರಿ | 8.19 | 9.71 | 7.52 | 9.16 | 4.10 | 13.57 |
| **9** | ಪಿಂಚಣಿ~ | 9.66 | 11.38 | 6.27 | 11.00 | 16.23 | 3.49 |

*ಆಕರ: ಹಣಕಾಸು ದತ್ತಾಂಶಗಳಿಗೆ ಹಣಕಾಸು ಲೆಕ್ಕಗಳು ಆಧಾರಿತ.*

*#ಮಾನವ ಅಭಿವೃದ್ಧಿ ಸೂಚ್ಯಂಕವು ಜೀವಿತಾವಧಿ, ಶಿಕ್ಷಣ ಮತ್ತು ತಲಾ ಆದಾಯವನ್ನು ಒಳಗೊಂಡಿರುವ ಸಂಯೋಜಿತ ಸೂಚ್ಯಂಕವಾಗಿದೆ.*

**ಸಾಮಾನ್ಯ ವರ್ಗದ ರಾಜ್ಯಗಳ ಅಂಕಿಅಂಶಗಳನ್ನು ಆರ್ಥಿಕ ಸಲಹೆಗಾರರು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಛೇರಿ, ನವದೆಹಲಿ ಇವರಿಂದ ಮಾಹಿತಿ ಪಡೆಯಲಾಗಿದೆ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ, ಸಂಬಳ ಮತ್ತು ವೇತನದ ಮೇಲಿನ ಆದಾಯ ವೆಚ್ಚವು **ಪಿಆರ್‌ಐ**ಗಳು ಮತ್ತು **ಯುಎಲ್‌ಬಿ**ಗಳ ವೇತನಗಳನ್ನು ಒಳಗೊಂಡಿದೆ.*

*^ 2018-19 ರಿಂದ 2023-24ರ ಅಂಕಿಅಂಶಗಳನ್ನು ಆಯಾ ವರ್ಷಗಳ ಆರ್ಥಿಕ ಲೆಕ್ಕಗಳಿಂದ ಅಳವಡಿಸಲಾಗಿದೆ.*

*@ತಲಾ ರಾಜಆಉ (2019-20 ರಿಂದ 2022-23) ಆರ್ಥಿಕ ಸಮೀಕ್ಷೆ ಕರ್ನಾಟಕ ಸರ್ಕಾರ 2023-24 ಮತ್ತು ತಲಾ ರಾಜಆಉ 2023-24ಕ್ಕೆ ರಾಜ್ಯದ 6.81 ಕೋಟಿ ಯೋಜಿತ ಜನಸಂಖ್ಯೆಯ ಆಧಾರದ ಮೇಲೆ ಮಾಡಲಾಗಿದೆ. ಜನಸಂಖ್ಯೆಯ ರಾಷ್ಟ್ರೀಯ ಆಯೋಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮಾಹಿತಿ ಆಧಾರ.*

**ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಸೂಚಕಗಳು**

(i) ನಯಮೇಲ್ಮೈ ರಸ್ತೆಗಳು (2022-23) – 100 ಚ.ಕೀ.ಮೀ **42.99 ಕಿ.ಮೀ.**

(ii) ಒರಟುಮೇಲ್ಮೈ ರಸ್ತೆಗಳು (2022-23) – 100 ಚ.ಕೀ.ಮೀ **0.68 ಕಿ.ಮೀ. ಗೂ ಕಡಿಮೆ.**

(iii) ವಿದ್ಯುದೀಕರಣವಾದ ಮನೆಗಳು ಶೇಕಡಾ (2022-23) – **99.22**

(iv) ಒಟ್ಟಾರೆ ಕೃಷಿ ಪ್ರದೇಶ (2022-23) – **149.10 ಹೆಕ್ಟೇರುಗಳು**

(v) ಪ್ರಾಥಮಿಕ ಶಾಲೆಗಳು (2023-24) – **53,682**

(vi) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ (2023-24) – **2,524**

*1. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*2. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*3. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*4. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*5. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*6. ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2023-24.*

*ಟಿಪ್ಪಣಿ: ಸಾಮಾನ್ಯ ವರ್ಗ ರಾಜ್ಯಗಳ ಅಖಿಲ ಭಾರತ ಸರಾಸರಿಯನ್ನು 16 ಸಾಮಾನ್ಯವರ್ಗದ ರಾಜ್ಯಗಳು ಒದಗಿಸಿದ ಅಂಕಿಸಂಖ್ಯೆಗಳ ಆಧಾರದ ಮೇರೆಗೆ ಲೆಕ್ಕ ಹಾಕಲಾಗಿದೆ – ತೆಲಂಗಾಣ ಸೇರಿದಂತೆ ಆಂಧ್ರಪ್ರದೇಶ, ಬಿಹಾರ, ಛತ್ತೀಸಗಡ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಾಸ್ಥಾನ, ತಮಿಳುನಾಡು, ಉತ್ತರಪ್ರದೇಶ ಹಾಗೂ ಪಶ್ಚಿಮ ಬಂಗಾಳ.*

# ಅನುಬಂಧ 1.2
## ಸರ್ಕಾರಿ ಲೆಕ್ಕಗಳ ಸ್ವರೂಪ
(ಉಲ್ಲೇಖ : ಕಂಡಿಕೆ 1.4; ಪುಟ 6)

**ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ವಿನ್ಯಾಸವು ಕೆಳಕಂಡಂತಿದೆ;**

**ರಾಜ್ಯ ಹಣಕಾಸು ಲೆಕ್ಕಗಳನ್ನು ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಸಂಪುಟ – I ಸರ್ಕಾರದ ಹಣಕಾಸುಗಳ ಸಾರಾಂಶದ ವಿವರಣಾ ಪಟ್ಟಿಗಳನ್ನು ಮತ್ತು ಸಂಪುಟ – II ಸವಿವರ ವಿವರಣಾ ಪಟ್ಟಿಗಳನ್ನು ಸಾದರ ಪಡಿಸುತ್ತದೆ. ವಿನ್ಯಾಸದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಅಲ್ಲದೆ ಸಂಪುಟ – II ವಿವಿಧ ಅನುಬಂಧಗಳಲ್ಲಿ ನೀಡಿರುವಂತೆ ಪ್ರಧಾನ ಶೀರ್ಷಿಕೆಯಲ್ಲಿ ಸಂಬಳ ಮತ್ತು ಸಹಾಯಧನಗಳ ತುಲನಾತ್ಮಕ ವೆಚ್ಚ, ರಾಜ್ಯ ಸರ್ಕಾರ ನೀಡಿದ ಸಹಾಯಾನುದಾನಗಳು ಮತ್ತು ಆರ್ಥಿಕ ಸಹಾಯಗಳು, ಬಾಹ್ಯ ಬೆಂಬಲಿತ ಯೋಜನೆಗಳು, ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚ, ಅನುಷ್ಠಾನ ಸಂಸ್ಥೆಗಳಿಗೆ ಕೇಂದ್ರ ಯೋಜನಾ ಮೊತ್ತಗಳ ನೇರ ಬಿಡುಗಡೆ, ಶಿಲ್ಕುಗಳ ಸಾರಾಂಶ, ನೀರಾವರಿ ಯೋಜನೆಗಳ ಆರ್ಥಿಕ ಫಲಗಳು ಅಪೂರ್ಣ ಸಾರ್ವಜನಿಕ ಕಾಮಗಾರಿಗಳ ಗುತ್ತಿಗೆಗಳ ಬದ್ಧತೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಹೊಂದಿದೆ.**

| ವಿವರಣಾ ಪಟ್ಟಿ ಸಂಖ್ಯೆ | ವಿನ್ಯಾಸ |
|---|---|
| 1 | ರಾಜ್ಯದ ಆರ್ಥಿಕ ಸ್ಥಿತಿಯ ವಿವರಣಾ ಪಟ್ಟಿ |
| 2 | ಸ್ವೀಕೃತಿಗಳು ಮತ್ತು ವಿತರಣೆಗಳ ವಿವರಣಾ ಪಟ್ಟಿ |
| 3 | ಸಂಚಿತ ನಿಧಿಯಲ್ಲಿನ ಸ್ವೀಕೃತಿಗಳ ವಿವರಣಾ ಪಟ್ಟಿ |
| 4 | ಸಂಚಿತ ನಿಧಿಯ ವೆಚ್ಚಗಳ ವಿವರಣಾ ಪಟ್ಟಿ |
| 5 | ಕ್ರಮವೃದ್ಧಿಯ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ |
| 6 | ಸರ್ಕಾರದ ಸಾಲಗಳ ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ |
| 7 | ರಾಜ್ಯ ಸರ್ಕಾರವು ನೀಡಿದ ಸಾಲಗಳ ಮತ್ತು ಮುಂಗಡಗಳ ವಿವರಣಾ ಪಟ್ಟಿ |
| 8 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ |
| 9 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ |
| 10 | ಸರ್ಕಾರವು ನೀಡಿದ ಅನುದಾನಗಳ ವಿವರಣಾ ಪಟ್ಟಿ |
| 11 | ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ವಿವರಣಾ ಪಟ್ಟಿ |
| 12 | ರಾಜಸ್ವ ಲೆಕ್ಕವನ್ನು ಹೊರತುಪಡಿಸಿ ವೆಚ್ಚದ ಆಕರ ಮತ್ತು ಅನ್ವಯಗಳ ವಿವರಣಾ ಪಟ್ಟಿ |
| 13 | ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಶಿಲ್ಕು ವಿವರಗಳ ಸಾರಾಂಶ |
| 14 | ಒಳಶೀರ್ಷಿಕೆಯ ಹಂತದವರೆಗೆ ರಾಜಸ್ವ ಮತ್ತು ಬಂಡವಾಳ ಜಮೆಗಳ ಸವಿವರ ವಿವರಣಾ ಪಟ್ಟಿ |
| 15 | ಒಳಶೀರ್ಷಿಕೆಯ ಹಂತದ ರಾಜಸ್ವ ವೆಚ್ಚಗಳ ಸವಿವರ ವಿವರಣಾ ಪಟ್ಟಿ. |
| 16 | ಒಳಶೀರ್ಷಿಕೆಯ ಮತ್ತು ಉಪಶೀರ್ಷಿಕೆಗಳ ಹಂತದ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ |
| 17 | ಸಾಲಗಳು ಮತ್ತು ಇತರ ಜವಾಬ್ದಾರಿಗಳ ಸವಿವರ ವಿವರಣಾ ಪಟ್ಟಿ |
| 18 | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳ ಸವಿವರ ವಿವರಣಾ ಪಟ್ಟಿ. |
| 19 | ಸರ್ಕಾರದ ಹೂಡಿಕೆಗಳ ಸವಿವಿರ ವಿವರಣಾ ಪಟ್ಟಿ |
| 20 | ಸರ್ಕಾರ ನೀಡಿದ ಖಾತರಿಗಳ ಸವಿವರ ವಿವರಣಾ ಪಟ್ಟಿ. |
| 21 | ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ವಹಿವಾಟುಗಳ ಸವಿವರ ವಿವರಣಾ ಪಟ್ಟಿ |
| 22 | ಮೀಸಲಿಟ್ಟ ನಿಧಿಗಳಲ್ಲಿನ ಶಿಲ್ಕುಗಳ ಸವಿವರ ವಿವರಣಾ ಪಟ್ಟಿ. |

## ಅನುಬಂಧ 1.3

## 31 ಮಾರ್ಚ್ 2024ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ

(ಉಲ್ಲೇಖ: ಕಂಡಿಕೆ 1.7; ಪುಟ 10)

(₹ ಕೋಟಿಗಳಲ್ಲಿ)

| 31.03.2023 ರಂದು ಇದ್ದಂತೆ | | ಜವಾಬ್ದಾರಿಗಳು | | 31.03.2024 ರಂದು ಇದ್ದಂತೆ |
|---|---|---|---|---|
| **3,53,893.89** | | **ಆಂತರಿಕ ಋಣ** | | **4,17,454.56** |
| | 3,37,289.84 | ಬಡ್ಡಿ ಸಹಿತ ಮಾರುಕಟ್ಟೆ ಸಾಲಗಳು | 4,00,292.60 | |
| | (–)0.04 | ಬಡ್ಡಿರಹಿತ ಮಾರುಕಟ್ಟೆ ಸಾಲಗಳು | – | |
| | (–)24.11 | ಭಾರತೀಯ ಜೀವವಿಮಾ ನಿಗಮದಿಂದ ಪಡೆದ ಸಾಲಗಳು | – | |
| | 6,151.24 | ಇತರೆ ಸಂಸ್ಥೆಗಳಿಂದ ಪಡೆದ ಸಾಲಗಳು | 8,312.96 | |
| | 10,476.92 | ಭಾರತೀಯ ರಿಜರ್ವ್ ಬ್ಯಾಂಕಿನಿಂದ ಸಾಲಗಳು – ಕೇಂದ್ರದ ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಯಿಂದ ಪಡೆಯಲಾದ ವಿಶೇಷ ಭದ್ರತೆಗಳು | 8,849.00 | |
| **49,139.16^** | | **ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು** | | **53,405.78** |
| | 0.07 | 1984–85ನೇ ಸಾಲಿನ ಹಿಂದಿನ ವರ್ಷದ ಸಾಲಗಳು | 0.07 | |
| | 20.43 | ಯೋಜನೇತರ ಸಾಲಗಳು | 15.58 | |
| | 5,506.97 | ರಾಜ್ಯ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 3,832.82 | |
| | 7.89 | ಕೇಂದ್ರ ಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 7.89 | |
| | –18.25 | ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಸಾಲಗಳು | (–)18.25 | |
| | 0.03 | ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಿಗಾಗಿ ಸಾಲಗಳು | 0.02 | |
| | 43,622.02 | ಇತರೆ ಸಾಲಗಳು | 49,567.65 | |
| **500.00** | | **ಸಾದಿಲ್ವಾರು ನಿಧಿ** | | **500.00** |
| **45,736.19** | | **ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ** | | **49,290.49** |
| **60,641.72*** | | **ಮೀಸಲು ನಿಧಿಗಳು** | | **67,969.29** |
| **59,874.35** | | **ಠೇವಣಿಗಳು** | | **67,347.89** |
| **3,420.65** | | **ಅಮಾನತ್ತು ಮತ್ತು ಸಂಕೀರ್ಣ ಶಿಲ್ಕುಗಳು** | | **6,026.44** |
| **5,73,205.96** | | **ಒಟ್ಟು** | | **6,61,994.45** |
| | | **ಆಸ್ತಿಗಳು** | | |
| **4,56,415.23** | | **ಸ್ಥಿರ ಆಸ್ತಿಗಳ ಮೇಲಿನ ಒಟ್ಟು ಬಂಡವಾಳ ವೆಚ್ಚಗಳು** | | **5,08,558.24** |
| | 72,799.77 | ಕಂಪನಿಗಳು, ನಿಗಮಗಳು ಇತ್ಯಾದಿಗಳ ಷೇರುಗಳಲ್ಲಿ ಹೂಡಿಕೆಗಳು | 73,486.87 | |
| | 3,83,617.67& | ಇತರೆ ಬಂಡವಾಳ ವೆಚ್ಚ | 4,35,071.37 | |
| **38,101.37** | | **ಸಾಲಗಳು ಮತ್ತು ಮುಂಗಡಗಳು** | | **42,268.12** |
| | 5,305.08 | ವಿದ್ಯುತ್ಶಕ್ತಿ ಯೋಜನೆಗಳಿಗಾಗಿ ಸಾಲಗಳು | 5,155.26 | |
| | 32,886.74 | ಇತರೆ ಅಭಿವೃದ್ಧಿ ಸಾಲಗಳು | 37,199.05 | |
| | (–)90.45 | ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಸಂಕೀರ್ಣ ಸಾಲಗಳು | (–)86.19 | |
| **1,047.50** | | **ಇರಸಾಲಗಳು** | | **991.79** |
| **6.94** | | **ಇತರೆ ಮುಂಗಡಗಳು** | | **6.94** |
| **83,942.63*** | | **ನಗದು** | | **1,07,264.47** |

| 31.03.2023 ರಂದು ಇದ್ದಂತೆ | | ಜವಾಬ್ದಾರಿಗಳು | | 31.03.2024 ರಂದು ಇದ್ದಂತೆ |
|---|---|---|---|---|
| - | | ಖಜಾನೆಗಳಲ್ಲಿನ ನಗದು | | |
| | 5.99 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 6.20 | |
| | 2,788.21 | ರಿಜರ್ವ್ ಬ್ಯಾಂಕ್ ಠೇವಣಿಗಳು | 4,699.34 | |
| | 0.01 | ರವಾನೆಯಲ್ಲಿರುವ ಇರಸಾಲಗಳು | 0.01 | |
| | 47,919.99 | ನಗದು ಶಿಲ್ಕು ಹೂಡಿಕೆಗಳು | 67,143.36 | |
| | 33,228.43 | ಮೀಸಲು ನಿಧಿಗಳಿಂದ ಹೂಡಿಕೆಗಳು | 35,415.56 | |
| **(−)6,307.72** | | **ಸರ್ಕಾರಿ ಲೆಕ್ಕಗಳ ಹೆಚ್ಚಳ** | | **2,904.89**# |
| | 7,188.07 | ಸಂಚಿತ ಹೆಚ್ಚಳ | (−)6,307.72 | |
| | (−)13,495.79 | ರಾಜಸ್ವ ಹೆಚ್ಚುವರಿ ಕಳೆಯಿರಿ / ರಾಜಸ್ವ ಕೊರತೆಯನ್ನು ಕೂಡಿರಿ | 9,271.57 | |
| | - | ಇತರೆ ಹೊಂದಾಣಿಕೆಗಳನ್ನು ಕಳೆಯಿರಿ | (−)22.91 | |
| | - | ಬಂಡವಾಳ ಸ್ವೀಕೃತಿಯನ್ನು ಕಳೆಯಿರಿ | (−)35.99 | |
| **5,73,205.96** | | **ಒಟ್ಟು** | | **6,61,994.45** |

^ *ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು ₹14,869 ಕೋಟಿ ಆಗಿರುತ್ತದೆ ಏಕೆಂದರೆ, ಭಾರತ ಸರ್ಕಾರವು ರಾಜ್ಯಕ್ಕೆ 2020–21 ಮತ್ತು 2021–22ನೇ ಸಾಲುಗಳಿಗೆ ಅನುಕ್ರಮವಾಗಿ ₹12,407 ಕೋಟಿ ಮತ್ತು ₹18,109 ಕೋಟಿಗಳನ್ನು ಋಣ ಸ್ವೀಕೃತಿಯಡಿ ಜಿ.ಎಸ್.ಟಿ. ಪರಿಹಾರದ ರೂಪದಲ್ಲಿ ನೀಡಲಾದ ಸಾಲಗಳನ್ನು ರಾಜ್ಯದ ಋಣವೆಂದು ಹಣಕಾಸು ಆಯೋಗದ ಯಾವುದೇ ಮಾನದಂಡ ಸೂಚಿಸಿದ್ದರೂ ಅವುಗಳನ್ನು ರಾಜ್ಯದ ಋಣವೆಂದು ನಿರ್ಧರಿಸಬಾರದೆಂದು ತೀರ್ಮಾನಿಸಿತ್ತು.*

# *0.05 ವ್ಯತ್ಯಾಸವು ಆದಾಯ ಕೊರತೆಯಲ್ಲಿನ ಪೂರ್ಣಾಂಕದಿಂದಾಗಿ (ಹಣಕಾಸು ಲೆಕ್ಕಗಳ ಹೇಳಿಕೆ 2) ಮತ್ತು ಪೂರ್ಣಾಂಕದಿಂದಾಗಿ 0.01 ಆಗಿದೆ.*

* 2022–23*ನೇ ಸಾಲಿಗೆ ಮೀಸಲಿಟ್ಟ ನಿಧಿಗಳ ಹೂಡಿಕೆಗಳಲ್ಲಿ ₹314.00 ಕೋಟಿಗಳ ಹೂಡಿಕೆಯನ್ನು (ಗ್ಯಾರಂಟಿ ರಿಡಂಪ್ಷನ್ ಫಂಡ್) ಸೇರಿಸಲಾಗಿದೆ.*

& *ಪರಿಣಾಮಕಾರಿ ಇತರೆ ಬಂಡವಾಳ ವೆಚ್ಚ ₹3,83,615.46 ಕೋಟಿಯು, ₹2.21 ಕೋಟಿ ಪ್ರೊಫಾರ್ಮ ತಿದ್ದುಪಡಿಯನ್ನು ಗಣನೆಗೆ ತೆಗೆದುಕೊಂಡ ನಂತರ ಆಗಿದೆ.*

# ಅನುಬಂಧ 2.1

## ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ

(ಉಲ್ಲೇಖ: **ಕಂಡಿಕೆ 2.2; ಪುಟ: 21**)

(₹ ಕೋಟಿಗಳಲ್ಲಿ)

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2023–24 | | 2022–23 | 2023–24 | | 2022–23 |
| | | **ಭಾಗ 'ಎ' : ರಾಜಸ್ವ** | | | |
| **2,33,342.93** | **I. ರಾಜಸ್ವ ಜಮೆಗಳು** | **2,29,079.74** | **2,42,614.45** | **I. ರಾಜಸ್ವ ವೆಚ್ಚ** | **2,15,583.99**[#] |
| **1,63,505.04** | ತೆರಿಗೆ ರಾಜಸ್ವ | 1,43,701.93 | **75,699.58** | **ಒಟ್ಟು ಸಾಮಾನ್ಯ ಸೇವೆಗಳು** | **71,816.05** |
| **13,117.41** | ತೆರಿಗೆಯೇತರ ರಾಜಸ್ವ | 13,914.13 | | **ಸಾಮಾಜಿಕ ಸೇವೆಗಳು** | |
| **41,192.63** | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 34,596.18 | 32,725.35 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 31,263.04 |
| **15,527.85** | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು | **36,867.50** | 12,237.87 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 11,308.77 |
| **9,865.95** | ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳು | 11,628.10 | 4,723.12 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 12,502.78 |
| **3,768.63** | ಹಣಕಾಸು ಆಯೋಗದ ಅನುದಾನಗಳು | 3,495.25 | 300.04 | ವಾರ್ತಾ ಮತ್ತು ಪ್ರಸಾರ | 298.12 |
| **1,893.27** | ಇತರೆ ವರ್ಗಾವಣೆಗಳು / ರಾಜ್ಯಗಳಿಗೆ ಅನುದಾನ | 21,744.15 | 8,850.92 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ | 8,515.43 |
| | | | 785.14 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 637.96 |
| | | | 33,908.00 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 15,893.28 |
| | | | 192.97 | ಇತರೆ | 591.77 |
| | | | **93,723.41** | **ಒಟ್ಟು ಸಾಮಾಜಿಕ ಸೇವೆಗಳು** | **81,011.15** |
| | | | | **ಆರ್ಥಿಕ ಸೇವೆಗಳು** | |
| | | | 18,269.32 | ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು | 16,214.41 |
| | | | 9,759.81 | ಗ್ರಾಮೀಣಾಭಿವೃದ್ಧಿ | 11,234.31 |
| | | | 11.69 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 213.25 |
| | | | 1,854.87 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 1,890.57 |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| **2023–24** | | **2022–23** | **2023–24** | | **2022–23** |
| | | | 23,795.16 | ಇಂಧನ | 14,103.43 |
| | | | 1,486.28 | ಕೈಗಾರಿಕೆ ಮತ್ತು ಖನಿಜಗಳು | 1,579.66 |
| | | | 6,362.20 | ಸಾರಿಗೆ | 6,346.71 |
| | | | 77.59 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 38.50 |
| | | | 5,345.44 | ಸಾಮಾನ್ಯ ಆರ್ಥಿಕ ಸೇವೆಗಳು | 5,474.09 |
| | | | **66,962.36** | **ಒಟ್ಟು ಆರ್ಥಿಕ ಸೇವೆಗಳು** | **57,094.93** |
| | | | **6,229.10** | **ಸಹಾಯಾನುದಾನ ಮತ್ತು ಕೊಡುಗೆಗಳು** | **5,661.86** |
| | | | **(–)9,271.57** | **II. ರಾಜಸ್ವ ಕೊರತೆ ಭಾಗ 'ಬಿ' ಗೆ ಮುಂದುವರೆಸಿದ್ದು** | **13,495.75** |
| **2,33,342.93$** | **ಒಟ್ಟು** | **2,29,079.74** | **2,33,342.88$** | **ಒಟ್ಟು** | **2,29,079.74** |
| ಭಾಗ ಬಿ – ಬಂಡವಾಳ ಮತ್ತು ಇತರೆ | | | | | |
| **83,942.63** | **II. ಖಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆ ಆರಂಭಿಕ ನಗದು ಶಿಲ್ಕು** | **63,412.36** | | | |
| **35.99** | **III. ಇತರೆ ಬಂಡವಾಳ ಜಮೆಗಳು** | **2.21** | **52,120.07** | **III. ಬಂಡವಾಳ ವೆಚ್ಚ** | **57,348.17*** |
| | | | **2,971.64** | **ಒಟ್ಟು ಸಾಮಾನ್ಯ ಸೇವೆಗಳು** | **1,651.39** |
| | | | | **ಸಾಮಾಜಿಕ ಸೇವೆಗಳು** | |
| | | | 1,201.09 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 1,590.01 |
| | | | 1,113.82 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1,230.26 |
| | | | 6,616.84 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 7,018.25 |
| | | | 2.30 | ವಾರ್ತಾ ಮತ್ತು ಪ್ರಸಾರ | – |
| | | | 2,764.10 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ | 2,315.07 |
| | | | 74.09 | ಸಮಾಜ ಕಲ್ಯಾಣ ಮತ್ತು ಪೌಷ್ಟಿಕತೆ | 151.99 |
| | | | 254.02 | ಇತರೆ ಸಾಮಾಜಿಕ ಸೇವೆಗಳು | 171.36 |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2023–24 | | 2022–23 | 2023–24 | | 2022–23 |
| | | | **12,026.26** | **ಒಟ್ಟು ಸಾಮಾಜಿಕ ಸೇವೆಗಳು** | **12,476.94** |
| | | | | **ಆರ್ಥಿಕ ಸೇವೆಗಳು** | |
| | | | 871.43 | ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು | 1,166.13 |
| | | | 223.53 | ಗ್ರಾಮೀಣಾಭಿವೃದ್ಧಿ | 263.87 |
| | | | 3,595.50 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 3,399.96 |
| | | | 17,435.66 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 21,221.14 |
| | | | 500.00 | ಇಂಧನ | 724.00 |
| | | | 81.05 | ಕೈಗಾರಿಕೆ ಮತ್ತು ಖನಿಜಗಳು | 686.24 |
| | | | 9,644.80 | ಸಾರಿಗೆ | 14,127.54 |
| | | | 4,770.20 | ಸಾಮಾನ್ಯ ಆರ್ಥಿಕ ಸೇವೆಗಳು | 1,630.96 |
| | | | **37,122.17** | **ಒಟ್ಟು ಆರ್ಥಿಕ ಸೇವೆಗಳು** | **43,219.84** |
| **306.11** | **IV. ಸಾಲಗಳು ಮತ್ತು ಮುಂಗಡಗಳ ವಸೂಲಾತಿ** | **478.30** | **4,472.85** | **IV. ಸಾಲಗಳು ಮತ್ತು ಮುಂಗಡಗಳು** | **3,250.38** |
| **263.14** | ವಿದ್ಯುಚ್ಛಕ್ತಿ ಯೋಜನೆಗಳಿಂದ | 277.72 | 113.33 | ವಿದ್ಯುಚ್ಛಕ್ತಿ ಯೋಜನೆಗಳಿಗೆ | 396.92 |
| **3.98** | ಸರ್ಕಾರಿ ನೌಕರರಿಂದ | 4.72 | 14.70 | ಸರ್ಕಾರಿ ನೌಕರರಿಗೆ | 4.07 |
| **38.99** | ಇತರರಿಂದ | 195.86 | 4,344.82 | ಇತರರಿಗೆ | 2,849.39 |
| **90,279.93** | **V. ಸಾರ್ವಜನಿಕ ಋಣ ಜಮೆಗಳು** | **44,548.73** | **22,452.64** | **V. ಸಾರ್ವಜನಿಕ ಋಣ ಮರುಪಾವತಿ** | **15,942.49** |
| **84,334.12** | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 39,282.63 | 20,773.45 | ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತುಪಡಿಸಿ ಆಂತರಿಕ ಋಣ | 14,430.55 |
| – | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | – | – | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅರ್ಥೋಪಾಯ ಮುಂಗಡಗಳು | – |
| **5,945.81** | ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 5,266.10 | 1,679.19 | ಕೇಂದ್ರ ಸರ್ಕಾರಕ್ಕೆ ಸಾಲಗಳು ಮತ್ತು ಮುಂಗಡಗಳ ಮರುಪಾವತಿ | 1,511.94 |
| – | **VI. ಸಾದಿಲ್ವಾರು ನಿಧಿ (ಪುನರ್ಭರ್ತಿ)** | – | – | **VI. ಸಾದಿಲ್ವಾರು ನಿಧಿ (ವಿತರಣೆಗಳು)** | – |
| **3,68,797.79** | **VII. ಸಾರ್ವಜನಿಕ ಲೆಕ್ಕ ಜಮೆಗಳು** | **3,68,235.82** | **3,47,781.07** | **VII. ಸಾರ್ವಜನಿಕ ಲೆಕ್ಕ ವಿತರಣೆಗಳು** | **3,30,003.50** |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2023–24 | | 2022–23 | 2023–24 | | 2022–23 |
| **9,861.00** | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 9,192.22 | 6,306.70 | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿಗಳು ಇತ್ಯಾದಿ | 5,788.92 |
| **9,676.52** | ಮೀಸಲು ನಿಧಿಗಳು | 10,069.18 | 2,348.95 | ಮೀಸಲು ನಿಧಿಗಳು | 2,787.31 |
| **79,961.55** | ಠೇವಣಿಗಳು ಮತ್ತು ಮುಂಗಡಗಳು | 1,01,650.21 | 72,488.00 | ಠೇವಣಿಗಳು ಮತ್ತು ಮುಂಗಡಗಳು | 75,458.16 |
| **2,69,298.72** | ಅಮಾನತ್ತು ಮತ್ತು ಸಂಕೀರ್ಣಗಳು | 2,47,324.26 | 2,66,693.12 | ಅಮಾನತ್ತು ಮತ್ತು ಸಂಕೀರ್ಣಗಳು | 2,46,127.93 |
| – | ಇರಸಾಲುಗಳು | (–)0.05 | (–)55.70 | ಇರಸಾಲುಗಳು | (–)158.82 |
| (–)9,271.57 | **VIII. ರಾಜಸ್ವ ಅಧಿಕ(+) / ಕೊರತೆ(–) ಭಾಗ 'ಎ' ಯಿಂದ ತೆಗೆದುಕೊಂಡಿದ್ದು** | **13,495.75** | **1,07,264.47** | **VIII. ಅಂತಿಮ ನಗದು ಶಿಲ್ಕು (31.03.2024)** | **83,628.63** |
| | | | 0.01 | ಖಜಾನೆಗಳಲ್ಲಿನ ನಗದು ಮತ್ತು ಸ್ಥಳೀಯ ಇರಸಾಲುಗಳು | 0.01 |
| | | | 4,699.34 | ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳು | 2,788.21 |
| | | | 6.20 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 5.99 |
| | | | 67,143.36 | ನಗದು ಶಿಲ್ಕು ಹೂಡಿಕೆ | 47,919.99 |
| | | | 35,415.56 | ಉದ್ದೇಶಿತ ನಿಧಿಗಳಿಂದ ಹೂಡಿಕೆಗಳು | 32,914.43 |
| **5,34,090.88[$]** | **ಒಟ್ಟು** | **4,90,173.17** | **5,34,091.10[$]** | **ಒಟ್ಟು** | **4,90,173.17** |

*# ವಿವಿಧ ಸೇವಾ ಶೀರ್ಷಿಕೆಗಳಡಿ ಆಯವ್ಯಯದ ಹೊರಗಿನ ಸಾಲ ಮುಂತಾದವುಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ. ₹1,046 ಕೋಟಿಗಳನ್ನು ವಿಶೇಷ ಉದ್ದೇಶ ಸಾಧನಗಳ ಮೂಲಕ ಸಾಲವನ್ನಾಗಿ ಪಡೆಯಲಾಗಿದೆ – ಸಾಮಾಜಿಕ ಸೇವೆಗಳು (₹80.44 ಕೋಟಿ) ಮತ್ತು ಆರ್ಥಿಕ ಸೇವೆಗಳು (₹965.56 ಕೋಟಿ).*

** ಆಯವ್ಯಯದ ಹೊರಗಿನ ಸಾಲಗಳಿಂದಾದ ₹4,873.43 ಕೋಟಿಗಳ ವೆಚ್ಚವನ್ನು ಒಳಗೊಂಡಿದೆ.*

*$ ವ್ಯತ್ಯಾಸವು ಪೂರ್ಣಾಂಕದ ಕಾರಣ.*

## ಅನುಬಂಧ 2.2
## ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು

(ಉಲ್ಲೇಖ: ಕಂಡಿಕೆ 2.2, 2.4.3, 2.7.1; ಪುಟ 21, 27, 65)

(₹ ಕೋಟಿಗಳಲ್ಲಿ)

| | 2019–20 | 2020–21 | 2021–22 | 2022–23 | 2023–24 |
|---|---|---|---|---|---|
| ಭಾಗ ಎ : ಸ್ವೀಕೃತಿಗಳು | | | | | |
| **1. ರಾಜಸ್ವ ಸ್ವೀಕೃತಿಗಳು** | **1,75,443** | **1,56,716** | **1,95,762** | **2,29,080** | **2,33,343** |
| ವೃದ್ಧಿಯ ದರ | **6.34** | **(–)10.67** | **24.92** | **17.02** | **1.86** |
| **i) ತೆರಿಗೆ ಆದಾಯ** | **1,02,363(58)** | **97,052(62)** | **1,20,739(62)** | **1,43,702(63)** | **1,63,505(70)** |
| ವೃದ್ಧಿಯ ದರ | **5.71** | **(–)5.19** | **24.41** | **19.02** | **13.78** |
| ರಾಜ್ಯ ಸರಕುಗಳು ಮತ್ತು ಸೇವಾ ತೆರಿಗೆ | 42,147(41) | 37,711(39) | 49,929(41) | 61,403(43) | 71,041(43) |
| ಕೃಷಿ ಆದಾಯದ ಮೇಲಿನ ತೆರಿಗೆ | 1 | – | – | – | – |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆ | 16,424(16) | 16,028(17) | 19,274(16) | 19,082(13) | 20,811(13) |
| ರಾಜ್ಯ ಅಬಕಾರಿ | 21,584(21) | 23,332(24) | 26,378(22) | 29,920(22) | 34,629(21) |
| ವಾಹನಗಳ ಮೇಲಿನ ತೆರಿಗೆಗಳು | 6,763(7) | 5,607(6) | 6,915(6) | 10,611(7) | 11,287(7) |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 11,308(11) | 10,576(11) | 14,020(12) | 17,726(12) | 20,147(12) |
| ಭೂ ಕಂದಾಯ | 203 | 184 | 181 | 364 | 860(1) |
| ಸರಕುಗಳು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 65 | 16 | 18 | 3 | (–)5 |
| ವಿದ್ಯುಚ್ಛಕ್ತಿ ಸುಂಕದ ಮೇಲಿನ ತೆರಿಗೆ | 2,693(3) | 2,433(2) | 2,724(2) | 3,052(2) | 3,323(2) |
| ಇತರೆ ತೆರಿಗೆಗಳು–ಆದಾಯ ಮತ್ತು ಖರ್ಚಿನ ಮೇಲೆ | 1,140(1) | 1,127(1) | 1,269(1) | 1,499(1) | 1,341(1) |
| ಇತರೆ ತೆರಿಗೆಗಳು–ಸರಕುಗಳು ಮತ್ತು ಸೇವೆಗಳ ಮೇಲೆ | 34 | 38 | 31 | 42 | 71 |
| **ii) ತೆರಿಗೆಯೇತರ ಆದಾಯ** | **7,681(4)** | **7,894(5)** | **11,777(6)** | **13,914(6)** | **13,117(6)** |
| ವೃದ್ಧಿಯ ದರ | **13.41** | **2.77** | **49.19** | **18.15** | **(–)5.73** |
| ಬಡ್ಡಿ ಸ್ವೀಕೃತಿಗಳು | 895 | 920 | 1,315(11) | 1,377(10) | 1,493(11) |
| ಲಾಭಾಂಶ ಮತ್ತು ಲಾಭಗಳು | 54 | 81 | 350(3) | 429(3) | 303(2) |
| ಕಬ್ಬಿಣೇತರ ಕೈಗಾರಿಕೆ ಮತ್ತು ಲೋಹಗಳ ಕೈಗಾರಿಕೆಗಳು | 3,629 | 3,893 | 6,308(54) | 5,946(44) | 7,322(56) |
| ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ | 599 | 419 | 522(4) | 431(3) | 488(4) |
| ಇತರೆ ಆಡಳಿತಾತ್ಮಕ ಸೇವೆಗಳು | 305 | 388 | 417(4) | 1,156(8) | 570(4) |
| ಅರಣ್ಯ ಪ್ರದೇಶ ಮತ್ತು ವನ್ಯಜೀವಿಗಳು | 267 | 276 | 281(2) | 325(2) | 423(3) |
| ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ | 183 | 175 | 287(2) | 178(1) | 168(1) |
| ಪೊಲೀಸ್ | 308 | 367 | 500(4) | 579(4) | 349(3) |
| ರಸ್ತೆಗಳು ಮತ್ತು ಸೇತುವೆಗಳು | 71 | 50 | 60(1) | 25 | 8 |

| | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ಇತರೆ ತೆರಿಗೆಯೇತರ ಸ್ವೀಕೃತಿಗಳು | 1,370 | 1,325 | 1,737(15) | 3,468(25) | 1,993(15) |
| **(iii) ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು** | **30,919(18)** | **21,694(14)** | **33,284** | **34,596(15)** | **41,193(18)** |
| ವೃದ್ಧಿಯ ದರ | **(–)13.86** | **(–)29.84** | **53.42** | **3.94** | **19.07** |
| **(iv) ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು** | **34,480(20)** | **30,076(19)** | **29,962(15)** | **36,868(16)** | **15,528(7)** |
| ವೃದ್ಧಿಯ ದರ | **35.32** | **(–)12.77** | **(–)0.38** | **23.05** | **(–)57.88** |
| ರಾಜ್ಯ ಯೋಜನೆಗಳಿಗೆ ಅನುದಾನಗಳು | – | – | – | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | – | – | – | – | – |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 12,214 | 9,852 | 12,659(42) | 11,629(32) | 9,866(64) |
| ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನ | 17,593 | 14,667 | 11,064(37) | 21,744(59) | 1,893(12) |
| ಹಣಕಾಸು ಆಯೋಗದ ಅನುದಾನಗಳು | 4,673 | 5,557 | 6,239(21) | 3,495(9) | 3,769(24) |
| 2. ಬಂಡವಾಳ ಸ್ವೀಕೃತಿಗಳು | **50,707** | **84,843** | **80,774** | **45,029** | **90,622** |
| **I.** ಇತರೆ ಬಂಡವಾಳ ಸ್ವೀಕೃತಿಗಳು | **45** | **45** | **6** | **2** | **36** |
| **II.** ಸಾಲ ಮತ್ತು ಮುಂಗಡಗಳ ವಸೂಲಾತಿ | **203** | **270** | **127** | **478** | **306** |
| **III.** ಸಾರ್ವಜನಿಕ ಋಣ ಸ್ವೀಕೃತಿಗಳು | **50,459** | **84,528##** | **80,641##** | **44,549** | **90,280** |
| ಸಾರ್ವಜನಿಕ ಋಣದ ವೃದ್ಧಿಯ ದರ/ಸ್ವೀಕೃತಿಗಳು | **20.39** | **67.52** | **(–)4.60** | **(–)44.76** | **102.65** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್ ಹೊರತುಪಡಿಸಿ) | 49,473(98) | 70,414(83) | 60,462(75) | 39,283(88) | 84,334(93) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳ ನಿವ್ವಳ ವಹಿವಾಟು | 310(1) | – | – | – | – |
| ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | 675(1) | 14,114(17)$ | 20,179(25)$ | 5,266(12) | 5,946(7) |
| 3. ಒಟ್ಟು ರಾಜಸ್ವ ಮತ್ತು ಋಣೇತರ ಬಂಡವಾಳ ಜಮೆಗಳು (1+2(i)+2(ii)) | **1,75,691** | **1,57,031** | **1,95,895** | **2,29,560** | **2,33,685** |
| 4. ಸಂಚಿತ ನಿಧಿಯ ಒಟ್ಟು ಸ್ವೀಕೃತಿಗಳು (3+2(iii)) | **2,26,150** | **2,41,559** | **2,76,536** | **2,74,109** | **3,23,965** |
| 5. ಸಾದಿಲ್ವಾರು ನಿಧಿ ಸ್ವೀಕೃತಿಗಳು | – | – | **420** | – | – |
| 6. ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | **2,55,638** | **2,72,457** | **3,28,313** | **3,68,236** | **3,68,798** |
| 7. ರಾಜ್ಯದ ಒಟ್ಟು ಸ್ವೀಕೃತಿಗಳು (4+5+6) | **4,81,787** | **5,14,016** | **6,05,269** | **6,42,345** | **6,92,763** |
| ಭಾಗ ಬಿ : ವೆಚ್ಚ / ಬಟವಾಡೆ | | | | | |
| 8. ರಾಜಸ್ವ ವೆಚ್ಚ | **1,74,258** | **1,76,054** | **2,09,428** | **2,15,584** | **2,42,614** |
| ವೃದ್ಧಿಯ ದರ | **6.06** | **1.03** | **18.96** | **2.94** | **12.54** |
| ಸಾಮಾನ್ಯ ಸೇವೆಗಳು (ಬಡ್ಡಿ ಪಾವತಿಗಳನ್ನೊಳಗೊಂಡು) | 48,824(28) | 55,018(31) | 62,669(30) | 71,816(33) | 75,700(31) |
| ಸಾಮಾಜಿಕ ಸೇವೆಗಳು | 66,373(38) | 61,726(35) | 79,804(38) | 81,011(38) | 93,723(39) |
| ಆರ್ಥಿಕ ಸೇವೆಗಳು | 52,636(30) | 53,629(30) | 60,339(29) | 57,095(26) | 66,962(28) |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 6,425(4) | 5,681(4) | 6,616(3) | 5,662(3) | 6,229(3) |

| | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| **9. ಬಂಡವಾಳ ವೆಚ್ಚ** | **35,530** | **45,406** | **47,874** | **57,349** | **52,120** |
| **ವೃದ್ಧಿಯ ದರ** | **2.51** | **27.80** | **5.44** | **19.79** | **(–)9.12** |
| ಸಾಮಾನ್ಯ ಸೇವೆಗಳು | 779(2) | 1,206(3) | 940(2) | 1,652(3) | 2,972(6) |
| ಸಾಮಾಜಿಕ ಸೇವೆಗಳು | 9,192(26) | 11,547(25) | 13,228(28) | 12,477(22) | 12,026(23) |
| ಆರ್ಥಿಕ ಸೇವೆಗಳು | 25,559(72) | 32,653(72) | 33,706(70) | 43,220(75) | 37,122(71) |
| **10. ಸಾಲ ಮತ್ತು ಮುಂಗಡಗಳ ವಿತರಣೆ** | **4,069** | **2,669** | **4,209** | **3,250** | **4,473** |
| ಸಾಮಾನ್ಯ ಸೇವೆಗಳು | – | – | – | – | – |
| ಸಾಮಾಜಿಕ ಸೇವೆಗಳು | 1,061 | 1,393 | 2,770(66) | 1,846(57) | 3,078(69) |
| ಆರ್ಥಿಕ ಸೇವೆಗಳು | 3,002 | 1,271 | 1,435(34) | 1,400(43) | 1,380(31) |
| ಇತರೆ ಸಾಲಗಳು | 6 | 5 | 4 | 4 | 15 |
| **11. ಒಟ್ಟು ಬಂಡವಾಳ ವೆಚ್ಚ (9+10)** | **39,599** | **48,075** | **52,083** | **60,599** | **56,593** |
| **ವೃದ್ಧಿಯ ದರ** | **1.15** | **21.4** | **8.34** | **16.35** | **–6.61** |
| **12. ಒಟ್ಟು ವೆಚ್ಚ (8+9+10)** | **2,13,857** | **2,24,129** | **2,61,511** | **2,76,183** | **2,99,207** |
| **ವೃದ್ಧಿಯ ದರ** | **5.11** | **4.8** | **16.68** | **5.61** | **8.34** |
| **13. ಸಾರ್ವಜಿಕ ಋಣದ ಮರುಪಾವತಿಗಳು** | **10,180** | **11,016** | **13,972** | **15,942** | **22,453** |
| ಆಂತರಿಕ ಋಣ (ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳನ್ನು ಹೊರತು ಪಡಿಸಿ) | 8,446(83) | 9,611(87) | 12,560(90) | 14,430(91) | 20,774(93) |
| ಅರ್ಥೋಪಾಯ ಮುಂಗಡಗಳು ಮತ್ತು ಓವರ್ ಡ್ರಾಫ್ಟ್‌ಗಳಡಿ ನಿವ್ವಳ ವಹಿವಾಟು | 310(3) | – | – | – | – |
| ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | 1,424(14) | 1,405(13) | 1,412(10) | 1,512(9) | 1,679(7) |
| **14. ಸಾದಿಲ್ವಾರು ನಿಧಿಗೆ ವಿನಿಯೋಗ** | – | – | **420** | – | – |
| **15. ಸಂಚಿತ ನಿಧಿಯಿಂದ ಒಟ್ಟು ಬಟವಾಡೆ (12+13+14)** | **2,24,037** | **2,35,145** | **2,75,903** | **2,92,125** | **3,21,660** |
| **16. ಸಾದಿಲ್ವಾರು ನಿಧಿಯ ಬಟವಾಡೆಗಳು** | – | – | – | – | – |
| **17. ಸಾರ್ವಜನಿಕ ಲೆಕ್ಕ ಬಟವಾಡೆಗಳು** | **2,45,292** | **2,66,193** | **3,13,096** | **3,30,004** | **3,47,781** |
| **18. ರಾಜ್ಯದ ಒಟ್ಟು ಬಟವಾಡೆಗಳು (15+16+17)** | **4,69,329** | **5,01,338** | **5,88,999** | **6,22,129** | **6,69,441** |
| **ಭಾಗ ಸಿ : ಕೊರತೆಗಳು / ಹೆಚ್ಚಳಗಳು** | | | | | |
| **19, ರಾಜಸ್ವ ಕೊರತೆ(–)/ರಾಜಸ್ವ ಹೆಚ್ಚಳ (+)(1–8)** | **1,185** | **(–)19,338** | **(–)13,666** | **13,496** | **(–)9,271** |
| **20. ವಿತ್ತೀಯ ಕೊರತೆ (3–12)** | **38,166** | **67,098** | **66,036** | **46,623** | **65,522** |
| **21. ಪ್ರಾಥಮಿಕ ಕೊರತೆ (20–22)** | **18,263** | **43,665** | **39,760** | **16,980** | **33,650** |
| **ಪ್ರಾಥಮಿಕ ಹೆಚ್ಚಳ (22–20)** | – | – | – | – | – |
| **ಭಾಗ ಡಿ : ಇತರೆ ದತ್ತಾಂಶಗಳು** | | | | | |
| **22. ಬಡ್ಡಿ ಪಾವತಿಗಳು# (ರಾಜಸ್ವ ವೆಚ್ಚದಲ್ಲಿ ಸೇರಿದೆ)** | **19,903** | **23,433** | **26,276** | **29,643** | **31,872** |
| **23. ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ಆರ್ಥಿಕ** | **54,603** | **53,771** | **57,582** | **62,708** | **66,039** |

| | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| ನೆರವು | | | | | |
| 24. ಅರ್ಥೋಪಾಯ ಮುಂಗಡಗಳು/ಓವರ್ ಡ್ರಾಫ್ಟ್ (ಪಡೆದ ದಿನಗಳು) | – | – | – | – | – |
| ಅರ್ಥೋಪಾಯ ಮುಂಗಡಗಳು (ಪಡೆದ ದಿನಗಳು) | 2 | – | – | – | – |
| ಓವರ್ ಡ್ರಾಫ್ಟ್ ಪಡೆದಿದ್ದು (ದಿನಗಳು) | – | – | – | – | – |
| 25. ಅರ್ಥೋಪಾಯ ಮುಂಗಡಗಳು/ಓವರ್ ಡ್ರಾಫ್ಟ್ ಮೇಲಿನ ಬಡ್ಡಿ | 0.05 | – | – | – | – |
| 26. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ)* | 16,15,827 | 16,41,460 | 19,78,094 | 22,69,995 | 25,67,340 |
| 27. ವೃದ್ಧಿಯ ದರ | 9.22 | 1.59 | 20.51 | 14.76 | 13.10 |
| 28. ಪ್ರಸಕ್ತ ಸಾಲಿನಲ್ಲಿ ಆಯವ್ಯಯದ ಹೊರಗಿನ ಸಾಲಗಳು | 4,435 | 3,045 | 2,350 | 4,029 | – |
| 28(ಎ). ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳು (ಆಯವ್ಯಯ ಹೊರಗಿನ ಸಾಲವನ್ನು ಒಳಗೊಂಡು) | 3,37,520 | 4,15,926^^ | 4,90,256^^ | 5,53,363^^ | 6,33,531^^ |
| 29. ವೃದ್ಧಿಯ ದರ | 18.33 | 23.23 | 10.53 | 12.87 | 14.49 |
| 30. ಬಾಕಿ ಇರುವ ಖಾತರಿಗಳು (ವರ್ಷಾಂತ್ಯ) (ಬಡ್ಡಿ ಸೇರಿದಂತೆ) | 26,830 | 32,733 | 33,193 | 38,356 | 44,247 |
| 31. ಖಾತರಿ ನೀಡಿದ ಗರಿಷ್ಠ ಮೊತ್ತ (ವರ್ಷಾಂತ್ಯ) | 35,694 | 45,104 | 49,467 | 70,095 | 78,147 |
| 32. ಅಪೂರ್ಣ ಕಾಮಗಾರಿಗಳ ಸಂಖ್ಯೆ | 978 | 1,133 | 1,208 | 1,864 | 3,140 |
| 33. ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ ಬಂಡವಾಳ | 4,359 | 6,469 | 5,938 | 8,476 | 8,920 |
| ಭಾಗ ಇ : ವಿತ್ತೀಯ ಆರೋಗ್ಯ ಸೂಚಕಗಳು | | | | | |
| I ಸಂಪನ್ಮೂಲ ಸಂಗ್ರಹ | | | | | |
| ರಾಜಸ್ವ ಸ್ವೀಕೃತಿಗಳು/ ಜಿಎಸ್‌ಡಿಪಿ | 10.86 | 9.55 | 9.90 | 10.09 | 9.09 |
| ಸ್ವಂತ ತೆರಿಗೆ ರಾಜಸ್ವ/ ಜಿಎಸ್‌ಡಿಪಿ | 6.34 | 5.91 | 6.10 | 6.33 | 6.37 |
| ಸ್ವಂತ ತೆರಿಗೆಯೇತರ ರಾಜಸ್ವ/ ಜಿಎಸ್‌ಡಿಪಿ | 0.48 | 0.48 | 0.60 | 0.61 | 0.51 |
| ಕೇಂದ್ರ ವರ್ಗಾವಣೆಗಳು/ ಜಿಎಸ್‌ಡಿಪಿ | 4.05 | 3.15 | 3.20 | 3.15 | 2.21 |
| ತೆರಿಗೆಯೇತರ ರಾಜಸ್ವ/ರಾಜಸ್ವ ಸ್ವೀಕೃತಿಗಳು | 4.38 | 5.04 | 6.02 | 6.07 | 5.62 |
| ಸ್ವಂತ ತೆರಿಗೆ ರಾಜ್ಯದ ವೃದ್ಧಿಯ ದರ | 6.22 | (–)4.63 | 26.27 | 18.94 | 12.06 |
| II ವೆಚ್ಚ ನಿರ್ವಹಣೆ | | | | | |
| ಒಟ್ಟು ವೆಚ್ಚ/ ಜಿಎಸ್‌ಡಿಪಿ | 13.24 | 13.65 | 13.22 | 12.17 | 11.65 |
| ರಾಜಸ್ವ ಸ್ವೀಕೃತಿಗಳು/ಒಟ್ಟು ವೆಚ್ಚ | 82.04 | 69.92 | 74.86 | 82.95 | 77.99 |
| ರಾಜಸ್ವ ವೆಚ್ಚ/ಒಟ್ಟು ವೆಚ್ಚ | 81.48 | 78.55 | 80.08 | 78.06 | 81.09 |
| ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ/ಒಟ್ಟು ವೆಚ್ಚ | 35.83 | 33.31 | 36.63 | 34.52 | 36.37 |
| ಆರ್ಥಿಕ ಸೇವೆಗಳ ಮೇಲಿನ ವೆಚ್ಚ/ಒಟ್ಟು ವೆಚ್ಚ | 37.97 | 39.06 | 36.51 | 36.83 | 35.25 |
| ಬಂಡವಾಳ ವೆಚ್ಚ/ಒಟ್ಟು ವೆಚ್ಚ | 18.52 | 21.45 | 19.92 | 21.94 | 17.42 |
| ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚ/ಒಟ್ಟು ವೆಚ್ಚ | 18.15 | 20.91 | 19.56 | 21.34 | 17.92 |

| | 2019-20 | 2020-21 | 2021-22 | 2022-23 | 2023-24 |
|---|---|---|---|---|---|
| **III ವಿತ್ತೀಯ ಅಸಮತೆಗಳ ನಿರ್ವಗಣೆ** | | | | | |
| ರಾಜಸ್ವ ಹೆಚ್ಚಳ (ಕೊರತೆ)/ ಜಿಎಸ್‌ಡಿಪಿ | 0.07 | (-)1.18 | (-)0.69 | 0.59 | (-)0.36 |
| ವಿತ್ತೀಯ ಕೊರತೆ/ ಜಿಎಸ್‌ಡಿಪಿ | 2.36 | 4.09 | 3.34 | 2.05 | 2.55 |
| ಪ್ರಾಥಮಿಕ ಕೊರತೆ(ಹೆಚ್ಚಳ)/ ಜಿಎಸ್‌ಡಿಪಿ | 1.13 | 2.66 | 2.01 | 0.75 | 1.31 |
| ಪ್ರಾಥಮಿಕ ರಾಜಸ್ವ ಶಿಲ್ಕು (₹ ಕೋಟಿಗಳಲ್ಲಿ) | 18,718 | 4,095 | 12,610 | 16,147 | 22,601 |
| ಪ್ರಾಥಮಿಕ ರಾಜಸ್ವ ಕೊರತೆ ಶಿಲ್ಕು / ಜಿಎಸ್‌ಡಿಪಿ | 1.16 | 0.25 | 0.64 | 0.71 | 0.88 |
| **IV ವಿತ್ತೀಯ ಜವಾಬ್ದಾರಿಗಳ ನಿರ್ವಹಣೆ** | | | | | |
| ವಿತ್ತೀಯ ಜವಾಬ್ದಾರಿಗಳು (ಆಯವ್ಯಯದ ಹೊರಗಿನ ಸಾಲಗಳು ಸೇರಿದಂತೆ)/ ಜಿಎಸ್‌ಡಿಪಿ | 20.89 | 24.58 | 23.24 | 23.03 | 23.49 |
| ವಿತ್ತೀಯ ಜವಾಬ್ದಾರಿಗಳು/ರಾಜಸ್ವ ಸ್ವೀಕೃತಿಗಳು | 192.38 | 257.48 | 234.85 | 228.24 | 258.42 |
| ವಿತ್ತೀಯ ಜಮಾಬ್ದಾರಿಗಳು/ಸ್ವಂತ ಸಂಪನ್ಮೂಲಗಳು | 306.71 | 384.50 | 346.93 | 331.72 | 341.42 |
| **V ಇತರೆ ವಿತ್ತೀಯ ಆರೋಗ್ಯ ಸೂಚಕಗಳು** | | | | | |
| ಹೂಡಿಕೆಗಳ ಮೇಲಿನ ಪ್ರತಿಫಲ(₹ ಕೋಟಿಗಳಲ್ಲಿ) | 53.64 | 80.7 | 349.78 | 425.23 | 290.74 |
| ಹಣಕಾಸು ಆಸ್ತಿಗಳು/ಜವಾಬ್ದಾರಿಗಳು | 1.00 | 1.00 | 1.00 | 1.00 | 1.00 |
| ರಾಜಸ್ವ ಪ್ಲವನತೆ** ಸಂಬಂಧಿಸಿದಂತೆ | | | | | |
| ಜಿಎಸ್‌ಡಿಪಿ | 0.71 | (-)6.73 | 1.21 | 1.15 | 0.14 |
| ರಾಜ್ಯದ ಸ್ವಂತ ತೆರಿಗೆ | 0.98 | 0.43 | 1.05 | 1.11 | 6.48 |
| ಜಿಎಸ್‌ಡಿಪಿಗೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆಯ ಪ್ಲವನತೆ | 0.70 | (-)2.92 | 1.28 | 1.28 | 0.92 |
| ಒಟ್ಟು ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ಜಿಎಸ್‌ಡಿಪಿ | 0.57 | 3.03 | 0.81 | 0.38 | 0.64 |
| ರಾಜಸ್ವ ಸ್ವೀಕೃತಿಗಳು | 0.81 | (-)0.45 | 0.67 | 0.33 | 4.48 |
| ರಾಜಸ್ವ ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ಜಿಎಸ್‌ಡಿಪಿ | 0.68 | 0.65 | 0.92 | 0.20 | 0.96 |
| ರಾಜಸ್ವ ಸ್ವೀಕೃತಿಗಳು | 0.96 | (-)0.10 | 0.76 | 0.17 | 6.74 |
| ಬಂಡವಾಳ ವೆಚ್ಚದ ಪ್ಲವನತೆಗೆ ಸಂಬಂಧಿಸಿದಂತೆ | | | | | |
| ಜಿಎಸ್‌ಡಿಪಿ | 0.28 | 17.52 | 0.27 | 1.34 | (-)0.70 |
| ರಾಜಸ್ವ ಸ್ವೀಕೃತಿಗಳು | 0.40 | (-)2.60 | 0.22 | 1.16 | (-)4.90 |
| ವಿತ್ತೀಯ ಜವಾಬ್ದಾರಿಗಳು ಪ್ಲವನತೆಗೆ ಸಂಬಂಧಿಸಿದಂತೆ | | | | | |
| ಜಿಎಸ್‌ಡಿಪಿ | 2.06 | 14.64 | 0.51 | 0.87 | 1.11 |
| ರಾಜಸ್ವ ಸ್ವೀಕೃತಿಗಳು | 2.89 | (-)2.18 | 0.42 | 0.76 | 7.79 |
| ಸ್ವಂತ ಸಂಪನ್ಮೂಲಗಳು | 2.95 | (-)5.01 | 0.40 | 0.68 | 1.20 |

*ಆವರಣದಲ್ಲಿರುವ ಅಂಕಿಗಳು ಶತಾಂಶವನ್ನು (ಪೂರ್ಣಾಂಕಗೊಳಿಸದೆ) ಪ್ರತಿ ಉಪಶೀರ್ಷಿಕೆಗೆ ಸಂಬಂಧಿಸಿದಂತೆ ಸೂಚಿಸಿದೆ.*

*# ಆಯವ್ಯಯದ ಹೊರಗಿನ ಸಾಲಗಳಿಗೆ ಸಂಬಂಧಿಸಿದಂತೆ ಬಡ್ಡಿ ಪಾವತಿಯನ್ನು ಒಳಗೊಂಡಿದೆ.*

** ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ತೋರಿಸಿರುವ ಜಿಎಸ್‌ಡಿಪಿಯ ಅಂಕಿಗಳು 2019-20 (₹16,11,134 ಕೋಟಿ), 2020-21 (₹16,25,073 ಕೋಟಿ), 2021-22 (₹19,62,725 ಕೋಟಿ) ಮತ್ತು 2022-23 (₹21,81,217 ಕೋಟಿ).*

*** ಪ್ಲವನತೆಯ ಮೂಲ ಅಸ್ಥಿರತೆಯ ಬದಲಾವಣೆಗೆ ಸಂಬಂಧಿಸಿದಂತೆ ವಿತ್ತೀಯ ವ್ಯತ್ಯಯದ ಸ್ಥಿತಿಸ್ಥಾಪಕತ್ವವನ್ನು ಅಥವಾ ಪ್ರತಿಕ್ರಿಯೆ ನೀಡುವ ಮಟ್ಟವನ್ನು ಸೂಚಿಸುತ್ತದೆ.*

*^ 2021–22ರಲ್ಲಿ ₹18,109 ಕೋಟಿಗಳನ್ನು ಭಾರತ ಸರ್ಕಾರದಿಂದ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿ ಸ್ವೀಕರಿಸಿದ ಸಾಲಗಳನ್ನು ಸೂಚಕವನ್ನು ನಿರ್ಧರಿಸುವಾಗ ಋಣಗಳೆಂದು ಪರಿಗಣಿಸಿಲ್ಲ.*

*## 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಪಡೆದ ಸರಕು ಮತ್ತು ಸೇವಾ ಪರಿಹಾರವನ್ನು ಕಡಿತಗೊಳಿಸಿದ ನಂತರ ಪರಿಣಾಮಕಾರಿ ಸಾರ್ವಜನಿಕ ಸಾಲವು ₹72,121 ಕೋಟಿ ಮತ್ತು ₹62,532 ಕೋಟಿಗಳಾಗಿದ್ದಿತು. ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ಸರಕು ಮತ್ತು ಸೇವಾ ಪರಿಹಾರವನ್ನು ಹಣಕಾಸು ಇಲಾಖೆಯು ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚ ಇಲಾಖೆ ತೀರ್ಮಾನಿಸಿದೆ.*

*$ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಪಡೆದ ಸರಕು ಮತ್ತು ಸೇವಾ ಪರಿಹಾರವನ್ನು ಕಡಿತಗೊಳಿಸಿದ ನಂತರ ಭಾರತ ಸರ್ಕಾರದಿಂದ ಪರಿಣಾಮಕಾರಿ ಸಾಲ ಮತ್ತು ಮುಂಗಡಗಳು ₹1,707 ಕೋಟಿ ಮತ್ತು ₹2,070 ಕೋಟಿಗಳಾಗಿದ್ದಿತು. ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ಸರಕು ಮತ್ತು ಸೇವಾ ಪರಿಹಾರವನ್ನು ಹಣಕಾಸು ಇಲಾಖೆಯು ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚ ಇಲಾಖೆ ತೀರ್ಮಾನಿಸಿದೆ.*

*^^ ಪರಿಣಾಮಕಾರಿ ಬಾಕಿ ಇರುವ ವಿತ್ತೀಯ ಜವಾಬ್ದಾರಿಯು ₹4,03,519 ಕೋಟಿ, ₹4,59,740 ಕೋಟಿ, ₹5,22,847 ಕೋಟಿ ಮತ್ತು ₹6,03,015 ಕೋಟಿ ಆಗಿರುತ್ತದೆ. ಏಕೆಂದರೆ, ಭಾರತ ಸರ್ಕಾರವು ರಾಜ್ಯಕ್ಕೆ 2020–21 ಮತ್ತು 2021–22ನೇ ಸಾಲುಗಳಿಗೆ ಅನುಕ್ರಮವಾಗಿ ₹12,407 ಕೋಟಿ ಮತ್ತು ₹18,109 ಕೋಟಿಗಳನ್ನು ಋಣ ಸ್ವೀಕೃತಿಯಡಿ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ರೂಪದಲ್ಲಿ ನೀಡಲಾದ ಸಾಲಗಳನ್ನು ರಾಜ್ಯದ ಋಣವೆಂದು ಹಣಕಾಸು ಆಯೋಗದ ಯಾವುದೇ ಮಾನದಂಡ ಸೂಚಿಸಿದ್ದರೂ ಅವುಗಳನ್ನು ರಾಜ್ಯದ ಋಣವೆಂದು ನಿರ್ಧರಿಸಬಾರದೆಂದು ತೀರ್ಮಾನಿಸಿತ್ತು.*

## ಅನುಬಂಧ 2.3
## ಇಲಾಖಾವಾರು ಸಹಾಯಧನಗಳ ಪಾಲು
(ಉಲ್ಲೇಖ: **ಕಂಡಿಕೆ 2.5.2.4; ಪುಟ 46**)

(₹ ಕೋಟಿಗಳಲ್ಲಿ)

| ಇಲಾಖೆಗಳು | 2019–20 | 2020–21 | 2021–22 | 2022–23 | 2023–24 | ಷರಾ |
|---|---|---|---|---|---|---|
| ವಿದ್ಯುಚ್ಛಕ್ತಿ | 9,110 | 9,139 | 14,736 | 11,512 | 18,603 | ಇದು ಐಪಿ ಸೆಟ್, ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಬಳಕೆದಾರರಿಗೆ ನೀಡಲು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ನೀಡಿದ ಆರ್ಥಿಕ ಬೆಂಬಲವನ್ನು ಒಳಗೊಂಡಿದೆ. ಗೃಹ ಜ್ಯೋತಿ ಗ್ರಾಹಕರಿಗೆ ಸಹಾಯಧನಗಳು ಸಹ ಇದರಲ್ಲಿ ಸೇರಿವೆ. |
| ಆಹಾರ ಮತ್ತು ನಾಗರೀಕ ಸರಬರಾಜು | 2,692 | 2,324 | 6,057 | 2,015 | 5,680 | ಬಡತನ ರೇಖೆಗಿಂತ ಕೆಳಗಿರುವ ಮತ್ತು ಮೇಲಿರುವ ಫಲಾನುಭವಿಗಳಿಗೆ ಅನ್ನಭಾಗ್ಯದ ಸಹಾಯಧನ ಮತ್ತು ಸೂಕ್ಷ್ಮ ಆಹಾರ ಸಂಸ್ಕರಣೆಯ ಔಪಚಾರಿಕೀಕರಣವು ಒಳಗೊಂಡಿದೆ. |
| ಕೃಷಿ ಮತ್ತು ಇತರೆ ಚಟುವಟಿಕೆಗಳು | 2,254 | 2,774 | 2,447 | 3,687 | 2,998 | ಇದು ಬೆಳೆ ಸಾಕಣೆ, ಮೀನುಗಾರಿಕೆ, ಅರಣ್ಯ, ಮಣ್ಣು ಮತ್ತು ನೀರು ಸಂರಕ್ಷಣೆ ಮತ್ತು ವನ್ಯಜೀವಿ ಇತ್ಯಾದಿಗಳಿಗೆ ಸಹಾಯಧನವನ್ನು ಒಳಗೊಂಡಿದೆ. |
| ಸಹಕಾರ | 1,074 | 1,231 | 1,026 | 1,006 | 1,161 | ಅಸಲು ಮತ್ತು ಬಡ್ಡಿಯನ್ನು ಸೇರಿದಂತೆ ಬಾಕಿಯಿರುವ ಸಾಲಗಳ ಮನ್ನಾವನ್ನು ಪ್ರತಿನಿಧಿಸುತ್ತದೆ. |
| ಸಾರಿಗೆ | 728 | 1,529 | 1,705 | 3,053 | 2,656 | ಈ ಸಹಾಯಧನವು ವಿದ್ಯಾರ್ಥಿಗಳಿಗೆ ನೀಡಿದ ಪ್ರಯಾಣದರ ರಿಯಾಯಿತಿಗೆ ಮತ್ತು ಶಕ್ತಿ ಯೋಜನೆಯ ಗ್ರಾಹಕರಿಗೆ ಸಂಬಂಧಿಸಿದೆ. |
| ವಸತಿ | 943 | 450 | 1,150 | 513 | 435 | ಸಹಾಯಧನವು ಆಶ್ರಯ ಯೋಜನೆಯ ಕಡೆಗಿತ್ತು |
| ಇತರೆ | 733 | 985 | 1,098 | 968 | 857 | ಇದು ಕೃಷಿ ಮತ್ತು ಸ್ವಸಹಾಯ ಗುಂಪು ಇಲಾಖೆಗಳಡಿಯ ಸಹಾಯಧನವನ್ನು ಒಳಗೊಂಡಿದೆ. |
| ಒಟ್ಟು | **17,534** | **18,432** | **28,219** | **22,754** | **32,390** | |

*ಆಕರ: ಹಣಕಾಸು ಲೆಕ್ಕಗಳು*

## ಅನುಬಂಧ 2.4

### ಆರ್ಥಿಕ ನೆರವು, ಪ್ರೋತ್ಸಾಹಧನ ಇತರೆ ರೂಪದಲ್ಲಿ ಸಹಾಯಧನಗಳು

(ಉಲ್ಲೇಖ: **ಕಂಡಿಕೆ 2.5.2.4; ಪುಟ 48**)

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಯೋಜನೆ ವಿವರ | 2019–20 | 2020–21 | 2021–22 | 2022–23 | 2023–24 |
|---|---|---|---|---|---|---|---|
| 1 | 2202–01–109–0–03 | ವಿದ್ಯಾ ವಿಕಾಸ ಯೋಜನೆ | 538.08 | 266.98 | 248.83 | 339.16 | 384.30 |
| 2 | 2216–02–101–0–07 | ವಾಜಪೇಯಿ ನಗರ ವಸತಿ ಯೋಜನೆ | 93.75 | 150.00 | 250.00 | 100.00 | 0 |
| 3 | 2216–02–102–0–02 | ದುರ್ಬಲ ವರ್ಗದವರಿಗೆ ವಸತಿ | 0 | 0 | 0 | 0 | 0 |
| 4 | 2216–03–104–0–01 | ಆಶ್ರಯ | 1,461.35 | 600.00 | 1,600.00 | 265.19 | 575.00 |
| 5 | 2235–02–102–0–25 | ಭಾಗ್ಯಲಕ್ಷ್ಮಿ | 294.30 | 46.82 | 97.26 | 137.04 | 179.41 |
| 6 | 2401–00–103–0–15 | ಬೀಜ ಮತ್ತು ಇತರ ಸಾಮಗ್ರಿಗಳ ಸರಬರಾಜು (ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ) | 590.85 | 550.38 | 491.63 | 852.80 | 503.18 |
| 7 | 2405–00–103–0–20 | ಮತ್ಸ್ಯ ಆಶ್ರಯ | 0 | 0 | 0 | 0 | 2.00 |
| 8 | 2425–00–108–0–57 | ಯಶಸ್ವಿನಿ | 0 | 0 | 0 | 100.00 | 31.28 |
| 9 | 2851–00–103–0–62 | ನೇಯ್ಗೆದಾರರಿಗೆ ಪ್ಯಾಕೇಜ್ | 127.15 | 260.10 | 135.00 | 125.77 | 102.00 |
| 10 | 2851–00–103–0–69 | ನೇಯ್ಗೆದಾರರಿಗೆ ಪ್ಯಾಕೇಜ್ ಕೆಎಚ್‌ಡಿಸಿ | 20.00 | 40.00 | 15.00 | 15.00 | 12.00 |
| 11 | 2852–80–103–0–59 | ಅರ್ಹ ಕೈಗಾರಿಕೆಗಳಿಗೆ ಮಾರಾಟ ತೆರಿಗೆ ಮರುಪಾವತಿ | 155.26 | 195.00 | 50.00 | 0 | 0 |
| 12 | 3475–00–107–0–20 | ಕನಿಷ್ಠ ಮೂಲ ಬೆಲೆ ಯೋಜನೆ | 0 | 60.00 | 60.00 | 1,075.90 | 249.35 |
| 13 | 2235–02–103–0–73 | ಗೃಹಲಕ್ಷ್ಮಿ | 0 | 0 | 0 | 0 | 16,964.40 |
| 14 | 2230–02–101–0–17 | ಯುವನಿಧಿ ಯೋಜನೆ | 0 | 0 | 0 | 0 | 88.88 |
| **ಒಟ್ಟು** | | | **3,280.74** | **2,169.28** | **2,947.72** | **3,010.86** | **19,091.80** |

*ಆಕರ:* ಪ್ರಮುಖ ಲೆಕ್ಕ ಶೀರ್ಷಿಕೆಯ ಕ್ರೋಡೀಕೃತ ಸಾರಾಂಶ ಪಟ್ಟಿ

## ಅನುಬಂಧ 2.5

## ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು

(ಉಲ್ಲೇಖ: **ಕಂಡಿಕೆ 2.5.4.2; ಪುಟ 54**)

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ/ ಸಂಸ್ಥೆಗಳು | 31 ಮಾರ್ಚ್ 2024ರಲ್ಲಿದ್ದಂತೆ ಬಾಕಿಗಳು | |
|---|---|---|---|
| | | ಅಸಲು | ಬಡ್ಡಿ |
| 1 | 6215–01–190–2–86: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 8,094.67 | 5,909.04 |
| 2 | 6215–01–190–1–00: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1,576.07 | 1,008.80 |
| 3 | 6216–02–201–1–00: ಕರ್ನಾಟಕ ಗೃಹ ಮಂಡಳಿ | 26.17 | 105.91 |
| 4 | 6217–60–191–1–03: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಹುಡ್ಕೋ ಸಾಲಗಳ ಮರುಪಾವತಿಗಾಗಿ) | 225.32 | 85.72 |
| 5 | 6220–01–190–1–00: ಕರ್ನಾಟಕ ರಾಜ್ಯ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ | 0.42 | 2.03 |
| 6 | 6401–00–113–2–00: ಕರ್ನಾಟಕ ಅಗ್ರೋ ಪ್ರೋಟೀನ್ ಲಿಮಿಟೆಡ್ | 1.44 | 7.48 |
| 7 | 6401–00–103–2–00: ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ | 2.88 | 8.29 |
| 8 | 6401–00–103–3–00: ಕರ್ನಾಟಕ ರಾಜ್ಯ ಸಹಕಾರಿ ಎಣ್ಣೆ ಬೀಜಗಳ ಬೆಳೆಗಾರರ ಒಕ್ಕೂಟ | 0.70 | 4.13 |
| 9 | 6851–00–200–0–00: ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ | 1.26 | 5.04 |
| 10 | 6852–02–190–3–00: ದಾಂಡೇಲಿ ಸ್ಟೀಲ್ ಅಂಡ್ ಫೇರ್ರೋ ಅಲಾಯ್ ಲಿಮಿಟೆಡ್ | 0.99 | 1.74 |
| 11 | 6853–02–190–1–00: ಹಟ್ಟಿ ಚಿನ್ನದ ಗಣಿ ಕಂಪನಿ ನಿಗಮ | 3.02 | 2.61 |
| 12 | 6858–01–190–3–00: ಕರ್ನಾಟಕ ಇಂಪ್ಲಿಮೆಂಟ್ ಅಂಡ್ ಮೆಶಿನೆರಿ ಕಂಪನಿ | 214.79 | 275.89 |
| 13 | 6858–02–190–1–00: ಇಲೆಕ್ಟ್ರೋ ಮೊಬೈಲ್ ಇಂಡಿಯಾ ಲಿಮಿಟೆಡ್ | 2.16 | 6.13 |
| 14 | 6858–02–190–0–01: ಚಾಮುಂಡಿ ಮೆಶಿನ್ ಟೂಲ್ಸ್ | 0.61 | 3.10 |
| 15 | 6858–01–190–2–00: ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ | 2.22 | 0.99 |
| 16 | 6859–01–190–0–01: ಕರ್ನಾಟಕ ಟೆಲಿಕಮ್ಯುನಿಕೇಶನ್ ಲಿಮಿಟೆಡ್ | 3.01 | 7.77 |
| 17 | 6860–04–190–2–01: ಮೈಸೂರು ಸಕ್ಕರೆ ಕಾರ್ಖಾನೆ | 205.42 | 103.90 |
| 18 | 6860–60–212–1–00: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 0.81 | 16.55 |
| 19 | 6860–60–600–3–00: ಮೈಸೂರು ತಂಬಾಕು ಕಂಪನಿ ಲಿಮಿಟೆಡ್ | 13.54 | 16.41 |
| 20 | 6885–01–190–3–00: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ | 13.08 | 4.35 |
| 21 | 7452–80–190–1–00: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ | 1.20 | 4.21 |
| | ಒಟ್ಟು | **10,389.78** | **7,580.09** |

*ಆಕರ: ಹಣಕಾಸು ಲೆಕ್ಕಗಳು*

# ಅನುಬಂಧ 3.1

## ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯಲ್ಲಿ ವರ್ಗಾವಾರು/ಇಲಾಖಾವಾರು ಆಯವ್ಯಯ ಹಂಚಿಕೆ 2023–24

(ಉಲ್ಲೇಖ: ಕಂಡಿಕೆ 3.4; ಪುಟ: 89)

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ | ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು/ಯೋಜನೆಗಳು | | | | ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ/ಯೋಜನೆಗಳು | | | |
|---|---|---|---|---|---|---|---|---|---|
| | | 100% | | 100% ಕ್ಕಿಂತ ಕಡಿಮೆ | | 100% | | 100% ಕ್ಕಿಂತ ಕಡಿಮೆ | |
| | | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ |
| 1 | 01 – ಕೃಷಿ ಮತ್ತು ತೋಟಗಾರಿಕೆ | 0.00 | 0.00 | 270.00 | 0.00 | 0.00 | 0.00 | 0.00 | 0.00 |
| 2 | 02 – ಪಶುಸಂಗೋಪನೆ ಮತ್ತು ಮೀನುಗಾರಿಕೆ | 0.00 | 0.00 | 1.00 | 0.70 | 0.00 | 0.00 | 0.00 | 0.00 |
| 3 | 05 – ಒಳಾಡಳಿತ ಮತ್ತು ಸಾರಿಗೆ | 0.00 | 0.00 | 1,305.48 | 1,102.47 | 0.00 | 0.00 | 301.62 | 287.30 |
| 4 | 07 – ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | 0.00 | 0.00 | 80.45 | 80.29 | 0.00 | 0.00 | 0.00 | 0.00 |
| 5 | 08 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 0.00 | 0.00 | 40.05 | 49.22 | 0.00 | 0.00 | 0.00 | 0.00 |
| 6 | 09 – ಸಹಕಾರ | 0.00 | 0.00 | 150.00 | 31.28 | 0.00 | 0.00 | 0.00 | 0.00 |
| 7 | 10 – ಸಮಾಜ ಕಲ್ಯಾಣ | 3,117.33 | 2,971.96 | 5,045.92 | 4,975.35 | 0.00 | 0.00 | 0.00 | 0.00 |
| 8 | 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 6,906.72 | 6,116.87 | 215.15 | 217.91 | 19.44 | 10.04 | 0.00 | 0.00 |
| 9 | 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 0.00 | 0.00 | 254.71 | 215.76 | 0.00 | 0.00 | 0.00 | 0.00 |
| 10 | 13 – ಆಹಾರ ಮತ್ತು ನಾಗರೀಕ ಸರಬರಾಜು | 0.00 | 0.00 | 10,275.00 | 7,349.74 | 0.00 | 0.00 | 0.40 | 0.28 |
| 11 | 14 – ಕಂದಾಯ | 0.00 | 0.00 | 1,477.90 | 1,443.54 | 0.00 | 0.00 | 0.00 | 0.00 |
| 12 | 15 – ಮಾಹಿತಿ ತಂತ್ರಜ್ಞಾನ | 0.00 | 0.00 | 93.00 | 92.58 | 0.00 | 0.00 | 25.51 | 25.45 |
| 13 | 17 – ಶಿಕ್ಷಣ | 5,302.07 | 4,789.67 | 154.14 | 106.14 | 24,995.85 | 24,834.75 | 1,087.25 | 1,040.90 |
| 14 | 20 – ಲೋಕೋಪಯೋಗಿ ಕಾಮಗಾರಿಗಳು | 0.00 | 0.00 | 150.00 | 169.89 | 0.00 | 0.00 | 0.00 | 0.00 |
| 15 | 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 20.00 | 5.00 | 3,881.45 | 3,395.57 | 68.61 | 67.05 | 10,279.86 | 8,759.45 |
| 16 | 23 – ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ | 4.00 | 4.00 | 293.84 | 314.74 | 0.00 | 0.00 | 412.19 | 396.19 |

| ಕ್ರಮ ಸಂಖ್ಯೆ | ಅನುದಾನ | ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು/ಯೋಜನೆಗಳು | | | | ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ/ಯೋಜನೆಗಳು | | | |
|---|---|---|---|---|---|---|---|---|---|
| | | 100% | | 100% ಕ್ಕಿಂತ ಕಡಿಮೆ | | 100% | | 100% ಕ್ಕಿಂತ ಕಡಿಮೆ | |
| | | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ | ಆಯವ್ಯಯ | ವೆಚ್ಚ |
| 17 | 25 – ಕನ್ನಡ ಮತ್ತು ಸಂಸ್ಕೃತಿ | 0.00 | 0.00 | 21.25 | 23.63 | 0.00 | 0.00 | 0.00 | 0.00 |
| 18 | 27 – ಕಾನೂನು | 0.00 | 0.00 | 0.00 | 0.00 | 0.00 | 0.00 | 24.93 | 15.74 |
| ಒಟ್ಟು | | **15,350.12** | **13,887.50** | **23,709.34** | **19,568.81** | **25,083.90** | **24,911.84** | **12,131.76** | **10,525.31** |

*ಆಕರ: ಮಕ್ಕಳ ಉದ್ದೇಶಿತ ಆಯವ್ಯಯ ಮತ್ತು ಅನುದಾನ ವಹಿ*

**ಅನುಬಂಧ 3.2**

**2023–24ರ ಆಯವ್ಯಯದಲ್ಲಿನ ಪ್ರಮುಖ ನೀತಿ ಉಪಕ್ರಮಗಳು**

(ಉಲ್ಲೇಖ: **ಕಂಡಿಕೆ 3.5; ಪುಟ90**)

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| **ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆ** | | | |
| 1 | ಮಾನವ–ಆನೆ ಸಂಘರ್ಷವನ್ನು ಕಡಿಮೆ ಮಾಡಲು ಮತ್ತು ಕಾಡು ಆನೆಗಳು ಕಾಡುಗಳಿಂದ ಹೊರಗೆ ಅಲೆದಾಡುವುದನ್ನು ತಡೆಯಲು, ನಮ್ಮ ಹಿಂದಿನ ಅವಧಿಯಲ್ಲಿ 520 ಕಿ.ಮೀ ಅರಣ್ಯ ಬ್ಯಾರಿಕೇಡ್‌ಗಳನ್ನು ನಿರ್ಮಿಸಲು ನಾವು ಪ್ರಸ್ತಾಪಿಸಿದ್ದೆವು. ಈ ಯೋಜನೆಯಡಿಯಲ್ಲಿ, ಇಲ್ಲಿಯವರೆಗೆ ಸುಮಾರು 312 ಕಿ.ಮೀ ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿದ್ದು, ಉಳಿದ ಬ್ಯಾರಿಕೇಡ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. 2023–24ರ ಅವಧಿಯಲ್ಲಿ ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ ₹120 ಕೋಟಿ ಮೀಸಲಿಡಲಾಗಿದೆ. | ಸರ್ಕಾರ ಆದೇಶ ಸಂಖ್ಯೆ ಎಫ್‌ಇಇ 88 ಎಫ್‌ಡಬ್ಲ್ಯೂಎಲ್ 2023ರ ದಿನಾಂಕ: 22.08.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ಈ ಯೋಜನೆಗೆ ₹4,999.98 ಲಕ್ಷ ಬಿಡುಗಡೆ ಮಾಡಲಾಗಿದೆ. | ಆಯವ್ಯಯ ಭಾಷಣದಲ್ಲಿ ಘೋಷಿಸಲಾದ ₹120 ಕೋಟಿ ರೂಪಾಯಿಗಳಲ್ಲಿ ₹100 ಕೋಟಿ ಬಿಡುಗಡೆ ಮಾಡಲಾಗಿದೆ. ಈ ಪೈಕಿ ₹68.49 ಕೋಟಿ ರೂಪಾಯಿಗಳನ್ನು 2022–23ರಲ್ಲಿ ಮಾಡಿದ 72.768 ಕಿ.ಮೀ. ಕಾಮಗಾರಿಗೆ ಪಾವತಿಸಲಾಗಿದೆ ಮತ್ತು ಉಳಿದ ₹31.51 ಕೋಟಿ ರೂಪಾಯಿಗಳನ್ನು ಹೊಸ ಕಾಮಗಾರಿಗೆ ಬಳಸಲಾಗುತ್ತಿದೆ.<br>ಬ್ಯಾರಿಕೇಡ್ ನಿರ್ಮಾಣದ ಒಟ್ಟು ಕಾಮಗಾರಿ ಪೂರ್ಣಗೊಂಡಿದೆ – 15.256 ಕಿ.ಮೀ. ಮತ್ತು 105.531 ಕಿ.ಮೀ. ಪ್ರಗತಿಯಲ್ಲಿವೆ.<br>ಈ ಉದ್ದೇಶಕ್ಕಾಗಿ ₹100 ಕೋಟಿ ರೂಪಾಯಿಗಳ ಒಟ್ಟು ಬಿಡುಗಡೆಯನ್ನು ಬಳಸಲಾಗಿದೆ ಮತ್ತು ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ₹20 ಕೋಟಿ ರೂಪಾಯಿಗಳ ಕಡಿಮೆ ಹಣ ಬಿಡುಗಡೆಯಾಗಿದೆ. |
| 2 | ಮಾನವ–ಆನೆ ಸಂಘರ್ಷವನ್ನು ನಿಯಂತ್ರಿಸಲು, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಆನೆ ಕಾರ್ಯಪಡೆಗಳನ್ನು ಸ್ಥಾಪಿಸಲಾಗಿದ್ದು, ಪ್ರಸಕ್ತ ವರ್ಷದಲ್ಲಿ ರಾಮನಗರ ಮತ್ತು ಬನ್ನೇರುಘಟ್ಟ ಪ್ರದೇಶದಲ್ಲಿ ಎರಡು ಹೊಸ ಆನೆ ಕಾರ್ಯಪಡೆಗಳನ್ನು ಸ್ಥಾಪಿಸಲಾಗುವುದು. | ಸ.ಆ ಸಂಖ್ಯೆ: ಎಫ್‌ಇಇ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 30.06.2023ರಂದು ನೀಡಲಾದ ಈ ಯೋಜನೆಗೆ ₹100.00 ಲಕ್ಷ ಬಿಡುಗಡೆ ಮಾಡಲಾಗಿದೆ. | ರಾಮನಗರ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಕಾರ್ಯಪಡೆಯನ್ನು ಸ್ಥಾಪಿಸಲಾಗಿದ್ದು, ಅದು ಕಾರ್ಯನಿರ್ವಹಿಸುತ್ತಿದೆ. |
| 3 | ಮಾನವ–ಪ್ರಾಣಿ ಸಂಘರ್ಷದ ಸಮಯದಲ್ಲಿ ರಕ್ಷಿಸಲ್ಪಟ್ಟ ಗಾಯಗೊಂಡ ಮತ್ತು ಅನಾರೋಗ್ಯ ಪೀಡಿತ ಪ್ರಾಣಿಗಳ ರಕ್ಷಣೆ ಮತ್ತು ಆರೈಕೆಯ ಜವಾಬ್ದಾರಿಯನ್ನು ಹೊಂದಿರುವ ಬನ್ನೇರುಘಟ್ಟ ಮತ್ತು ಮೈಸೂರಿನಲ್ಲಿರುವ ಪುನರ್ವಸತಿ ಕೇಂದ್ರಗಳನ್ನು ಬಲಪಡಿಸಲು ಕ್ರಮಗಳನ್ನು | ಸ.ಆ ಸಂಖ್ಯೆ: ಎಫ್‌ಇಇ 90 ಎಫ್‌ಡಬ್ಲ್ಯೂಎಲ್ 2023, ದಿನಾಂಕ: 04.09.2023ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ಯೋಜನೆಗೆ ₹200.00 ಲಕ್ಷ ಬಿಡುಗಡೆ ಮಾಡಲಾಗಿದೆ. | ಶಿವಮೊಗ್ಗದಲ್ಲಿ ಹೊಸ ಪುನರ್ವಸತಿ ಕೇಂದ್ರಕ್ಕೆ ₹ಐದು ಕೋಟಿ (ಕ್ಯಾಂಪಾ ಅಡಿಯಲ್ಲಿ), ಬನ್ನೇರುಘಟ್ಟದಲ್ಲಿ ಕೇಂದ್ರದ ಬಲವರ್ಧನೆ (₹ಐದು ಕೋಟಿ) ಮತ್ತು ಮೈಸೂರಿನಲ್ಲಿ (₹ಎರಡು ಕೋಟಿ) ಮಾಡಲಾಗಿದೆ.<br>ಬೆಳಗಾವಿಯಲ್ಲಿ ಹೊಸ ಪುನರ್ವಸತಿ ಕೇಂದ್ರ ನಿರ್ಮಾಣಕ್ಕೆ<br>₹ಐದು ಕೋಟಿ ಬಿಡುಗಡೆ ಮಾಡಲಾಗಿದೆ. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | ತೆಗೆದುಕೊಳ್ಳಲಾಗುವುದು. ಇದಲ್ಲದೆ, ಶಿವಮೊಗ್ಗ ಮತ್ತು ಬೆಳಗಾವಿಯಲ್ಲಿ ಹೊಸ ಪುನರ್ವಸತಿ ಕೇಂದ್ರಗಳ ನಿರ್ಮಾಣವನ್ನು ಕೈಗೊಳ್ಳಲಾಗುವುದು. | | |
| 4 | ಬೀದರ್ ಜಿಲ್ಲೆ ಹೆಚ್ಚಿನ ಸಂಖ್ಯೆಯ ಕೃಷ್ಣಮೃಗಗಳಿಗೆ ನೆಲೆಯಾಗಿರುವುದರಿಂದ, ಅವುಗಳ ರಕ್ಷಣೆಗಾಗಿ ಕೃಷ್ಣಮೃಗ ಸಂರಕ್ಷಣಾ ಮೀಸಲು ಪ್ರದೇಶವನ್ನು ಘೋಷಿಸಲಾಗುವುದು. ಈ ಸಂರಕ್ಷಣಾ ಮೀಸಲು ಪ್ರದೇಶದ ರಕ್ಷಣೆ ಮತ್ತು ನಿರ್ವಹಣೆಗಾಗಿ, ₹ಎರಡು ಕೋಟಿ ಮೀಸಲಿಡಲಾಗುವುದು. | ಸ.ಆ ಸಂಖ್ಯೆ: ಎಫ್‌ಇಇ 91 ಎಫ್‌ಡಬ್ಲ್ಯೂಎಲ್ 2023, ದಿನಾಂಕ: 04.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ₹50.00 ಲಕ್ಷ ಬಿಡುಗಡೆ ಮಾಡಲಾಗಿದೆ. | ಕೃಷ್ಣಮೃಗ ಸಂರಕ್ಷಣಾ ಮೀಸಲು ಕಾಮಗಾರಿಗೆ 4406-01-101-0-01-139 ಅಡಿಯಲ್ಲಿ ₹ಎರಡು ಕೋಟಿ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br>ಭಾಲ್ಕಿ, ಬೀದರ್, ಔರಾದ್ ಶ್ರೇಣಿಗಳಲ್ಲಿ ಒಟ್ಟು 2187.34 ಎಕರೆ ಪ್ರದೇಶವನ್ನು ಕೃಷ್ಣಮೃಗ ಸಂರಕ್ಷಣಾ ಮೀಸಲು ಪ್ರದೇಶವೆಂದು ಘೋಷಿಸುವ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿ ಅನುಮೋದಿಸಿದೆ. |
| 5 | ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ, ಭೌಗೋಳಿಕ ಪ್ರದೇಶದ ಶೇಕಡಾ 33ರಷ್ಟು ಅರಣ್ಯಗಳಿಂದ ಆವೃತವಾಗಿರಬೇಕು. ಆದಾಗ್ಯೂ, ರಾಜ್ಯದ ಬಯಲುಸೀಮೆ ಪ್ರದೇಶದ 17 ಜಿಲ್ಲೆಗಳ ಪ್ರದೇಶದ ಶೇಕಡಾ 10 ಕ್ಕಿಂತ ಕಡಿಮೆ ಪ್ರದೇಶವು ಅರಣ್ಯಗಳಿಂದ ಆವೃತವಾಗಿದೆ. ಆದ್ದರಿಂದ, ಈ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜೊತೆಗೂಡಿ ₹500.00 ಕೋಟಿ ವೆಚ್ಚದಲ್ಲಿ 5 ವರ್ಷಗಳ ಅವಧಿಗೆ ಹಸರೀಕರಣ ಕಾರ್ಯಕ್ರಮವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. | ಸ.ಆ ಸಂಖ್ಯೆ: ಎಫ್‌ಇಇ 90 ಎಫ್‌ಎಪಿ 2023, ದಿನಾಂಕ: 08.12.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. | ಸ.ಆ ಸಂಖ್ಯೆ: ಎಫ್‌ಇಇ/90/ಎಫ್‌ಎಪಿ/2023, ದಿನಾಂಕ: 08.12.2023ರಲ್ಲಿ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ. ಆದಾಗ್ಯೂ, ಈ ಉದ್ದೇಶಕ್ಕಾಗಿ ಯಾವುದೇ ಪ್ರತ್ಯೇಕ ಹಣವನ್ನು ಹಂಚಿಕೆ ಮಾಡಲಾಗಿಲ್ಲ. ಕಾರ್ಯಕ್ರಮಗಳಲ್ಲಿ ಹಂಚಿಕೆಯಾದ ಹಣವನ್ನು ಬಳಸಿಕೊಂಡು 22,311 ಪ್ರದೇಶದಲ್ಲಿ ಅರಣ್ಯೀಕರಣ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. |
| 6 | ಇಂಗಾಲದ ಹೆಜ್ಜೆಗುರುತನ್ನು ಕಡಿಮೆ ಮಾಡಲು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಇಎಂಪಿಆರ್‌ಐ) ಸರ್ಕಾರದ ಎಲ್ಲಾ ಪ್ರಮುಖ ಯೋಜನೆಗಳ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ ಮತ್ತು ಪರಿಸರ ಸಮತೋಲನವನ್ನು ಖಚಿತಪಡಿಸುತ್ತದೆ. | ಇದು ಆಡಳಿತಾತ್ಮಕ ಕ್ರಮವಾಗಿದೆ. ಸ.ಆ ಸಂಖ್ಯೆ: ಎಫ್‌ಇಇ 202 ಇಪಿಸಿ 2023, ದಿನಾಂಕ: 16.09.2023ರಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ. | ಆರ್ಥಿಕತೆಯ ಇಂಗಾಲ ಮುಕ್ತೀಕರಣವನ್ನು ಉತ್ತೇಜಿಸಲು ಮತ್ತು ಹಸಿರು ಬೆಳವಣಿಗೆಯನ್ನು ಉತ್ತೇಜಿಸಲು ಕರ್ನಾಟಕ ಹಸಿರುಮನೆ ಅನಿಲ ಹೊರಸೂಸುವಿಕೆಯ ಸ್ವಯಂಪ್ರೇರಿತ ಬಹಿರಂಗಪಡಿಸುವಿಕೆ ಯೋಜನೆಯನ್ನು ಇಎಂಪಿಆರ್‌ಐನ ಅಸ್ತಿತ್ವದಲ್ಲಿರುವ ಆಯವ್ಯಯ ನಿಬಂಧನೆಯನ್ನು ಬಳಸಿಕೊಂಡು ಇಎಂಪಿಆರ್‌ಐ ಜಾರಿಗೆ ತರುತ್ತಿದೆ. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| 7 | ಆರ್ಥಿಕತೆಯ ಇಂಗಾಲ ಮುಕ್ತೀಕರಣವನ್ನು ಉತ್ತೇಜಿಸಲು ಮತ್ತು ಹಸಿರು ಬೆಳವಣಿಗೆಯನ್ನು ಉತ್ತೇಜಿಸಲು, ರಾಜ್ಯದ ಸಂಸ್ಥೆಗಳು ಹಸಿರು ಮನೆ ಅನಿಲಗಳ (ಜಿಹೆಚ್‌ಜಿ) ಸ್ವಯಂಪ್ರೇರಿತ ಬಹಿರಂಗಪಡಿಸುವಿಕೆಗಾಗಿ ಒಂದು ಯೋಜನೆಯನ್ನು ಪ್ರಾರಂಭಿಸಲಾಗುವುದು. | ಇದು ಆಡಳಿತಾತ್ಮಕ ಕ್ರಮವಾಗಿದೆ. ಸ.ಆ ಸಂಖ್ಯೆ: ಎಫ್‌ಇಇ 203 ಇಪಿಸಿ 2023, ದಿನಾಂಕ: 16.09.2023ರಲ್ಲಿ ತಾಂತ್ರಿಕ ಅನುಮೋದನೆ ನೀಡಲಾಗಿದೆ. | ಎಫ್‌ಇಇ ಇಲಾಖೆಯು ರಾಜ್ಯ ಮಟ್ಟದ ಸ್ಟೀರಿಂಗ್ ಸಮಿತಿ (ಎಸ್‌ಎಲ್‌ಎಸ್‌ಸಿ) ಮತ್ತು ತಜ್ಞರ ಮಟ್ಟದ ಸಮಿತಿಯನ್ನು ರಚಿಸಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನೀತಿ ಕೇಂದ್ರ (ಸಿಎಸ್‌ಟಿಇಪಿ) ಅನ್ನು ಮೂರು ವರ್ಷಗಳ ಕಾಲ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಹಸಿರು ಮನೆ ಅನಿಲಗಳ ದಾಸ್ತಾನು ತಜ್ಞ ಸಂಸ್ಥೆಯಾಗಿ ಗುರುತಿಸಲಾಗಿದೆ, ಇದಕ್ಕಾಗಿ ಕರ್ನಾಟಕ ಸರ್ಕಾರ 4(ಜಿ) ವಿನಾಯಿತಿ ನೀಡಿದೆ. |
| **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ** | | | |
| 8 | ಶಾಲಾ ಶಿಕ್ಷಣವು ಯುವ ಮನಸ್ಸುಗಳ ಬೆಳವಣಿಗೆಯಲ್ಲಿ ಮತ್ತು ಪ್ರತಿಯಾಗಿ ಸಮಾಜದ ಒಟ್ಟಾರೆ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣವು ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಬೆಳವಣಿಗೆಗೆ ಬೆಂಬಲ ನೀಡಬೇಕು. ಶಿಕ್ಷಣವು ಮಕ್ಕಳಲ್ಲಿ ಸಹೋದರತ್ವ, ಸಾಮರಸ್ಯ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ನೀಡಬೇಕು. ಹಿಂದಿನ ಸರ್ಕಾರವು ಪಠ್ಯಪುಸ್ತಕಗಳಲ್ಲಿ ಈ ಮೌಲ್ಯ ವ್ಯವಸ್ಥೆಗಳಿಗೆ ವಿರುದ್ಧವಾದ ಕೆಲವು ಪರಿಕಲ್ಪನೆಗಳನ್ನು ಪರಿಚಯಿಸಿತ್ತು. ಪ್ರಸ್ತುತ ವರ್ಷದಲ್ಲಿ ಅಂತಹ ವಿಷಯವನ್ನು ಪಠ್ಯಪುಸ್ತಕಗಳಿಂದ ಕೈಬಿಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.. | 6 ರಿಂದ 10 ನೇ ತರಗತಿಯ ಕನ್ನಡ ಭಾಷೆ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಅಗತ್ಯ ಅಂಶಗಳನ್ನು ಸೇರಿಸಲು ಸ.ಆ ಸಂಖ್ಯೆ: ಇಪಿ 151 ಪಿಎಂಸಿ 2023, ದಿನಾಂಕ:17.06.2023 ಅನ್ನು ನೀಡಲಾಗಿದೆ. ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.. | 2023-24ನೇ ಸಾಲಿನಲ್ಲಿ ಜಾರಿಯಲ್ಲಿರುವ 6ನೇ, 7ನೇ ಮತ್ತು 10ನೇ ತರಗತಿಯ ಕನ್ನಡ ಪ್ರಥಮ ಭಾಷೆ, ದ್ವಿತೀಯ ಭಾಷೆ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಯಿತು. ವಿಷಯ ತಜ್ಞರು ಸೂಚಿಸಿದ ತಿದ್ದುಪಡಿಗಳನ್ನು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ವಿಷಯವಾರು ಕ್ರೋಢೀಕರಿಸಿ, ಮುದ್ರಿಸಿ ಪ್ರತಿ ಶಾಲೆಗೆ ಒಂದರಂತೆ ಸರಬರಾಜು ಮಾಡಲಾಯಿತು. ಈ ತಿದ್ದುಪಡಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಸೇರಿಸಲಾಗಿದೆ. ಅಲ್ಲದೆ, 2023-24ನೇ ಸಾಲಿನಲ್ಲಿ ಸರಬರಾಜು ಮಾಡಿದ ಪಠ್ಯಪುಸ್ತಕಗಳಲ್ಲಿ ಈ ವೇಳಾಪಟ್ಟಿಯ ಪ್ರಕಾರ ಎಲ್ಲಾ ಮಾಧ್ಯಮಗಳ ವಿದ್ಯಾರ್ಥಿಗಳು ತಿದ್ದುಪಡಿಗಳನ್ನು ಮಾಡುವಂತೆ ಶಿಕ್ಷಕರು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಅದರಂತೆ, ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನದಲ್ಲಿ ಸೂಚಿಸಲಾದ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಮತ್ತು ಅನುಸರಿಸಲು ಎಲ್ಲಾ ಮಾಧ್ಯಮದ ಶಿಕ್ಷಕರಿಗೆ ತಿಳಿಸಲಾಗಿದೆ. |
| 9 | ಶಾಲೆಗಳಲ್ಲಿ ತರಗತಿ ಕೊಠಡಿಗಳ ನಿರ್ಮಾಣಕ್ಕೆ ₹310 ಕೋಟಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ತರಗತಿ ಕೊಠಡಿಗಳ ನಿರ್ಮಾಣಕ್ಕೆ ₹240 ಕೋಟಿ ಮೀಸಲಿಡಲಾಗಿದೆ. ಒಟ್ಟು ₹550 ಕೋಟಿ | ಚಾಲ್ತಿಯಲ್ಲಿರುವ ಯೋಜನೆ. ರಾಜ್ಯ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳ ಚಾಲ್ತಿಯಲ್ಲಿರುವ ಯೋಜನೆಗಳ ಅಡಿಯಲ್ಲಿ 8,311 ತರಗತಿ ಕೊಠಡಿಗಳ ನಿರ್ಮಾಣವನ್ನು ಪೂರ್ಣಗೊಳಿಸಲು ಸ.ಆ ಸಂಖ್ಯೆ: ಇಪಿ 118 | ನಿಗದಿಪಡಿಸಿದ ಮೊತ್ತದಲ್ಲಿ ಒಟ್ಟು ₹21,724.30 ಲಕ್ಷವನ್ನು ಸಂಬಂಧಪಟ್ಟ ಸಂಸ್ಥೆಗೆ (ಪಿಡಬ್ಲ್ಯೂಡಿ/ಪಿಆರ್‌ಇಡಿ) ಡಿಡಿಪಿಐಗಳ ಮೂಲಕ ಹೊಸ ತರಗತಿ ನಿರ್ಮಾಣಕ್ಕಾಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | ಹಂಚಿಕೆಯೊಂದಿಗೆ, 8,311 ಶಾಲಾ ಮತ್ತು ಕಾಲೇಜು ತರಗತಿ ಕೊಠಡಿಗಳ ನಿರ್ಮಾಣವು ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ಇದು ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯಗಳನ್ನು ಖಚಿತಪಡಿಸುತ್ತದೆ. | ವೈಎಸ್‌ಕೆ 2023 (ಪಿ–1), ದಿನಾಂಕ: 07.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಾರ್ಯಕ್ರಮಕ್ಕಾಗಿ ₹378 ಕೋಟಿ ಬಿಡುಗಡೆ ಮಾಡಲಾಗಿದೆ ಮತ್ತು ₹180 ಕೋಟಿ ಖರ್ಚು ಮಾಡಲಾಗಿದೆ. 790 ತರಗತಿ ಕೊಠಡಿಗಳ ನಿರ್ಮಾಣ ಪೂರ್ಣಗೊಂಡಿದ್ದು, 1,569 ತರಗತಿ ಕೊಠಡಿಗಳನ್ನು ಹಸ್ತಾಂತರಿಸಲಾಗಿದೆ. | ಪ್ರೌಢಶಾಲೆಗಳಲ್ಲಿ ಮೂಲಭೂತಸೌಕರ್ಯ ಸೌಲಭ್ಯಗಳನ್ನು ಒದಗಿಸಲು ಬಿಡುಗಡೆ ಮಾಡಲಾಗಿದೆ. ಇವು ನಡೆಯುತ್ತಿರುವ ಯೋಜನೆಯಾಗಿದ್ದು, ಕೆಲಸಗಳು ಅಂತಿಮ ಹಂತದಲ್ಲಿವೆ.<br><br>ಈ ವರ್ಷ ವಿವೇಕ ಯೋಜನೆಯಡಿ ಒಟ್ಟು 2,359 ತರಗತಿ ಕೊಠಡಿಗಳು ಪೂರ್ಣಗೊಂಡಿದ್ದು, ಅವುಗಳಲ್ಲಿ 1,569 ಕೊಠಡಿಗಳನ್ನು ಬಳಕೆಗೆ ಶಾಲೆಗಳಿಗೆ ಹಸ್ತಾಂತರಿಸಲಾಗಿದೆ ಮತ್ತು 790 ಕೊಠಡಿಗಳನ್ನು ಇನ್ನೂ ಸಂಬಂಧಪಟ್ಟ ಮುಖ್ಯ ಶಿಕ್ಷಕರಿಗೆ ಹಸ್ತಾಂತರಿಸಲಾಗಿಲ್ಲ. ಆದಾಗ್ಯೂ, ಪ್ರಸ್ತುತ ವರ್ಷ ಈ 790 ಕೊಠಡಿಗಳನ್ನು ಸಹ ಶಾಲೆಗಳ ಮುಖ್ಯಸ್ಥರಿಗೆ ಹಸ್ತಾಂತರಿಸಲಾಗಿದೆ. |
| 10 | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ 5,775 ಶಾಲೆಗಳು ಮತ್ತು 150 ಕಾಲೇಜುಗಳಲ್ಲಿ ಹೊಸ ಶೌಚಾಲಯ ಸಂಕೀರ್ಣಗಳನ್ನು ನಿರ್ಮಿಸಲಾಗುವುದು. ಇದು ನೈರ್ಮಲ್ಯವನ್ನು ಉತ್ತೇಜಿಸುತ್ತದೆ ಮತ್ತು ವಿದ್ಯಾರ್ಥಿಗಳ ಆರೋಗ್ಯವನ್ನು ಸುಧಾರಿಸುತ್ತದೆ. ₹200.00 ಕೋಟಿ ವೆಚ್ಚದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎ) ಯೊಂದಿಗೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: ಇಪಿ 118 ವೈಎಸ್‌ಕೆ 2023 (ಪಿ–3), ದಿನಾಂಕ: 07.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಾರ್ಯಕ್ರಮಕ್ಕೆ ₹80 ಕೋಟಿ ಅನುಮೋದನೆ ನೀಡಲಾಗಿದೆ, ಅದರಲ್ಲಿ ₹47.5 ಕೋಟಿ ಬಿಡುಗಡೆಯಾಗಿದೆ ಮತ್ತು ₹14.24 ಕೋಟಿ ವೆಚ್ಚ ಮಾಡಲಾಗಿದೆ. ಎಲ್ಲಾ ಶೌಚಾಲಯಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎ)ಯ ಜೊತೆಗೂಡಿ ನಿರ್ಮಾಣ ಹಂತದಲ್ಲಿವೆ. | 2023–24ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎ)ಯ ಅಡಿಯಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಎಲ್ಲಾ ಜಿಲ್ಲೆಗಳಿಗೆ ₹8,000.00 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಒಟ್ಟು ಅನುಮೋದಿತ ಶೌಚಾಲಯಗಳ ಸಂಖ್ಯೆ 3,439 ಮತ್ತು ಅವುಗಳಲ್ಲಿ 1,153 ಶೌಚಾಲಯಗಳನ್ನು ನಿರ್ಮಿಸಲಾಗಿದೆ. |
| 11 | ಸುಮಾರು 3,833 ಹಳೆಯ, ಶಿಥಿಲಗೊಂಡ ಮತ್ತು ಮಳೆಯಿಂದ ಹಾನಿಗೊಳಗಾದ ಶಾಲಾ ಕಟ್ಟಡಗಳು ಮತ್ತು 724 ಪದವಿ ಪೂರ್ವ ಕಾಲೇಜು ಕೊಠಡಿಗಳನ್ನು ₹100 ಕೋಟಿ ವೆಚ್ಚದಲ್ಲಿ ನವೀಕರಿಸಿ ಬಳಕೆಗೆ ಯೋಗ್ಯವಾಗಿಸಲಾಗುತ್ತದೆ. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: ಇಪಿ 118 ವೈಎಸ್‌ಕೆ 2023 (ಪಿ–2), ದಿನಾಂಕ: 07.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ₹52.76 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮಹತ್ವಾಕಾಂಕ್ಷೆಯ ತಾಲ್ಲೂಕು ಕಾರ್ಯಕ್ರಮದಡಿಯಲ್ಲಿ ಇಲ್ಲಿಯವರೆಗೆ 1,631 ಶಾಲಾ ಕೊಠಡಿಗಳನ್ನು ಹಸ್ತಾಂತರಿಸಲಾಗಿದೆ. | 2023–24ನೇ ಸಾಲಿಗೆ ಮಹತ್ವಾಕಾಂಕ್ಷೆಯ ತಾಲ್ಲೂಕುಗಳ 2,162 ಸರ್ಕಾರಿ ಶಾಲೆಗಳಿಗೆ ₹7,000.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಮತ್ತು 2,132 ಮಹತ್ವಾಕಾಂಕ್ಷೆಯೇತರ ಸರ್ಕಾರಿ ಶಾಲೆಗಳ ದುರಸ್ತಿ ಕಾರ್ಯಕ್ಕಾಗಿ ₹5,129.66 ಲಕ್ಷ ಕ್ರಿಯಾ ಯೋಜನೆಯನ್ನು 2023–24ನೇ ಸಾಲಿನ ನಡೆಯುತ್ತಿರುವ ಯೋಜನೆಯಡಿಯಲ್ಲಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | | | 2,162 ಶಾಲೆಗಳಲ್ಲಿ (ಆಕಾಂಕ್ಷೆಯ ಬ್ಲಾಕ್‌ಗಳು) 675 ಶಾಲೆಗಳ ದುರಸ್ತಿ ಕಾರ್ಯಗಳು ಪ್ರಗತಿಯಲ್ಲಿವೆ, 210 ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಉಳಿದ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಾಗಿದೆ. (30–08–2024 ರಂತೆ ಪ್ರಗತಿ). |
| 12 | ರಾಜ್ಯದ ಪ್ರತಿಯೊಂದು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕಟ್ಟಡಗಳ ನಿರ್ವಹಣೆ ಮತ್ತು ನಿರ್ವಹಣೆಗಾಗಿ ₹20,000 ರಿಂದ ₹45,000 ವರೆಗೆ ಅನುದಾನ ನೀಡಲಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಸುಮಾರು 47,272 ಶಾಲೆಗಳು ಮತ್ತು 1,231 ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಗಾಗಿ ಒಟ್ಟು ₹153 ಕೋಟಿ ಅನುದಾನ ನೀಡಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: ಇಪಿ 118 ವೈಎಸ್‌ಕೆ 2023 (ಪಿ–4), ದಿನಾಂಕ: 11.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಅನುಮೋದಿಸಲಾದ ₹97.40 ಕೋಟಿಗಳಲ್ಲಿ ₹74.00 ಕೋಟಿ ಬಿಡುಗಡೆಯಾಗಿದೆ ಮತ್ತು ₹38.20 ಕೋಟಿ ಖರ್ಚು ಮಾಡಲಾಗಿದೆ. | ಒಟ್ಟು ₹12,033.00 ಲಕ್ಷ ಹಂಚಿಕೆಯಾಗಿದ್ದು, ನಿರ್ದಿಷ್ಟ ಶಾಲೆಯಲ್ಲಿನ ದಾಖಲಾತಿ ಆಧಾರದ ಮೇಲೆ ₹7,122.16 ಲಕ್ಷ ಬಿಡುಗಡೆ ಮಾಡಲಾಗಿದೆ. |
| 13 | ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕಾಂಶವಾಗಿ ವಾರಕ್ಕೊಮ್ಮೆ ಮೊಟ್ಟೆ/ಕಡಲೆಕಾಯಿ ಚಿಕ್ಕಿ/ಬಾಳೆಹಣ್ಣು ನೀಡಲಾಗುತ್ತಿದೆ. ಈಗ ಇದನ್ನು ವಾರಕ್ಕೆ ಎರಡು ಬಾರಿ ನೀಡಲಾಗುವುದು. ಪ್ರಸಕ್ತ ವರ್ಷದಿಂದ ಈ ಕಾರ್ಯಕ್ರಮವನ್ನು 9 ಮತ್ತು 10 ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು, ಇದು ರಾಜ್ಯದ ಒಟ್ಟು 60 ಲಕ್ಷ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಇದಕ್ಕಾಗಿ ಆಯವ್ಯಯದಲ್ಲಿ ಒಟ್ಟು ₹280 ಕೋಟಿ ಮೀಸಲಿಡಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸ.ಆ ಸಂಖ್ಯೆ: ಇಪಿ 30 ಎಂಎಂಎಸ್ 2023, ದಿನಾಂಕ: 09.08.2023 ನೀಡಲಾಗಿದೆ. ಈ ಕಾರ್ಯಕ್ರಮಕ್ಕೆ ₹27,977.11 ಲಕ್ಷ ಅನುಮೋದನೆ ನೀಡಲಾಗಿದೆ, ₹18,194.24 ಲಕ್ಷ ವೆಚ್ಚವಾಗಿದೆ. ಒಟ್ಟು 55,55,900 ವಿದ್ಯಾರ್ಥಿ ಫಲಾನುಭವಿಗಳನ್ನು ಒಳಗೊಂಡಿದೆ. | ಪೂರಕ ಪೌಷ್ಟಿಕಾಂಶ ಕಾರ್ಯಕ್ರಮವು ಎಂಡಿಎಂನಲ್ಲಿ ಫ್ಲೆಕ್ಸಿ ಕಾಂಪೊನೆಂಟ್ ಆಗಿ ವಿಸ್ತೃತ ವ್ಯಾಪ್ತಿಯೊಂದಿಗೆ ನಡೆಯುತ್ತಿದೆ. |
| 14 | ಮಕ್ಕಳಲ್ಲಿನ ಕಲಿಕಾ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ₹80 ಕೋಟಿ ವೆಚ್ಚದಲ್ಲಿ 'ಕಾಳಿಕಾ ಬಾಲವರ್ಧನೆ' ಕಾರ್ಯಕ್ರಮವನ್ನು | ಸರ್ಕಾರಿ ಶಾಲೆಗಳ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ 'ಕಲಿಕಾ ಬಾಲವರ್ಧನೆ' ಕಾರ್ಯಕ್ರಮದ ಅನುಷ್ಠಾನಕ್ಕೆ ಸ.ಆ ಸಂಖ್ಯೆ: ಇಪಿ 322 ವೈಎಸ್‌ಕೆ 2022, ದಿನಾಂಕ: | ಕಲಿಕಾ ಬಾಲವರ್ಧನೆ ಕಾರ್ಯಕ್ರಮವನ್ನು 2023–24ನೇ ಸಾಲಿನಲ್ಲಿ ಜಾರಿಗೆ ತರಲಾಯಿತು. ಹಿಂದಿನ ವರ್ಷಗಳ ಕಲಿಕಾ ಕೊರತೆಯನ್ನು ಬಲಪಡಿಸುವ ಸಲುವಾಗಿ 1 |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | ಪ್ರಾರಂಭಿಸಲಾಗುವುದು. ಸುಮಾರು 33 ಲಕ್ಷ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ. ಇದಲ್ಲದೆ, 'ಮರುಸಿಂಚನ' ಎಂಬ ಹೊಸ ಕಾರ್ಯಕ್ರಮದಡಿಯಲ್ಲಿ, ಕಲಿಕಾ ಕೊರತೆಯಿರುವ 1.5 ಲಕ್ಷ ವಿದ್ಯಾರ್ಥಿಗಳನ್ನು ವಿಶೇಷ ತರಬೇತಿಯ ಮೂಲಕ ಮಾಧ್ಯಮಿಕ ಹಂತದ ಪರೀಕ್ಷೆಗಳಿಗೆ ಸಿದ್ಧಪಡಿಸಲಾಗುವುದು. | 24.08.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮತ್ತು ಆಸ್ಪಿರೇಷನ್ ತಾಲ್ಲೂಕುಗಳಲ್ಲಿ ಕಲಿಕಾ ನ್ಯೂನತೆ ಹೊಂದಿರುವ ಸುಮಾರು 1.5 ಲಕ್ಷ ಮಕ್ಕಳಿಗೆ ವಿಶೇಷ ತರಬೇತಿ ನೀಡಲು 'ಮರುಸಿಂಚನ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸ.ಆ ಸಂಖ್ಯೆ: ಇಪಿ 170 ವೈಎಸ್‌ಕೆ 2023, ದಿನಾಂಕ: 12.10.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ₹2.66 ಕೋಟಿ ಬಿಡುಗಡೆಯಾಗಿದೆ. ವಿದ್ಯಾರ್ಥಿಗಳಿಗೆ ವಿತರಿಸಲು ಸಾಮಗ್ರಿಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. | ರಿಂದ 9 ನೇ ತರಗತಿಯ ಮಕ್ಕಳಿಗೆ ಚಟುವಟಿಕೆ ಪುಸ್ತಕಗಳನ್ನು ಸರಬರಾಜು ಮಾಡಲಾಯಿತು.<br><br>2023–24ನೇ ಸಾಲಿನಲ್ಲಿ ಆಯ್ದ 982 ಶಾಲೆಗಳ 9 ನೇ ತರಗತಿಯ ವಿದ್ಯಾರ್ಥಿಗಳಿಗೆ 93 ಮಹತ್ವಾಕಾಂಕ್ಷೆಯ ಬ್ಲಾಕ್‌ಗಳಲ್ಲಿ ಮರುಸಿಂಚನ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸುಮಾರು ಒಂದು ಲಕ್ಷ ಮಕ್ಕಳು ಈ ಕಾರ್ಯಕ್ರಮದ ಫಲಾನುಭವಿಗಳಾಗಿದ್ದರು. ಆಯ್ಕೆಯಾದ ಶಾಲೆಗಳ ಶಿಕ್ಷಕರಿಗೆ ಈ ಕಾರ್ಯಕ್ರಮವನ್ನು ಮುಂದುವರಿಸಲು ತರಬೇತಿ ನೀಡಲಾಯಿತು ಮತ್ತು ಮಕ್ಕಳಿಗೆ ಮರುಸಿಂಚನ ಚಟುವಟಿಕೆ ಪುಸ್ತಕಗಳನ್ನು ನೀಡಲಾಯಿತು.. |
| 15 | ಶಾಲಾ ಶಿಕ್ಷಣ ಇಲಾಖೆಯ ವಿವಿಧ ಚಟುವಟಿಕೆಗಳನ್ನು ಎಸ್‌ಎಟಿಎಸ್ ಸಾಫ್ಟ್‌ವೇರ್ ಮೂಲಕ ನಡೆಸಲಾಗುತ್ತಿದೆ. ಈ ಸಾಫ್ಟ್‌ವೇರ್ ಅನ್ನ ಎಸ್‌ಎಟಿಎಸ್ 2.0 ಆಗಿ ನವೀಕರಿಸಲಾಗುತ್ತದೆ. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: ಇಪಿ 1 ಇಜಿಓವಿ 2023, ದಿನಾಂಕ: 21.11.2023 ಅನ್ನು ಎಸ್‌ಎಟಿಎಸ್ 2.0 ಸಾಫ್ಟ್‌ವೇರ್ ಅಡಿಯಲ್ಲಿ ಎಫ್‌ಆರ್‌ಎಸ್ ದಾಖಲೆಯ ಅಭಿವೃದ್ಧಿಗಾಗಿ ಮಾರ್ಗಸೂಚಿಗಳೊಂದಿಗೆ ನೀಡಲಾಗಿದೆ. ಟೆಂಡರ್ ಅನ್ನು ಆಹ್ವಾನಿಸಲಾಗಿದೆ ಮತ್ತು ಟೆಂಡರ್ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: 18.01.2024 ಅಂದಾಜು ಟೆಂಡರ್ ಮೌಲ್ಯ ₹49 ಲಕ್ಷ ಎಂದು ಅಂದಾಜಿಸಲಾಗಿದೆ. | 2023–24ನೇ ಸಾಲಿಗೆ ಎಸ್‌ಎಟಿಎಸ್ 2.0 ಸಾಫ್ಟ್‌ವೇರ್ ಅಭಿವೃದ್ಧಿಯ ಭಾಗವಾಗಿ ಎಫ್‌ಆರ್‌ಎಸ್ ದಾಖಲೆ ಅಭಿವೃದ್ಧಿಗಾಗಿ ₹45,17,861 ಮೊತ್ತವನ್ನು 2202–02–001–0–03ರ ಉಪಶೀರ್ಷಿಕೆ ಅಡಿಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಹಂಚಿಕೆ ಮಾಡಲಾಗಿದೆ.<br>ಎಸ್‌ಆರ್‌ಎಸ್ ಸಿದ್ಧಪಡಿಸುವ ಕೆಲಸ ಪೂರ್ಣಗೊಂಡಿದೆ (ಸೆಪ್ಟೆಂಬರ್ 2024). |
| 16 | ಮಕ್ಕಳು ತಮ್ಮ ಕಲ್ಪನೆಗಳನ್ನು ವಾಸ್ತವಕ್ಕೆ ಪರಿವರ್ತಿಸಲು ಪ್ರೋತ್ಸಾಹಿಸಲು ಉನ್ನತ ಪ್ರಾಥಮಿಕ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು. 2023–24ರ ಅವಧಿಯಲ್ಲಿ, ರಾಜ್ಯದ ಪ್ರತಿಯೊಂದು ಕಂದಾಯ ವಿಭಾಗದಲ್ಲಿ ₹ಎರಡು ಕೋಟಿ ವೆಚ್ಚದಲ್ಲಿ ನಾಲ್ಕು ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು. | ಸ.ಆ ಸಂಖ್ಯೆ: ಇಪಿ 171 ವೈಎಸ್‌ಕೆ 2023, ದಿನಾಂಕ: 16.11.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಉಪಕರಣಗಳು ಮತ್ತು ಸಲಕರಣೆಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. | ಕಾರ್ಯಕ್ರಮವು ಪ್ರಗತಿಯಲ್ಲಿದ್ದು, ಉಪಕರಣಗಳು ಮತ್ತು ಸಲಕರಣೆಗಳ ಖರೀದಿಗಾಗಿ ಜಿಲ್ಲೆಗೆ ₹1,107.00 ಲಕ್ಷ ಬಿಡುಗಡೆ ಮಾಡಲಾಗಿದೆ. |
| 17 | 'ಸಸ್ಯ ಶ್ಯಾಮಲ' ಎಂಬ ನವೀನ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ, ಪ್ರಸಕ್ತ ವರ್ಷ | ಸ.ಆ ಸಂಖ್ಯೆ: ಇಪಿ 116 ವೈವೈಕೆ 2023, ದಿನಾಂಕ: 07.09.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇಲ್ಲಿಯವರೆಗೆ 3,79,109 ಸಸಿಗಳನ್ನು ನೆಡಲಾಗಿದೆ. | ವಿವರಗಳನ್ನು ಇನ್ನೂ ಒದಗಿಸಬೇಕಾಗಿತ್ತು.. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | ಶಾಲೆಗಳಲ್ಲಿ ಮತ್ತು ಸುತ್ತಮುತ್ತ 50 ಲಕ್ಷ ಸಸಿಗಳನ್ನು ನೆಡಲಾಗುವುದು. ಇದನ್ನು ಶಿಕ್ಷಣ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮಾಡಲಾಗುತ್ತದೆ. | | |
| 18 | ರಾಜ್ಯದ ಸಾಹಿತಿಗಳು ಮತ್ತು ಪ್ರಕಾಶಕರ ಬೇಡಿಕೆಗಳಿಗೆ ಸ್ಪಂದಿಸಿ, ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ₹10 ಕೋಟಿ ಒದಗಿಸಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: 78 ಎಲ್ಐಬಿ 2023, ದಿನಾಂಕ: 17.10.2023ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ₹7.14 ಕೋಟಿ ವೆಚ್ಚದಲ್ಲಿ ₹8.31 ಕೋಟಿ ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗೆ 13,05,521 ಪುಸ್ತಕಗಳನ್ನು ಖರೀದಿಸಲಾಗಿದೆ. | ವಿವಿಧ ಲೇಖಕರು ಮತ್ತು ಪ್ರಕಟಣೆಗಳಿಂದ ಪುಸ್ತಕಗಳನ್ನು ಖರೀದಿಸಲು ₹8.55 ಕೋಟಿ ವೆಚ್ಚ ಮಾಡಲಾಗಿದೆ. |
| **ಉನ್ನತ ಶಿಕ್ಷಣ ಇಲಾಖೆ** | | | |
| 19 | ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಫೆಡರಲ್ ಆಡಳಿತ ವ್ಯವಸ್ಥೆಗೆ ಹೊಂದಿಕೆಯಾಗುವುದಿಲ್ಲ. ಇದು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಹಲವಾರು ವೈಪರೀತ್ಯಗಳನ್ನು ಹೊಂದಿದೆ. ವೈವಿಧ್ಯಮಯ ಧರ್ಮಗಳು, ಭಾಷೆಗಳು ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಭಾರತದಂತಹ ರಾಷ್ಟ್ರಕ್ಕೆ ಏಕರೂಪ ಶಿಕ್ಷಣ ವ್ಯವಸ್ಥೆ ಹೊಂದಿಕೆಯಾಗುವುದಿಲ್ಲ. ರಾಜ್ಯದ ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಹೊಸ ಶಿಕ್ಷಣ ನೀತಿಯನ್ನು ರೂಪಿಸಲಾಗುವುದು. ಹೊಸ ನೀತಿಯು ರಾಜ್ಯದಲ್ಲಿನ ಉನ್ನತ ಶಿಕ್ಷಣದ ಗುಣಮಟ್ಟವನ್ನು ಜಾಗತಿಕ ಮಟ್ಟಕ್ಕೆ ಏರಿಸುತ್ತದೆ ಮತ್ತು ನಮ್ಮ ಯುವಕರು ಜಾಗತಿಕವಾಗಿ ಸ್ಪರ್ಧಿಸಲು ಮತ್ತು ಅರ್ಥಪೂರ್ಣ ಉದ್ಯೋಗಾವಕಾಶಗಳನ್ನು ಪಡೆಯಲು ಸಬಲೀಕರಣಗೊಳಿಸುತ್ತದೆ. | ಕರ್ನಾಟಕ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಶಿಕ್ಷಣ ತಜ್ಞ ಪ್ರೊ. ಸುಖದೇವ್ ಥರೋಟ್ ಅವರ ಅಧ್ಯಕ್ಷತೆಯಲ್ಲಿ ಸ.ಆ ಸಂಖ್ಯೆ: ಇಡಿ 166 ಯುಎನ್ಇ 2023, ದಿನಾಂಕ: 11.10.2023ರಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ರಚಿಸಲಾಗಿದೆ ಮತ್ತು ಆಯೋಗವು ತನ್ನ ವರದಿಯನ್ನು 28.02.2024 ರೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಆಯೋಗದ ವರದಿಗಾಗಿ ಕಾಯಲಾಗುತ್ತಿದೆ. | ಆಯೋಗದ ವರದಿಗಾಗಿ ಕಾಯಲಾಗುತ್ತಿದೆ. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| 20 | ಬೆಂಗಳೂರಿನ ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಗೆ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸಲು ₹25 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ.. | ಚಾಲ್ತಿಯಲ್ಲಿರುವ ಯೋಜನೆ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ವಿಶ್ವವಿದ್ಯಾಲಯಕ್ಕೆ (ಯುವಿಸಿಇ) ₹25.00 ಕೋಟಿ ವೆಚ್ಚದಲ್ಲಿ ಮೂಲಭೂತಸೌಕರ್ಯ ಒದಗಿಸಲು ಡಿಪಿಆರ್‌ಗೆ ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ. ₹25.00 ಕೋಟಿ ಬಿಡುಗಡೆ ಮಾಡಲು ಸ.ಆ ಸಂಖ್ಯೆ: ಇಡಿ 74 ಹೆಚ್‌ಪಿಯು 2023, ದಿನಾಂಕ: 10.01.2024ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. | ವಿವರಗಳನ್ನು ಇನ್ನೂ ಒದಗಿಸಬೇಕಾಗಿತ್ತು.. |
| 21 | ನಕಲಿ ಅಂಕಪಟ್ಟಿಗಳ ಹಾವಳಿಯನ್ನು ತಡೆಗಟ್ಟಲು, ರಾಜ್ಯದ ಎಲ್ಲಾ ಉನ್ನತ ಶಿಕ್ಷಣ ವಿದ್ಯಾರ್ಥಿಗಳು 'ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್' ನಲ್ಲಿ ನೋಂದಾಯಿಸಿಕೊಳ್ಳುವುದು ಮತ್ತು ಎನ್‌ಎಡಿ / ಡಿಜಿಲಾಕರ್ ನಿಂದ ಅಂಕಪಟ್ಟಿಗಳು ಮತ್ತು ಪ್ರಮಾಣಪತ್ರಗಳನ್ನು ಪಡೆಯುವುದನ್ನು ನಾವು ಕಡ್ಡಾಯಗೊಳಿಸುತ್ತೇವೆ. | ಸ.ಆ. ಸಂಖ್ಯೆ: ಇಡಿ 29 ಇಜಿಓವಿ 2023, ದಿನಾಂಕ: 16.10.2023ರ ಪ್ರಕಾರ, ಉನ್ನತ ಶಿಕ್ಷಣ ಇಲಾಖೆ, ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಎಲ್ಲಾ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿರುವ ಅಧೀನ ಇಲಾಖೆಗಳು ಎನ್‌ಎಡಿ– ಡಿಜಿಲಾಕರ್‌ನಲ್ಲಿ ಪದವಿಪೂರ್ವ ಮತ್ತು ಸ್ನಾತಕೋತ್ತರ ಪದವಿಗಳ ಅಂಕಪಟ್ಟಿಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಲು ಮತ್ತು ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಅಂತಹ ಅಂಕಪಟ್ಟಿಗಳ ಕ್ರೆಡಿಟ್‌ಗಳನ್ನು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ (ಎಬಿಸಿ) ನಲ್ಲಿ 2023–24ರ ಶೈಕ್ಷಣಿಕ ವರ್ಷದಿಂದ ನೋಂದಾಯಿಸಲು ನಿರ್ದೇಶಿಸಲಾಗಿದೆ. | ವಿವರಗಳನ್ನು ಇನ್ನೂ ಒದಗಿಸಬೇಕಾಗಿತ್ತು |
| 22 | ಪ್ರಸ್ತುತ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ 13,169 ವಿದ್ಯಾರ್ಥಿಗಳ ಸಾಮರ್ಥ್ಯವಿರುವ 224 ವಸತಿ ನಿಲಯಗಳನ್ನು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗುವುದು. | ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ 71 ಹಾಸ್ಟೆಲ್‌ಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ತಾತ್ಕಾಲಿಕವಾಗಿ ವರ್ಗಾಯಿಸಲು ಸ.ಆ ಸಂಖ್ಯೆ: ಇಡಿ 20 ಹೆಚ್‌ಪಿಟಿ 2021, ದಿನಾಂಕ: 18.10.2023ರಲ್ಲಿ ಅನುಮೋದನೆ ನೀಡಲಾಗಿದೆ. | ವಿವರಗಳನ್ನು ಇನ್ನೂ ಒದಗಿಸಬೇಕಾಗಿತ್ತು |
| 23 | ಉನ್ನತ ಶಿಕ್ಷಣ ಇಲಾಖೆಯ ಎಲ್ಲಾ ವಿದ್ಯಾರ್ಥಿವೇತನ ಯೋಜನೆಗಳನ್ನು ಒಂದೇ ವಿದ್ಯಾರ್ಥಿವೇತನ ಯೋಜನೆಯಡಿ ಸಂಯೋಜಿಸಲು ಕ್ರಮ ಕೈಗೊಳ್ಳಲಾಗುವುದು. | ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಅಡಿಯಲ್ಲಿ ವಿದ್ಯಾರ್ಥಿಗಳ ಎಲ್ಲಾ ರೀತಿಯ ವಿದ್ಯಾರ್ಥಿವೇತನಗಳನ್ನು ನೇರವಾಗಿ ಡಿಬಿಟಿ ಮೂಲಕ ಅವರ ಬ್ಯಾಂಕ್ ಖಾತೆಗಳಿಗೆ ವಿತರಿಸಲು ಸ.ಆ ಸಂಖ್ಯೆ: ಇಡಿ 28 ಇ–ಜಿಓವಿ 2023, ದಿನಾಂಕ: 21.09.2023ರಲ್ಲಿ ಆದೇಶಿಸಲಾಗಿದೆ. | ಎಲ್ಲಾ ವಿದ್ಯಾರ್ಥಿವೇತನಗಳನ್ನು ಡಿಬಿಟಿ ಮೂಲಕ ನೀಡಲಾಗುತ್ತದೆ. ಪಾವತಿಗಳನ್ನು ಒಂದು ಲೆಕ್ಕ ಶೀರ್ಷಿಕೆ 2202–03–107–1–10–117 ಅಡಿಯಲ್ಲಿ ಒಳಗೊಳ್ಳಲಾಗುತ್ತದೆ. |
| 24 | ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ಆಡಳಿತವನ್ನು ಪ್ರೋತ್ಸಾಹಿಸಲು, | ಚಾಲ್ತಿಯಲ್ಲಿರುವ ಯೋಜನೆ. ಸಾರ್ವಜನಿಕ ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆಯನ್ನು | ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ 29–02–2024 ರಂದು ಸಭೆ ನಡೆಸಲಾಯಿತು. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | 10 ಉತ್ತಮ ಆಡಳಿತ ಸೂಚಕಗಳನ್ನು ರೂಪಿಸಲಾಗಿದೆ ಮತ್ತು ಶ್ಲಾಘನೀಯ ಕಾರ್ಯಕ್ಷಮತೆಯನ್ನು ತೋರಿಸುವ ವಿಶ್ವವಿದ್ಯಾಲಯಗಳಿಗೆ ತಲಾ ₹50 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು. | ಸುಧಾರಿಸಲು ಉತ್ತಮ ಆಡಳಿತ ಸೂಚಕಗಳು/ಮಾರ್ಗಸೂಚಿಗಳೊಂದಿಗೆ ಸ.ಆ ಸಂಖ್ಯೆ: ಇಡಿ 86 ಹೆಚ್‌ಪಿಯು 2023, ದಿನಾಂಕ: 28.12.2023 ಅನ್ನು ನೀಡಲಾಗಿದೆ ಮತ್ತು ಶ್ಲಾಘನೀಯ ಕಾರ್ಯಕ್ಷಮತೆಯನ್ನು ತೋರಿಸುವ ವಿಶ್ವವಿದ್ಯಾಲಯಗಳಿಗೆ ತಲಾ ₹50.00 ಲಕ್ಷ ನೀಡಲು ಅನುಮೋದನೆ ನೀಡಲಾಗಿದೆ. ಅರ್ಹ ವಿಶ್ವವಿದ್ಯಾಲಯಗಳಿಗೆ ನಿರ್ದಿಷ್ಟ ಸಾಧನೆಗಳೊಂದಿಗೆ ತಮ್ಮ ಅರ್ಜಿಗಳನ್ನು ಸಲ್ಲಿಸಲು 30 ದಿನಗಳ ಸಮಯವನ್ನು ನೀಡಲಾಗಿದೆ ಮತ್ತು ವಿಶ್ವವಿದ್ಯಾಲಯಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಆಯ್ಕೆ ಸಮಿತಿಯ ಮೂಲಕ ಪರಿಶೀಲಿಸಿ ಆಯ್ಕೆ ಮಾಡಲಾಗುತ್ತದೆ. ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ಆಡಳಿತವನ್ನು ಮೌಲ್ಯಮಾಪನ ಮಾಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸ.ಆ ಸಂಖ್ಯೆ: ಇಡಿ 86 ಹೆಚ್‌ಪಿಯು 2023, ದಿನಾಂಕ: 25.01.2024ರಲ್ಲಿ ರಚಿಸಲಾಗಿದೆ. | ಸರ್ಕಾರಿ ಆದೇಶದಲ್ಲಿ ಪಟ್ಟಿ ಮಾಡಲಾದ ಉತ್ತಮ ಆಡಳಿತ ತತ್ವಗಳಿಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿ ರಾಜ್ಯ ವಿಶ್ವವಿದ್ಯಾಲಯಗಳು ಮಾಡಿದ ಉತ್ತಮ ಸಾಧನೆಯ ಕುರಿತು ಇಲಾಖೆಯು ಮಂಡಿಸಿದ ಪ್ರಸ್ತಾವನೆಗಳನ್ನು ಸಮಿತಿಯು ಮೌಲ್ಯಮಾಪನ ಮಾಡಿ 07 ವಿಶ್ವವಿದ್ಯಾಲಯಗಳನ್ನು ಆಯ್ಕೆ ಮಾಡಿ ಶಿಫಾರಸು ಮಾಡಿದೆ. ಶಿಫಾರಸುಗಳೊಂದಿಗೆ ಸಮಿತಿಯ ಸಭೆಯ ನಡಾವಳಿಗಳನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. |
| 25 | ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಸುಮಾರು 7,800 ಇಲಾಖಾ ಸಿಬ್ಬಂದಿಗೆ 'ವೃತ್ತಿ ಚೈತನ್ಯ' ಕಾರ್ಯಕ್ರಮದಡಿಯಲ್ಲಿ ₹10 ಕೋಟಿ ಅಂದಾಜು ವೆಚ್ಚದಲ್ಲಿ ಸೂಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಸ.ಆ ಸಂಖ್ಯೆ: ಇಡಿ 84 ಹೆಚ್‌ಪಿಯು 2023, ದಿನಾಂಕ: 15.09.2023ರಲ್ಲಿ 'ವೃತ್ತಿ ಚೈತನ್ಯ' ಕಾರ್ಯಕ್ರಮದಡಿಯಲ್ಲಿ 7,800 ಇಲಾಖಾ ಸಿಬ್ಬಂದಿಗೆ ತರಬೇತಿಯನ್ನು ಆಯೋಜಿಸಲು ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕರಿಗೆ ಅನುಮೋದನೆ ನೀಡಲಾಗಿದೆ. ಅದರಂತೆ, ಸ.ಆ ಸಂಖ್ಯೆ: ಇಡಿ 84 ಹೆಚ್‌ಪಿಯು 2023, ದಿನಾಂಕ: 22.01.2024ರಲ್ಲಿ ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. | ಕಾರ್ಯಕ್ರಮವನ್ನು ಕೈಬಿಡಲಾಗಿದೆ ಎಂದು ಹೇಳಲಾಗಿದೆ. ಲಿಖಿತ ದೃಢೀಕರಣಕ್ಕಾಗಿ ಕಾಯಲಾಗುತ್ತಿದೆ. |
| 26 | ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌ಡಿ ಸೀಟುಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯಲ್ಲಿ ಏಕರೂಪತೆಯನ್ನು ತರಲು, ಎಲ್ಲಾ | ಕರಡು ಪ್ರಸ್ತಾವನೆಯನ್ನು ಸಲ್ಲಿಸಲು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿಗೆ ನಿರ್ದೇಶಿಸಲಾಗಿದೆ. | ವರದಿಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ಪರಿಗಣನೆಗೆ ಕಳುಹಿಸಲಾಗುತ್ತದೆ. |

| ಕ್ರಮ. ಸಂಖ್ಯೆ | ಆಯವ್ಯಯದ ಭರವಸೆ | ಕ್ರಮ ಕೈಗೊಂಡ ವರದಿಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ | ಲೆಕ್ಕಪರಿಶೋಧನೆ ವಿಶ್ಲೇಷಣೆ |
|---|---|---|---|
| | ಸರ್ಕಾರಿ ವಿಶ್ವವಿದ್ಯಾಲಯಗಳ ಪಿಎಚ್‌ಡಿ ಸೀಟುಗಳಿಗೆ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಅಡಿಯಲ್ಲಿರುವ ಶೇಕಡಾ 40ರಷ್ಟು ಸೀಟುಗಳಿಗೆ ಸಾಮಾನ್ಯ ಕೌನ್ಸೆಲಿಂಗ್ ನಡೆಸಲಾಗುವುದು. | | |
| 27 | ಬೆಂಗಳೂರಿನ ಎಸ್.ಕೆ.ಎಸ್.ಜೆ.ಟಿ.ಐ. ಎಂಜಿನಿಯರಿಂಗ್ ಕಾಲೇಜಿನ ಜವಳಿ ತಂತ್ರಜ್ಞಾನ ವಿಭಾಗವನ್ನು ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್ ಮತ್ತು ಪಿಎಂ–ಮಿತ್ರ ಯೋಜನೆಯಡಿಯಲ್ಲಿ ಸ್ಮಾರ್ಟ್ ಮತ್ತು ತಾಂತ್ರಿಕ ಜವಳಿ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗುವುದು. | ತಾತ್ವಿಕವಾಗಿ ಅನುಮೋದನೆ ನೀಡಲಾಗಿದೆ ಮತ್ತು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ರವರಿಗೆ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸ.ಆ ಸಂಖ್ಯೆ: ಇಡಿ 370 ಟಿಇಸಿ 2023, ದಿನಾಂಕ: 07.10.2023ರಲ್ಲಿ ಸೂಚಿಸಲಾಗಿದೆ. | ಇತ್ತೀಚಿನ ಸ್ಥಿತಿಯ ಮಾಹಿತಿಯನ್ನು ನಿರೀಕ್ಷಿಸಲಾಗಿದೆ. |
| 28 | ರಾಜ್ಯದ ಎಲ್ಲಾ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬ್ರಿಟಿಷ್ ಕೌನ್ಸಿಲ್ ಮತ್ತು ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆಯ ಸಹಯೋಗದೊಂದಿಗೆ ಸಂವಾದಾತ್ಮಕ ಇಂಗ್ಲಿಷ್ ತರಗತಿಗಳನ್ನು ಪ್ರಾರಂಭಿಸಲಾಗುವುದು. | ಚಾಲ್ತಿಯಲ್ಲಿರುವ ಯೋಜನೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸ.ಆ ಸಂಖ್ಯೆ: ಇಡಿ 135 ಹೆಚ್‌ಪಿಸಿ 2023, ದಿನಾಂಕ: 21.10.2023 ಹೊರಡಿಸಲಾಗಿದೆ. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ಬ್ರಿಟಿಷ್ ಕೌನ್ಸಿಲ್ ಮತ್ತು ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಕ್ರಮ ಕೈಗೊಳ್ಳುತ್ತಿದ್ದಾರೆ. ಈ ಕಾರ್ಯಕ್ರಮಕ್ಕಾಗಿ ಆಯವ್ಯಯದಲ್ಲಿ ಒದಗಿಸಲಾದ ₹100.00 ಲಕ್ಷವನ್ನು ಆಯುಕ್ತರಿಗೆ ಬಿಡುಗಡೆ ಮಾಡಲಾಗಿದೆ. | ಪುನರ್ವಿತರಣೆ ಮಾಡಲಾದ ಅನುದಾನವನ್ನು ವಿತರಿಸಲು ಆರ್ಥಿಕ ಇಲಾಖೆ ಗಡುವನ್ನು ವಿಸ್ತರಿಸಲಿಲ್ಲ ಎಂದು ತಿಳಿಸಿ ₹100.00 ಲಕ್ಷ ಪೂರ್ಣ ಮೊತ್ತವನ್ನು ಅಧ್ಯರ್ಪಣೆಮಾಡಲಾಗಿದೆ. |
